ಶುಕ್ರವಾರ, ಜನವರಿ 20, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹಾಡು ಬಿಡುಗಡೆ
ಮುಂಬೈನಲ್ಲಿ ಗುರುವಾರ ನಡೆದ ಹಾಡು ಬಿಡುಗಡೆ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ನೋರಾ ಫತೇಹಿ ಪಾಲ್ಗೊಂಡಿದ್ದರು

ಗುಜರಾತ್ ಗೋಧ್ರೋತ್ತರ ಹತ್ಯಾಕಾಂಡಕ್ಕೆ ಮೋದಿ ಹೊಣೆ ಎಂದ ಬಿಬಿಸಿ ಸಾಕ್ಷ್ಯಚಿತ್ರಕ್ಕೆ ಭಾರತ ಖಂಡನೆ

‘ಅಪಪ್ರಚಾರವೇ ಸಾಕ್ಷ್ಯಚಿತ್ರದ ಉದ್ದೇಶ’

ನವದೆಹಲಿ (ರಾಯಿಟರ್ಸ್, ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರವು ಅಪಪ್ರಚಾರದ ಉದ್ದೇಶ ಹೊಂದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಆರೋಪಿಸಿದ್ದಾರೆ.

‘ಇಂಡಿಯಾ: ದಿ ಮೋದಿ ಕ್ವೆಶ್ಚನ್’ ಎಂಬ ಸಾಕ್ಷ್ಯಚಿತ್ರವನ್ನು ಬಿಬಿಸಿ ನಿರ್ಮಿಸಿದೆ. ಸಾಕ್ಷ್ಯಚಿತ್ರದ ಒಂದು ಕಂತು ಜನವರಿ 17ರಂದು ಬಿಡುಗಡೆಯಾಗಿದೆ. 2002ರಲ್ಲಿ ಗುಜರಾತ್‌ನಲ್ಲಿ ನಡೆದಿದ್ದ ಗೋಧ್ರೋತ್ತರ ಹತ್ಯಾಕಾಂಡವನ್ನು ನಿಯಂತ್ರಿಸುವಲ್ಲಿ ಪೊಲೀಸರು ವಿಫಲವಾಗಿದ್ದರು. ಪೊಲೀಸರ ವೈಫಲ್ಯದಲ್ಲಿ ಗುಜರಾತ್‌ನ ಆಗಿನ ಮುಖ್ಯಮಂತ್ರಿಯಾಗಿದ್ದ ಮೋದಿ ಅವರ ಪಾತ್ರವೂ ಇತ್ತು ಎಂದು ಭಾರತದಲ್ಲಿ ಬ್ರಿಟನ್ ರಾಜತಾಂತ್ರಿಕರಾಗಿದ್ದ ಅಧಿಕಾರಿಗಳು ಹೇಳಿರುವುದನ್ನು ಸಾಕ್ಷ್ಯಚಿತ್ರದಲ್ಲಿ ತೋರಿಸಲಾಗಿದೆ.

‘ಅಪಪ್ರಚಾರ ಮತ್ತು ಅಪಖ್ಯಾತಿ ಉದ್ದೇಶದ ನಿರೂಪಣೆ ಈ ಸಾಕ್ಷ್ಯಚಿತ್ರದಲ್ಲಿ

ಬಿಬಿಸಿ ಐಪ್ಲೇನಲ್ಲಿರುವ ಸಾಕ್ಷ್ಯಚಿತ್ರದ ಪೋಸ್ಟರ್

ಇರುವುದು ಢಾಳಾಗಿ ಕಾಣುತ್ತಿದೆ. ಸಾಕ್ಷ್ಯಚಿತ್ರವನ್ನು ವಸಾಹತುಶಾಹಿ ಮನಸ್ಥಿತಿಯಲ್ಲೇ ನಿರ್ಮಿಸಲಾಗಿದೆ. ಇಂತಹ ಅಪಪ್ರಚಾರದ ಹಿಂದೆ ಇರುವ ಸಂಸ್ಥೆ ಮತ್ತು ವ್ಯಕ್ತಿಯ ಮನಸ್ಥಿತಿಯನ್ನೇ ಈ ಸಾಕ್ಷ್ಯಚಿತ್ರ ಬಿಂಬಿಸುತ್ತಿದೆ. ಇಂತಹ ಪ್ರಯತ್ನದ ಅಗತ್ಯವಿತ್ತೇ? ಇಂತಹ ಪ್ರಯತ್ನಗಳನ್ನು ನಾವು ಗಂಭೀರವಾಗಿ ಪರಿಗಣಿಸಬೇಕಿಲ್ಲ’ ಎಂದು ಬಾಗ್ಚಿ ಹೇಳಿದ್ದಾರೆ.

‘ಭಾರತದಲ್ಲಿ ರಾಜತಾಂತ್ರಿಕ ಅಧಿಕಾರಿಯಾಗಿದ್ದ ಜಾಕ್ ಸ್ಟ್ರಾ ಅವರು ಯಾವುದೋ ವರದಿಯ ಬಗ್ಗೆ ಮಾತನಾಡಿದ್ದಾರೆ. ಅದು ಬಹುಶಃ ಬ್ರಿಟನ್‌ನ ಆಂತರಿಕ ವರದಿ ಇರಬಹುದು. ಅದು 20 ವರ್ಷಗಳಷ್ಟು ಹಳೆಯ ವರದಿ. ಅದು ನಮಗೆ ಹೇಗೆ ಸಿಗುತ್ತದೆ? ಆ ಬಗ್ಗೆ ನಾವು ಪ್ರತಿಕ್ರಿಯೆ ನೀಡಲು ಸಾಧ್ಯವಿಲ್ಲ. ಒಬ್ಬ ಅಧಿಕಾರಿ ಹಾಗೆ ಹೇಳಿದ ಎಂದ ಮಾತ್ರಕ್ಕೇ ಅದಕ್ಕೆ ಅಷ್ಟು ತೂಕ ಬರುತ್ತದೆಯೇ’ ಎಂದು ಬಾಗ್ಚಿ ಪ್ರಶ್ನಿಸಿದ್ದಾರೆ.

‘ತಾವು ಈ ವಿಚಾರಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ್ದೆವು ಎಂದು ಅವರು ಹೇಳಿದ್ದಾರೆ. ತನಿಖೆ ಎಂಬ ಪದ ಬಳಸಿರುವ ಕಾರಣಕ್ಕೇ ಅವರಿನ್ನೂ ವಸಾಹತುಶಾಹಿ ಮನಸ್ಥಿತಿಯಲ್ಲಿ ಇದ್ದಾರೆ ಎಂದು ನಾನು ಹೇಳಿದ್ದು. ಅವರು ಇಲ್ಲಿ ರಾಜತಾಂತ್ರಿಕ ಅಧಿಕಾರಿಯಾಗಿದ್ದರು. ಹಾಗಿದ್ದಾಗ ತನಿಖೆ ನಡೆಸಲು ಸಾಧ್ಯವೇ? ಅವರೇನು ಭಾರತವನ್ನು ಆಳುತ್ತಿದ್ದರೇ. ಅವರ ಪ್ರತಿಪಾದನೆಯನ್ನು ನಾವು ಒಪ್ಪುವುದಿಲ್ಲ’ ಎಂದು ಬಾಗ್ಚಿ ಹೇಳಿದ್ದಾರೆ.

ಬಿಬಿಸಿ ಸಮರ್ಥನೆ

ಸಾಕ್ಷ್ಯಚಿತ್ರವನ್ನು ಬಿಬಿಸಿ ಸಮರ್ಥಿಸಿಕೊಂಡಿದೆ. ‘ಪತ್ರಿಕೋದ್ಯಮದ ಉತ್ಕೃಷ್ಟ ಮಟ್ಟದ ಮಾನದಂಡಗಳನ್ನು ಅನುಸರಿಸಿ ವಿಸ್ತೃತ ಅಧ್ಯಯನದ ಮೂಲಕ ಸಾಕ್ಷ್ಯಚಿತ್ರವನ್ನು ನಿರ್ಮಿಸಲಾಗಿದೆ. ಹಲವರನ್ನು ಸಂಪರ್ಕಿಸಿ ಅಭಿಪ್ರಾಯ ಪಡೆದುಕೊಳ್ಳಲಾಗಿದೆ. ಮೋದಿ ನೇತೃತ್ವದ ಬಿಜೆಪಿ ಮುಖಂಡರ ಅಭಿಪ್ರಾಯಗಳೂ ಸೇರಿ, ಹಲವರ ಅಭಿಪ್ರಾಯಗಳನ್ನು ಸಾಕ್ಷ್ಯಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಸಾಕ್ಷ್ಯಚಿತ್ರದಲ್ಲಿ ಎತ್ತಲಾಗಿರುವ ಪ್ರಶ್ನೆಗಳ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಭಾರತ ಸರ್ಕಾರವನ್ನು ಕೋರಲಾಗಿತ್ತು. ಆದರೆ, ಪ್ರತಿಕ್ರಿಯೆ ನೀಡಲು ಭಾರತ ಸರ್ಕಾರವು ನಿರಾಕರಿಸಿತು’ ಎಂದು ಬಿಬಿಸಿ ಹೇಳಿಕೆ ನೀಡಿದೆ. ಸಾಕ್ಷ್ಯಚಿತ್ರವು ಬ್ರಿಟನ್‌ನಲ್ಲಿ ಮಾತ್ರ ಲಭ್ಯ.

ಸುನಕ್ ಪ್ರತಿಕ್ರಿಯೆ

‘ಸಾಕ್ಷ್ಯಚಿತ್ರದಲ್ಲಿ ಆ ವ್ಯಕ್ತಿಯ ಚಿತ್ರಣವನ್ನು ನಾನು ಒಪ್ಪುತ್ತೇನೆಯೇ ಎಂಬುದು ಖಚಿತವಿಲ್ಲ’ ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹೇಳಿದ್ದಾರೆ.

ಬಿಬಿಸಿಯ ಸಾಕ್ಷ್ಯಚಿತ್ರದ ಬಗ್ಗೆ ಬ್ರಿಟನ್ ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕ ಇಮ್ರಾನ್ ಹುಸೇನ್ ಅವರು ಪ್ರಸ್ತಾಪಿಸಿದರು. ‘ಸಾಕ್ಷ್ಯಚಿತ್ರದಲ್ಲಿರುವ ಪ್ರತಿಪಾದನೆಯನ್ನು ನೀವು ಒಪ್ಪುತ್ತೀರಾ’ ಎಂದು ಪ್ರಶ್ನಿಸಿದರು. ಇಮ್ರಾನ್ ಪಾಕಿಸ್ತಾನ ಮೂಲದವರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಸುನಕ್, ‘ಈ ವಿಚಾರದಲ್ಲಿ ಸರ್ಕಾರದ ನಿಲುವು ಸ್ಪಷ್ಟವಾಗಿದೆ ಮತ್ತು ಅದರಲ್ಲಿ ಯಾವುದೇ ಬದಲಾವಣೆ ಇಲ್ಲ. ಆದರೆ, ಧರ್ಮಾಧಾರಿತ ಕಿರುಕುಳವು ಜಗತ್ತಿನ ಎಲ್ಲಿಯೇ ನಡೆದರೂ ನಾವು ಸಹಿಸಿಕೊಳ್ಳುವುದಿಲ್ಲ ಎಂಬುದೂ ನಿಜ’ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಭಯೋತ್ಪಾದನೆ ಬಿಟ್ಟರೆ ಪಾಕ್ ಜೊತೆ ಸಂಬಂಧಕ್ಕೆ ಸಿದ್ಧ: ಭಾರತ

ನವದೆಹಲಿ (ಪಿಟಿಐ): ‘ಪಾಕಿಸ್ತಾನದೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳಲು ಭಾರತ ಯಾವಾಗಲೂ ಬಯಸುತ್ತದೆ. ಆದರೆ, ಭಯೋತ್ಪಾದನೆ ಹಾಗೂ ಹಿಂಸೆಯಿಂದ ಮುಕ್ತವಾದ ವಾತಾವರಣದಲ್ಲಿ ಮಾತ್ರ ಇಂಥ ಸಂಬಂಧ ಇರಿಸಿಕೊಳ್ಳಲು ಸಾಧ್ಯ’ ಎಂದು ಭಾರತವು ಗುರುವಾರ ಹೇಳಿದೆ.

ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಅವರು ಕಳೆದ ವಾರ ದುಬೈ ಮೂಲದ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದ ಕುರಿತು ಹೇಳಲಾದ ಪ್ರಶ್ನೆಗೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗಚಿ ಅವರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ.

‘ಭಾರತದೊಂದಿಗೆ ಮೂರು ಯುದ್ಧಗಳನ್ನು ಮಾಡಿ, ನಾವು ಪಾಠ ಕಲಿತಿದ್ದೇವೆ. ಭಾರತದೊಂದಿಗೆ ಶಾಂತಿಯಿಂದ ಇರಲು ಈಗ ನಾವು ಬಯಸುತ್ತೇವೆ. ನಮ್ಮ ನಡುವಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ’ ಎಂದು ಪಾಕಿಸ್ತಾನ ಪ್ರಧಾನಿ ಹೇಳಿದ್ದರು.

‘ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ್ದನ್ನು ಭಾರತ ಸರ್ಕಾರವು ಹಿಂಪಡೆಯುವವರೆಗೆ ಮಾತುಕತೆ ಸಾಧ್ಯವಿಲ್ಲ’ ಎಂದು ಪಾಕಿಸ್ತಾನದ ಪ್ರಧಾನ ಮಂತ್ರಿ ಕಚೇರಿ ಹೇಳಿತ್ತು.

ವಸುಂಧರಾ ಮೇಲೆ ಕ್ರಮವೇಕಿಲ್ಲ: ಗೆಹಲೋತ್ ಪ್ರಶ್ನಿಸಿದ ಪೈಲಟ್

ಜೈಪುರ(ಪಿಟಿಐ): ಬಿಜೆಪಿ ನಾಯಕಿ, ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರ ವಿರುದ್ಧದ ಭ್ರಷ್ಟಾಚಾರ ಆರೋಪಗಳ ಬಗ್ಗೆ ಕ್ರಮ ಕೈಗೊಳ್ಳದಿರುವುದನ್ನು ಪ್ರಶ್ನಿಸಿರುವ ಕಾಂಗ್ರೆಸ್ ನಾಯಕ ಸಚಿನ್ ಪೈಲಟ್, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಗುರಿಯಾಗಿಸಿ ವಾಗ್ದಾಳಿ ಮುಂದುವರಿಸಿದ್ದಾರೆ.

ಪಾಲಿ ಜಿಲ್ಲೆಯಲ್ಲಿ ನಡೆದ ಕಿಸಾನ್ ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಅವರು, ‘ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ, ಬಿಜೆಪಿ ನಾಯಕಿಯ ವಿರುದ್ಧದ ಹಗರಣಗಳ ಬಗ್ಗೆ ತನಿಖೆ ನಡೆಸಲಾಗುವುದು. ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆ ಎಂದು ನಾವು ಭರವಸೆ ನೀಡಿದ್ದೆವು. ನಾಲ್ಕು ವರ್ಷಗಳು ಕಳೆದರೂ ಕ್ರಮ ಕೈಗೊಳ್ಳದಿರುವುದು ಆಶ್ಚರ್ಯ ಮೂಡಿಸಿದೆ ಎಂದು ರಾಜ್ಯ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯೂ ಆಗಿದ್ದ ಪೈಲಟ್ ತಮ್ಮದೇ ಪಕ್ಷದ ಸರ್ಕಾರದ ವಿರುದ್ಧ ಪರೋಕ್ಷ ಟೀಕಾ ಪ್ರಹಾರ ಮಾಡಿದರು.

‘ಕೇಂದ್ರದ ಬಿಜೆಪಿ ನಾಯಕರು, ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ವಿರುದ್ಧ ಸುಳ್ಳು ಆರೋಪ ಮಾಡುತ್ತಾರೆ. ನಮ್ಮ ನಾಯಕರನ್ನು ಅವಮಾನಿಸಲಾಗುತ್ತಿದೆ. ಆದರೆ, ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ರಾಜಸ್ಥಾನದ ಬಿಜೆಪಿ ನಾಯಕರ ವಿರುದ್ಧ ಕಾಂಗ್ರೆಸ್ ಸರ್ಕಾರ ಏಕೆ ಕ್ರಮ ಕೈಗೊಂಡಿಲ್ಲ’ ಎಂದು ಪೈಲಟ್ ಆಶ್ಚರ್ಯಪಟ್ಟರು.

ಉತ್ತರಪ್ರದೇಶದ ‘ಹಿಂದೂ’ ಕಾಲೇಜಿನಲ್ಲಿ ಘಟನೆ

ಕಾಲೇಜಿನ ಆಡಳಿತ ಮಂಡಳಿಯು ವಿದ್ಯಾರ್ಥಿನಿಯರ ಬೇಡಿಕೆಗೆ ಸ್ಪಂದಿಸದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ಎಸ್‌ಪಿ ಪಕ್ಷದ ಮುಖಂಡರು ತಿಳಿಸಿದ್ದಾರೆ

ಬುರ್ಖಾ ಧಾರಣೆ: ಕಾಲೇಜಿಗೆ ಪ್ರವೇಶ ನಿರಾಕರಣೆ

ಲಖನೌ: ಉತ್ತರಪ್ರದೇಶದ ಮೊರಾದಾಬಾದ್ ನಗರದ ‘ಹಿಂದೂ’ ಕಾಲೇಜಿನಲ್ಲಿ ಬುರ್ಖಾ ಧರಿಸಿ ಬಂದ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಿದ್ದು, ಇದನ್ನು ಖಂಡಿಸಿ ವಿದ್ಯಾರ್ಥಿನಿಯರು ಧರಣಿ ನಡೆಸಿದ್ದಾರೆ.

‘ಬುರ್ಖಾ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಬುಧವಾರ ಪ್ರವೇಶ ನಿರಾಕರಿಸಿದ್ದು, ಕಾಲೇಜು ಆಡಳಿತ ಮಂಡಳಿಯ ಈ ನಡೆಯನ್ನು ಖಂಡಿಸಿ ಅವರು ಕಾಲೇಜಿನ ಗೇಟಿನ ಬಳಿ ಧರಣಿ ನಡೆಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಬುರ್ಖಾ ಧರಿಸುವುದು ನಮ್ಮ ಹಕ್ಕು’ ಎಂದು ವಿದ್ಯಾರ್ಥಿನಿಯರು ತಿಳಿಸಿದ್ದಾರೆ. ‘ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಾವು ವಿದ್ಯಾರ್ಥಿಗಳಿಗೆ ವಸ್ತ್ರ ಸಂಹಿತೆ ಜಾರಿ ಮಾಡಿದ್ದೇವೆ. ಅದನ್ನು ಮೀರಿ ಬೇರೆ ವಸ್ತ್ರ ಧರಿಸಿ ಬರುವವರಿಗೆ ಪ್ರವೇಶ ನೀಡುವುದಿಲ್ಲ’ ಎಂದು ಕಾಲೇಜಿನ ಆಡಳಿತ ಮಂಡಳಿ ಸ್ಪಷ್ಟಪಡಿಸಿದೆ.

ಕಾಲೇಜಿನ ಗೇಟ್ ಬಳಿ ಬಟ್ಟೆ ಬದಲಿಸುವ ಕೊಠಡಿ ಇದೆ. ವಿದ್ಯಾರ್ಥಿನಿಯರು ಅದನ್ನು ಬಳಸಿಕೊಳ್ಳಬಹುದು ಎಂದೂ ಹೇಳಿದೆ.

‘ಅನಿರ್ದಿಷ್ಟಾವಧಿ ಜೈಲುವಾಸ ಸಲ್ಲ’

ಲಖೀಂಪುರ ಖೀರಿ: ಜಾಮೀನು ಅರ್ಜಿ ಕುರಿತ ತೀರ್ಪು ಕಾಯ್ದಿರಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ‘ಆರೋಪಿಯು ತಪ್ಪಿತಸ್ಥನೆಂದು ಸಾಬೀತಾಗದ ಹೊರತು ಆತನನ್ನು ಅನಿರ್ದಿಷ್ಟಾವಧಿವರೆಗೂ ಜೈಲಿನಲ್ಲಿ ಇಡಬಾರದು’ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಲಖೀಂಪುರ ಖೀರಿ ಹಿಂಸಾಚಾರದ ಆರೋಪಿ ಆಶಿಶ್ ಮಿಶ್ರಾ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಜೆ.ಕೆ. ಮಾಹೇಶ್ವರಿ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಈ ಕುರಿತ ತೀರ್ಪನ್ನು ಕಾಯ್ದಿರಿಸಿತು.

‘ಈ ಪ್ರಕರಣದಲ್ಲಿ ನಿಜವಾಗಿಯೂ ಬಲಿಪಶುಗಳಾಗಿರುವವರು ರೈತರು. ಅವರು ಜೈಲಿನಲ್ಲಿ ನರಳುತ್ತಿದ್ದಾರೆ. ಒಂದೊಮ್ಮೆ ಆಶಿಶ್ ಮಿಶ್ರಾಗೆ ಏನನ್ನೂ ಮಂಜೂರು (ಜಾಮೀನು) ಮಾಡದೆ ಹೋದರೆ ರೈತರು ಜೈಲಿನಲ್ಲೇ ಕೊಳೆಯಬೇಕಾಗುತ್ತದೆ. ವಿಚಾರಣಾಧೀನ

ನ್ಯಾಯಾಲಯವು ಈಗಾಗಲೇ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ’ ಎಂದು ನ್ಯಾಯಪೀಠ ತಿಳಿಸಿತು.

‘ಪ್ರಕರಣದ ತನಿಖೆಯು ನಿಷ್ಪಕ್ಷಪಾತವಾಗಿ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಅದೇ ರೀತಿ ದೋಷಿ ಎಂಬುದು ಸಾಬೀತಾಗದ ಹೊರತು ತನ್ನನ್ನು ಅನಿರ್ದಿಷ್ಟಾವಧಿವರೆಗೂ ಜೈಲಿನಲ್ಲಿ ಇಡುವಂತಿಲ್ಲ ಎಂದು ಹೇಳುವ ಅಧಿಕಾರ ಆರೋಪಿಗೂ ಇದೆ’ ಎಂದೂ ಹೇಳಿತು.

‘ಸಾಕ್ಷಿಗಳ ವಿಚಾರಣೆ ನಡೆಸುವವರೆಗೂ ನಾವು ಈ ಪ್ರಕರಣವನ್ನು ಬಾಕಿ ಉಳಿಸುತ್ತೇವೆ. ಈ ಕುರಿತು ವಿಚಾರಣಾಧೀನ ನ್ಯಾಯಾಲಯದ ಮೇಲೆ ಒತ್ತಡ ಹೇರಲು ಆಗುವುದಿಲ್ಲ. ದಿನ ಬಿಟ್ಟು ದಿನ ವಿಚಾರಣೆ ನಡೆಸುವುದೂ ನ್ಯಾಯಸಮ್ಮತವಲ್ಲ’ ಎಂದೂ ತಿಳಿಸಿತು.

ಜಾಮೀನು ಅರ್ಜಿಗೆ ವಿರೋಧ ವ್ಯಕ್ತಪಡಿಸಿರುವವರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ದುಷ್ಯಂತ್ ದವೆ, ‘ನ್ಯಾಯಪೀಠದ ಈ ಹೇಳಿಕೆ ಅಚ್ಚರಿ ಮೂಡಿಸಿದೆ. ಇದರಿಂದ ನಿರಾಸೆಯೂ ಆಗಿದೆ’ ಎಂದು ಹೇಳಿದರು.

ಉತ್ತರಪ್ರದೇಶ ಸರ್ಕಾರದ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಗರಿಮಾ ಪ್ರಸಾದ್, ‘ಈ ಅಪರಾಧವು ಹೇಯ ಮತ್ತು ಘೋರವಾದುದು. ಹೀಗಾಗಿ ಆರೋಪಿಗೆ ಜಾಮೀನು ನಿರಾಕರಿಸಬೇಕು. ಒಂದೊಮ್ಮೆ ಜಾಮೀನು ನೀಡಿದ್ದೇ ಆದರೆ ಸಮಾಜಕ್ಕೆ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ’ ಎಂದರು.

‘ಈ ಅಪರಾಧವು ಪಿತೂರಿಯಿಂದ ಕೂಡಿದೆ. ಇದೊಂದು ಪೂರ್ವಯೋಜಿತ ಕೃತ್ಯ. ಆರೋಪಿಯು ಕೇಂದ್ರ ಸಚಿವರ ಮಗ. ಆತನ ಪರವಾಗಿ ಪ್ರಭಾವಿ ವಕೀಲರು ವಾದ ಮಂಡಿಸುತ್ತಿದ್ದಾರೆ’ ಎಂದು ದುಷ್ಯಂತ್ ದವೆ ಹೇಳಿದರು.

ಆರೋಪಿ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಮುಕುಲ್ ರೋಹ್ತಗಿ, ‘ನನ್ನ ಕಕ್ಷಿದಾರರು ಒಂದು ವರ್ಷಕ್ಕಿಂತಲೂ ಅಧಿಕ ಸಮಯದಿಂದ ಜೈಲಿನಲ್ಲಿದ್ದಾರೆ. ವಿಚಾರಣೆ ನಡೆಯುತ್ತಿರುವುದನ್ನು ನೋಡಿದರೆ ಇದು ಮುಗಿಯಲು 7 ರಿಂದ 8 ವರ್ಷ ಆಗಬಹುದು. ಹೀಗಾಗಿ ಜಾಮೀನು ಅರ್ಜಿ ಮಾನ್ಯ ಮಾಡಬೇಕು’ ಎಂದು ಮನವಿ ಮಾಡಿದರು.

‘ಪ್ರಕರಣದ ದೂರುದಾರ ಜಗಜೀತ್ ಸಿಂಗ್ ಪ್ರತ್ಯಕ್ಷದರ್ಶಿಯಲ್ಲ. ಯಾರೋ ಹೇಳಿದ್ದನ್ನು ಕೇಳಿಸಿಕೊಂಡು ದೂರು ನೀಡಿದ್ದಾರೆ. ನನ್ನ ಕಕ್ಷಿದಾರರು ಅಪರಾಧಿಯಲ್ಲ. ಅಪರಾಧದ ಹಿನ್ನೆಲೆಯನ್ನೂ ಹೊಂದಿಲ್ಲ’ ಎಂದರು.

ಭಾರತ್ ಜೋಡೊ ಯಾತ್ರೆ ಅಂಗವಾಗಿ ಪಂಜಾಬ್‌ನ ಪಠಾಣ್‌ಕೋಟ್‌ನಲ್ಲಿ ಗುರುವಾರ ನಡೆದ ಬಹಿರಂಗ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಹಾಗೂ ಇತರರು ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ದೆಹಲಿಯಿಂದ ಪಂಜಾಬ್ ಸರ್ಕಾರ ನಿಯಂತ್ರಣ: ರಾಹುಲ್

ಪಠಾಣ್‌ಕೋಟ್ (ಪಿಟಿಐ): ಪಂಜಾಬ್‌ನ ಆಡಳಿತಾರೂಢ ಎಎಪಿ ನೇತೃತ್ವದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ದೆಹಲಿಯಿಂದ ನಿಯಂತ್ರಿಸಲಾಗುತ್ತಿರುವ ಸರ್ಕಾರವಿದು’ ಎಂದು ಗುರುವಾರ ಟೀಕಿಸಿದರು.

‘ದೆಹಲಿಯಲ್ಲಿ ಕುಳಿತವರು ನೀಡುವ ಸೂಚನೆ ಪ್ರಕಾರ ಮುಖ್ಯಮಂತ್ರಿ ಭಗವಂತ ಮಾನ್ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ’ ಎನ್ನುವ ಮೂಲಕ ಎಎಪಿಯ ಸಂಸದ ರಾಘವ ಛಡ್ಡಾ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ಭಾರತ್ ಜೋಡೊ ಯಾತ್ರೆ ಅಂಗವಾಗಿ ಇಲ್ಲಿ ನಡೆದ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ ಸಿ.ಎಂ ಭಗವಂತ ಮಾನ್ ಅವರನ್ನು ನಾನು ಗೌರವಿಸುತ್ತೇನೆ. ಆದರೆ, ಪಂಜಾಬ್ ಆಡಳಿತವು ಪಂಜಾಬ್‌ನಿಂದಲೇ ನಡೆಯಬೇಕು, ಅದು ದೆಹಲಿಯಿಂದ ಅಲ್ಲ’ ಎಂದರು.

ಕೆಲ ದಿನಗಳ ಹಿಂದೆ ಹೋಶಿಯಾರ್‌ಪುರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾಡಿದ್ದ ಭಾಷಣವನ್ನು ಪ್ರಸ್ತಾಪಿಸಿದ ರಾಹುಲ್, ‘ಪಂಜಾಬ್‌ನ ಆಡಳಿತ ದೂರ ನಿಯಂತ್ರಣದ ಮೂಲಕ ನಡೆಯುವುದು ಬೇಡ ಎಂದು ಮಾನ್ ಅವರಿಗೆ ಹೇಳಿದ್ದೆ. ನಾನು ಹೇಳಿದ್ದು ಸಾಮಾನ್ಯ ವಿಷಯವಾಗಿರಲಿಲ್ಲ’ ಎಂದರು.

‘ಯಾತ್ರೆ ವೇಳೆ ರೈತರೊಬ್ಬರನ್ನು ಮಾತನಾಡಿಸಿ, ಎಎಪಿ ಸರ್ಕಾರದ ಬಗ್ಗೆ ಕೇಳಿದೆ. ಇದು ‘ರಿಮೋಟ್ ಕಂಟ್ರೋಲ್’ ಸರ್ಕಾರ ಎಂದು ಆತ ಹೇಳಿದ. ರಿಮೋಟ್ ಕಂಟ್ರೋಲ್‌ನ ಅರ್ಥ ಕೇಳಿದೆ. ಅದಕ್ಕೆ, ಆತ ಎಎಪಿ ಸಂಸದ ರಾಘವ ಛಡ್ಡಾ ಎಂದು ಉತ್ತರಿಸಿದ’ ಎಂದ ರಾಹುಲ್, ‘ಇದು ಒಳ್ಳೆಯದಲ್ಲ’ ಎಂದರು.

‘ಪಂಜಾಬ್‌ನ ಅಭಿವೃದ್ಧಿಗಾಗಿ ಬಿಡುಗಡೆಯಾದ ಹಣವನ್ನು ಕಳೆದ ವರ್ಷ ನಡೆದ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಪರ ಪ್ರಚಾರಕ್ಕೆ ಬಳಸಿಕೊಳ್ಳಲಾಗಿತ್ತು’ ಎಂದರು.

‘ಬಿಜೆಪಿ– ಆರ್‌ಎಸ್‌ಎಸ್ ತಾಲಿಬಾನಿಗಳು’

ಪಠಾಣ್‌ಕೋಟ್: ತಾಲಿಬಾನ್‌ಗೆ ಹೋಲಿಸಿ ಆರ್‌ಎಸ್‌ಎಸ್ –ಬಿಜೆಪಿ ವಿರುದ್ಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗುರುವಾರ ತೀವ್ರ ವಾಗ್ದಾಳಿ ನಡೆಸಿದರು.

ಪಕ್ಷವು ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ ‘ಭಾರತ್ ಜೋಡೊ’ ಯಾತ್ರೆ ವೇಳೆ ಮಾತನಾಡಿದ ಅವರು, ‘ಹಿಂದುತ್ವ ಬ್ರಿಗೇಡ್ ಸಂವಿಧಾನ ಗೌರವಿಸುವುದಿಲ್ಲ. ಆದರೆ, ಅವರಿಗೆ ‘ಮನುಸ್ಮೃತಿ’ ಮೇಲೆ ಮಾತ್ರ ಗೌರವ. ಅಫ್ಗಾನಿಸ್ತಾನದಲ್ಲಿ ಇಸ್ಲಾಮಿಸ್ಟ್‌ಗಳು ನಡೆದುಕೊಳ್ಳುತ್ತಿರುವ ರೀತಿಯನ್ನೇ ಭಾರತದಲ್ಲಿ ಅನುಸರಿಸಲು ಆರ್‌ಎಸ್‌ಎಸ್ –ಬಿಜೆಪಿ ಪ್ರಯತ್ನಿಸುತ್ತಿವೆ’ ಎಂದು ಆರೋಪಿಸಿದರು.

‘ಸಮಾಜ ವಿಭಜಿಸಲು ಬಿಜೆಪಿ ನೇತೃತ್ವದ ಸರ್ಕಾರ, ಆರ್‌ಎಸ್‌ಎಸ್ ಮತ್ತು ಬಿಜೆಪಿ ಪಕ್ಷದ ನಾಯಕರು, ಕಾರ್ಯಕರ್ತರು ಮಾಡಿದ ಪ್ರಯತ್ನಗಳ ಫಲವೇ ‘ಭಾರತ್ ಜೋಡೊ’ ಯಾತ್ರೆ’ ಎಂದರು.

ಲೈಂಗಿಕ ದೌರ್ಜನ್ಯ ಪ್ರಕರಣ: ದೆಹಲಿ ಹೈಕೋರ್ಟ್ ಅಭಿಪ್ರಾಯ

ಖುದ್ದು ಹಾಜರಿಯಿಂದ ಅಪ್ರಾಪ್ತೆ ಮನಸ್ಸಿಗೆ ಗಾಸಿ

ನವದೆಹಲಿ (ಪಿಟಿಐ): ‘ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಅಪ್ರಾಪ್ತೆಯು ಪ್ರಕರಣದ ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಖುದ್ದು ಹಾಜರಾಗುವುದರಿಂದ ಆಕೆಯ ಮನಸ್ಸಿನ ಮೇಲೆ ಗಾಸಿ ಉಂಟಾಗುತ್ತದೆ. ವಿಚಾರಣೆ ನೆಪದಲ್ಲಿ ಘಟನೆಯನ್ನು ಮತ್ತೆ ಮತ್ತೆ ಪ್ರಸ್ತಾಪಿಸುವ ಮೂಲಕ ಆಕೆಗೆ ಇನ್ನಷ್ಟು ಮಾನಸಿಕ ಹಿಂಸೆ ನೀಡಬಾರದು’ ಎಂದು ದೆಹಲಿ ಹೈಕೋರ್ಟ್ ಹೇಳಿದೆ. ಇದಕ್ಕೆ ಕಡಿವಾಣ ಹಾಕುವ ಸಲುವಾಗಿ ಹೊಸ ಮಾರ್ಗಸೂಚಿಯನ್ನೂ ಪ್ರಕಟಿಸಿದೆ.

ಅತ್ಯಾಚಾರ ಪ್ರಕರಣದ ಆರೋಪಿಯೊಬ್ಬ ಸಲ್ಲಿಸಿದ್ದ ಅರ್ಜಿಯನ್ನು ಇದೇ 11ರಂದು ವಿಚಾರಣೆಗೆ ಒಳಪಡಿಸಿದ್ದ ನ್ಯಾಯಮೂರ್ತಿ ಜಸ್‌ಮೀತ್ ಸಿಂಗ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ವಿಚಾರಣೆ ವೇಳೆ ಆರೋಪ–ಪ್ರತ್ಯಾರೋಪಗಳನ್ನು ಮಾಡಲಾಗುತ್ತದೆ. ಪೋಕ್ಸೊ ಪ್ರಕರಣದ ಸಂತ್ರಸ್ತೆಯ ನಡತೆಯ ಮೇಲೆ ಅನುಮಾನ ವ್ಯಕ್ತಪಡಿಸಲಾಗುತ್ತದೆ. ಇದರಿಂದ ಆಕೆ ಜರ್ಜರಿತಳಾಗಿಬಿಡಬಹುದು’ ಎಂದು ಹೇಳಿದೆ.

‘ನನ್ನ ಪ್ರಕಾರ ವಿಚಾರಣೆ ವೇಳೆ ಸಂತ್ರಸ್ತೆಯು ನ್ಯಾಯಾಲಯಕ್ಕೆ ಖುದ್ದು ಹಾಜರಾಗುವುದರಿಂದ ಆಕೆಯ ಮನಸ್ಸಿನ ಮೇಲೆ ಘೋರ ಪರಿಣಾಮ ಉಂಟಾಗಲಿದೆ. ಆರೋಪಿಯ ಎದುರೇ ಆಕೆ ಕಟಕಟೆಯಲ್ಲಿ ನಿಲ್ಲಬೇಕಾಗುತ್ತದೆ’ ಎಂದು ನ್ಯಾಯಮೂರ್ತಿ ಜಸ್‌ಮೀತ್ ತಿಳಿಸಿದ್ದಾರೆ.

‘ಜಾಮೀನು ಅರ್ಜಿ ವಿಚಾರಣೆ ವೇಳೆ ಸಂತ್ರಸ್ತೆಯು ಖುದ್ದಾಗಿ ಇಲ್ಲವೇ ವರ್ಚುವಲ್ ಆಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚಿಸಲಾಗುತ್ತದೆ’ ಎಂದು ಆರೋಪಿ ಪರ ವಕೀಲ ಹಾಗೂ ಕಾನೂನು ಸೇವಾ ಪ್ರಾಧಿಕಾರದ ಪ್ರತಿನಿಧಿಯೊಬ್ಬರು ನ್ಯಾಯಪೀಠಕ್ಕೆ ತಿಳಿಸಿದರು.

‘ಈ ಸಂಪ್ರದಾಯಕ್ಕೆ ಕೊನೆ ಹಾಡುವ ಉದ್ದೇಶದಿಂದಲೇ ಕೆಲ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿದೆ. ಇವುಗಳನ್ನು ಜಾರಿಗೊಳಿಸಿದರೆ, ಪೋಕ್ಸೊ ಪ್ರಕರಣದ ಸಂತ್ರಸ್ತೆಯರನ್ನು ಮಾನಸಿಕ ಕಿರಿಕಿರಿಯಿಂದ ಪಾರುಮಾಡಬಹುದು.

ಇನ್ನು ಮುಂದೆ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದ ಜಾಮೀನು ಅರ್ಜಿಯ ವಿಚಾರಣೆ ವೇಳೆ ಈ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು’ ಎಂದೂ ನ್ಯಾಯಪೀಠ ಸೂಚಿಸಿತು.

ಮಾರ್ಗಸೂಚಿಯ ಪ್ರಕಾರ, ತನಿಖಾಧಿಕಾರಿ ಅಥವಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ನೆರವಿನೊಂದಿಗೆ ಸಂತ್ರಸ್ತೆಯನ್ನು ಕಲಾಪ ಆರಂಭಕ್ಕೂ ಮುನ್ನವೇ ವರ್ಚುವಲ್ ಆಗಿ ಹಾಜರುಪಡಿಸಬಹುದು.

‘ಆರೋಪಿಗೆ ಜಾಮೀನು ನೀಡುವುದರಿಂದ ಸಂತ್ರಸ್ತೆಯ ಮನದಲ್ಲಿ ಉಂಟಾಗಬಹುದಾದ ಆತಂಕದ ಕುರಿತು ಅರಿತುಕೊಳ್ಳಲು ವಿಚಾರಣೆ ವೇಳೆ ಪ್ರಯತ್ನಿಸಬೇಕು. ನ್ಯಾಯಾಲಯಕ್ಕೆ ಹಾಜರಾಗುವಾಗ ಆತ್ಮಸ್ಥೈರ್ಯ ತುಂಬುವುದಕ್ಕಾಗಿ ವ್ಯಕ್ತಿಯೊಬ್ಬರು ಆಕೆಯ ಜೊತೆಗೆ ಇರಬೇಕು’ ಎಂದೂ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

‘ಹೈಬ್ರಿಡ್’ ಮಾದರಿ ಸೂಕ್ತ

‘ಇಂತಹ ಪ್ರಕರಣಗಳ ವಿಚಾರಣೆಗೆ ‘ಹೈಬ್ರಿಡ್’ ಮಾದರಿಯೇ ಸೂಕ್ತ. ಇದರಿಂದ ಸಂತ್ರಸ್ತೆಯ ಹಕ್ಕುಗಳನ್ನು ರಕ್ಷಿಸಬಹುದು. ಆರೋಪಿ ಮತ್ತು ಸಂತ್ರಸ್ತೆ ಮುಖಾಮುಖಿಯಾಗುವುದನ್ನೂ ತಪ್ಪಿಸಬಹುದು. ಸಂತ್ರಸ್ತೆಯ ಮನಸ್ಸಿನ ಮೇಲೆ ಗಾಸಿ ಉಂಟಾಗುವುದನ್ನೂ ತಡೆಯಬಹುದು’ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

‘ಜಾಮೀನು ಅರ್ಜಿ ವಿಚಾರಣೆ ವೇಳೆ ತನ್ನ ಪರವಾಗಿ ತಂದೆ–ತಾಯಿ ಅಥವಾ ಪೋಷಕರು ಇಲ್ಲವೇ ಬೆಂಬಲಿತ ವ್ಯಕ್ತಿಯು ನ್ಯಾಯಾಲಯಕ್ಕೆ ಹಾಜರಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸಲಿದ್ದಾರೆ ಎಂದು ಸಂತ್ರಸ್ತೆಯು ಹೇಳಿದ್ದೇ ಆದರೆ, ಈ ಸಂಬಂಧ ಲಿಖಿತ ಪತ್ರ ಸಲ್ಲಿಸಿದರೆ ಅಂತಹ ಸಂದರ್ಭಗಳಲ್ಲಿ ಖುದ್ದು ಅಥವಾ ವರ್ಚುವಲ್ ಹಾಜರಾತಿಗಾಗಿ ಆಕೆಯ ಮೇಲೆ ಒತ್ತಡ ಹೇರುವಂತಿಲ್ಲ’ ಎಂದೂ ಹೇಳಲಾಗಿದೆ.

‘ಆರೋಪಿಗೆ ಜಾಮೀನು ಮಂಜೂರು ಆದ ಪಕ್ಷದಲ್ಲಿ ನ್ಯಾಯಾಲಯದ ಆದೇಶದ ಪ್ರತಿಯನ್ನು ಆಕೆಗೆ ರವಾನಿಸಬೇಕು. ಜಾಮೀನು ಆದೇಶದಲ್ಲಿ ಉಲ್ಲೇಖಿಸಿರುವ ಷರತ್ತುಗಳ ಬಗ್ಗೆ ಅರಿಯಲೂ ಇದರಿಂದ ಆಕೆಗೆ ಅನುಕೂಲವಾಗುತ್ತದೆ’ ಎಂದೂ ತಿಳಿಸಿದೆ.

‘ಶುಲ್ಕ ಕಟ್ಟಿಲ್ಲವೆಂದು ಪರೀಕ್ಷೆಗೆ ಅವಕಾಶ ನಿರಾಕರಿಸುವಂತಿಲ್ಲ’

ನವದೆಹಲಿ (ಪಿಟಿಐ): ‘ಶುಲ್ಕ ಕಟ್ಟಿಲ್ಲವೆಂದು ವಿದ್ಯಾರ್ಥಿಯನ್ನು ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಾಲೆಯಿಂದ ಹೊರಗಿಡುವಂತಿಲ್ಲ. ಪರೀಕ್ಷೆ ಬರೆಯಲು ಅವಕಾಶವನ್ನೂ ನಿರಾಕರಿಸುವಂತಿಲ್ಲ’ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಶುಲ್ಕ ಪಾವತಿ ಮಾಡಿಲ್ಲವೆಂದು ಖಾಸಗಿ ಶಾಲೆಯೊಂದು 10ನೇ ತರಗತಿ ವಿದ್ಯಾರ್ಥಿಯೊಬ್ಬನನ್ನು ಬೋರ್ಡ್ ಪರೀಕ್ಷೆಯಿಂದ ಹೊರಗಿಟ್ಟಿತ್ತು. ಶಾಲಾ ಆಡಳಿತದ ಕ್ರಮ ಪ್ರಶ್ನಿಸಿ ಆತ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ.

ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಮಿನಿ ಪುಷ್ಕರಣ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸುವುದು ವಿದ್ಯಾರ್ಥಿಯ ಹಕ್ಕಿನ ಉಲ್ಲಂಘನೆಯಾಗಲಿದೆ. ಶೈಕ್ಷಣಿಕ ವರ್ಷದ ನಡುವೆಯೇ ಆತನ ಮೇಲೆ ಈ ರೀತಿಯ ನಿರ್ಬಂಧ ಹೇರಿರುವುದು ಸರಿಯಲ್ಲ’ ಎಂದು ತಿಳಿಸಿದೆ.

ಪರೀಕ್ಷೆ ಬರೆಯಲು ವಿದ್ಯಾರ್ಥಿಗೆ ಅವಕಾಶ ನೀಡುವಂತೆ ಶಾಲಾ ಆಡಳಿತ ಮಂಡಳಿಗೆ ಸೂಚಿಸಿದ ನ್ಯಾಯಪೀಠ, ₹30 ಸಾವಿರ ಶುಲ್ಕ ಪಾವತಿಸುವಂತೆ ವಿದ್ಯಾರ್ಥಿಗೆ ನಿರ್ದೇಶಿಸಿದೆ. ಇದಕ್ಕಾಗಿ ನಾಲ್ಕು ವಾರಗಳ ಕಾಲಾವಕಾಶವನ್ನೂ ನೀಡಿದೆ.

ಐ.ಟಿ ನಿಯಮಕ್ಕೆ ತಿದ್ದುಪಡಿಯು ವಾಕ್ ಸ್ವಾತಂತ್ರ್ಯದ ಮೇಲೆ ಪ್ರಹಾರ: ಕಾಂಗ್ರೆಸ್

ನವದೆಹಲಿ (ಪಿಟಿಐ): ಪತ್ರಿಕಾ ಸಮಾಚಾರ ಕೇಂದ್ರವು (ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ–ಪಿಐಬಿ) ಸುಳ್ಳು ಸುದ್ದಿ ಎಂದು ಗುರುತಿಸಿದ ಎಲ್ಲ ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಿಂದ ಅಳಿಸಿ ಹಾಕಬೇಕು ಎಂದು ರೂಪಿಸಲಾದ ಮಾಹಿತಿ ತಂತ್ರಜ್ಞಾನ ಕರಡು ನಿಯಮಗಳು ವಾಕ್ ಸ್ವಾತಂತ್ರ್ಯದ ಮೇಲೆ ರಹಸ್ಯವಾದ ದಾಳಿ ಎಂದು ಕಾಂಗ್ರೆಸ್ ಟೀಕಿಸಿದೆ. ಕರಡು ನಿಯಮಗಳನ್ನು ತಕ್ಷಣವೇ ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದೆ.

ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಈ ನಿಯಮಗಳನ್ನು ಕೂಲಂಕಷವಾಗಿ ಚರ್ಚೆಗೆ ಒಳಪಡಿಸಬೇಕು ಎಂದೂ ಪಕ್ಷವು ಒತ್ತಾಯಿಸಿದೆ.

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮಾಹಿತಿ ತಂತ್ರಜ್ಞಾನ ಕರಡು ನಿಯಮಗಳ ತಿದ್ದುಪಡಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. ಸಾರ್ವಜನಿಕ ಪ್ರತಿಕ್ರಿಯೆಗಾಗಿ ಹಿಂದೆಯೇ ಪ್ರಕಟಿಸಲಾಗಿತ್ತು.

ನಿಯಮಗಳಲ್ಲಿ ಕೆಲವು ಅಂಶಗಳನ್ನು ಸೇರಿಸಲಾಗಿದೆ. ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪತ್ರಿಕಾ ಸಮಾಚಾರ ಕೇಂದ್ರದ ಫ್ಯಾಕ್ಟ್ ಚೆಕ್ ಘಟಕ ಅಥವಾ ಕೇಂದ್ರ ಸರ್ಕಾರವು ಫ್ಯಾಕ್ಟ್ ಚೆಕ್‌ಗಾಗಿ ನೇಮಿಸಿದ ಯಾವುದೇ ಸಂಸ್ಥೆ ಸುಳ್ಳು ಸುದ್ದಿ ಎಂದು ಗುರುತಿಸಿದ ವಿಚಾರವನ್ನು ಪ್ರಕಟಿಸಬಾರದು ಎಂದು ಹೊಸ ನಿಯಮವು ಹೇಳುತ್ತದೆ.

> **ಅಂತರ್ಜಾಲವನ್ನು ದಮನ ಮಾಡುವುದು ಮತ್ತು ಆನ್‌ಲೈನ್‌ನಲ್ಲಿ ಪ್ರಕಟವಾಗುವ ವಿಚಾರಗಳಿಗೆ ಕಡಿವಾಣ ಹಾಕುವುದು ಫ್ಯಾಕ್ಟ್ ಚೆಕ್ ಎಂಬುದಕ್ಕೆ ಕೇಂದ್ರ ಸರ್ಕಾರ ನೀಡಿದ ವ್ಯಾಖ್ಯಾನ**
> **ಪವನ್ ಖೇರ,** ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ

‘ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಐ.ಟಿ. ನಿಯಮಗಳನ್ನು ‘ಇಮೇಜ್ ಟೇಲರಿಂಗ್’ (ವರ್ಚಸ್ಸು ರೂಪಿಸುವಿಕೆ) ನಿಯಮಗಳು ಎಂದು ಪರಿಗಣಿಸಿದೆ. ಸರ್ಕಾರವು ಆನ್‌ಲೈನ್ ಸುದ್ದಿಯ ಫ್ಯಾಕ್ಟ್ ಚೆಕ್ ನಡೆಸಿದರೆ ನಾವು ಸರ್ಕಾರದ ಫ್ಯಾಕ್ಟ್ ಚೆಕ್ ನಡೆಸಲಿದ್ದೇವೆ’ ಎಂದು ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರ ಹೇಳಿದ್ದಾರೆ.

ಆನ್‌ಲೈನ್‌ನಲ್ಲಿ ಪ್ರಕಟವಾಗುವ ವಿಚಾರಗಳ ಕುರಿತಂತೆ ತಾನೇ ನ್ಯಾಯಾಧೀಶ, ತೀರ್ಪುಗಾರ ಮತ್ತು ಜಾರಿ ಸಂಸ್ಥೆ ಎಂದು ಸರ್ಕಾರ ಭಾವಿಸಿಕೊಂಡಿದೆ. ಈಗಿನ ತಿದ್ದುಪಡಿಯು ಪಿಐಬಿಯ ಫ್ಯಾಕ್ಟ್ ಚೆಕ್ ವಿಭಾಗವನ್ನು ನ್ಯಾಯಾಧೀಶನನ್ನಾಗಿ ಮಾಡಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಹೊಂದಿಕೆಯಾಗದ ಯಾವುದೇ ವಿಚಾರಗಳನ್ನು ಅಳಿಸಿ ಹಾಕುವ ಅಧಿಕಾರ ಕೊಟ್ಟಿದೆ. ಮಾಧ್ಯಮವನ್ನು ಹತ್ತಿಕ್ಕುವ ವಿಚಾರವು ಈ ಸರ್ಕಾರಕ್ಕೆ ಹೊಸದೇನೂ ಅಲ್ಲ ಎಂದೂ ಖೇರ ಹೇಳಿದ್ದಾರೆ.

ಮಕ್ಕಳ ಮೇಲೆ ಆನ್‌ಲೈನ್ ದೌರ್ಜನ್ಯ: ಚೈಲ್ಡ್ ರೈಟ್ಸ್ ಆ್ಯಂಡ್ ಯು ಸಂಸ್ಥೆ ವರದಿ

‘ಶೇ 70ರಷ್ಟು ಪೋಷಕರು ದೂರು ನೀಡುವುದಿಲ್ಲ’

ನವದೆಹಲಿ (ಪಿಟಿಐ): ತಮ್ಮ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆದರೆ ಪೊಲೀಸರಿಗೆ ದೂರು ನೀಡುವುದಿಲ್ಲ ಎಂದು ಶೇ 70ರಷ್ಟು ಪೋಷಕರು ಹೇಳಿದ್ದಾರೆ.

ಮಕ್ಕಳ ಮೇಲೆ ಆನ್‌ಲೈನ್ ವೇದಿಕೆಗಳ ಮೂಲಕ ನಡೆಯುವ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿ ಚೈಲ್ಡ್ ರೈಟ್ಸ್ ಆ್ಯಂಡ್ ಯು (ಕ್ರೈ) ಹಾಗೂ ಪಟ್ನಾದ ಚಾಣಕ್ಯ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (ಸಿಎನ್‌ಎಲ್‌ಯು) ನಡೆಸಿದ ಸಮೀಕ್ಷೆಯಲ್ಲಿ ಈ ವಿಷಯ ತಿಳಿದುಬಂದಿದೆ.

‘ಮಕ್ಕಳು ಆನ್‌ಲೈನ್ ಲೈಂಗಿಕ ದೌರ್ಜನ್ಯಕ್ಕೆ ಒಳಗಾದರೆ, ನೀವು ಏನು ಮಾಡುತ್ತೀರಿ ಎಂದು ಪೋಷಕರನ್ನು ಕೇಳಲಾಯಿತು. ಅಧ್ಯಯನದಲ್ಲಿ ಭಾಗಿಯಾದ 424 ಪೋಷಕರ ಪೈಕಿ ಶೇ 30ರಷ್ಟು ಪೋಷಕರು ಪೊಲೀಸರ ಬಳಿ ಹೋಗಿ, ದೂರು ನೀಡುತ್ತೇವೆ ಎಂದರೆ, ಶೇ 70ರಷ್ಟು ಪೋಷಕರು ತಾವು ಪೊಲೀಸರ ಬಳಿ ಹೋಗುವುದಿಲ್ಲ ಎಂದಿದ್ದಾರೆ’ ಎಂದು ವರದಿಯಲ್ಲಿ ಹೇಳಲಾಗಿದೆ.

‘ಆನ್‌ಲೈನ್‌ನಲ್ಲಿ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಕ್ಕಾಗಿ ಇರುವ ಕಾನೂನುಗಳ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದು ಶೇ 16ರಷ್ಟು ಪೋಷಕರು ಹೇಳಿದ್ದಾರೆ’ ಎನ್ನುವ ಅಂಶ ವರದಿಯಲ್ಲಿದೆ.

‘ಅಪರಿಚಿತರಿಂದ ಸಂಪರ್ಕ’: ವಿವಿಧ ಆನ್‌ಲೈನ್ ವೇದಿಕೆಗಳ ಮೂಲಕ ತಮ್ಮ ಮಕ್ಕಳನ್ನು ಸಂಪರ್ಕಿಸಲು ಅಪರಿಚಿತರು ಪ್ರಯತ್ನಿಸುತ್ತಿದ್ದಾರೆ. ಸ್ನೇಹ ಬೆಳೆಸುವ ಸಲುವಾಗಿ, ವೈಯಕ್ತಿಕ ಹಾಗೂ ಕುಟುಂಬದ ಮಾಹಿತಿ ಪಡೆದುಕೊಳ್ಳಲು, ಲೈಂಗಿಕ ಚರ್ಚೆ ನಡೆಸಲು ಈ ಮೂಲಕ ಯತ್ನಿಸುತ್ತಿದ್ದಾರೆ ಎಂದು ಶೇ 33ರಷ್ಟು ಪೋಷಕರು ಹೇಳಿದ್ದಾರೆ.

‘ಮಕ್ಕಳ ಮೇಲಿನ ಆನ್‌ಲೈನ್ ಲೈಂಗಿಕ ದೌರ್ಜನ್ಯವು ತಮ್ಮ ಮಕ್ಕಳನ್ನೂ ಬಾಧಿಸಿದೆ ಎಂದು ಗ್ರಾಮೀಣ ಪ್ರದೇಶದ ಪೋಷಕರು ಅಧಿಕ ಸಂಖ್ಯೆಯಲ್ಲಿ ಹೇಳಿದ್ದಾರೆ. ಹುಡುಗಿಯರು ಹಾಗೂ ಹುಡುಗರು ಇಬ್ಬರೂ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ತಮ್ಮ ಮಕ್ಕಳಿಗೆ ಲೈಂಗಿಕ ಪ್ರಚೋದಕ ಚಿತ್ರ, ವಿಡಿಯೊಗಳನ್ನು ಕಳುಹಿಸಲಾಗಿದೆ. ಜೊತೆಗೆ ತಮ್ಮ ಮಕ್ಕಳೊಂದಿಗೆ ಲೈಂಗಿಕ ಸಂಭಾಷಣೆಗಳನ್ನೂ ನಡೆಸಲಾಗಿದೆ ಎಂದು ಪೋಷಕರು ಹೇಳಿದ್ದಾರೆ’ ಎಂದು ವರದಿ ಹೇಳಿದೆ.

ಆನ್‌ಲೈನ್ ಪ್ರಲೋಭನೆಗೆ ಒಳಗಾದವರು



● ಏಕಾಗ್ರತೆ ಕೊರತೆ, ಶಾಲೆಗೆ ಗೈರಾಗುವುದು (ಶೇ 26), ಶಾಲೆಯಲ್ಲಿ ಅತಿಯಾದ ಮೊಬೈಲ್ ಬಳಕೆ (ಶೇ 20.9)– ಇವು ದೌರ್ಜನ್ಯಕ್ಕೆ ಒಳಗಾದ ಮಕ್ಕಳಲ್ಲಿ ಶಿಕ್ಷಕರು ಗಮನಿಸಿರುವ ಅಂಶಗಳು. ಮಹಾರಾಷ್ಟ್ರ, ಕರ್ನಾಟಕ, ಪಶ್ಚಿಮ ಬಂಗಾಳ ಮತ್ತು ಮಧ್ಯ ಪ್ರದೇಶದ 384 ಶಿಕ್ಷಕರು ಸಮೀಕ್ಷೆಯಲ್ಲಿ ಭಾಗಿಯಾಗಿದ್ದರು

> **ಮಕ್ಕಳ ಕಳ್ಳಸಾಗಣೆಗೆ ಅಂತರ್ಜಾಲ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಈ ಅಧ್ಯಯನವು ಸ್ಪಷ್ಟಪಡಿಸಿದೆ. ಆದ್ದರಿಂದ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಮೌಲ್ಯಮಾಪನ ಮಾಡಿ, ಇನ್ನಷ್ಟು ಬಲಗೊಳಿಸಬೇಕು**
> **ಸೋಹಾ ಮೊಯಿತ್ರಾ,** ನಿರ್ದೇಶಕಿ, ಅಭಿವೃದ್ಧಿ ಬೆಂಬಲ ವಿಭಾಗ, ಚೈಲ್ಡ್ ರೈಟ್ಸ್ ಆ್ಯಂಡ್ ಯು

‘ವಿಭಜಕ ಪಕ್ಷವೆಂದು ಬಿಂಬಿಸುವ ಹುನ್ನಾರ’

ಚೆನ್ನೈ (ಪಿಟಿಐ): ‘ರಾಜ್ಯಕ್ಕೆ ತಮಿಳುನಾಡು ಎನ್ನುವ ಬದಲು ತಮಿಳಗಂ ಎಂದು ಸಂಬೋಧಿಸುವುದೇ ಸೂಕ್ತ’ ಎಂದು ಹೇಳಿದ್ದ ರಾಜ್ಯಪಾಲ ಆರ್.ಎನ್.ರವಿ ಅವರು ಈ ಕುರಿತು ಬುಧವಾರ ಸ್ಪಷ್ಟನೆ ನೀಡಿದ್ದಾರೆ. ಅವರ ಸ್ಪಷ್ಟನೆಯನ್ನು ಆಡಳಿತಾರೂಢ ಡಿಎಂಕೆ, ಗುರುವಾರ ತಿರಸ್ಕರಿಸಿದೆ.

‘ಪ್ರತ್ಯೇಕ ರಾಷ್ಟ್ರಕ್ಕಾಗಿ ಡಿಎಂಕೆ ಹೋರಾಟ ನಡೆಸುತ್ತಿದೆ. ನಮ್ಮದು ದೇಶ ವಿಭಜಕ ಪಕ್ಷವೆಂದು ಬಿಂಬಿಸುವ ಉದ್ದೇಶದಿಂದಲೇ ರವಿ ಆ ರೀತಿ ಹೇಳಿಕೆ ನೀಡಿದ್ದರು’ ಎಂದು ಡಿಎಂಕೆ ವಕ್ತಾರ ಟಿ.ಕೆ.ಎಸ್.ಇಳಂಗೋವನ್ ಆರೋಪಿಸಿದ್ದಾರೆ.

‘ನಾವು ಪ್ರತ್ಯೇಕ ರಾಷ್ಟ್ರಕ್ಕಾಗಿ ಒತ್ತಾಯಿಸಿಲ್ಲ. ಆಡಳಿತಾತ್ಮಕ ದೃಷ್ಟಿಯಿಂದ ರಾಜ್ಯಕ್ಕೆ ಹೆಚ್ಚಿನ ಅಧಿಕಾರ ಒದಗಿಸುವಂತೆ ಕೇಳಿದ್ದೇವೆ. ತಮಿಳುನಾಡು, ಅದರ ಸಂಸ್ಕೃತಿ ಹಾಗೂ ಭಾಷೆಯನ್ನು ಪ್ರಶ್ನಿಸುವ ಅಧಿಕಾರ ರಾಜ್ಯಪಾಲರಿಗೆ ಇಲ್ಲ’ ಎಂದು ಅವರು ಹೇಳಿದ್ದಾರೆ.

ಮಾನನಷ್ಟ ಮೊಕದ್ದಮೆ

ಚೆನ್ನೈ: ತಮ್ಮ ವಿರುದ್ಧ ಮಾನಹಾನಿಕರ ಹಾಗೂ ನಿಂದನಾತ್ಮಕ ಹೇಳಿಕೆ ನೀಡಿದ್ದ ಡಿಎಂಕೆ ವಕ್ತಾರ ಶಿವಾಜಿ ಕೃಷ್ಣಮೂರ್ತಿ ವಿರುದ್ಧ ರಾಜ್ಯಪಾಲ ರವಿ ಅವರು ಗುರುವಾರ ಮಾನನಷ್ಟ ಮೊಕದ್ದಮೆ ದಾಖಲಿದ್ದಾರೆ.

ಕೃಷ್ಣಮೂರ್ತಿ ವಿರುದ್ಧ ಐಪಿಸಿ ಸೆಕ್ಷನ್ 499 ಮತ್ತು 500 ರ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ಅವರು ಮನವಿ ಮಾಡಿದ್ದು, ನ್ಯಾಯಾಲಯವು ಇದನ್ನು ಶೀಘ್ರವೇ ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ. ಇದೇ 14ರಂದು ಮಾತನಾಡಿದ್ದ ಕೃಷ್ಣಮೂರ್ತಿ, ರಾಜ್ಯಪಾಲರ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿದ್ದರು. ಹೀಗಾಗಿ ಅವರನ್ನು ಪಕ್ಷದಿಂದ ಅಮಾನತು ಮಾಡಲಾಗಿತ್ತು.

ಶುಕ್ರವಾರ, ಜನವರಿ 20, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 20 | ಪುಟ 18
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
‘ಲವ್ ಮಾಕ್ಟೇಲ್’ ಖ್ಯಾತಿಯ ನಟ ಮಿಲನ ನಾಗರಾಜ್ ನಟ ಡಾರ್ಲಿಂಗ್ ಕೃಷ್ಣ ಜೊತೆ ‘ಲವ್‌ಬರ್ಡ್ಸ್’ ಆಗಿ ತೆರೆಗೆ ಬರಲಿದ್ದಾರೆ...

ಆಳ-ಅಗಲ
ವಿಮಾನದಲ್ಲಿ ದುರ್ವರ್ತನೆ ಶಿಕ್ಷಾರ್ಹ ಅಪರಾಧ

‘ಅಂಬೇಡ್ಕರ್‌ಗಾಗಿ ಆರ್‌ಎಸ್‌ಎಸ್ ಹೆಣಗಾಟ’ 5
‘ಅಡುಗೆ ನಮ್ಮದು, ಬಡಿಸುತ್ತಿರುವುದು ಬಿಜೆಪಿ’ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,858	18,108	₹58,400 (ಬೆಂಗಳೂರು)	₹69,400 (ಬೆಂಗಳೂರು)	81.37

ಗೂಗಲ್ ಮೇಲ್ಮನವಿ ತಿರಸ್ಕರಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ತನಗೆ ₹1,337.76 ಕೋಟಿ ದಂಡ ವಿಧಿಸಿರುವುದಕ್ಕೆ ಮಧ್ಯಂತರ ತಡೆ ನೀಡಲು ನಿರಾಕರಿಸಿ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯ ಮಂಡಳಿ (ಎನ್‌ಸಿಎಲ್‌ಎಟಿ) ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಗೂಗಲ್ ಕಂಪನಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಗುರುವಾರ ತಿರಸ್ಕರಿಸಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಅವರಿದ್ದ ನ್ಯಾಯಪೀಠವು, ಸಿಸಿಐ ವಿಧಿಸಿದ ದಂಡದ ಪೈಕಿ ಶೇ 10ರಷ್ಟು ಮೊತ್ತವನ್ನು ಏಳು ದಿನಗಳ ಒಳಗಾಗಿ ಠೇವಣಿ ಇಡುವಂತೆ ಗೂಗಲ್ ಕಂಪನಿಗೆ ಸೂಚಿಸಿತು.

ಅಲ್ಲದೇ, ಸಿಸಿಐ ಆದೇಶವನ್ನು ಪ್ರಶ್ನಿಸಿ ಗೂಗಲ್ ಸಲ್ಲಿಸಿರುವ ಅರ್ಜಿಯ ಕುರಿತು ಬರುವ ಮಾರ್ಚ್ 31ರ ಒಳಗೆ ನಿರ್ಧಾರ ಕೈಗೊಳ್ಳುವಂತೆ ಎನ್‌ಸಿಎಲ್‌ಎಟಿಗೆ ನ್ಯಾಯಪೀಠ ಸೂಚಿಸಿತು.

4ನೇ ಪುಟ ನೋಡಿ

ಬಿಬಿಎಂಪಿ: ಕೊಳವೆ ಬಾವಿ ಯೋಜನೆಗೆ ಕನ್ನ ● ಇ.ಡಿ ತನಿಖೆ ವೇಳೆ ಬಹಿರಂಗ

ಮುಚ್ಚಿಟ್ಟ ₹ 400 ಕೋಟಿ ಅಕ್ರಮ

● ರಾಜೇಶ್ ರೈ ಚಟ್ಲ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಲ್ಲಿ (ಬಿಬಿಎಂಪಿ) ಒಂದು ಕೊಳವೆ ಬಾವಿ ಕೊರೆಯುವ ಕಾಮಗಾರಿಗೆ ₹ 10 ಲಕ್ಷ ವೆಚ್ಚದಂತೆ ಲೆಕ್ಕ ತೋರಿಸಿ ಸುಮಾರು ₹ 400 ಕೋಟಿಯಷ್ಟು ಅಕ್ರಮ ನಡೆಸಿರುವುದು ಮೂರು ವರ್ಷಗಳ ಹಿಂದೆಯೇ ರಾಜ್ಯ ಸರ್ಕಾರದ ಗಮನಕ್ಕೆ ಬಂದಿದ್ದರೂ ಈ ಹಗರಣ ಮುಚ್ಚಿಟ್ಟಿರುವುದು ಇದೀಗ ಬಹಿರಂಗವಾಗಿದೆ.

2016–2019ರ ಅವಧಿಯಲ್ಲಿ ಬಿಬಿಎಂಪಿಯ ದಾಸರಹಳ್ಳಿ, ಮಹದೇವಪುರ, ಆರ್.ಆರ್. ನಗರ, ಬೊಮ್ಮನಹಳ್ಳಿ ಮತ್ತು ಯಲಹಂಕ ವಲಯದಲ್ಲಿ ಈ ಅಕ್ರಮ ನಡೆದಿರುವುದು, ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಸೂಚನೆಯಂತೆ ನಗರಾಭಿವೃದ್ಧಿ ಇಲಾಖೆ ನಡೆಸಿದ ಆಂತರಿಕ ವಿಚಾರಣೆಯಲ್ಲಿ ಗೊತ್ತಾಗಿತ್ತು. ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಇ.ವಿ. ರಮಣ ರೆಡ್ಡಿ ಅವರು, ಈ ವಿಚಾರಣಾ ವರದಿಯಲ್ಲಿರುವ ಅಂಶಗಳಿಗೆ ಸರ್ಕಾರದ ಕರಡು ಆದೇಶದ ಕಡತವನ್ನು ಅನುಮೋದನೆಗಾಗಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರಿಗೆ 2019ರ ನ. 8 ರಂದು ಮಂಡಿಸಿದ್ದರು. ಅದಕ್ಕೆ ಯಡಿಯೂರಪ್ಪ ಅನುಮೋದನೆಯನ್ನೂ ನೀಡಿದ್ದರು.

ಈ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ನೀಡಿದ ಬೆನ್ನಲ್ಲೇ, ನಗರಾಭಿವೃದ್ಧಿ ಇಲಾಖೆಯ ಮುಖ್ಯ ಜಾಗೃತ ಅಧಿಕಾರಿ ಸರ್ಕಾರಕ್ಕೆ ಸಲ್ಲಿಸಿದ್ದ ಆಂತರಿಕ ವಿಚಾರಣಾ ವರದಿ ಮುನ್ನೆಲೆಗೆ ಬಂದಿದೆ. ಇದೀಗ ಈ ವರದಿಯನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಪಡೆದುಕೊಂಡಿದ್ದಾರೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

4ನೇ ಪುಟ ನೋಡಿ

ವಿಚಾರಣಾ ವರದಿಯಲ್ಲಿ ಏನಿದೆ?



- 165 ಮಿಲಿ ಮೀಟರ್ ವ್ಯಾಸದ ಕೊಳವೆಬಾವಿ ಕೊರೆದು ಪಂಪ್ ಜೋಡಿಸುವ ಕಾಮಗಾರಿಗಳಿಗೆ, ಪ್ರತಿ ಕೊಳವೆ ಬಾವಿಗೆ ಸುಮಾರು ₹ 10 ಲಕ್ಷ ವೆಚ್ಚ ಮಾಡಲಾಗಿದ್ದು, ಇದು ಅಸಹಜವಾಗಿ ಹೆಚ್ಚಾಗಿದೆ.
- ಎಲ್ಲ ಕೊಳವೆಬಾವಿಗಳಿಗೂ ಒಂದೇ ಸಮನಾಗಿ ₹ 10 ಲಕ್ಷ ವೆಚ್ಚವಾಗಲು ಸಾಧ್ಯವಿಲ್ಲ.
- ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊಳವೆಬಾವಿ ಕೊರೆಯುವ ಸಂದರ್ಭದಲ್ಲಿ ‘ನೋ ವಾಟರ್ ನೋ ಮನಿ’ (ನೀರಿಲ್ಲದಿದ್ದರೆ ಹಣ ಇಲ್ಲ) ಎಂಬ ಸರ್ಕಾರದ ನೀತಿಯನ್ನು ಅನುಸರಿಸಿಲ್ಲವೆಂದು ವಿಚಾರಣೆ ವೇಳೆ ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.
- ಈ ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿವೆಯೇ ಎಂಬ ಬಗ್ಗೆ ವಿವರವಾದ ತನಿಖೆಯ ಅಗತ್ಯವಿದೆ.
- ಕೊಳವೆಬಾವಿ ಕೊರೆಯುವ ಕಾಮಗಾರಿಗಳಲ್ಲಿ ಭಾಗಿಯಾಗಿರುವ ಐದೂ ವಲಯಗಳ ಎಂಜಿನಿಯರ್‌ಗಳು ಮತ್ತು ಅಧಿಕಾರಿಗಳ ಮೇಲೆ ಪ್ರಕರಣ ದಾಖಲಿಸಿ ಹೆಚ್ಚಿನ ತನಿಖೆ ನಡೆಸಲು ಎಸಿಬಿಗೆ ವಹಿಸಬಹುದು.

ಭ್ರಷ್ಟಾಚಾರ ಆರೋಪದ ತನಿಖೆಯನ್ನು ಹಿಂದೆ ಎಸಿಬಿ ನಡೆಸಿತ್ತು. ಮೊತ್ತ ದೊಡ್ಡದಿರುವುದರಿಂದ ಎಸಿಬಿಯಿಂದ ಜಾರಿ ನಿರ್ದೇಶನಾಲಯಕ್ಕೆ ಪ್ರಕರಣ ವರ್ಗಾವಣೆಯಾಗಿದೆ

ತುಷಾರ್ ಗಿರಿನಾಥ್
ಮುಖ್ಯ ಆಯುಕ್ತ, ಬಿಬಿಎಂಪಿ

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್‌.ಅಶೋಕ ಇದ್ದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

52,072 ಬಂಜಾರ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿದ ಮೋದಿ

ಹಕ್ಕುಪತ್ರ: ದಾಖಲೆ ಬರೆದ ಕಂದಾಯ ಇಲಾಖೆ

ಪ್ರಜಾವಾಣಿ ವಾರ್ತೆ

ಮಳಖೇಡ (ಕಲಬುರಗಿ ಜಿಲ್ಲೆ): ಸೇಡಂ ತಾಲ್ಲೂಕಿನ ಮಳಖೇಡನಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರು 52,072 ಬಂಜಾರ ಸಮುದಾಯದ ಕುಟುಂಬಗಳಿಗೆ ಏಕ ಕಾಲಕ್ಕೆ ನಿವೇಶನ ಹಕ್ಕುಪತ್ರ ವಿತರಿಸುವ ಮೂಲಕ ಕಂದಾಯ ಇಲಾಖೆಯ ಹೆಸರಿನಲ್ಲಿ ದಾಖಲೆ ಬರೆದರು.

ಇದಕ್ಕೆಂದೇ ಮೂರು ತಿಂಗಳಿನಿಂದ ಇಲಾಖೆ ಅಧಿಕಾರಿಗಳು ಕಲ್ಯಾಣ ಕರ್ನಾಟಕದ ಜಿಲ್ಲೆಗಳ ತಾಂಡಾ ನಿವಾಸಿಗಳ ಮಾಹಿತಿ ಸಂಗ್ರಹಿಸಿದ್ದರು. ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯ ಕರ್ನಾಟಕ ಘಟಕದ ಉಪಾಧ್ಯಕ್ಷೆ ವಸಂತ ಕವಿತಾ ಅವರು ಕಂದಾಯ ಸಚಿವ ಆರ್.ಅಶೋಕ ಅವರಿಗೆ ಪ್ರಮಾಣಪತ್ರ ನೀಡಿದರು.

ವಿಜಯಪುರ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ತಾಂಡಾ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಲಾಯಿತು.

ವೇದಿಕೆಯಲ್ಲಿ ಸಾಂಕೇತಿಕವಾಗಿ ಐದು ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿದ ಪ್ರಧಾನಿ ಮೋದಿ, ‘ಬಂಜಾರ ಸಮುದಾಯದವರು ವಾಸಿಸುವ ಮನೆಗಳಿಗೆ ಹಕ್ಕುಪತ್ರ ವಿತರಿಸಬೇಕು ಎಂಬ ಮೂರು ದಶಕಗಳ ಬೇಡಿಕೆಯನ್ನು ಹಿಂದಿನ ಸರ್ಕಾರಗಳು ನಿರ್ಲಕ್ಷ್ಯ ಮಾಡಿದ್ದವು. ಅವರಿಗೆ ಭದ್ರ ನೆಲೆ ಒದಗಿಸಲು ನಮ್ಮ ಸರ್ಕಾರವೇ ಬರಬೇಕಾಯಿತು’ ಎಂದರು.

‘ಕಂದಾಯ ಗ್ರಾಮಗಳಾಗಿ ಪರಿವರ್ತನೆಯಾದ ತಾಂಡಾಗಳಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಶೌಚಾಲಯವುಳ್ಳ ಸುಸಜ್ಜಿತ ಮನೆಗಳನ್ನು ನಿರ್ಮಿಸಿಕೊಡಲಾಗುವುದು. ಮನೆಗಳಿಗೆ ನಳದ ಸಂಪರ್ಕ, ಉಜ್ವಲ ಯೋಜನೆಯಡಿ ಅಡುಗೆ ಅನಿಲ ಸಂಪರ್ಕ ಕಲ್ಪಿಸಲಾಗುವುದು. ದೆಹಲಿಯಲ್ಲಿ ನಿಮ್ಮ ಮಗ ಇದ್ದಾನೆ ಎಂದು ಭಾವಿಸಿ ನೆಮ್ಮದಿಯಿಂದ ಇರಿ’ ಎಂದು ಹೇಳಿದರು.

4ನೇ ಪುಟ ನೋಡಿ

ಪರಿಶಿಷ್ಟರ ಮನೆಗಳಿಗೆ 75 ಯುನಿಟ್ ಉಚಿತ ವಿದ್ಯುತ್ ಒದಗಿಸಲಾಗಿದೆ. ಪರಿಶಿಷ್ಟರ ಶಿಕ್ಷಣಕ್ಕೆ 100 ಅಂಬೇಡ್ಕರ್ ವಸತಿ ನಿಲಯಗಳನ್ನು ನಿರ್ಮಿಸಲಾಗುತ್ತಿದೆ

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ರಾಜ್ಯದ ಮೂರು ಸಾವಿರ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುತ್ತಿದ್ದು, ಹಕ್ಕುಪತ್ರ ಪಡೆದ ಎಲ್ಲರಿಗೂ ಉಚಿತವಾಗಿ ಆಸ್ತಿ ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ

ಆರ್. ಅಶೋಕ, ಕಂದಾಯ ಸಚಿವ

ಚಿನಕುರಳಿ

ಪ್ರಕಾಶ್ ಶೆಟ್ಟಿ

ದೆಹಲಿಯಲ್ಲಿ ಮಹಿಳೆಯರ ಸುರಕ್ಷತೆ ಪರಿಶೀಲಿಸುತ್ತಿದ್ದ ವೇಳೆ ಘಟನೆ

ಆಯೋಗದ ಅಧ್ಯಕ್ಷೆಯನ್ನು ಎಳೆದೊಯ್ದ ಚಾಲಕ

ನವದೆಹಲಿ(ಪಿಟಿಐ): ದೆಹಲಿಯಲ್ಲಿ ರಾತ್ರಿ ವೇಳೆ ಮಹಿಳೆಯರಿಗೆ ಯಾವ ರೀತಿಯ ಸುರಕ್ಷತೆ ಇದೆ ಎಂಬುದನ್ನು ಖುದ್ದಾಗಿ ಪರೀಕ್ಷಿಸಲು ಮುಂದಾದ ದೆಹಲಿ ಮಹಿಳಾ ಆಯೋಗದ (ಡಿಸಿಡಬ್ಲ್ಯು) ಅಧ್ಯಕ್ಷೆ ಸ್ವಾತಿ ಮಾಲೀವಾಲ್ ಅವರನ್ನೇ ಕುಡಿದ ಮತ್ತಿನಲ್ಲಿದ್ದ ಕಾರು ಚಾಲಕನೊಬ್ಬ 15 ಮೀಟರ್‌ನಷ್ಟು ದೂರಕ್ಕೆ ಎಳೆದೊಯ್ದ ಘಟನೆ ಗುರುವಾರ ನಸುಕಿನ 3 ಗಂಟೆ ಸುಮಾರಿಗೆ ‘ಏಮ್ಸ್’ ಬಳಿ ನಡೆದಿದೆ.

ಈ ಬಗ್ಗೆ ಸ್ವತಃ ಸ್ವಾತಿ ಅವರು ಗುರುವಾರ ಹೇಳಿಕೆ ನೀಡಿದ್ದು, ‘ದೆಹಲಿಯಲ್ಲಿ ಮಹಿಳಾ ಆಯೋಗದ ಅಧ್ಯಕ್ಷರೇ ಸುರಕ್ಷಿತರಲ್ಲ ಎಂದರೆ, ಇತರ ಮಹಿಳೆಯರಿಗೆ ದೆಹಲಿ ಎಷ್ಟು ಅಸುರಕ್ಷಿತ ಎಂಬುದನ್ನು ಯಾರಾದರೂ ಊಹಿಸಬಹುದು’ ಎಂದು ದೂರಿದ್ದಾರೆ.

ಈ ಘಟನೆಗೆ ಸಂಬಂಧಿಸಿದಂತೆ ದಕ್ಷಿಣ ದೆಹಲಿಯ ಸಂಗಮ್ ವಿಹಾರ್‌ನ ನಿವಾಸಿ ಹರೀಶ್ ಚಂದ್ರ (47) ಎಂಬಾತನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಸ್ವಾತಿ ಮಾಲೀವಾಲ್

‘ಗಸ್ತಿನಲ್ಲಿದ್ದ ಪೊಲೀಸ್ ವಾಹನಕ್ಕೆ ಮಾಲೀವಾಲ್ ಅವರು ನಡೆದ ಘಟನೆಯನ್ನು ವಿವರಿಸಿದರು. ಬಳಿಕ ಆ ಕಾರಿನ ಜಾಡು ಹಿಡಿದು, ಆರೋಪಿಯನ್ನು ಬಂಧಿಸಲಾಯಿತು’ ಎಂದು ಡಿಸಿಪಿ (ದಕ್ಷಿಣ) ಚಂದನ್ ಚೌದರಿ ತಿಳಿಸಿದರು.

ಘಟನೆಯ ವಿವರ: ‘ಪರಿಶೀಲನೆ ನಡೆಸುತ್ತಿದ್ದ ವೇಳೆ ಅಮಲಿನಲ್ಲಿದ್ದ ಕಾರಿನ ಚಾಲಕನೊಬ್ಬ ನನ್ನನ್ನು ದುರುಗುಟ್ಟಿ ನೋಡಿದ. ಕೂಡಲೇ ಅತನನ್ನು ಕಾರಿನ ಕಿಟಕಿಯೊಳಗೆ ಕೈ ಹಾಕಿ ಹಿಡಿದೆ. ಆದರೆ ಆತ ಕಾರಿನ ಕಿಟಕಿಯ ಗಾಜನ್ನು ಏರಿಸಿ, ನನ್ನ ಕೈ ಸಿಲುಕುವಂತೆ ಮಾಡಿ, ಕಾರನ್ನು ಚಲಾಯಿಸಿದ. ಈ ಮೂಲಕ ನನ್ನನ್ನು ಎಳೆದೊಯ್ದ. ದೇವರ ಕೃಪೆಯಿಂದ ನಾನು ಬದುಕುಳಿದಿದ್ದೇನೆ’ ಎಂದು ಸ್ವಾತಿ ಮಾಲೀವಾಲ್ ಟ್ವೀಟ್ ಮಾಡಿದ್ದಾರೆ.

ದೆಹಲಿಯಲ್ಲಿ ಜನವರಿ 1ರಂದು ಕಾರಿನಡಿಯಲ್ಲಿ ಸಿಲುಕಿದ್ದ ಅಂಜಲಿ ಸಿಂಗ್ ಎಂಬ ಯುವತಿಯನ್ನು ಸುಲ್ತಾನ್‌ಪುರಿಯಿಂದ ಕಂಝಾವಾಲಾವರೆಗೆ ಸುಮಾರು 12 ಕಿ.ಮೀ ಎಳೆದೊಯ್ದು ಹತ್ಯೆ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಮಹಿಳಾ ಸುರಕ್ಷತೆಯ ಪರಿಸ್ಥಿತಿಗಳನ್ನು ಸ್ವಾತಿ ಮಾಲೀವಾಲ್ ಕೆಲ ದಿನಗಳಿಂದ ಪರಿಶೀಲಿಸುತ್ತಿದ್ದಾರೆ.

4ನೇ ಪುಟ ನೋಡಿ

ಶುಕ್ರವಾರದ ಉಷ್ಣಾಂಶ 29° ಗರಿಷ್ಠ 14° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಕವಿದ ವಾತಾವರಣ ಇರಲಿದೆ.

ಹವಾಮಾನ: ಶನಿವಾರ 29° 14° | ಭಾನುವಾರ 30° 14° | ಸೋಮವಾರ 30° 15°

ಸೂರ್ಯೋದಯ: 6:45 ಸೂರ್ಯಾಸ್ತ: 6:16 ಚಂದ್ರೋದಯ: ರಾ. 3:58 ಚಂದ್ರಾಸ್ತ: ಮ. 3:35 ಗುರುವಾರದ ಹವಾಮಾನ : ಗರಿಷ್ಠ 29° ಕನಿಷ್ಠ 15°

ಪ್ರಜಾವಾಣಿ

‘ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್’ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಲಿಂಗಾಯತ ಯುವ ವೇದಿಕೆಯ ಟ್ರಸ್ಟ್ ವತಿಯಿಂದ ಜ.20ರಿಂದ 22ರವರೆಗೆ ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿದೆ.

‘ವೀರಶೈವ ಲಿಂಗಾಯತ ಸಮುದಾಯದ ಉದ್ಯಮಿಗಳನ್ನು, ವೃತ್ತಿಪರರನ್ನು, ನವೋದ್ಯಮಿಗಳನ್ನು, ವಿಷಯ ತಜ್ಞರನ್ನು, ಆಡಳಿತಗಾರರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಮೂಲಕ ಮಹತ್ವದ ವಿಷಯಗಳ ಬಗ್ಗೆ ವಿಚಾರಸಂಕಿರಣ ಮತ್ತು ಗೋಷ್ಠಿಗಳನ್ನು ಆಯೋಜಿಸಲಾಗಿದೆ. ಯುವ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಕಾನ್‌ಕ್ಲೇವ್‌ನ ಮುಖ್ಯ ಸಂಚಾಲಕ ಸಂತೋಷ ಕೆಂಚಾಂಬ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಜಿಲ್ಲಾಮಟ್ಟದ ನವೋದ್ಯಮ ಘಟಕಗಳನ್ನು ಬಲಪಡಿಸುವುದು ಮತ್ತು ನಿರೀಕ್ಷಿತ ಉದ್ಯಮಿಗಳಿಗೆ ಮಾರ್ಗದರ್ಶನ ನೀಡುವುದು. ತಂತ್ರಜ್ಞಾನ ಆಧಾರಿತ ಕೃಷಿಗೆ ಪ್ರೋತ್ಸಾಹಿಸುವುದು. ವೀರಶೈವ ಲಿಂಗಾಯತ ಸಮುದಾಯದ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಗುವುದು’ ಎಂದರು.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಶಾಸಕ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಭಗವಂತ ಖೂಬಾ, ಶಾಸಕ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, (ಯೋಜನೆ ಕೇಂದ್ರ-1),
2ನೇ ಮಹಡಿ, ಅನೆಕ್ಸ್-3 ಕಟ್ಟಡ, ನ.ರಾ.ಚೌಕ, ಬೆಂಗಳೂರು-560002.
ಮೊಬೈಲ್: 7022761858 ಇ-ಮೈಲ್ : bbmpeepc01@gmail.com

ಸಂಖ್ಯೆ: ಕಾಪಾಅ/ಯೋಕೇಂ-1/ಟೆಂಡರ್/12/2022-23 ದಿನಾಂಕ: 19.01.2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಅಲ್ಪಾವಧಿ ಟೆಂಡರ್ ಪ್ರಕಟಣೆ) (ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-1), ಇವರು ಬೆಂಗಳೂರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬೃಬೆಂಮಪ) ಮುಖ್ಯ ಆಯುಕ್ತರವರ ಪರವಾಗಿ **“ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ನಿರ್ಮಾಣ ಮೇಲ್ವಿಚಾರಣೆಗಾಗಿ ಪ್ರೂಫ್ ರೀಡಿಂಗ್, ಯೋಜನಾ ನಿರ್ವಹಣೆ ಹಾಗೂ ಗುಣಮಟ್ಟ ನಿಯಂತ್ರಣಗಳನ್ನು ಒಳಗೊಂಡು ಸಲಹಾ ಸೇವೆಗೆ ಸಮಾಲೋಚಕರ ನೇಮಕಾತಿಗಾಗಿ ಅಲ್ಪಾವಧಿ ಪ್ರಸ್ತಾವನೆಗಳನ್ನು (ತಾಂತ್ರಿಕ ಹಾಗೂ ಆರ್ಥಿಕ) ಆಹ್ವಾನಿಸಿದ್ದಾರೆ.”**

ಕ್ರಮ ಸಂಖ್ಯೆ	ಯೋಜನೆ ಹೆಸರು	ಇಎಂಡಿ (ರೂ.ಗಳಲ್ಲಿ)
1.	ಆರ್‌ಆರ್ ನಗರ ವಿಧಾನಸಭಾ ಕ್ಷೇತ್ರದಲ್ಲಿ (ಜಿ ಚಂದ್ರಶೇಖರನ್ ರಸ್ತೆಯಿಂದ ಕುವೆಂಪು ವೃತ್ತದವರೆಗೆ) ಉತ್ತರಹಳ್ಳಿ ರಸ್ತೆಯಿಂದ ಜಯಣ್ಣ ವೃತ್ತದವರೆಗೆ ಟೆಂಡರ್ ಶ್ಯೂರ್ ಮಾರ್ಗದರ್ಶನ ಗಳಂತೆ ಜವಾಹರ್‌ಲಾಲ್ ನೆಹರು ರಸ್ತೆಯಲ್ಲಿ ವೈಟ್ ಟಾಪ್ಪಿಂಗೊಂದಿಗೆ ರಸ್ತೆ ಸಮಗ್ರ ಅಭಿವೃದ್ಧಿ ಕಾಮಗಾರಿಗಾಗಿ ನಿರ್ಮಾಣ, ಮೇಲ್ವಿಚಾರಣೆ, ಯೋಜನಾ ನಿರ್ವಹಣೆ ಹಾಗೂ ಗುಣಮಟ್ಟ ನಿಯಂತ್ರಣಕ್ಕಾಗಿ ಸಮಾಲೋಚಕರ ಸೇವೆಗಳು.	41500/- (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ವೇಳಾ ಪಟ್ಟಿ : 1) ಆರ್‌ಎಫ್‌ಪಿ ದಾಖಲೆಗಳ ಲಭ್ಯತೆ: 20.01.2023 ರಿಂದ 2) ವಿಚಾರಣೆಗಳನ್ನು ಇ-ಪೋರ್ಟಲ್‌ನಲ್ಲಿ ಸ್ವೀಕರಿಸಲು ಕೊನೆಯ ದಿನಾಂಕ 24.01.2023 ರಂದು 17:30 ಗಂಟೆಯವರೆಗೆ. 3) ಬಿಡ್ ಪೂರ್ವ ಸಭೆ 25.01.2023 ರಂದು 16.00 ಗಂಟೆಗೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ-1

ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ: ‘ಸ್ಕ್ಯಾನ್ ಮಾಡಿ ಬೆಂಗಳೂರಿನ ಬಡಾವಣೆಗಳ ಇತಿಹಾಸ ನೋಡಿ’

ಉದ್ಯಾನನಗರಿಯ ಇತಿಹಾಸ ಪುಷ್ಪಗಳಲ್ಲಿ ಅನಾವರಣ

ಪ್ರವೇಶ ಶುಲ್ಕ

ವಿವರ	ಸಾಮಾನ್ಯ ದಿನ	ರಜಾ ದಿನಗಳು
ವಯಸ್ಕರು	₹70	₹75
ಮಕ್ಕಳು (12 ವರ್ಷದ ಒಳಗೆ)	₹30	

• ಖಲೀಲಅಹ್ಮದ ಶೇಖ

ಬೆಂಗಳೂರು: ಇಂದಿನಿಂದ ಲಾಲ್‌ಬಾಗ್‌ನಲ್ಲಿ ಉದ್ಯಾನನಗರಿಯ ಇತಿಹಾಸ ಪುಷ್ಪಗಳಲ್ಲಿ ಅನಾವರಣಗೊಳ್ಳಲಿದೆ. ಗಣರಾಜ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ 213ನೇ ಫಲಪುಷ್ಪ ಪ್ರದರ್ಶನದತ್ತ ‘ಸಿಲಿಕಾನ್ ಸಿಟಿ’ ಜನರ ಚಿತ್ತ ನೆಟ್ಟಿದೆ. ಬೆಂಗಳೂರಿನ 1500 ವರ್ಷಗಳ ಭವ್ಯ ಇತಿಹಾಸದ ಅವಲೋಕನ ಈ ಬಾರಿ ಫಲಪುಷ್ಪ ಪ್ರದರ್ಶನದಲ್ಲಿ ಅನಾವರಣ ಮಾಡಲಾಗುತ್ತಿದೆ.

‘ಬೆಂಗಳೂರು ನಗರದ ಎಲ್ಲಾ ಬಡಾವಣೆಗಳ ಇತಿಹಾಸವನ್ನು ಡಿಜಿಟಲ್ ಮಾದರಿಯ ಮಾಹಿತಿಯನ್ನು ನಾಲ್ಕು ಪ್ರವೇಶ ದ್ವಾರಗಳಲ್ಲಿ ಎಲ್‌ಇಡಿ ಪರದೆಗಳ ಮೂಲಕ ಬಿತ್ತರಿಸಲಾಗುವುದು. ಇದರಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ನಗರದ ಯಾವುದೇ ಬಡಾವಣೆಯ ಇತಿಹಾಸ ನೋಡಬಹುದು. ಇದನ್ನು ಮಿಥಿಕ್ ಸೊಸೈಟಿ ಬೆಂಗಳೂರು ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನಾ ತಂಡ ಸಿದ್ಧಪಡಿಸಿದೆ’ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ಮಾಹಿತಿ ನೀಡಿದರು.

ವರ್ಟಿಕಲ್ ಗಾರ್ಡನ್ ರೂಪದಲ್ಲಿ ಗೋಪುರ: ಗಾಜಿನ ಮನೆಯ ಹಿಂಭಾಗದಲ್ಲಿ ನಾಡಪ್ರಭು ಕೆಂಪೇಗೌಡರು ಕಟ್ಟಿಸಿದ ನಗರ ಗಡಿ ಗೋಪುರದ ವರ್ಟಿಕಲ್ ಗಾರ್ಡನ್‌ನ ಪ್ರತಿರೂಪವು ಪ್ರದರ್ಶನಗೊಳ್ಳಲಿದೆ. ಇದು 35 ಸಾವಿರಕ್ಕೂ ಹೆಚ್ಚು ಗಿಡಗಳಲ್ಲಿ ಮೂಡಿ ಬರಲಿದೆ.

ಜಾನೂರ್ ಕಲೆಗಳ ಪ್ರದರ್ಶನ: ಎಳೆಯ ತೆಂಗಿನ ಗರಿಗಳಲ್ಲಿ ಲ್ಯಾಂಪ್, ಫಿಶ್‌ನೆಟ್, ಡಮರುಗ, ಬಿಗ್‌ವೀಲ್, ಸೆಲ್ಫಿಸ್ಟ್ಯಾಂಡ್, ಇಂಡೋನೇಷಿಯನ್ ರಚನೆ ಮಲ್ಟಿರೂಮ್ ಎಂಬ ವಿವಿಧ ಬಗೆಯ ಆಕರ್ಷಕ ಮೆಗಾ ಜಾನೂರ್ ಪ್ರತಿರೂಪಗಳು ಹಸಿರು ಹುಲ್ಲುಹಾಸಿನ ಹೊದಿಕೆಯ ಮೇಲೆ ಪ್ರದರ್ಶನಗೊಳ್ಳಲಿವೆ. ದೇಶ ವಿದೇಶಗಳ ಪುಷ್ಪಗಳು ನೋಡುಗರನ್ನು ಸೆಳೆಯಲಿವೆ.

ಗಾಜಿನ ಮನೆಯಲ್ಲಿ ವಿಜ್ಞಾನ– ತಂತ್ರಜ್ಞಾನ ನಗರಿ ಬೆಂಗಳೂರನ್ನು ಸಾಂಕೇತಿಕವಾಗಿ ಪ್ರತಿಬಿಂಬಿಸುವ ಬೃಹತ್ ಕಲಾಕೃತಿಗೆ ಅಂತಿಮ ಸ್ಪರ್ಶ ನೀಡುತ್ತಿರುವ ಕಾರ್ಮಿಕರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ

ಗಾಜಿನ ಮನೆಯಲ್ಲಿ ವೈವಿಧ್ಯಮಯ ಪುಷ್ಪಗಳ ಪ್ರದರ್ಶನ: ಕುಂಡದಲ್ಲಿ ಬೆಳೆದ ಚಿತ್ತಾಕರ್ಷಕ ವರ್ಣಗಳಿಂದ ಕೂಡಿದ 65ಕ್ಕೂ ಹೆಚ್ಚು ವಿವಿಧ ವಾರ್ಷಿಕ ಹೂವುಗಳು ಪುಷ್ಪ ರಸಿಕರಿಗೆ, ಕವಿ ಮನಸ್ಸುಗಳಿಗೆ ಮುದ ನೀಡಲಿವೆ. 8 ಬಗೆಯ ಸೇವಂತಿಗೆ, ಗುಲಾಬಿ, ಪಾಯಿನ್ಸಿಟಿಯಾ, ಪೆಂಟಾಸ್ ಕಾರ್ನಿಯಾ, ಬ್ರೊಮಿಲಿಯಾಯ್ಡ್, ಜೆರ್ಬರಾ, ಕಾರ್ನೇಷನ್ಸ್, ಟ್ಯೂಬಿ ರೋಸ್ ರೋಟೆಡ್, ಬಿಗೋನಿಯಾ, ಸಿಲೋಷಿಯಾ, ಜಿರೇನಿಯಂ ಇತ್ಯಾದಿ ಹೂವುಗಳು ಕಣ್ಮನ ಸೆಳೆಯಲಿವೆ.

ಇಂದು ಚಾಲನೆ

ತೋಟಗಾರಿಕೆ ಇಲಾಖೆ ವತಿಯಿಂದ ಆಯೋಜಿಸಿರುವ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳಿಗ್ಗೆ 10ಕ್ಕೆ ಇಂದು ಚಾಲನೆ ನೀಡಲಿದ್ದಾರೆ. ಸಚಿವ ಮುನಿರತ್ನ, ಉದಯ್.ಬಿ. ಗರುಡಾಚಾರ್ ಭಾಗವಹಿಸಲಿದ್ದಾರೆ.

ಗಾಜಿನ ಮನೆಯ ಹೊರಾಂಗಣದ ಆಕರ್ಷಣೆಗಳು

ಫಲಪುಷ್ಪ ಪ್ರದರ್ಶನದ ಇತಿಹಾಸದಲ್ಲಿ ಗಾಜಿನ ಮನೆ ಹೊರಗಡೆ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಹೂವಿನಲ್ಲಿ ಅರಳಿದ ಬೃಹತ್ ಯುದ್ಧ ವಿಮಾನ ಮತ್ತು ರಾಕೆಟ್ ಎಲ್ಲರನ್ನು ಸ್ವಾಗತಿಸಲು ಸಜ್ಜಾಗಿವೆ.

ಗಾಜಿನ ಮನೆಯ ಪಕ್ಕದಲ್ಲಿ ಸಮಗ್ರ ಕೃಷಿ ಪದ್ಧತಿಗೆ ಸಂಬಂಧಿಸಿದಂತೆ ತೋಟವನ್ನು ನಿರ್ಮಿಸಲಾದ್ದು, ಅದರಲ್ಲಿ ಮೀನು, ಕೋಳಿ ಸಾಕಾಣಿಕೆಯೊಂದಿಗೆ ಕೃಷಿಯನ್ನು ಲಾಭದಾಯಕವಾಗಿ ಮಾಡುವುದರ ಕುರಿತು ತೋಟಗಾರಿಕೆ ತರಬೇತಿ ಕೇಂದ್ರದ ವಿದ್ಯಾರ್ಥಿಗಳು ನಿರ್ಮಿಸಿರುವ ಪ್ರತಿಕೃತಿ ಆಕರ್ಷಿಸುತ್ತಿದೆ.

ಬೆಂಗಳೂರಿನ ಕನ್ನಮಂಗಲ ಸಸ್ಯತೋಟ, ಮೈಸೂರಿನ ಲಿಂಗಾಂಬುಧಿ ಸಸ್ಯತೋಟ, ನಂದಿ ಗಿರಿಧಾಮ, ಊಟಿಯ ಕರ್ನಾಟಕ ಸಿರಿ ತೋಟಗಾರಿಕೆ ಉದ್ಯಾನ, ಕಬ್ಬನ್ ಉದ್ಯಾನ, ಮಡಿಕೇರಿಯ ರಾಜಾ ಸೀಟ್, ಕೊಪ್ಪಳದ ಪಂಪಾವನಗಳ ಬಗ್ಗೆ ಸಮಗ್ರ ಮಾಹಿತಿ ನೀಡುವ ತಾಂತ್ರಿಕ ಕುಟೀರದಲ್ಲಿ ಪ್ರದರ್ಶಿಸಲಾಗುತ್ತಿದೆ.

ಸಚಿವರ ಭೇಟಿ: ಮುಂದುವರಿದ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂಗನವಾಡಿ ಕಾರ್ಯಕರ್ತೆಯರಿಗೆ ಶಿಕ್ಷಕರ ಸ್ಥಾನಮಾನ ನೀಡಬೇಕು’ ಎಂದು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ನಡೆಸುತ್ತಿರುವ ಪ್ರತಿಭಟನೆ ಗುರುವಾರ ಎರಡನೇ ದಿನ ಪೂರೈಸಿತು.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಬುಧವಾರದಿಂದ ಪ್ರತಿಭಟನೆ ಆರಂಭಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್ ಅವರು ಪ್ರತಿಭಟನಾ ಸ್ಥಳಕ್ಕೆ ಗುರುವಾರ ಭೇಟಿ ನೀಡಿದರು. ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದ ಅವರು, ‘ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು. ಸದ್ಯ ಪ್ರತಿಭಟನೆ ಕೈಬಿಡಿ’ ಎಂದು ಕೋರಿದರು.

ಅದಕ್ಕೆ ಒಪ್ಪದ ಪ್ರತಿಭಟನಕಾರರು, ‘ಮುಖ್ಯಮಂತ್ರಿ ಅವರು ಪ್ರತಿಭಟನಾ ಸ್ಥಳಕ್ಕೆ ಬರಬೇಕು. ನಮ್ಮ ಬೇಡಿಕೆಗಳನ್ನು ಆಲಿಸಿ, ಅವುಗಳನ್ನು ಈಡೇರಿಸಲು ಲಿಖಿತ ಭರವಸೆ ನೀಡಬೇಕು. ಅಲ್ಲಿಯವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ’ ಎಂದು ಪಟ್ಟು ಹಿಡಿದರು. ನಂತರ, ಸಚಿವರು ಸ್ಥಳದಿಂದ ಹೊರಟು ಹೋದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ಉದ್ಯಾನದಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದಾರೆ. ಕೆಲವರು, ಮಕ್ಕಳನ್ನೂ ತಮ್ಮ ಜೊತೆ ಕರೆತಂದಿದ್ದಾರೆ.

ಬೆಂಗಳೂರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಎರಡನೇ ದಿನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಪುಸ್ತಕಮನೆ ಹರಿಹರಪ್ರಿಯ ಅವರಿಗೆ ಪುಸ್ತಕ ತುಲಾಭಾರ: ಆಯೋಜನೆ: ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್, ಸ್ಥಳ: ನಯನ ರಂಗಮಂದಿರ, ಬೆಳಿಗ್ಗೆ 9.45

ಪುಸ್ತಕಮನೆ ಹರಿಹರಪ್ರಿಯ ಅವರ 70ನೇ ಜನ್ಮದಿನಾಚರಣೆ ಅಂಗವಾಗಿ ಪುಸ್ತಕ ಸಂಸ್ಕೃತಿ ದಿನ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಮೈ ಸ್ಟಾಂಪ್ ಗೌರವ ಸಮರ್ಪಣೆ: ರವೀಂದ್ರ ಭಟ್ಟ, ಕಿರುಚಿತ್ರ ಪ್ರದರ್ಶನ ಉದ್ಘಾಟನೆ: ವೈ.ಎಸ್.ವಿ. ದತ್ತ, ನುಡಿನಮನ: ಎಂ ಪ್ರಿಯದರ್ಶಿನಿ, ಆಯೋಜನೆ: ರಂಗೋತ್ರಿ ಮಕ್ಕಳ ರಂಗಶಾಲೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಸ್ವಾಗತ ಸಮಾರಂಭ ಮತ್ತು ಪದವಿ ಪ್ರದಾನ ಕಾರ್ಯಕ್ರಮ: ಅತಿಥಿಗಳು: ಬಿ.ಎ. ಚನ್ನಪ್ಪ ಗೌಡ, ಕೆ.ಎನ್. ಮಹೇಂದ್ರಾ, ಅಧ್ಯಕ್ಷತೆ: ಸಿ. ದೇವರಾಜ, ಆಯೋಜನೆ ಮತ್ತು ಸ್ಥಳ: ರಾಜ್ಯ ಒಕ್ಕಲಿಗರ ಸಂಘ, ವಿಶ್ವೇಶ್ವರಪುರ ವಿಜ್ಞಾನ ಕಾಲೇಜು, ಕೆ.ಆರ್. ರಸ್ತೆ, ಬೆಳಿಗ್ಗೆ 10.30

ನಮ್ಮ ಕ್ಲಿನಿಕ್ ಉದ್ಘಾಟನೆ: ಮುನಿರತ್ನ, ಅತಿಥಿಗಳು: ನಾಗೇಂದ್ರ ಪ್ರಸಾದ್, ಜಗದೀಶ್, ಅಧ್ಯಕ್ಷತೆ: ಸಿ.ಕೆ. ರವಿಚಂದ್ರ, ಆಯೋಜನೆ: ಕರ್ನಾಟಕ ನಡಿಗೆದಾರರ ಒಕ್ಕೂಟ, ಸ್ಥಳ: ಲಾಲ್‌ಬಾಗ್ ವೆಸ್ಟ್‌ಗೇಟ್ ಬಳಿ, ಬೆಳಿಗ್ಗೆ 10.45

ಪುರಂದರದಾಸರ ಆರಾಧನಾ ಮಹೋತ್ಸವದ ಉದ್ಘಾಟನೆ: ಸುವಿದ್ಯೇಂದ್ರತೀರ್ಥ ಶ್ರೀಪಾದ, ಅತಿಥಿಗಳು: ಗುತ್ತಲ್ ರಂಗಾಚಾರ್, ಸತ್ಯಧ್ಯಾನಾಚಾರ್ ಕಟ್ಟಿ, ಕೆ.ಎಸ್. ಸಮೀರ್ ಸಿಂಹ, ಆಯೋಜನೆ: ಶ್ರೀನಿವಾಸ ಉತ್ಸವ ಬಳಗ, ಸ್ಥಳ: ಪುರಂದರದಾಸರ ಬೃಹತ್ ಶಿಲಾವಿಗ್ರಹ ಸನ್ನಿದಾನ, ದಿಗ್ವಿಜಯ ಲಕ್ಷ್ಮೀನರಸಿಂಹ ದೇವಸ್ಥಾನ ಆವರಣ, ಉತ್ತರಾಧಿಮಠ, ಬಸವನಗುಡಿ, ಸಂಜೆ 5.45 ರಿಂದ

‘ಕೊನೆಯ ಉತ್ತರ..?’ ನಾಟಕ ಪ್ರದರ್ಶನ: ನಿರ್ದೇಶನ: ರಂಗನಾಥ್ ಶಿವಮೊಗ್ಗ, ಸಂಗೀತ: ಶ್ರೀನಿವಾಸ್ ರಾವ್, ಬೆಳಕು: ನವೀನ್ ಭೂಮಿ, ಆಯೋಜನೆ: ಸ್ಟೇಜ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಹರಿನಾಮ ಸಂಕೀರ್ತನೆ: ಗಾಯನ: ಅನನ್ಯಾ ಬೆಳವಾಡಿ, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸುದರ್ಶನ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಪ್ರಶಾಂತ ಗಣಪತಿ ದೇವಸ್ಥಾನ, 3ನೇ ಮುಖ್ಯರಸ್ತೆ, ಪ್ರಶಾಂತನಗರ, ಸಂಜೆ 6.30

ಅನನ್ಯಾ ಬೆಳವಾಡಿ

ತೊಗಟವೀರ ಸಂಘ: ಅಮೃತ ಮಹೋತ್ಸವ 22ಕ್ಕೆ

ಬೆಂಗಳೂರು: ರಾಜ್ಯ ತೊಗಟವೀರ ಕ್ಷತ್ರಿಯ ಸಂಘದ 75ನೇ ವರ್ಷದ ಅಮೃತ ಮಹೋತ್ಸವ ಜ.22ರಂದು(ಭಾನುವಾರ) ಜ್ಞಾನಜ್ಯೋತಿ ಸಂಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ಸಮಾಜದ ಕುಲಗುರುಗಳಾದ ದಿವ್ಯಜ್ಞಾನಾನಂದ ಗಿರಿ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಬೆಳಿಗ್ಗೆ 8ಕ್ಕೆ ತೊಗಟವೀರ ಕ್ಷತ್ರಿಯ ಸಮುದಾಯ ಭವನದಿಂದ ಚೌಡೇಶ್ವರಿ ಅಮ್ಮನ ಪಲ್ಲಕ್ಕಿ ಉತ್ಸವವನ್ನು ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿರಿಧಾನ್ಯ ಮೇಳಕ್ಕೆ ಇಂದು ಚಾಲನೆ

ಬೆಂಗಳೂರು: ಸಿರಿಧಾನ್ಯ ಮತ್ತು ಸಾವಯವ ಅಂತರರಾಷ್ಟ್ರೀಯ ವಾಣಿಜ್ಯ ಮೇಳ ನಗರದ ಅರಮನೆ ಮೈದಾನದದ ತ್ರಿಪುರವಾಸಿನಿಯಲ್ಲಿ ಜ. 20ರಿಂದ 22ರವರೆಗೆ ನಡೆಯಲಿದೆ.

ಸಾವಯವ ಮತ್ತು ಸಿರಿಧಾನ್ಯಗಳ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಮತ್ತು ರೈತರು, ಖರೀದಿದಾರರು, ಮಾರಾಟಗಾರರು ಹಾಗೂ ರಫ್ತುದಾರರಿಗೆ ಸಂಪರ್ಕ ಕಲ್ಪಿಸುವ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ಈ ಮೇಳ ಆಯೋಜಿಸಲಾಗಿದೆ.

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (ಕೆಎಪಿಪಿಇಸಿ) ಮತ್ತು ಅಂತರರಾಷ್ಟ್ರೀಯ ಸಾವಯವ ಕೃಷಿ ಸ್ಪರ್ಧಾತ್ಮಕ ಕೇಂದ್ರದ(ಐಸಿಸಿಒಎ) ಸಹಯೋಗದಲ್ಲಿ ಈ ಮೇಳ ಆಯೋಜಿಸಲಾಗಿದೆ.

ಶುಕ್ರವಾರ ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೇಳ ಉದ್ಘಾಟಿಸಲಿದ್ದಾರೆ. ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ಕೇಂದ್ರದ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಹಾಗೂ ಕೃಷಿ ಸಚಿವ ಬಿ.ಸಿ. ಪಾಟೀಲ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಮೇಳದ ಅಂಗವಾಗಿ ವಸ್ತು ಪ್ರದರ್ಶನ ಆಯೋಜಿಸಲಾಗಿದ್ದು, ಸುಮಾರು 300 ಮಳಿಗೆಗಳನ್ನು ಕಾಯ್ದಿರಿಸಲಾಗಿದೆ. ವಸ್ತು ಪ್ರದರ್ಶನದಲ್ಲಿ ಕೇರಳ, ಮಹಾರಾಷ್ಟ್ರ, ಉತ್ತರಾಖಂಡ್, ಆಂಧ್ರಪ್ರದೇಶ, ಮಣಿಪುರ, ಛತ್ತೀಸಗಡ, ಸಿಕ್ಕಿಂ, ಅಸ್ಸಾಂ, ಅರುಣಾಚಲ ಪ್ರದೇಶ, ಬಿಹಾರ ಮುಂತಾದ ರಾಜ್ಯಗಳು ಭಾಗವಹಿಸಲಿವೆ.

Exclusive benefits for Teachers, Farmers, Doctors, Lawyers, Architects, Finance Professionals, Pensioners, Government Employees and Select Corporates. Select models available through GeM & CSD. T&C apply.

SEAT BELTS FOR ALL SAFETY FOR ALL | EASY FINANCE | Honda ProCARE CUSTOMER SERVICE | 10 YEAR ANYTIME WARRANTY# | Scan now to Book or Buy Honda From Home

*Scheme on select variants/models. ØLoan at the sole discretion of financier/bank partner. Offers and features are model, fuel type and variant specific. Offers are valid for a limited period or till stock lasts. Offers include loyalty, exchange and consumer benefits. For Corporate Sales enquiries, write to corporatesales@hondacarindia.com. Images used are computer generated/enhanced for creative representation purpose and may vary from the actual product. #The 10 year Anytime Warranty is extendable up to the maximum age of 10 years/1 20 000 kilometres by renewing every year and is applicable from the date of purchase of car. *Exchange price challenge offer from dealers. For more details, visit your nearest Honda Dealership. Log on to www.hondacarindia.com for more details. Terms and conditions apply.

Whitefield Honda Whitefield Road 86575 89175
Magnum Honda Mekhri Circle: 99000 29164 Kanakapura Rd: 98455 24394 Tumkur: 99160 04127
Dakshin Honda Hosur Road: 86575 88495 Lavelle Road: 86575 89201 Mysore Road: 86575 89889
Brigade Honda Yelahanka 86575 88450

VISVESVARAYA INDUSTRIAL & TECHNOLOGICAL MUSEUM

(National Council of Science Museums)
Kasturba Road, Bengaluru - 560 001.

ADVERTISEMENT No. 01/2023

Visvesvaraya Industrial & Technological Museum, Bengaluru invites applications from retired professionals from Government Department(s) etc. for engagement of following Consultants on contract basis:

Sl. No.	Particulars	No. of requried positions
1	Consultant (Secretarial Services)	01(One)

The details including eligibility criteria, age limit etc. are available on the VITM's website **www.vismuseum.gov.in** Last date of submission of application **is 06.02.2023.**

ಮೈಸೂರು ಸಕ್ಕರೆ ಕಂಪನಿ ನಿಯಮಿತ,

(ಕರ್ನಾಟಕ ಸರ್ಕಾರದ ಒಳಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ-571 402.
ಎಂಎಸ್‌ಕೋ:ಜಿಎಂ:ಎಸ್ಟೇಟ್:243:2022-23 ದಿ:20-01-2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ ಇದರ ಒಳ ಆವರಣದಲ್ಲಿರುವ ಟ್ವಿನ್ ಗೋಡೌನ್‌ನ್ನು ಮಾಸಿಕ ಬಾಡಿಗೆಯ ಆಧಾರದ ಮೇಲೆ ಗುತ್ತಿಗೆ ನೀಡುವ ಸಂಬಂಧ ಟೆಂಡರ್ ನೀಡಲು ತೀರ್ಮಾನಿಸಿದ್ದು, ಅರ್ಹ ಗುತ್ತಿಗೆದಾರರು/ ಸರ್ಕಾರಿ/ ಸಹಕಾರಿ/ ಖಾಸಗಿ ಇಲಾಖೆಗಳಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಂಪನಿಯ ಪ್ರಧಾನ ಕಛೇರಿ, ಮಂಡ್ಯ, ಇಲ್ಲಿನ ಎಸ್ಟೇಟ್ ವಿಭಾಗದ ಎಸ್ಟೇಟ್ ಸೂಪರ್‌ವೈಸರ್‌ರವರನ್ನು ಸಂಪರ್ಕಿಸಿ, ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ಅರ್ಜಿ ಫಾರಂ ಮತ್ತು ಷರತ್ತು-ನಿಬಂಧನೆಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಈ ಟೆಂಡರ್ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಂಪನಿಯ ಎಸ್ಟೇಟ್ ಸೂಪರ್‌ವೈಸರ್‌ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಮೊ:9986880681

ವಾಸಾಸಂಇ/ಸನಿ-ಮಂ/ಎಂಸಿ&ಎ/604/2022-23 ಸಹಿ/-ಪ್ರಧಾನ ವ್ಯವಸ್ಥಾಪಕರು

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. RESBCEL23-
ದಿನಾಂಕ: 05.01.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ರೈಲ್ವೆ ವಿದ್ಯುದ್ದೀಕರಣ ಕೆಲಸ ಮತ್ತು ವಿದ್ಯುತ್ ಸರಬರಾಜು ವಿಶ್ವಾಸಾರ್ಹತೆಗೆ ಸಂಬಂಧಿಸಿದಂತೆ ನೈಋತ್ಯ ರೈಲ್ವೆ ವಿಭಾಗದಲ್ಲಿ ವಿವಿಧ ರೈಲ್ ಓವರ್ ಬ್ರಿಡ್ಜ್ ಮತ್ತು ಸುರಂಗಗಳ ಗರ್ಡರ್‌ಗಳ ಅಡಿಯಲ್ಲಿ 3-ಭಾಗದ ಹೈ ವೋಲ್ಟೇಜ್ ಕಾಂಪೋಸಿಟ್ ಇನ್ಸುಲೇಟೆಡ್ ಲೇಪನದ ಪೂರೈಕೆ ಮತ್ತು ಅಪ್ಲಿಕೇಶನ್.	ರೂ. 1,10,62,560.91/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03-02-2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಉಪ ಮುಖ್ಯ ವಿದ್ಯುತ್ ಇಂಜಿನೀಯರ್/ ರೈಲ್ವೆ ವಿದ್ಯುದೀಕರಣ/ಬಿಜಿಎನ್‌ಆರ್

PUB/615/AAV/PRB/SWR/2022-23
S.W.Railways SWRRLY SWRRLY

ಕರ್ನಾಟಕ ಗೃಹ ಮಂಡಳಿ

Karnataka Housing Board Building Communities
ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು-560 009.

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ-5/2022-23 ದಿನಾಂಕ: 18-01-2023

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳ ಹಂಚಿಕೆಗೆ ಲಾಟರಿ ವೇಳಾಪಟ್ಟಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು **ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅಹೋಬಲಪಾಳ್ಯ ನರಸಿಂಹನಪಾಳ್ಯ ಮತ್ತು ಮಾಚೋನಾಯಕನಹಳ್ಳಿ ಗ್ರಾಮಗಳಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ** ದಿನಾಂಕ: 30-05-2017, 24-06-2017, 16-07-2017, 03-08-2017 ಮತ್ತು 30-08-2017ರ ಪ್ರಕಟಣೆಗಳಿಗೆ ಅನುಗುಣವಾಗಿ ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ರೆಗ್ಯುಲೇಶನ್ಸ್ 1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಇ-ಲಾಟರಿ ಮುಖಾಂತರ ಹಂಚಿಕೆ ಮಾಡಲು ಈ ಕೆಳಕಂಡ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಲಾಟರಿ ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ	ಮಂಡಳಿ ಪ್ರಸ್ತುತ ದರ (ಪ್ರತಿ ಚದರಡಿಗೆ)
ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಅಹೋಬಲಪಾಳ್ಯ ನರಸಿಂಹನಪಾಳ್ಯ ಮತ್ತು ಮಾಚೋನಾಯಕನಹಳ್ಳಿ.	23-01-2023 ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಕಾವೇರಿಭವನ, ಬೆಂಗಳೂರು ಹಾಗೂ ಮಂಡಳಿಯ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ.	25-01-2023 ಬೆಳಿಗ್ಗೆ.11.00 ಗಂಟೆಗೆ ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ ಆವರಣ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.	ರೂ.1,200/-

ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ **https://www.khb.karnataka.gov.in** ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ **ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಯೋಜನಾ ಕಛೇರಿ, ಕಾವೇರಿ ಭವನ, 5ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು** ಇವರನ್ನು ಖುದ್ದಾಗಿ ಅಥವಾ **ಮೊಬೈಲ್ ನಂ. 9686373991** ಅಥವಾ **ಕಾರ್ಯಪಾಲಕ ಅಭಿಯಂತರರು(ಹಂಚಿಕೆ) ಹಾಗೂ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು** ಇವರನ್ನು ಖುದ್ದಾಗಿ ಅಥವಾ **ದೂರವಾಣಿ ಸಂಖ್ಯೆ: 080-22273511** ವಿಸ್ತರಣೆ: 307/335 ರಲ್ಲಿ ಸಂಪರ್ಕಿಸಬಹುದು.

ಸಹಿ/- ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/RO4169/AAPL/2022-23

ನಗರದಲ್ಲಿ ಗುರುವಾರ ಕರ್ನಾಟಕ ರೆಡ್ಡಿ ಜನ ಸಂಘ ಹಮ್ಮಿಕೊಂಡಿದ್ದ ವೇಮನ ಜಯಂತಿ ಸಮಾರಂಭದಲ್ಲಿ ವೇಮನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ರೆಡ್ಡಿ ಜನ ಸಂಘದ ಅಧ್ಯಕ್ಷ ಎಸ್. ಜಯರಾಮ್ ರೆಡ್ಡಿ, ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ, ಶಾಸಕ ರಾಮಲಿಂಗ ರೆಡ್ಡಿ ಇದ್ದರು

—ಪ್ರಜಾವಾಣಿ ಚಿತ್ರ

ಅಂತಿಮ ಸೆಮಿಸ್ಟರ್ ಫಲಿತಾಂಶ ವಿಳಂಬ

ಬಿ.ಇಡಿ ಪ್ರವೇಶಕ್ಕೆ ವಿಘ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಲಬರ್ಗಾ ವಿಶ್ವವಿದ್ಯಾಲಯ ಸೇರಿದಂತೆ ರಾಜ್ಯದ ಕೆಲ ವಿಶ್ವವಿದ್ಯಾಲಯಗಳು ಪದವಿಯ ಅಂತಿಮ ಸೆಮಿಸ್ಟರ್ ಫಲಿತಾಂಶ ತಡವಾಗಿ ನೀಡಿರುವ ಕಾರಣ ವಿದ್ಯಾರ್ಥಿಗಳು ಬಿ.ಇಡಿ ಪ್ರವೇಶದ ಅವಕಾಶದಿಂದ ವಂಚಿತರಾಗಿದ್ದಾರೆ.

2022–23ನೇ ಸಾಲಿನ ಬಿ.ಇಡಿ ಕೋರ್ಸ್‌ಗೆ ಅರ್ಜಿ ಸಲ್ಲಿಸಲು ನವೆಂಬರ್‌ವರೆಗೆ ಅವಕಾಶ ನೀಡಲಾಗಿತ್ತು. ಆನ್‌ಲೈನ್‌ನಲ್ಲಿ ಸಲ್ಲಿಕೆಯಾದ ಅರ್ಜಿಗಳನ್ನು ಪರಿಗಣಿಸಿ, ಮೆರಿಟ್ ಮತ್ತು ಮೀಸಲಾತಿ ಆಧಾರದಲ್ಲಿ ಇದೇ ಜ.6 ರಂದು ಅರ್ಹತಾಪಟ್ಟಿ ಪ್ರಕಟಿಸಲಾಗಿತ್ತು.

ಅರ್ಜಿ ಸಲ್ಲಿಸುವಾಗ ಪದವಿಯ ಅಂತಿಮ ಸೆಮಿಸ್ಟರ್ ಫಲಿತಾಂಶ ಪ್ರಕಟವಾಗದ ಅಭ್ಯರ್ಥಿಗಳು ಐದು ಸೆಮಿಸ್ಟರ್ ಅಂಕಗಳನ್ನು ನಮೂದಿಸಿದ್ದರು. ಅಂತಿಮ ವರ್ಷದ ಅಂಕಗಳನ್ನು ಸೇರಿಸಲು ಹಾಗೂ ಇತರೆ ನ್ಯೂನತೆಗಳನ್ನು ಸರಿಪಡಿಸಲು ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕ ಜ. 7ರಿಂದ 11ರವರೆಗೆ ತಿದ್ದುಪಡಿಗೆ ಅವಕಾಶ ನೀಡಿತ್ತು. ಅಷ್ಟರ ಒಳಗೆ ಪೂರ್ಣ ಫಲಿತಾಂಶ ದೊರೆತ ವಿದ್ಯಾರ್ಥಿಗಳು ಅವಕಾಶ ಬಳಸಿಕೊಂಡಿದ್ದರು. ಉಳಿದ ವಿದ್ಯಾರ್ಥಿಗಳು ಅವಕಾಶದಿಂದ ವಂಚಿತರಾಗಿದ್ದಾರೆ.

‘ಗುಲ್ಬರ್ಗ ವಿಶ್ವವಿದ್ಯಾನಿಲಯ ಅಂತಿಮ ಸೆಮಿಸ್ಟರ್ ಫಲಿತಾಂಶವನ್ನು ಜ.17 ರಂದು ಪ್ರಕಟಿಸಿದೆ. ಅಂಕಗಳನ್ನು ಸೇರಿಸಲು ತಿದ್ದುಪಡಿಗೆ ಅವಕಾಶ ನೀಡಿಲ್ಲ. ಇದರಿಂದ ಎರಡನೇ ಸುತ್ತಿನಲ್ಲೂ ಕಾಲೇಜುಗಳಿಗೆ ಪ್ರವೇಶ ಪಡೆಯಲು ಸಾಧ್ಯವಾಗಿಲ್ಲ. ಕೇಂದ್ರೀಕೃತ ದಾಖಲಾತಿ ಘಟಕ ನಮಗೆ ಅವಕಾಶ ಕೊಡಬೇಕು’ ಎನ್ನುತ್ತಾರೆ ಬಿ.ಇಡಿ ಪ್ರವೇಶದ ನಿರೀಕ್ಷೆಯಲ್ಲಿರುವ ವಿದ್ಯಾರ್ಥಿನಿ ಸಂಗೀತಾ.

‘ಕೋವಿಡ್ ನಂತರ ಶೈಕ್ಷಣಿಕ ವೇಳಾಪಟ್ಟಿಗಳು ಬದಲಾಗಿವೆ. ಫಲಿತಾಂಶ ತಡವಾಗಿದೆ. ವಿಶ್ವವಿದ್ಯಾಲಯದ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ಬಿ.ಇಡಿ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು. ಅದಕ್ಕಾಗಿ, ತಿದ್ದುಪಡಿಗೆ ಇನ್ನೊಂದು ಅವಕಾಶ ಕೊಡಬೇಕು ಎಂದು ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ಪತ್ರ ಬರೆಯಲಾಗಿದೆ’ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಜ್ಯೋತಿ ಧಮ್ಮ ಪ್ರಕಾಶ್ ಪ್ರತಿಕ್ರಿಯಿಸಿದರು.

ಪದ್ಮಿನಿ ನಾಗರಾಜು ಸಾಹಿತ್ಯ ಪರಿಷತ್ ಕಾರ್ಯದರ್ಶಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ದರ್ಶಿಯಾಗಿ ಸಾಹಿತಿ, ರಾಣಿ ಸರಳಾದೇವಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಪದ್ಮಿನಿ ನಾಗರಾಜು ಅವರು ನೇಮಕವಾಗಿದ್ದಾರೆ.

‘ಪರಿಷತ್ತಿನ ಕಾರ್ಯಕಾರಿ ಸಮಿತಿಯ ಮಹಿಳಾ ಪ್ರತಿನಿಧಿಯಾಗಿ ಅವರು ಇದುವರೆಗೂ ಕಾರ್ಯನಿರ್ವಹಿಸುತ್ತಿದ್ದರು. ಸಾಹಿತ್ಯ, ಶಿಕ್ಷಣ, ಮಹಿಳಾ ಪರ, ಸಾಂಸ್ಕೃತಿಕ ವಲಯದಲ್ಲಿ ಕೆಲಸ ಮಾಡುತ್ತಿರುವ ಅವರಿಗೆ ಪರಿಷತ್ತಿನ ಮಹತ್ವದ ಸ್ಥಾನ ನೀಡಲಾಗಿದೆ’ ಎಂದು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಹಿಳಾ ಐಪಿಎಲ್ ಆರಂಭ!

ಯುಜಿಸಿ ಕಚೇರಿ ಸ್ಥಳಾಂತರ: ಆಕ್ಷೇಪ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಬೆಂಗಳೂರಿನಲ್ಲಿದ್ದ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ (ಯುಜಿಸಿ) ಕಚೇರಿ ಸ್ಥಳಾಂತರ ಮಾಡಿ ಕನ್ನಡಿಗರ ಹಕ್ಕು ಕಸಿದಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕಲಿಯುತ್ತಿರುವ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಅಧ್ಯಾಪಕರು, ಆಡಳಿತ ಮಂಡಳಿಯವರು ಸಣ್ಣ ಸಣ್ಣ ಸಮಸ್ಯೆಗಳಾದರೂ ದೆಹಲಿಗೆ ಹೋಗಬೇಕಾದಂಥ ಪರಿಸ್ಥಿತಿಯನ್ನು ಅವರಿಬ್ಬರೂ ನಿರ್ಮಾಣ ಮಾಡಿದ್ದಾರೆ’ ಎಂದೂ ಅವರು ಕಿಡಿ ಕಾರಿದ್ದಾರೆ.

ದೃಷ್ಟಿ ರಾಷ್ಟ್ರೀಯ ನೃತ್ಯೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 18ನೇ ದೃಷ್ಟಿ ರಾಷ್ಟ್ರೀಯ ನೃತ್ಯೋತ್ಸವ’ ಕಾರ್ಯಕ್ರಮವು ಜ. 21ರಂದು ಸಂಜೆ 5.30ಕ್ಕೆ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ನಡೆಯಲಿದೆ.

ಶೋಭನಾ, ಪ್ರಿಯದರ್ಶಿನಿ ಗೋವಿಂದ್, ವಿನೀತ್ ರಾಧಾಕೃಷ್ಣನ್, ಅನುರಾಧ ವಿಕ್ರಾಂತ್, ವೀಣಾ ನಾಯರ್ ಮತ್ತು ಧನ್ಯಾ ನಾಯರ್, ಮಹತಿ ಕಣ್ಣನ್, ಸಮನ್ವಿತಾ ಮತ್ತು ಸಮುದ್ಯತಾ ಅವರು ಭರತ ನಾಟ್ಯವನ್ನು ಪ್ರಸ್ತುತ ಪಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ ಸಂಪರ್ಕಿಸಿ 9844191888/9845555422ಗೆ ಸಂಪರ್ಕಿಸಿ.

ವೀಣಾಗೆ ‘ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ’

ಬೆಂಗಳೂರು: ಇಲ್ಲಿನ ದಕ್ಷಿಣ ಕನ್ನಡ ಜೈನ ಮೈತ್ರಿ ಕೂಟ ನೀಡುವ ‘ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ’ಗೆ ಕವಯತ್ರಿ ವೀಣಾ ಬಿ. ರಘುಚಂದ್ರ ಶೆಟ್ಟಿ ಮೂಡಬಿದಿರೆ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ. ಇದೇ 26ರಂದು ಬೆಂಗಳೂರಿನ ಬಸವನಗುಡಿಯ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಮೈತ್ರಿ ಕೂಟದ ವಾರ್ಷಿಕೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Biocon

ನಿಮ್ಮ ವೃತ್ತಿ ಜೀವನವನ್ನು ಬಯೋಕಾನ್‌ನೊಂದಿಗೆ ಪ್ರಾರಂಭಿಸಿ

ಬಯೋಕಾನ್ ಲಿಮಿಟೆಡ್ ರಾಷ್ಟ್ರೀಯ ಅಪ್ರೆಂಟಿಸ್ ಪ್ರಮೋಷನ್ ಸ್ಕೀಮ್ (ಎನ್‌ಎಪಿಎಸ್) ಅಡಿಯಲ್ಲಿ ಅಪ್ರೆಂಟಿಸ್‌ಗಳನ್ನು ನೇಮಿಸಿಕೊಳ್ಳಲು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ (ಎಂಎಸ್‌ಡಿಇ) ಸಚಿವಾಲಯದೊಂದಿಗೆ ಪಾಲುದಾರಿಕೆ ಹೊಂದಿದೆ. ಆಯ್ಕೆಯಾದ ಅಭ್ಯರ್ಥಿಗಳು 6 ರಿಂದ 12 ತಿಂಗಳುಗಳವರೆಗೆ ವ್ಯಾಪಕವಾದ ಕೆಲಸದ ತರಬೇತಿಯನ್ನು ಪಡೆಯುತ್ತಾರೆ. ಆ ಸಮಯದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ಆಧಾರದ ಮೇಲೆ ಬೆಂಗಳೂರಿನಲ್ಲಿ ಪೂರ್ಣ ಸಮಯದ ಉದ್ಯೋಗಾವಕಾಶವೂ ದೊರೆಯುವ ಸಾಧ್ಯತೆಯಿದೆ.

ಪಾತ್ರ : ಉತ್ಪಾದನಾ ಯಂತ್ರ ನಿರ್ವಾಹಕರು – ಸಕ್ರಿಯ ಔಷಧೀಯ ಘಟಕಾಂಶ (ಎಪಿಐ)/ಬಲ್ಕ್ ಡ್ರಗ್

ಕೆಲಸದ ವಿವರ :
- ಪ್ರಮಾಣಿತ ಆಪರೇಟಿಂಗ್ ಕಾರ್ಯವಿಧಾನಗಳು/ಚೆಕ್‌ಲಿಸ್ಟ್ ಪ್ರಕಾರ ಎಲ್ಲಾ ಉತ್ಪಾದನಾ ಕಾರ್ಯಾಚರಣೆಗಳ ಜವಾಬ್ದಾರಿ
- ಅನುಮೋದಿತ ಕಾರ್ಯವಿಧಾನಗಳ ಪ್ರಕಾರ ವಾಡಿಕೆಯ ಮೇಲ್ವಿಚಾರಣೆ ಮತ್ತು ದಾಖಲೆಗಳ ರೆಕಾರ್ಡಿಂಗ್
- ಕಚ್ಚಾ ಸಾಮಗ್ರಿಗಳು/ಪ್ರಕ್ರಿಯೆಯಲ್ಲಿನ ವಸ್ತುಗಳು/ಪೂರ್ಣಗೊಂಡ ಉತ್ಪನ್ನಗಳ ಸ್ವೀಕಾರ, ವಿತರಣೆ, ಸಂಗ್ರಹಣೆ ಮತ್ತು ಪ್ಯಾಕಿಂಗ್ ಮಾಡುವ ಜವಾಬ್ದಾರಿ
- ಕೈಯಿಂದ ಚಾಲನೆ ಮಾಡುವ ಅಥವಾ ನಿಯಂತ್ರಣ ವಿತರಣೆ ವ್ಯವಸ್ಥೆಯ ಮೂಲಕ ಉಪಕರಣಗಳು ಮತ್ತು ಸಾಧನಗಳನ್ನು ಆಪರೇಟ್ ಮಾಡುವುದು
- ಅನುಮೋದಿತ ಕಾರ್ಯವಿಧಾನದ ಪ್ರಕಾರ ಉಪಕರಣಗಳು / ಪರಿಕರಗಳನ್ನು ಸ್ವಚ್ಛಗೊಳಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು

ಅರ್ಹತೆ : ಡಿಪ್ಲೊಮಾ ಕೆಮಿಕಲ್ ಇಂಜಿನಿಯರಿಂಗ್/ಬಿಎಸ್ಸಿ. ರಸಾಯನಶಾಸ್ತ್ರ/ ಎಂಎಸ್ಸಿ. ರಸಾಯನಶಾಸ್ತ್ರ(2021 ಮತ್ತು 2022 ರ ಬ್ಯಾಚ್ ಮಾತ್ರ)

ಪಾತ್ರ : ಎಂಜಿನಿಯರಿಂಗ್ ಮತ್ತು ನಿರ್ವಹಣೆ ನೆರವು

ಕೆಲಸದ ವಿವರ :
- ಅನುಮೋದಿತ ಕಾರ್ಯವಿಧಾನಗಳ ಪ್ರಕಾರ ಹೊಸ ಉಪಕರಣಗಳನ್ನು ಮತ್ತು ದೋಷನಿವಾರಣೆ ಉಪಕರಣಗಳನ್ನು ಆನ್‌ಸೈಟ್‌ನಲ್ಲಿ ಜೋಡಿಸುವುದು
- ಸಲಕರಣೆಗಳ ಯೋಜಿತ ಮತ್ತು ಮುನ್ಸೂಚಕ ನಿರ್ವಹಣೆಯನ್ನು ನಿರ್ವಹಿಸುವುದು
- ಪ್ರಮಾಣಿತ ಆಪರೇಟಿಂಗ್ ಕಾರ್ಯವಿಧಾನಗಳು, ಸುರಕ್ಷತೆ, cGMP, cGLP ಮತ್ತು EHS ಅವಶ್ಯಕತೆಗಳನ್ನು ಅನುಸರಿಸುವುದು
- ಪ್ರಮಾಣಿತ ಆಪರೇಟಿಂಗ್ ಕಾರ್ಯವಿಧಾನಗಳ ಪ್ರಕಾರ ಸರಿಯಾದ ದಾಖಲಾತಿ ಮತ್ತು ನಿಯಂತ್ರಣವನ್ನು ಅನುಸರಿಸುವುದು
- ಸಾಧ್ಯವಿರುವಲ್ಲೆಲ್ಲಾ ಶಕ್ತಿಯ ಸಂರಕ್ಷಣಾ ಕ್ರಮಗಳನ್ನು ಕಾರ್ಯಗತಗೊಳಿಸುವುದು

ಅರ್ಹತೆ : ಮೆಕ್ಯಾನಿಕಲ್/ಎಲೆಕ್ಟ್ರಿಕಲ್/ಇನ್‌ಸ್ಟ್ರುಮೆಂಟೇಶನ್ ಸ್ಟ್ರೀಮ್‌ಗಳ ಡಿಪ್ಲೊಮಾ/ಪದವೀಧರರು (2021 ಮತ್ತು 2022 ರ ಬ್ಯಾಚ್ ಮಾತ್ರ)

ಸುಧಾರಿತ ತಂತ್ರಜ್ಞಾನವನ್ನು ಬಳಸಿ ಕೆಲಸ ಮಾಡುವ ಅನುಭವವನ್ನು ಪಡೆದುಕೊಳ್ಳಲು ಮತ್ತು ಭಾರತದ ಅತಿದೊಡ್ಡ ಜೈವಿಕ ಔಷಧೀಯ ಕಂಪನಿಯೊಂದಿಗೆ ಕೆಲಸ ಮಾಡುವ ಅವಕಾಶವನ್ನು ಪಡೆಯಲು ನಿಮಗೆ ಆಸಕ್ತಿಯಿದ್ದರೆ, ನಿಮ್ಮ ರೆಸ್ಯೂಮ್ ಮತ್ತು 10ನೇ, 12ನೇ ಮತ್ತು ಪದವಿ ಅಂಕಪಟ್ಟಿಗಳು/ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಆಯ್ಕೆ ಪ್ರಕ್ರಿಯೆಗಾಗಿ ಬನ್ನಿ

ದಿನಾಂಕ: ಭಾನುವಾರ, 22ನೇ ಜನವರಿ 2023 । ಸಮಯ: ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ರವರೆಗೆ
ಸ್ಥಳ: ಕರ್ನಾಟಕ ಸೈನ್ಸ್ ಕಾಲೇಜು, ಹಳಿಯಾಳ ರೋಡ್, ಧಾರವಾಡ, ಕರ್ನಾಟಕ – 580001

www.biocon.com



ದಾವಣಗೆರೆ: 'ಪ್ರಜಾಧ್ವನಿ' ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಘೋಷಣೆ

ಅಧಿಕಾರಕ್ಕೆ ಬಂದರೆ ಅಲ್ಪಸಂಖ್ಯಾತರಿಗೆ ₹10,000 ಕೋಟಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಅನುದಾನವನ್ನು ಬಿಜೆಪಿ ಸರ್ಕಾರ ಕಡಿತಗೊಳಿಸಿದ್ದು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಜೆಟ್‌ನಲ್ಲಿ ₹ 10,000 ಕೋಟಿ ಅನುದಾನವನ್ನು ಇದಕ್ಕಾಗಿ ಮೀಸಲಿರಿಸಲಾಗುವುದು' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಘೋಷಿಸಿದರು.

ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿ ಗುರುವಾರ ಸಂಜೆ ನಡೆದ 'ಪ್ರಜಾಧ್ವನಿ' ಕಾರ್ಯಕ್ರಮದಲ್ಲಿ ಮಾತನಾಡಿದರು.

'2013ರಲ್ಲಿ ಬಿಜೆಪಿ ಆಡಳಿತವಿದ್ದಾಗ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ₹ 400 ಕೋಟಿ ಅನುದಾನವನ್ನು ನಿಗದಿ ಮಾಡಲಾಗಿತ್ತು. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅನುದಾನ ಹೆಚ್ಚಿಸಿ, ₹ 3,150 ಕೋಟಿ ಮೀಸಲಿರಿಸಲಾಗಿತ್ತು. ಈಗಿನ ಬಿಜೆಪಿ ಸರ್ಕಾರ ಅದನ್ನು ₹ 1,000 ಕೋಟಿಗೆ ಇಳಿಸಿದೆ' ಎಂದು ಆರೋಪಿಸಿದರು.

ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಪ್ರಜಾಧ್ವನಿ ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ
—ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಚುನಾವಣೆಗಾಗಿ ಬಿಜೆಪಿಯಿಂದ ಅಲ್ಪಸಂಖ್ಯಾತರ ಓಲೈಕೆ: ಡಿಕೆಶಿ

ಹುಬ್ಬಳ್ಳಿ: 'ಚುನಾವಣೆ ಹತ್ತಿರ ಬರುತ್ತಿದ್ದಂತೆ, ಬಿಜೆಪಿಯವರಿಗೆ ಅಲ್ಪಸಂಖ್ಯಾತರ ಮೇಲೆ ಪ್ರೀತಿ ಬಂದಿದ್ದು, ಇದೀಗ ಸಮುದಾಯದ ಓಲೈಕೆಗೆ ಮುಂದಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿಜೆಪಿಯವರು ಅಲ್ಪಸಂಖ್ಯಾತರಿಗೆ ಕೊಡಬಾರದ ಕಷ್ಟ ಕೊಟ್ಟಿದ್ದಾರೆ. ಉಡುಪಿ, ಮಂಗಳೂರು, ಶಿವಮೊಗ್ಗ ಸೇರಿದಂತೆ ಹಲವೆಡೆ ಅನೈತಿಕ ಪೊಲೀಸ್‌ಗಿರಿ ಹೆಸರಿನಲ್ಲಿ ಕಿರುಕುಳ ಕೊಟ್ಟಿದ್ದಾರೆ' ಎಂದರು.

'ಗಲಭೆ, ಗಲಾಟೆ ಹೆಸರಿನಲ್ಲಿ ಪ್ರಕರಣ ದಾಖಲಿಸಿ ಊರು, ಮನೆ, ದೇಶ ಬಿಟ್ಟು ಹೋಗುವಂತೆ ಮಾಡಿದ್ದಾರೆ. ನೂರಾರು ಅಮಾಯಕರನ್ನು ಜೈಲಿಗೆ ಕಳಿಸಿದ್ದಾರೆ. ಅವರು ಬದುಕು ದುಸ್ತರ ಮಾಡಿರುವುದು ಬಿಜೆಪಿ ಸಾಧನೆ. ಇವರ ವಿರುದ್ಧ, ವಿಶ್ವದಾದ್ಯಂತ ಅಲ್ಪಸಂಖ್ಯಾತರು ಒಗ್ಗಟ್ಟಾಗುತ್ತಿದ್ದಾರೆ. ಈಗ ಅವರ ಬಗ್ಗೆ ಮೃದು ಧೋರಣೆ ಹೆಸರಿನಲ್ಲಿ ಓಲೈಕೆಗೆ ಮುಂದಾಗಿದ್ದಾರೆ' ಎಂದು ಟೀಕಿಸಿದರು.

'ನೇಕಾರರ ಅಭಿವೃದ್ಧಿ ನಿಗಮ ಸ್ಥಾಪಿಸದಿದ್ದರೆ ಮತ ಚಲಾಯಿಸಬೇಡಿ'



ಎಂ.ಡಿ. ಲಕ್ಷ್ಮೀನಾರಾಯಣ

ದಾವಣಗೆರೆ: 'ರಾಜ್ಯದ ಜನಸಂಖ್ಯೆಯ ಶೇ 9.3ರಷ್ಟು ಇರುವ ನೇಕಾರರ ಅಭಿವೃದ್ಧಿಗಾಗಿ ಚುನಾವಣೆಗೆ ಮೊದಲೇ ನಿಗಮ ಸ್ಥಾಪಿಸದಿದ್ದರೆ ಸಮುದಾಯದ ಯಾರೂ ಮತ ಚಲಾಯಿಸಬಾರದು' ಎಂದು ಮಾಜಿ ಶಾಸಕ ಎಂ.ಡಿ. ಲಕ್ಷ್ಮೀನಾರಾಯಣ ಅವರು ಮನವಿ ಮಾಡಿದರು.

ಮುದನೂರು ಮಹಾಸಂಸ್ಥಾನ ಮಠ ಟ್ರಸ್ಟ್, ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದಿಂದ ನಗರದಲ್ಲಿ ಗುರುವಾರ ನಡೆದ ನೇಕಾರ ಸಮುದಾಯಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಈಗ ಅಸ್ತಿತ್ವದಲ್ಲಿರುವ ಕೈಮಗ್ಗ ಅಭಿವೃದ್ಧಿ ನಿಗಮ, ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ಹಾಗೂ ಒಂದು ಫೆಡರೇಶನ್ ನೇಕಾರ ಸಮುದಾಯಗಳಿಗೆ ಮಾತ್ರ ಸೀಮಿತವಾಗಿಲ್ಲ. ನೇಕಾರಿಕೆ ವೃತ್ತಿಯಲ್ಲಿರುವ ಎಲ್ಲರೂ ಅದರ ಲಾಭ ಪಡೆಯುತ್ತಿದ್ದಾರೆ. ಎಲ್ಲ ಜಾತಿಗಳವರೂ ಈ ವೃತ್ತಿಯಲ್ಲಿ ತೊಡಗಿದ್ದಾರೆ. ನೇಕಾರ ಸಮಾಜವು ಕೇವಲ 29 ಜಾತಿಗಳನ್ನು ಒಳಗೊಂಡಿದೆ. ಅವರಿಗಾಗಿಯೇ ಪ್ರತ್ಯೇಕವಾಗಿ ನೇಕಾರ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು' ಎಂದು ಅವರು ಆಗ್ರಹಿಸಿದರು.

'ನಿಗಮ ಸ್ಥಾಪಿಸದಿದ್ದರೆ ಮತ ಚಲಾಯಿಸಲಾಗದು ಎಂದು ಎಲ್ಲ ಜಿಲ್ಲೆ, ತಾಲ್ಲೂಕುಗಳಲ್ಲಿ ನೇಕಾರ ಸಮುದಾಯಗಳ ಒಕ್ಕೂಟಗಳು ನಿರ್ಣಯ ಕೈಗೊಳ್ಳಬೇಕು. ಮಾಧ್ಯಮಗಳ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕು' ಎಂದು ತಿಳಿಸಿದರು.

'ಪಕ್ಷಾಂತರಿಗಳಿಗೆ ಟಿಕೆಟ್ ನೀಡಬಾರದು'

ಮೈಸೂರು: 'ರಾಜಕೀಯ ಪಕ್ಷಗಳು ಸಚ್ಚಾರಿತ್ರ್ಯವುಳ್ಳ ಯೋಗ್ಯ ಅಭ್ಯರ್ಥಿಗಳಿಗೆ ಮಾತ್ರ ಟಿಕೆಟ್ ನೀಡಬೇಕೆ ಹೊರತು ಪಕ್ಷಾಂತರಿಗಳಿಗಲ್ಲ' ಎಂದು ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ನಗರದ ಕಲಾಮಂದಿರದಲ್ಲಿ ಜಿಲ್ಲಾಡಳಿತ ಹಾಗೂ ಪಾಲಿಕೆಯು 'ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯ' ಕುರಿತು ಗುರುವಾರ ಆಯೋಜಿಸಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಮಾತನಾಡಿದರು.

'ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಮೌಲ್ಯಗಳ ಅರಿವು ಇರುವವರಿಗೆ ಟಿಕೆಟ್ ನೀಡಬೇಕು. ನಿನ್ನೆ ಯಾವುದೋ ಪಕ್ಷದಲ್ಲಿದ್ದು, ಸಿದ್ಧಾಂತವನ್ನು ಧಿಕ್ಕರಿಸಿ ಅವಕಾಶಕ್ಕಾಗಿ ಮತ್ತೊಂದು ಪಕ್ಷಕ್ಕೆ ಹಾರುವವರಿಗೆ ನೀಡಿದರೆ ಮತದಾರರ ಆಯ್ಕೆಗೆ ದ್ರೋಹ ಬಗೆದಂತೆ' ಎಂದು ಪ್ರತಿಪಾದಿಸಿದರು.

'ಪಕ್ಷದ ತತ್ವ ಸಿದ್ಧಾಂತ ಹಾಗೂ ಪ್ರಣಾಳಿಕೆ ಗೊತ್ತಿಲ್ಲದೇ ಆಯ್ಕೆಯಾದವರಿಂದ ವ್ಯವಸ್ಥೆಯು ಹಾಳಾಗಿರುವುದನ್ನು ನಾವು ನೋಡಿದ್ದೇವೆ. ಪಕ್ಷಗಳು ದೊಡ್ಡ ಜವಾಬ್ದಾರಿಯನ್ನು ಅರಿತು ಯೋಗ್ಯ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕು. ಮತದಾರರೂ ಜನಪರವಾಗಿರುವ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಬೇಕು. ಆಗ ಮಾತ್ರ ಸುಧಾರಣೆ ಸಾಧ್ಯ' ಎಂದರು. 'ನಂಬಿಕೆ ಇಟ್ಟು 'ಬಿ' ಫಾರಂ ಕೊಡುವ ಪಕ್ಷಕ್ಕೆ ದ್ರೋಹ ಮಾಡಬಾರದು. ಪಕ್ಷಾಂತರ ನಿಷೇಧ ಕಾಯ್ದೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ಸಂವಿಧಾನದ ಪರಿಚ್ಛೇದ 10ಕ್ಕೆ ಬಲ ತರಲು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಐವರು ಸದಸ್ಯರ ಸಮಿತಿ ರಚಿಸಿದ್ದು, ಅದರಲ್ಲಿ ನಾನೂ ಇರುವ ಬಗ್ಗೆ ಹೆಮ್ಮೆಯಿದೆ' ಎಂದರು. 'ಚುನಾವಣಾ ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿದ್ದು,

ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಸುವುದಷ್ಟೇ ಅದರ ಕರ್ತವ್ಯವಲ್ಲ. ಚುನಾವಣಾ ಪ್ರಕ್ರಿಯೆಗಳು ನಿರಂತರವಾಗಿರುವಂತೆಯೂ ನೋಡಿಕೊಳ್ಳಬೇಕು' ಅವರು ಎಂದು ಹೇಳಿದರು.

ಹಿಂದುತ್ವ ಅಜೆಂಡಾ ಕೈಬಿಡುವ ಪ್ರಮೇಯವಿಲ್ಲ: ಕೋಟ

ಕಾರವಾರ: 'ಬಿಜೆಪಿ ಹಿಂದುತ್ವದ ಅಜೆಂಡಾ ಕೈಬಿಡುವ ಪ್ರಮೇಯ ಇಲ್ಲ. ಆದರೆ, ರಾಷ್ಟ್ರೀಯತೆ ವಿಚಾರಧಾರೆ ಗಟ್ಟಿಗೊಳಿಸಲು ಎಲ್ಲ ಧರ್ಮ, ಸಮುದಾಯಗಳನ್ನು ಒಗ್ಗೂಡಿಸಿಕೊಂಡು ಮುನ್ನಡೆಯುವ ಮೋದಿ ಸೂಚನೆಗೆ ಬದ್ಧರಾಗಿದ್ದೇವೆ' ಎಂದು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಮುಸ್ಲಿಮರನ್ನು ವಿಶ್ವಾಸದಿಂದ ಕರೆದೊಯ್ಯಲು ಪ್ರಧಾನಿ ಮೋದಿ ನೀಡಿರುವ ಸೂಚನೆ ಕುರಿತು ಕೇಳಲಾದ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

'ದೇಶ ಮೊದಲು ಎಂಬ ತತ್ವವನ್ನು ಮೋದಿ ಸಾರುತ್ತಿದ್ದಾರೆ. ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಎಲ್ಲರನ್ನೂ ವಿಶ್ವಾಸದೊಂದಿಗೆ ಮುನ್ನಡೆಯುವ ಅವರ ಧ್ಯೇಯಕ್ಕೆ ಬದ್ಧರಾಗಿ ನಾವೂ ಕೆಲಸ ಮಾಡುತ್ತೇವೆ' ಎಂದು ಸಮರ್ಥಿಸಿಕೊಂಡರು.

ಸ್ವಪಕ್ಷದ ನಾಯಕರನ್ನೇ ಸೋಲಿಸಿದ್ದ ಸಿದ್ದರಾಮಯ್ಯ: ಸಿ.ಟಿ.ರವಿ ಆರೋಪ

ಚಿಕ್ಕಮಗಳೂರು: 'ಸ್ವಪಕ್ಷದ ನಾಯಕರನ್ನು ಸೋಲಿಸುವ ಅನ್ಯಾಯವನ್ನು ಮೋದಿ ಮಾಡಿಲ್ಲ. ಮೋದಿ ನ್ಯಾಯ ಕೊಡಿ ಎಂದು ಕೇಳುವ ಸಿದ್ದರಾಮಯ್ಯ ಏನು ಬಯಸುತ್ತಿದ್ದಾರೋ ಗೊತ್ತಿಲ್ಲ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, 'ಡಾ.ಜಿ.ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮನ್ನು ಸೋಲಿಸಿದವರನ್ನು ಸೋಲಿಸಿ ನ್ಯಾಯ ಕೊಡಿ ಎಂದು ಕೇಳಬೇಕು. ನ್ಯಾಯ ಕೊಡಿ ಎಂದು ಸಿದ್ದರಾಮಯ್ಯ ಕೇಳುವಂತಿಲ್ಲ' ಎಂದು ಕುಟುಕಿದರು.

'ಸಮಾಜವಾದಿ ಹೆಸರಿಲ್ಲಿ ಮಜಾವಾದಿಯಾಗಿದ್ದಕ್ಕೆ, ಪಿಎಫ್‌ಐ, ಎಸ್‌ಡಿಪಿಐ ಸಂಘಟನೆಗಳ ವಿರುದ್ಧದ ಪ್ರಕರಣಗಳನ್ನು ಹಿಂಪಡೆದಿದ್ದಕ್ಕೆ, 'ರಿಡೂ' ಹೆಸರಿನಲ್ಲಿ ಹಗರಣ ಮಾಡಿದ್ದಕ್ಕೆ ಜನ ನಿಮಗೆ ಶಿಕ್ಷೆ ಕೊಟ್ಟಿದ್ದಾರೆ' ಎಂದು ಹೇಳಿದರು.

ಓಲೈಕೆ ರಾಜಕಾರಣ ಮಾಡಲ್ಲ: ಅಶ್ವತ್ಥನಾರಾಯಣ

ಬೆಂಗಳೂರು: 'ಚುನಾವಣೆಯಲ್ಲಿ ಮತಗಳಿಸಲು ಮುಸ್ಲಿಮರ ಓಲೈಕೆ ಮಾಡುವುದಿಲ್ಲ. ಸರ್ವೇಜನ ಸುಖಿನೋಭವಂತು ಎನ್ನುವ ತತ್ವದಲ್ಲಿನಂಬಿಕೆ ಇಟ್ಟಿದ್ದೇವೆ. ಎಲ್ಲ ಸಮುದಾಯಗಳ ಹಿತದೃಷ್ಟಿಯಿಂದ ಮುನ್ನಡೆಯಬೇಕು ಎನ್ನುವ ಪ್ರಧಾನಿ ಮೋದಿಯವರ ಸಲಹೆಯಂತೆ ನಡೆದುಕೊಳ್ಳುತ್ತೇವೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ತುಷ್ಟೀಕರಣ ರಾಜಕಾರಣವನ್ನು ಬಿಜೆಪಿ ಎಂದಿಗೂ ನೆಚ್ಚಿಕೊಂಡಿಲ್ಲ, ಸರ್ವಧರ್ಮ ಸಮಭಾವ ಮತ್ತು ಎಲ್ಲ ಸಮುದಾಯಗಳ ಹಿತವೇ ಪಕ್ಷದ ಸಿದ್ಧಾಂತ' ಎಂದರು.

'ಸಬ್ ಕಾ ಸಾಥ್ ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್ ಎನ್ನುವ ಮಾತನ್ನು ಮೋದಿಯವರು ಪದೇ ಪದೇ ಪುನರುಚ್ಚರಿಸಿದ್ದಾರೆ. ಹೀಗಾಗಿ ಮುಸ್ಲಿಮರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂಬ ಅವರ ಮಾತಿಗೆ ವಿಶೇಷ ಅರ್ಥಗಳನ್ನು ಕಲ್ಪಿಸುವ ಅಗತ್ಯವಿಲ್ಲ' ಎಂದರು.

'ನಮ್ಮ ಪಕ್ಷ ರಾಷ್ಟ್ರೀಯತೆಗೆ ಪ್ರಾಧಾನ್ಯತೆ ನೀಡಿದೆ. ದೇಶ ಮೊದಲು ಎಂದು ಹೇಳುವ ಪಕ್ಷ ನಮ್ಮದು. ಕೆಲವು ಸೂಕ್ಷ್ಮ ವಿಚಾರಗಳು ಚರ್ಚೆಗೆ ಬಂದಾಗ ನಮ್ಮ ನಿಲುವು ಸ್ಪಷ್ಟಪಡಿಸುತ್ತೇವೆ. ಟಿಪ್ಪು ಒಬ್ಬ ಮತಾಂಧನಾಗಿದ್ದ, ಇತಿಹಾಸದ ಪುಟಗಳು ಅದನ್ನೇ ಹೇಳುತ್ತವೆ. ನಾವೂ ಅದನ್ನೇ ಹೇಳಿದ್ದೇವೆ' ಎಂದರು.

'ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆಯ ಪ್ರಶ್ನೆ ಉದ್ಭವಿಸದು. ಅಪ ಪ್ರಚಾರಗಳು ಬಿಜೆಪಿ ಗೆಲುವಿನ ಓಟದ ಮೇಲೆ ಪರಿಣಾಮ ಬೀರದು. ಸರ್ವಾಂಗೀಣ ಅಭಿವೃದ್ಧಿಯೊಂದಿಗೆ ಎಲ್ಲ ಸಮುದಾಯಗಳ ಶ್ರೇಯೋಭಿವೃದ್ಧಿ ರಾಜ್ಯ ಸರ್ಕಾರ ಶ್ರಮಿಸುತ್ತಿದೆ' ಎಂದು ಅಶ್ವತ್ಥನಾರಾಯಣ ಹೇಳಿದರು.

ಕೇಂದ್ರ– ರಾಜ್ಯ ಸರ್ಕಾರಗಳು ಸುಸ್ಥಿರ ಅಭಿವೃದ್ಧಿ ಮಾದರಿಯನ್ನು ತೋರಿಸಿಕೊಟ್ಟಿವೆ. ಘೋಷಿಸಿದ ಯೋಜನೆಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತಂದಿವೆ. ದೊಡ್ಡ ಪ್ರಮಾಣದ ಸುಧಾರಣೆಗಳನ್ನು ಜನರು ಗುರುತಿಸಿದ್ದು, ಮತ್ತೊಮ್ಮೆ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಪಕ್ಷದ ರಾಜ್ಯ ಮುಖ್ಯ ವಕ್ತಾರ ಎಂ.ಜಿ. ಮಹೇಶ್ ಇದ್ದರು.

ಹಕ್ಕುಪತ್ರ: ದಾಖಲೆ ಬರೆದ ಕಂದಾಯ ಇಲಾಖೆ

ಒಂದನೇ ಪುಟದಿಂದ...

'1993ರಲ್ಲೇ ತಾಂಡಾ, ಹಾಡಿ, ಹಟ್ಟಿಗಳು ಸೇರಿ ಬುಡಕಟ್ಟು, ಅಲೆಮಾರಿ ಸಮುದಾಯಗಳು ವಾಸಿಸುವ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಬೇಕು ಎಂಬ ಪ್ರಸ್ತಾವ ಇತ್ತು. ಆದರೆ, ಈವರೆಗೆ ಸುದೀರ್ಘ ಅವಧಿಗೆ ಅಧಿಕಾರ ನಡೆಸಿದ ಸರ್ಕಾರಗಳು ಈ ಬಗ್ಗೆ ಗಮನ ಹರಿಸಿರಲಿಲ್ಲ. ಎಲ್ಲ ತಾಂಡಾ ನಿವಾಸಿಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ' ಎಂದು ಅವರು ಘೋಷಿಸಿದರು.

'ಸ್ಪರ್ಧಾತ್ಮಕ ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸಲು ಲಂಬಾಣಿ ಸಮುದಾಯದ ಯುವಜನರಿಗೆ ಉಚಿತ ತರಬೇತಿ ಕೊಡಿಸಲಾಗುವುದು. ಮುದ್ರಾ ಯೋಜನೆಯಡಿ ₹ 5 ಲಕ್ಷ ಸಾಲ ಸೌಲಭ್ಯ ಒದಗಿಸಲಾಗುವುದು' ಎಂದರು.

'ಮತಬ್ಯಾಂಕ್ ರಾಜಕಾರಣ':

ಇದಕ್ಕೂ ಮುನ್ನ ಯಾದಗಿರಿ ಜಿಲ್ಲೆಯ ಕೊಡೇಕಲ್‌ನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಮತ್ತು ಯೋಜನೆಗಳಿಗೆ ಚಾಲನೆ ನೀಡಿದ ಮೋದಿ, 'ಈ ಹಿಂದಿನ ಸರ್ಕಾರಗಳು ಜಾತಿ, ಧರ್ಮದ ಹೆಸರಿನಲ್ಲಿ ಮತ ಬ್ಯಾಂಕ್ ರಾಜಕಾರಣ ಮಾಡಿದವೇ ಹೊರತು ಪ್ರದೇಶದ ಅಭಿವೃದ್ಧಿ ಮತ್ತು ಜನರ ಏಳ್ಗೆಗೆ ಆದ್ಯತೆ ನೀಡಲಿಲ್ಲ. ಆದರೆ, ನಮ್ಮ ಡಬಲ್ ಎಂಜಿನ್ ಸರ್ಕಾರಕ್ಕೆ ಪ್ರದೇಶದ ಅಭಿವೃದ್ಧಿ ಮತ್ತು ಜನರ ಏಳ್ಗೆಯೇ ಮುಖ್ಯ. ಅಭಿವೃದ್ಧಿಯೇ ಪ್ರಧಾನವಾಗಿದೆ' ಎಂದರು.

THE SPECIAL OFFICER AND COMPETENT AUTHORITY

(UNDER KPIDFE-IMA & OTHER SCAM)

3RD FLOOR, PODIUM BLOCK, VV TOWERS,
DR. AMBEDKAR VEEDHI, VASANTH NAGAR, BANGALORE-560001.

NOTICE/INVITATION FOR E-AUCTION FOR MOVABLE ITEMS

Pursuant to the attachment by the Government of Karnataka under the Karnataka Protection of Interest of Depositors (in Finanacial Establishment) Act, 2004 (KPIDFE ACT) IN THE MATTER OF M/S. IMA GROUP CASE BEFORE THE HON'BLE SPECIAL COURT which are as described in the document (hereinafter referred to as "SLOCA") has engaged Quikr Reality Limited (formaerly HDFC Really)(thereinafter referred to as "the Agency") which has been appointed by SPLOCA to assist in the sale of the MOVABLE ITEMS attached and made absolute through Online auction on "as is where is and whatever there is basis".

SPLOCA hereby invites bids from the intending bidders along with a bid deposit as mentioned in the table below as Earnest Money for MOVABLE ITEMS-Jewellery/Ornaments, Gold, Diamond, Platinum and Silver to be paid through DD in favor of "Special Officer and Competent Authority (EMD) IMA" or through RTGS/NEFT to the Account number 41506340119, IFSC Code: SBIN0040277 STATE BANK OF INDIA, VIDHANA SOUDHA Branch.

Short description of the Movable items

Sl. No	PARTICULARS	Bid Starting Price	EMD
1	SILVER	61,46,86,666	6,14,68,667
2	SILVER PCS		
3	GOLD		
4	PLATINUM		
5	DIAMOND		
6	GOLD PCS		

Last Date of Submission of Bid Documents & EMD submission	Date of E-auction
February 03, 2023, until 5 pm	February 06, 2023 11:00 am 04:00 pm

The complete description of movable items along with EMD & remittance, Date of inspection, time of action, orders of relevant courts, etc. are available in the Quikr Realty's website http://www.quikrrealty.com/e-auction For Registration & Online Auction, you can logon to www.bankeauctions.com. The interested bidders who require assistance may contact Quikr Realty Limited, Gunta No 106, Dr. SRK Nagar Post, 167, Rachenahalli Main Rd Thanisandra, Bengaluru, Karnataka 560045, e-mail ID: auctions@quikrreatly.com or Contact No. 9481776023, 9321575329.

Sd/-
The Special Officer & Competent Authority
(Under KPIDFE-IMA & Other Scam)
Bengaluru, Karnataka

Place: Bengaluru
Date: January 19, 2023
DIPR/CP/4166/AKAR/22-23

ಆಯೋಗದ ಅಧ್ಯಕ್ಷೆಯನ್ನು ಎಳೆದೊಯ್ದ ಚಾಲಕ

ಒಂದನೇ ಪುಟದಿಂದ

ಗುರುವಾರ ನಸುಕಿನ ಘಟನೆಗೆ ಸಂಬಂಧಿಸಿದಂತೆ ಆತಂಕ ವ್ಯಕ್ತಪಡಿಸಿರುವ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಅವರು, ಈ ಕುರಿತು ವರದಿ ನೀಡುವಂತೆ ದೆಹಲಿ ಪೊಲೀಸರಿಗೆ ಸೂಚಿಸಿದ್ದಾರೆ. ಅಲ್ಲದೆ ತಪ್ಪಿತಸ್ಥನ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿ ಟ್ವೀಟ್ ಮಾಡಿದ್ದಾರೆ.

ಡಿಸಿಡಬ್ಲ್ಯು ಹೇಳಿಕೆ: 'ಏಮ್ಸ್ ಎದುರಿನ ವರ್ತುಲ ರಸ್ತೆಯ ಬಸ್ ನಿಲ್ದಾಣದಲ್ಲಿ ಮಾಲೀವಾಲ್ ಅವರು ನಿಂತಿದ್ದರು. ಈ ವೇಳೆ ಅಲ್ಲಿಗೆ ಬಂದ ಕಾರಿನ ಚಾಲಕ ಅವರನ್ನು ಕಾರಿನಲ್ಲಿ ಕುಳಿತುಕೊಳ್ಳುವಂತೆ ಕೇಳಿದ್ದನು. ಅದನ್ನು ಮಾಲೀವಾಲ್ ನಿರಾಕರಿಸಿದಾಗ, ಕೆಲಕಾಲ ದುರುಗುಟ್ಟಿ ನೋಡಿ ಅಲ್ಲಿಂದ ತೆರಳಿದ್ದ. ಕೆಲವೇ ನಿಮಿಷಗಳಲ್ಲಿ ಅದೇ ಜಾಗಕ್ಕೆ ಮತ್ತೆ ಬಂದ ಆತ, ಕಾರಿನಲ್ಲಿ ಕೂರುವಂತೆ ಪುನಃ ಕೇಳಿದ. ಆಗಲೂ ಮಾಲೀವಾಲ್ ನಿರಾಕರಿಸಿದಾಗ, ಆತ ಅಶ್ಲೀಲ ಸನ್ನೆಗಳನ್ನು ತೋರಿ ಅಸಭ್ಯದಿಂದ ವರ್ತಿಸಿದ' ಎಂದು ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮಹಿಳಾ ಆಯೋಗ (ಡಿಸಿಡಬ್ಲ್ಯು) ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ.

'ಆತನ ವರ್ತನೆಯನ್ನು ಮಾಲೀವಾಲ್ ಖಂಡಿಸಿದಾಗ, ಆತ ಮತ್ತೆ ಅಶ್ಲೀಲ ಸನ್ನೆಗಳೊಂದಿಗೆ ಅಸಭ್ಯತೆ ತೋರಿದನು. ಈ ವೇಳೆ ಸ್ವಾತಿ ಅವರು ಚಾಲಕನನ್ನು ಹಿಡಿದಾಗ, ಆತ ಕಾರಿನ ಕಿಟಕಿಯ ಗಾಜನ್ನು ಮೇಲಕ್ಕೆತ್ತಿ ಅವರ ಕೈ ಸಿಲುಕುವಂತೆ ಮಾಡಿ, ಕಾರು ಚಲಾಯಿಸಿಕೊಂಡು, ಅವರನ್ನು ಎಳೆದೊಯ್ದನು. ಕೆಲ ಮೀಟರ್‌ಗಳಷ್ಟು ದೂರ ಹೋಗುತ್ತಿದ್ದಂತೆ ಮಾಲೀವಾಲ್ ಅವರು ಹೇಗೋ ಅಪಾಯದಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದರು' ಎಂದು ಪ್ರಕಟಣೆ ತಿಳಿಸಿದೆ.

ಗೂಗಲ್ ಮೇಲ್ಮನವಿ ತಿರಸ್ಕರಿಸಿದ 'ಸುಪ್ರೀಂ'

ಒಂದನೇ ಪುಟದಿಂದ...

ಸಿಸಿಐ ಆದೇಶ ಪ್ರಶ್ನಿಸಿ ತಾನು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ತೀರ್ಪು ನೀಡುವಂತೆ ಕೋರಿ ಮೂರು ದಿನಗಳ ಒಳಗಾಗಿ ಎನ್‌ಸಿಎಲ್‌ಎಟಿಗೆ ಮನವಿ ಸಲ್ಲಿಸುವಂತೆ ಗೂಗಲ್ ಸೇರಿದಂತೆ ಎಲ್ಲ ಕಕ್ಷಿದಾರರಿಗೆ ನ್ಯಾಯಪೀಠ ನಿರ್ದೇಶನ ನೀಡಿತು.

ಆ್ಯಂಡ್ರಾಯ್ಡ್ ಮೊಬೈಲ್ ಕಾರ್ಯಾಚರಣೆ ವ್ಯವಸ್ಥೆ ಬಳಕೆ ಇರುವಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡ ಆರೋಪ ಗೂಗಲ್ ಮೇಲಿತ್ತು.

ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್ ಬಳಕೆದಾರರಿಂದ ಬಂದ ದೂರುಗಳನ್ನು ಆಧರಿಸಿ ಸಿಸಿಐ, 2019ರ ಏಪ್ರಿಲ್‌ನಲ್ಲಿ ತನಿಖೆಗೆ ಆದೇಶಿಸಿತ್ತು. ಗೂಗಲ್‌ನಿಂದ ಸ್ಪರ್ಧಾ ಕಾನೂನಿನ ಉಲ್ಲಂಘನೆಯಾಗಿದೆ ಎಂದು ಹೇಳಿದ್ದ ಸಿಸಿಐ, ಕಂಪನಿಗೆ ₹ 1,337.76 ಕೋಟಿ ದಂಡ ವಿಧಿಸಿ ಆದೇಶಿಸಿತ್ತು.

ಸಿಸಿಐ ದಂಡ ವಿಧಿಸಿದ್ದನ್ನು ಪ್ರಶ್ನಿಸಿ ಗೂಗಲ್ ಎನ್‌ಸಿಎಲ್‌ಎಟಿಗೆ ಅರ್ಜಿ ಸಲ್ಲಿಸಿತ್ತು. ಈ ವಿಷಯದಲ್ಲಿ ಮಧ್ಯಂತರ ತಡೆಯಾಜ್ಞೆ ನೀಡಲು ನಿರಾಕರಿಸಿ ಜನವರಿ 4ರಂದು ಎನ್‌ಸಿಎಲ್‌ಎಟಿ ಆದೇಶ ನೀಡಿತ್ತು. ಈ ಆದೇಶವನ್ನು ಪ್ರಶ್ನಿಸಿ ಗೂಗಲ್ ಕಂಪನಿಯು ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

ಅರ್ಜಿ ಕುರಿತ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಗೂಗಲ್ ವಿರುದ್ಧ ತನಿಖೆ ನಂತರ ಸಿಸಿಐ ತೆಗೆದುಕೊಂಡ ನಿರ್ಣಯಗಳು ಅದರ ಕಾರ್ಯವ್ಯಾಪ್ತಿಯನ್ನು ಮೀರಿಲ್ಲ ಅಥವಾ ಈ ವಿಷಯದಲ್ಲಿ ನ್ಯಾಯಾಲಯದ ಹಸ್ತಕ್ಷೇಪದ ಅಗತ್ಯ ಇರುವುದು ಕಂಡುಬಂದಿಲ್ಲ' ಎಂದು ಅಭಿಪ್ರಾಯಪಟ್ಟಿತು.

ಸಿಸಿಐ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್.ವೆಂಕಟರಾಮನ್, '2018ರಲ್ಲಿ ಯುರೋಪ್‌ನ ಆಯೋಗವು ಇಂಥದೇ ನಿರ್ದೇಶನಗಳನ್ನು ನೀಡಿದ್ದು, ಗೂಗಲ್ ಅವುಗಳನ್ನು ಪಾಲಿಸುತ್ತಿದೆ. ಆದರೆ, ಭಾರತದಲ್ಲಿ ಮಾತ್ರ ಅದು ತಕರಾರು ತೆಗೆದಿದೆ' ಎಂದರು.

ಹಿರಿಯ ವಕೀಲ ಎ.ಎಂ. ಸಿಂಘ್ವಿ ಅವರು ಗೂಗಲ್ ಪರ ವಾದ ಮಂಡಿಸಿದರು.

ಹಕ್ಕುಪತ್ರ ವಿತರಣೆಗೆ ಕಾಂಗ್ರೆಸ್ ಸರ್ಕಾರ ಕಾರಣ: ಸಿದ್ದರಾಮಯ್ಯ

'ಅಡುಗೆ ನಮ್ಮದು, ಬಡಿಸುತ್ತಿರುವುದು ಬಿಜೆಪಿ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ತಾಂಡಾ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆಗೆ ಬೇಕಾದ ಎಲ್ಲ ಕೆಲಸವನ್ನು ಮಾಡಿದ್ದು ಕಾಂಗ್ರೆಸ್. ನಾವು ಮಾಡಿದ ಅಡುಗೆ ಬಡಿಸಿರುವ ಬಿಜೆಪಿಯವರು, ತಯಾರಿಸಿದ್ದು ತಾವೇ ಎಂದು ಸುಳ್ಳು ಹೇಳುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ವಾಗ್ದಾಳಿ ನಡೆಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯ ಬಿಜೆಪಿಯವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸುಳ್ಳು ಹೇಳಿ ಹಕ್ಕುಪತ್ರ ವಿತರಣೆಗೆ ಕರೆಸಿದ್ದಾರೆ.

> **ಪ್ರವಾಹ ಬಂದಾಗ ರಾಜ್ಯದ ಸ್ಥಿತಿ ವೀಕ್ಷಿಸಲು ಬಾರದ ಮೋದಿ, ಚುನಾವಣೆ ಬಂದಾಗ ಚಾಕೊಲೇಟ್ ಹಂಚಲು ಬಂದಿದ್ದಾರೆ. ಅವರು ಎಷ್ಟು ಸಲ ಬಂದರೂ ಏನೂ ಆಗುವುದಿಲ್ಲ**
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ತಾವೇ ಕಾಯ್ದೆ ಮಾಡಿ, ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿದ್ದೇವೆ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ' ಎಂದು ಹೇಳಿದರು.

'ಹಿಂದೆ ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಮಾಡಲು ಮಲ್ಲಿಕಾರ್ಜುನ ಖರ್ಗೆ ಅವರು ಪ್ರಯತ್ನಿಸಿದ್ದರು. ಕಂದಾಯ ಸಚಿವರಾಗಿದ್ದ ಕಾಗೋಡು ತಿಮ್ಮಪ್ಪ ಅವರು, ಕಂದಾಯ ಗ್ರಾಮ ಮತ್ತು ಅರಣ್ಯ ಕಾಯ್ದೆಗೆ ತಿದ್ದುಪಡಿ ತಂದು, ಉಳುವವನೇ ಭೂಮಿ ಒಡೆಯ ಮಾದರಿಯಲ್ಲಿ ವಾಸಿಸುವವನೇ ಮನೆಯೊಡೆಯ ಎಂಬ ಐತಿಹಾಸಿಕ ಕಾಯ್ದೆ ಜಾರಿಗೆ ತಂದರು' ಎಂದು ಹೇಳಿದರು.

'ಅದಕ್ಕೂ ಮುಂಚೆ ನರಸಿಂಹಯ್ಯ ಅವರ ಅಧ್ಯಕ್ಷತೆಯಲ್ಲಿ ತಾಂಡಾಗಳು, ಹಟ್ಟಿಗಳು, ಕುರುಬರ ಹಟ್ಟಿ, ನಾಯಕರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲು ಅಧ್ಯಯನಕ್ಕೆ ಸಮಿತಿ ರಚಿಸಿದ್ದೆ. ನಂತರ, ಐಎಎಸ್ ಅಧಿಕಾರಿ ಹೀರಾನಾಯ್ಕ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ, ಕಾಯ್ದೆ ಜಾರಿಗೆ ಪ್ರಯತ್ನ ಮಾಡಿದ್ದೆವು. ಹಕ್ಕುಪತ್ರ ವಿತರಣೆಯ ಹೊತ್ತಿಗೆ ನಮ್ಮ ಸರ್ಕಾರದ ಅವಧಿ ಮುಗಿಯಿತು. ಮೂರೂವರೆ ವರ್ಷ ಏನನ್ನೂ ಮಾಡದ ಬಿಜೆಪಿಯವರು, ಈಗ ಪ್ರಧಾನಿ ಮೋದಿ ಅವರಿಂದ ಹಕ್ಕುಪತ್ರ ಕೊಡಿಸುತ್ತಿದ್ದಾರೆ' ಎಂದು ಹೇಳಿದರು.

'ಬಿಜೆಪಿಯವರು ಸುಳ್ಳು ಉತ್ಪಾದಿಸುವ ಕಾರ್ಖಾನೆ. ಮೋದಿ ಕಂಡರೆ ನಮಗೆ ಭಯವಿಲ್ಲ. ನಾನು ಸತ್ಯ ಹೇಳುತ್ತೇನೆ ಮತ್ತು ಆರ್‌ಎಸ್‌ಎಸ್ ಟೀಕಿಸುತ್ತೇನೆ ಎಂದು ಅವರೇ ಭಯಪಡುತ್ತಾರೆ' ಎಂದು ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯೆ ನೀಡಿದರು.

ಪರೀಕ್ಷಾ ಅಕ್ರಮ: ಮತ್ತೊಬ್ಬ ಆರೋಪಿ ಬಂಧನ

ಹನುಮಂತ ಮಲ್ಲಪ್ಪ ಗುದಿಗೊಪ್ಪ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ, ಪೊಲೀಸರು ಗುರುವಾರ ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 51ಕ್ಕೆ ಏರಿದೆ.

ಗೋಕಾಕ ತಾಲ್ಲೂಕಿನ ಉಪ್ಪಾರಟ್ಟಿಯ ಹನುಮಂತ ಮಲ್ಲಪ್ಪ ಗುದಿಗೊಪ್ಪ (22) ಬಂಧಿತ. ಈಗಾಗಲೇ ಬಂಧಿತರಾದ ಸಂಜೀವ ಭಂಡಾರಿ, ಬಾಳೇಶ ಕಟ್ಟಿಕಾರ, ಸಿದ್ದಪ್ಪ ಮದಿಹಳ್ಳಿ, ಭೀಮಪ್ಪ ಗುದಿಗೊಪ್ಪ ಅವರೊಂದಿಗೆ ಹನುಮಂತ ಕೂಡ ಸೇರಿದ್ದ. ಇವರೆಲ್ಲರೂ ಕೂಡಿಕೊಂಡು ಏಳು ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರದೊಳಗೆ ಎಲೆಕ್ಟ್ರಾನಿಕ್ ಉಪಕರಣ ಮತ್ತು ಮೈಕ್ರೋಚಿಪ್ ತಲುಪಿಸಿದ ಆರೋಪ ಇವರ ಮೇಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರ್‌.ಡಿ. ಪಾಟೀಲ ಮನೆ ಮೇಲೆ ಇ.ಡಿ ದಾಳಿ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಪ್ರಮುಖ ಆರೋಪಿಗಳಾದ ಆರ್‌.ಡಿ.ಪಾಟೀಲ, ದಿವ್ಯಾ ಹಾಗರಗಿ ಸೇರಿ ಐವರು ನಿವಾಸದ ಮೇಲೆ ಜಾರಿ ನಿರ್ದೇಶನಾಲಯದ(ಇ-ಡಿ) ಅಧಿಕಾರಿಗಳು ಗುರುವಾರ ದಾಳಿ ಮಾಡಿ, ದಾಖಲೆಗಳು ಪರಿಶೀಲಿಸಿದರು.

ಎರಡು ತಂಡಗಳಲ್ಲಿ ಬಂದ ಅಧಿಕಾರಿಗಳು ಆರ್‌.ಡಿ.ಪಾಟೀಲ, ಮಹಾಂತೇಶ ಪಾಟೀಲ, ದಿವ್ಯಾ ಹಾಗರಗಿ, ಮಂಜುನಾಥ ಮೇಳಕುಂದಿ ಮತ್ತು ಕಾಶಿನಾಥ ಚಿಲ್ಲಾ ಅವರ ಮನೆಗಳ ಮೇಲೆ ದಾಳಿ ನಡೆಸಿದರು. ದಾಖಲೆಗಳ ಪರಿಶೀಲನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಅಕ್ಕಮಹಾದೇವಿ ಬಡಾವಣೆ ನಿವಾಸದಲ್ಲಿದ್ದ ಆರ್‌.ಡಿ ಪಾಟೀಲ ಮತ್ತು ಕುಟುಂಬಸ್ಥರು ಅಧಿಕಾರಿಗಳ ತಪಾಸಣೆಗೆ ಸಹಕರಿಸಿದ್ದಾಗಿ ಹೇಳಿವೆ.

ಅಧಿಕಾರಿಗಳು ನೆರೆಯ ತೆಲಂಗಾಣ ರಾಜ್ಯದ ನಾಮಫಲಕ ಹೊಂದಿದ ವಾಹನಗಳಲ್ಲಿ ಬಂದಿದ್ದರು. ಪಿಎಸ್‌ಐ ಅಕ್ರಮ ನೇಮಕಾತಿ ಹಗರಣಕ್ಕೆ ಸಂಬಂಧಿಸಿದ ಅಭ್ಯರ್ಥಿಗಳಿಂದ ಪಡೆದ ಹಣದ ದಾಖಲೆಗಳು, ಇತರೆ ಮಾಹಿತಿ ಕಲೆ ಹಾಕಿ ಪರಿಶೀಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರತಿಭಟನೆ

ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ 10,450 ಗ್ರಾಮ ಸಹಾಯಕರನ್ನು ಡಿ ಗ್ರೂಪ್ ನೌಕರರೆಂದು ಪರಿಗಣಿಸಿ ಸೇವಾ ಭದ್ರತೆ ನೀಡಬೇಕು ಎಂದು ಒತ್ತಾಯಿಸಿ ರಾಜ್ಯ ಕಂದಾಯ ಇಲಾಖೆ ಗ್ರಾಮ ಸಹಾಯಕರ ಸಂಘದ ನೇತೃತ್ವದಲ್ಲಿ ಗ್ರಾಮ ಸಹಾಯಕರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು

ಮುಚ್ಚಿಟ್ಟ ₹ 400 ಕೋಟಿ ಅಕ್ರಮ

ಒಂದನೇ ಪುಟದಿಂದ

ಏನಿದು ಪ್ರಕರಣ?: 'ಬಿಬಿಎಂಪಿ ವ್ಯಾಪ್ತಿಯಲ್ಲಿ 2016–19ರ ಅವಧಿಯಲ್ಲಿ ಕೊಳವೆ ಬಾವಿ ಮತ್ತು ಶುದ್ಧ ನೀರಿನ ಘಟಕ ನಿರ್ಮಾಣದ ಹೆಸರಿನಲ್ಲಿ ಬಿಡುಗಡೆಯಾದ ₹ 970 ಕೋಟಿಯ ಪೈಕಿ, ಆರ್‌.ಆರ್. ನಗರ, ಬೊಮ್ಮನಹಳ್ಳಿ, ಮಹದೇವಪುರ, ಯಲಹಂಕ ಮತ್ತು ದಾಸರಹಳ್ಳಿ ಈ ಐದು ವಲಯಗಳ ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು, ಕಾರ್ಯಪಾಲಕ ಎಂಜಿನಿಯರ್‌ಗಳು, ಪಾಲಿಕೆ ಸದಸ್ಯರು ಮತ್ತು ಗುತ್ತಿಗೆದಾರರು ₹ 400 ಕೋಟಿಗೂ ಹೆಚ್ಚು ಮೊತ್ತ ಲೂಟಿ ಹೊಡೆದಿದ್ದಾರೆ' ಎಂದು ಆರೋಪಿಸಿ 2019ರ ಮೇ 14 ರಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಅವರು ಎಸಿಬಿಗೆ ದೂರು ನೀಡಿದ್ದರು.

ಈ ದೂರು ಮತ್ತು ಅದರ ಜೊತೆಗಿದ್ದ ದಾಖಲೆಗಳ ಸಹಿತ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ 2019ರ ಜುಲೈ 25 ರಂದು ರಹಸ್ಯ ಪತ್ರ ಬರೆದಿದ್ದ ಎಸಿಬಿ ಎಡಿಜಿಪಿ ರಾಮನಿವಾಸ್ ಸೆಪಟ್, 'ದೂರಿನಲ್ಲಿರುವ ಆರೋಪಗಳ ಬಗ್ಗೆ ಇಲಾಖೆಯ ವಿಜಿಲೆನ್ಸ್ ಅಧಿಕಾರಿಗಳ ಮೂಲಕ ಆಂತರಿಕ ವಿಚಾರಣೆ ನಡೆಸಬೇಕು. ಆರೋಪಗಳು ಸಾಬೀತಾದರೆ, ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಪೂರ್ವಾನುಮತಿ ನೀಡಿ ಸರ್ಕಾರಿ ಆದೇಶದ ಜೊತೆ ವಿಚಾರಣಾ ವರದಿಯನ್ನು ಸಲ್ಲಿಸಬೇಕು' ಎಂದು ತಿಳಿಸಿದ್ದರು.

ಈ ದೂರಿನಲ್ಲಿದ್ದ ಆರೋಪಗಳ ಕುರಿತಂತೆ ಐದೂ ವಲಯಗಳ ಎಂಜಿನಿಯರ್‌ಗಳು ಮತ್ತು ಅಧಿಕಾರಿಗಳನ್ನು 2019ರ ಆಗಸ್ಟ್ 22, ಸೆ. 12, ಸೆ.20ರಂದು ವಿಚಾರಣೆ ನಡೆಸಿದ್ದ ನಗರಾಭಿವೃದ್ಧಿ ಇಲಾಖೆಯ ಮುಖ್ಯ ಜಾಗೃತ ಅಧಿಕಾರಿ, 2019ರ ಅ. 5 ರಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ವರದಿ ಸಲ್ಲಿಸಿದ್ದರು. ಅಲ್ಲದೆ, ಈ ಪ್ರಕರಣ ಭ್ರಷ್ಟಾಚಾರ ತಡೆ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದು ಮೇಲ್ನೋಟಕ್ಕೆ ದೃಢಪಟ್ಟಿದೆ. ಹೀಗಾಗಿ, ಈ ಐದೂ ವಲಯಗಳ ಎಂಜಿನಿಯರ್‌ಗಳು ಮತ್ತು ಅಧಿಕಾರಿಗಳ ಮೇಲೆ ಪ್ರಕರಣ ದಾಖಲಿಸಿ ಆದೇಶ ಹೊರಡಿಸಿರುವುದು ಸೂಕ್ತವಾಗಿದೆ. ವಿಚಾರಣಾ ವರದಿಯನ್ನು ಎಸಿಬಿಗೆ ಕಳುಹಿಸಿಕೊಡಲು ಮುಖ್ಯಮಂತ್ರಿಯ ಅನುಮೋದನೆ ಪಡೆಯಬಹುದು' ಎಂದು ವರದಿಯ ಕೊನೆಯಲ್ಲಿ ಮುಖ್ಯ ಜಾಗೃತ ಅಧಿಕಾರಿ ಷರಾ ಬರೆದಿದ್ದರು.

ಈ ಪ್ರಕರಣದ ತನಿಖೆಗೆ ಮುಂದಾಗಿರುವ ಇ.ಡಿ, ಕಾಮಗಾರಿಗಳ ವಿವರ ನೀಡುವಂತೆ ಬಿಬಿಎಂಪಿಗೆ ನೋಟಿಸ್ ನೀಡಿದೆ. ಇದನ್ನು ಖಚಿತಪಡಿಸಿರುವ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, 'ನವೆಂಬರ್‌ನಲ್ಲಿ ನಮಗೆ ನೋಟಿಸ್ ಬಂದಿದೆ. ಇ.ಡಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲು ಮತ್ತು ವಿಚಾರಣೆಗೆ ಎಲ್ಲ ವಿವರಗಳನ್ನು ನೀಡಲು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ' ಎಂದಿದ್ದಾರೆ.

ಮೂವರು ಸಹೋದರಿಯರ ಸಾಮೂಹಿಕ ಆತ್ಮಹತ್ಯೆ

ಹುಳಿಯಾರು (ತುಮಕೂರು): ಹೋಬಳಿಯ ಬರಕನಹಾಳ್ ಗೋಪಾಲನಾಯ್ಕನ ತಾಂಡಾದ ಮೂವರು ಅನಾಥ ಸಹೋದರಿಯರು ಮನೆಯಲ್ಲಿ ನೇಣು ಹಾಕಿಕೊಂಡು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ಒಂಬತ್ತು ದಿನಗಳ ನಂತರ ಅಂದರೆ, ಗುರುವಾರ ಸಂಜೆ ಮೃತದೇಹಗಳು ಪತ್ತೆಯಾಗಿವೆ.

ಗೋಪಾಲನಾಯ್ಕ ತಾಂಡಾದ ಜಯನಾಯ್ಕ ಮತ್ತು ಭಾರತಿಬಾಯಿ ಮಕ್ಕಳಾದ ರಂಜಿತಾ (24), ಬಿಂದು (21) ಮತ್ತು ಚಂದನಾ (18) ನೇಣಿಗೆ ಶರಣಾದ ಸಹೋದರಿಯರು.

ಈ ಸಹೋದರಿಯರ ಪೋಷಕರು 15 ವರ್ಷಗಳ ಹಿಂದೆ ಕಾಯಿಲೆಯಿಂದ ಮೃತಪಟ್ಟಿದ್ದರು. ಈಚೆಗೆ ಅಜ್ಜಿಯೂ ಸಾವನ್ನಪ್ಪಿದ್ದರಿಂದ ಯುವತಿಯರು ಖಿನ್ನತೆಗೆ ಜಾರಿದ್ದರು. ಕಳೆದ ಬುಧವಾರ ತುಮಕೂರಿಗೆ ಹೋಗುವುದಾಗಿ ಬೇರೆ ಮನೆಯಲ್ಲಿ ವಾಸವಿದ್ದ ತಾತನಿಗೆ ತಿಳಿಸಿದ್ದರು. ಸಾರ್ವಜನಿಕವಾಗಿ ಸಹೋದರಿಯರು ಕಾಣಿಸಿಕೊಂಡಿದ್ದು ಅದೇ ಕೊನೆ. ಬಹುಶಃ ಅಂದೇ ಮೂವರೂ ಆತ್ಮಹತ್ಯೆಗೆ ಶರಣಾಗಿರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿದೆ. ಕಿಬ್ಬನಹಳ್ಳಿ ಕ್ರಾಸ್‌ನ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಯುವತಿಯರು ಸ್ವಂತ ಮನೆ ನಿರ್ಮಿಸಿಕೊಂಡಿದ್ದರು. ಗುರುವಾರ ಮನೆಯಿಂದ ವಾಸನೆ ಬರಲು ಆರಂಭಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಜೈಪುರ ಸಾಹಿತ್ಯೋತ್ಸವದಲ್ಲಿ ಅಂಬೇಡ್ಕರ್ ಬದುಕು–ಕಾಲದ ಕುರಿತ ಚಿಂತನಾಗೋಷ್ಠಿಯಲ್ಲಿ ಸುಮಿತ್ ಸಾಮೊಸ್

‘ಅಂಬೇಡ್ಕರ್‌ಗಾಗಿ ಆರ್‌ಎಸ್‌ಎಸ್ ಹೆಣಗಾಟ’

• ವಿಶಾಖ ಎನ್.



ಶಶಿ ತರೂರ್, ಸಮಿತ್ ಸಾಮೊಸ್, ಪ್ರಜ್ಞಾ ತಿವಾರಿ

ಜೈಪುರ: ‘ಆರ್‌ಎಸ್‌ಎಸ್‌ನವರು ಇಲ್ಲಸಲ್ಲದ ಸಂಕಥನಗಳ ಮೂಲಕ ಅಂಬೇಡ್ಕರ್ ಅವರನ್ನು ತಮ್ಮವರನ್ನಾಗಿಸಿಕೊಳ್ಳಲು ಹೆಣಗುತ್ತಿದ್ದಾರೆ. ಆ ಸಂಘಟನೆ ಅಪಾಯಕಾರಿ ಎಂದು ಅಂಬೇಡ್ಕರ್ ಬಹಳ ಹಿಂದೆಯೇ ಪ್ರತಿಪಾದಿಸಿದ್ದರು’ ಎಂದು ಒಡಿಶಾದ ಸುಮಿತ್ ಸಾಮೊಸ್ ಹೇಳಿದರು.

ಜೈಪುರ ಸಾಹಿತ್ಯೋತ್ಸವದ ಮೊದಲ ದಿನ ನಡೆದ ‘ಬಿ.ಆರ್. ಅಂಬೇಡ್ಕರ್: ಲೈಫ್ ಅಂಡ್ ಟೈಮ್ಸ್’ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಜಾತಿ ವಿರೋಧಿ ರ‍್ಯಾಪರ್ ಎಂದು ತಮ್ಮನ್ನು ಕರೆದುಕೊಳ್ಳುವ ಸುಮಿತ್, ‘ಅಫೇರ್ಸ್ ಆಫ್ ಕಾಸ್ಟ್: ಎ ಯಂಗ್ ಡೈರಿ’ ಎಂಬ ಕೃತಿಯನ್ನೂ ಬರೆದಿದ್ದಾರೆ. ಕಾಂಗ್ರೆಸ್ ಪಕ್ಷದಿಂದ ಸಚಿವರೂ ಆಗಿದ್ದ ಬರಹಗಾರ ಶಶಿ ತರೂರ್ ಅವರೊಡನೆ ಗೋಷ್ಠಿಯಲ್ಲಿ ಅವರು ಸಂವಾದದಲ್ಲಿ ತೊಡಗಿ, ಅಭಿಪ್ರಾಯ ಹಂಚಿಕೊಂಡರು.

‘ಮುಸ್ಲಿಮರಿಗೆ ಅಂಬೇಡ್ಕರ್ ಬೇರೆ ಬೇರೆ ಸಂದರ್ಭಗಳಲ್ಲಿ ತಿಳಿಹೇಳಿದ್ದ ಪ್ರಸಂಗಗಳಿದ್ದವು. ಆ ಸಂದರ್ಭಗಳನ್ನು ಪ್ರಸ್ತಾಪ ಮಾಡದೆ ಆರ್‌ಎಸ್‌ಎಸ್ ಬರೀ ಅಂಬೇಡ್ಕರ್ ಮಾಡಿದ್ದ ಟೀಕೆಗಳನ್ನು ಉದ್ಧರಿಸಿ ರಾಜಕೀಯಗೊಳಿಸುತ್ತಿದೆ’ ಎಂದರು.

‘ದಲಿತರೂ ಭಕ್ತರಾಗಿ, ಪೂಜೆ- ಪುನಸ್ಕಾರದ ಮೊರೆಹೋಗುತ್ತಿದ್ದಾರೆ ಎಂಬ ಶಶಿ ತರೂರ್ ಅಭಿಪ್ರಾಯಕ್ಕೆ ಸುಮಿತ್ ಖಾರವಾದ ಪ್ರತಿಕ್ರಿಯೆ ನೀಡಿದ್ದು ಹೀಗೆ: ‘ತಮಿಳಿನ ಮೇಲ್ಜಾತಿಯವರು ತಮ್ಮ ಐಟಿ ಕೆಲಸದ ನಡುವೆ ಬಿಡುವು ಮಾಡಿಕೊಂಡು ಬಂದು ಆಚಾರ ಪರಿಪಾಲನೆ ಮಾಡುತ್ತಾರೆ. ಬಂಗಾಳಿಗಳು ಕೆಲಸ ಆದ ಮೇಲೆ ದೈವದ ಮುಂದೆ ನರ್ತಿಸುತ್ತಾರೆ. ದಲಿತರು ವಿದ್ಯೆ ಸಿಗದೆ ವಿಧಿಯೇ ಇಲ್ಲದೆ ದೇವರ ಮೊರೆ ಹೋದರೆ ನಮಗೆ ತಪ್ಪಾಗಿ ಕಾಣುತ್ತದೆ.'

'ಸರ್ಕಾರಿ ವ್ಯವಸ್ಥೆಯಲ್ಲಿ ಇರುವ ಮೇಲ್ಜಾತಿಯ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದಲೇ ದಲಿತರಿಗೆ ಸಿಗಬೇಕಾದ ಹಕ್ಕುಗಳು ಸುಲಭಕ್ಕೆ ದೊರೆಯುತ್ತಿಲ್ಲ ಎಂದು ಉದಾಹರಣೆಗಳ ಸಮೇತ ಸುಮಿತ್ ಹೇಳಿದರು. ಇವತ್ತಿಗೂ ಊರ ಹೊರಗಿನ ಕಾಲೊನಿಗಳಲ್ಲಿ ದಲಿತರು ವಾಸ ಮಾಡುತ್ತಿರುವುದು ಅವರ ತಪ್ಪಲ್ಲ. ಉತ್ತರ ಪ್ರದೇಶದಲ್ಲಿ ದಲಿತ ಹೆಣ್ಣಿನ ಮೇಲೆ ಅತ್ಯಾಚಾರ– ಕೊಲೆ ನಡೆದಾಗಲೂ ಸ್ಥಳೀಯ ವ್ಯವಸ್ಥೆ ವರ್ತಿಸುವ ಬಗೆಯಲ್ಲೂ ಮೇಲ್ಜಾತಿಯವರ ಉದಾಸೀನ ಕಾಣುತ್ತದೆ’ ಎಂದು ಭಾವುಕರಾದರು.

ಮಹಿಳೆಯರಿಗೆ ಸಮಾನ ವೇತನವನ್ನು ಅಂಬೇಡ್ಕರ್ ಪ್ರತಿಪಾದಿಸಿದ್ದು ಹಾಗೂ ಮೇಲ್ಜಾತಿಯವರಂತೆ ಸೀರೆ ಉಡಲು ಹೇಳಿ ಆ ಕಾಲದಲ್ಲೇ ಪ್ರತಿರೋಧದ ಕಿಡಿ ಹಚ್ಚಿದ್ದನ್ನು ಶಶಿ ತರೂರ್ ನೆನಪಿಸಿದರು. ಪ್ರಜ್ಞಾ ತಿವಾರಿ ಗೋಷ್ಠಿ ನಿರ್ವಹಿಸಿದರು.

ಗಟ್ಟಿ ಸೀತೆ, ದಿಟ್ಟೆ ಸರಳಾದೇವಿ

‘ಪ್ರೇಮ ಹರಳುಗಟ್ಟಿದ ಹೆಣ್ಣುತನಗೆ ಏಟು ಬೀಳತ್ತೆ, ಯಾರೂ ಕೊಡೊಲ್ಲ ಎಂದೇ ಭಾವಿಸುತ್ತಾಳೆ. ನನ್ನ ಸೀತೆಯೂ ಹಾಗೆಯೇ. ಅವಳು ಸಾಕಷ್ಟು ತರ್ಕ ಮಾಡುತ್ತಾಳೆ. ನಾನೊಂದು ಬಾಗಿಲು; ಬಡಿದಷ್ಟೂ ತೆರೆದುಕೊಳ್ಳುವೆ ಎನ್ನುವ ನನ್ನ ಉಮೇದೇ ಅವಳದೂ...’ ಹಿಂದಿ ಸಾಹಿತಿ ಅನಾಮಿಕಾ ತಮ್ಮ 'ತೃನ್ ಧರಿ ಓಟ್' ನಲ್ಲಿನ ಸೀತೆಯ ಪಾತ್ರದ ರೂಹು ಹಂಚಿಕೊಂಡದ್ದು ಹೀಗೆ.

ಜೈಪುರ ಸಾಹಿತ್ಯೋತ್ಸವದ 'ಕಥಾಸಂಧಿ' ಎಂಬ ಗೋಷ್ಠಿಯಲ್ಲಿ ಅವರು ಕಾದಂಬರಿಯ ಕೆಲವು ಸಾಲುಗಳನ್ನು ಓದಿದರು. ಸೀತೆಯು ರಾಮನಿಗೆ ಪತ್ರವೊಂದನ್ನು ಬರೆದು, ತನ್ನ ವಿರಹವನ್ನೂ, ಪ್ರೇಮವನ್ನೂ, ಮಕ್ಕಳಿಗೆ ಎಲ್ಲವನ್ನೂ ಹೇಳಿದ ತಾಯ್ತನವನ್ನೂ, ಅಲೆಮಾರಿ ಜನರೊಟ್ಟಿಗೆ ಅನುಭವಿಸುವ ಮಾತೃತ್ವವನ್ನೂ ಅರುಹುವ ಪರಿಯನ್ನು ವಾಚಿಸಿ, ಚಪ್ಪಾಳೆ ಗಿಟ್ಟಿಸಿದರು.

‘ಗಾಂಧಿ ಔರ್ ಸರಳಾದೇವಿ ಚೌಧರಾನಿ-12 ಅಧ್ಯಾಯ್’ ಎಂಬ ತಮ್ಮ ಕೃತಿಯ ಸಾಲುಗಳನ್ನು ಮತ್ತೊಬ್ಬ ಹಿಂದಿ ಕಾದಂಬರಿಗಾರ್ತಿ ಅಲ್ಕಾ ಸರಾವಗಿ ಓದಿದರು. ಮಹಾತ್ಮ ಗಾಂಧಿ ಒಮ್ಮೆ ಸರಳಾದೇವಿಯ ಒಂದು ನಿಷ್ಕಲ್ಮಶ ನಗುವನ್ನು ಕಂಡು, ಅದನ್ನು ಮುಗ್ಧತೆಯಿಂದ ‘ಹಿಂದೂಸ್ತಾನದ ಸಂಪದ’ ಎಂದು ಹೇಳಿದ್ದ ಪ್ರಸಂಗವನ್ನು ನೆನಪಿಸಿದರು. ಸರಳಾದೇವಿ ಹಾಗೂ ಗಾಂಧಿ ನಡುವೆ ಸಶಕ್ತ ಸಂಬಂಧವಿತ್ತು. ರಾಜಗೋಪಾಲಾಚಾರಿ ಅವರಂತಹವರು ಕೂಡ ಅದನ್ನು ತಪ್ಪಾಗಿ ಅರ್ಥೈಸಿದ್ದರು. ಇಂತಹ ಸೂಕ್ಷ್ಮವನ್ನು ತಮ್ಮ ಕೃತಿ ತೆರೆದಿಟ್ಟಿರುವುದಾಗಿ ಅಲ್ಕಾ ಹೇಳಿದರು. ಗಾಂಧಿ ಜತೆಗಿನ ಮಹಿಳಾ ಸಂಬಂಧವನ್ನು ಯಾವುದೋ ಪೂರ್ವನಿರ್ಧರಿತ ಭಾವದಲ್ಲಿ ನೋಡುವುದು ತಪ್ಪಬೇಕು ಎಂದರು. ಪತ್ರಕರ್ತೆ ನಿಷ್ಠಾ ಗೌತಮ್ ಅವರು ಗೋಷ್ಠಿ ನಿರ್ವಹಿಸಿದರು.

ಅಬ್ದುಲ್‌ರಜಾಕ್ ಪ್ರತಿರೋಧದ ಪಾಠ

‘ಬರಹಗಾರನಲ್ಲಿ ಪ್ರತಿರೋಧ ಇರಬೇಕು ಎನ್ನುತ್ತಾರೆ. ಮರೆಗುಳಿತನ, ಹೇಳಬೇಕಾದದ್ದರಿಂದ ದಿಕ್ಕು ತಪ್ಪುವುದು, ಉದಾಸೀನ, ವೇದಿಕೆ ಮೇಲೆ ನಿಂತು ಸುಖಾಸುಮ್ಮನೆ ನಿಂತು ಜೋರು ಭಾಷಣ ಮಾಡುವುದು... ಇವೆಲ್ಲದರ ಕುರಿತು ಬರಹಗಾರನಲ್ಲಿ ಪ್ರತಿರೋಧ ಇರಬೇಕೆನ್ನುವುದು ನನ್ನ ಭಾವನೆ. ಸಣ್ಣ ಸಾಹಿತ್ಯ ಕೃಷಿಯೂ ದೊಡ್ಡದೇನನ್ನೋ ಮಾಡುತ್ತದೆನ್ನುವುದೂ ಪ್ರತಿರೋಧವೇ ಹೌದು’ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಅಬ್ದುಲ್‌ರಜಾಕ್ ಗುರ್ನಾ ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಪ್ರತಿಪಾದಿಸಿದರು.

ಮಾಘ ಮಾಸದಲ್ಲಿ ಗಾಳಿಪಟಗಳ ಬಣ್ಣವರಳುವಂತೆ ಜೈಪುರ ಸಾಹಿತ್ಯೋತ್ಸವದಲ್ಲಿ ವಿಷಯ ವೈವಿಧ್ಯ ಅನಾವರಣಗೊಳ್ಳುತ್ತವೆ ಎಂದು ಸಾಹಿತ್ಯೋತ್ಸವದ ಸಹ ಸಂಸ್ಥಾಪಕಿ ನಮಿತಾ ಗೋಖಲೆ ಉದ್ಘಾಟನಾ ಸಮಾರಂಭದಲ್ಲಿ ಹೇಳಿದರು.

ಜೈಪುರ ಸಾಹಿತ್ಯೋತ್ಸವವನ್ನು ಕಳೆದೆರಡು ವರ್ಷಗಳಲ್ಲಿ ಅನ್‌ಲೈನ್‌ನಲ್ಲಿ ನೋಡುವವರ ಸಂಖ್ಯೆ ಎರಡೂವರೆ ಕೋಟಿ ಅಗಿರುವುದನ್ನು ಸಾಹಿತ್ಯೋತ್ಸವದ ಮತ್ತೊಬ್ಬ ಸಹ ಸಂಸ್ಥಾಪಕ ವಿಲಿಯಂ ಡಾಲ್‌ರಿಂಪಲ್ ಹೆಮ್ಮೆಯಿಂದ ಹೇಳಿದರು. ಅಮೆರಿಕ, ಯುಕೆ, ಚೀನಾ, ಜರ್ಮನಿ ದೇಶದ ವೀಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಆನ್‌ಲೈನ್‌ನಲ್ಲಿ ನೋಡುತ್ತಿರುವುದನ್ನು ಉಲ್ಲೇಖಿಸಿದರು.

ಬಸ್ಸಿಗೆ ಕಾಯುತ್ತಿದ್ದ ನರ್ಸ್ ಮೇಲೆ ಅತ್ಯಾಚಾರ

ವಿಜಯಪುರ: ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಊರಿಗೆ ಹೋಗಲು ತಡ ರಾತ್ರಿ ಬಸ್‌ಗಾಗಿ ಕಾಯುತ್ತಿದ್ದ ನರ್ಸ್ (22) ಮೇಲೆ ಮೂವರು ಅತ್ಯಾಚಾರ ಎಸಗಿದ್ದಾರೆ.

ಇಲ್ಲಿನ ಕೇಂದ್ರ ಬಸ್ ನಿಲ್ದಾಣದಲ್ಲಿ ಜ.17 ರ ರಾತ್ರಿ 1 ಗಂಟೆ ಸಮಯದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ನರ್ಸ್ ಅವರ ಬಳಿಗೆ ಕಪ್ಪು ಬಣ್ಣದ ಬೈಕಿನಲ್ಲಿ ಬಂದ ಮೂವರು ‘ಎಲ್ಲಿಗೆ ಹೋಗಬೇಕು’ ಎಂದು ವಿಚಾರಿಸಿದ್ದಾರೆ.

‘ಇಂಡಿಗೆ ಹೋಗಲು ಬಸ್‌ಗಾಗಿ ಕಾಯುತ್ತಿರುವೆ’ ಎಂದು ನರ್ಸ್ ಹೇಳಿದಾಗ, ‘ಇಂಡಿಗೆ ಹೋಗುವ ಬಸ್ ಇಲ್ಲಿ ಬರುವುದಿಲ್ಲ, ಸೆಟಲೈಟ್ ಬಸ್ ನಿಲ್ದಾಣಕ್ಕೆ ಬರುತ್ತವೆ, ಅಲ್ಲಿಗೆ ಬಿಡುತ್ತೇವೆ ಬಾ ತಂಗಿ’ ಎಂದು ಪುಸಲಾಯಿಸಿ ಬೈಕಿನಲ್ಲೇ ಕರೆದುಕೊಂಡು ಹೋಗಿದ್ದಾರೆ.

ಬಳಿಕ ಸೆಟಲೈಟ್ ಬಸ್ ನಿಲ್ದಾಣದ ಪಕ್ಕದಲ್ಲಿರುವ ತರಕಾರಿ ಮಾರುಕಟ್ಟೆ ಬಳಿ ನಿರ್ಜನ ಪ್ರದೇಶಕ್ಕೆ ನರ್ಸ್ ಅನ್ನು ಕರೆದೊಯ್ದು, ಬಟ್ಟೆ ಬಿಚ್ಚಲು ಹೇಳಿದ್ದಾರೆ. ನರ್ಸ್ ವಿರೋಧ ವ್ಯಕ್ತಪಡಿಸಿದಾಗ ಹಲ್ಲೆ ಮಾಡಿದ್ದಾರೆ. ಅದರಲ್ಲಿ ಒಬ್ಬಾತ ಅತ್ಯಾಚಾರ ಎಸಗಿದ್ದಾನೆ. ಇನ್ನುಳಿದ ಇಬ್ಬರು ಆತನಿಗೆ ಸಹಕರಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಘಟನೆಯಿಂದ ಮೂರ್ಛೆ ಹೋಗಿ ಬಿದ್ದಿದ್ದ ಯುವತಿಯನ್ನು ಬೆಳಿಗ್ಗೆ ಮಾರುಕಟ್ಟೆಗೆ ಬಂದ ವ್ಯಾಪಾರಸ್ಥರು ನೋಡಿ, ಆಸ್ಪತ್ರೆಗೆ ದಾಖಲಿಸಿದ್ದಾರೆ. ಸಂತ್ರಸ್ತ ಯುವತಿ ಇನ್ನೂ ಚೇತರಿಸಿಕೊಂಡಿಲ್ಲ.

ಹೈಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು

ಬೆಂಗಳೂರು: ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಇದೇ 17ರಂದು ನಡೆಸಿರುವ ಸಭೆಯಲ್ಲಿ ಕರ್ನಾಟಕದ ಹೈಕೋರ್ಟ್ ವಕೀಲರುಗಳಾದ ವಿಜಯಕುಮಾರ್ ಎ.ಪಾಟೀಲ, ರಾಜೇಶ್ ರೈ ಕಲ್ಲಂಗಳ ಮತ್ತು ತಸಲ್ಲಿ ಮೌಲಾಸಾಬ್ ನದಾಫ್ ಅವರನ್ನು ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲು ಶಿಫಾರಸು ಮಾಡಿದೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_TATA HITACHI HYDRAULIC EXCAVATOR
YOM – 2019
Sl No – NRSP1314304
Min Reserve Price – 1678000

2) CB_HYDRAULIC EXCAVATOR EX-200
YOM – 2019
Sl No – 91C84866827
Min Reserve Price –2158000

3) CB_SANY MAKE EXCAVATOR MODEL SY 80C_9
YOM – 2019
Sl No – 19SEY008080891
Min Reserve Price –1239000

4) ASHOK LEYLAND LIMITED - CB_Ashok Leyland Dost GOODS
YOM – 2021
Reg No – KA07B3380

5) SML SMLS7
YOM – 2019
Reg No – KA51AD7430
Min Reserve Price –689000

6) Mah CB_BOLERO PICK UP -Refrigerated
YOM – 2022
Reg No – KA07B4264

UNDER HYPOTHECATION WITH M/S KOTAK MAHINDRA BANK IS UNDER SALE IN ITS “AS IS WHERE IS CONDITION”

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 20.01.2023

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Pradeep. S
Kotak Mahindra Bank Ltd.
Contact / 080 - 61564249

‘ಜಗತ್ತನ್ನೇ ಬದಲಿಸಲಿದೆ ನ್ಯಾನೋ ತಂತ್ರಜ್ಞಾನ’

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ: ‘ಹೊಸದನ್ನು ಅಳವಡಿಸಿಕೊಳ್ಳದಿದ್ದರೆ ಭಾರತ ವಿಶ್ವ ಗುರು ಆಗಲು ಸಾಧ್ಯವಿಲ್ಲ. ನ್ಯಾನೋ ತಂತ್ರಜ್ಞಾನ ಇಡೀ ಜಗತ್ತನ್ನೇ ಬದಲಾಯಿಸಲಿದೆ. ಮಕ್ಕಳು ವಿಜ್ಞಾನಕ್ಕೆ ಹೆಚ್ಚಿನ ಮಹತ್ವ ಕೊಡಬೇಕು, ಸಂಶೋಧನೆಗೆ ಮುಂದಾಗಬೇಕು’ ಎಂದು ರಾಜ್ಯ ಉನ್ನತ ಶಿಕ್ಷಣ ಸಂಸ್ಥೆ ನಿರ್ದೇಶಕ ಪ್ರೊ.ಎಸ್.ಎಂ.ಶಿವಪ್ರಸಾದ ಹೇಳಿದರು.

ಪಟ್ಟಣದ ಸ್ಕೂಲ್ ಚಂದನ ಹಾಗೂ ಪ್ರೊ.ಸಿ.ಎನ್.ಆರ್.ರಾವ್ ಎಜುಕೇಷನ್ ಫೌಂಡೇಷನ್ ವತಿಯಿಂದ ಆಯೋಜಿಸಿರುವ ಮೂರು ದಿನಗಳ ‘ವಿಜ್ಞಾನ ವಿಸ್ತೃತ’ ಕಾರ್ಯಕ್ರಮ ಗುರುವಾರ ಆರಂಭಗೊಂಡಿದ್ದು, ಪ್ರೊ. ಸಿ.ಎನ್.ಆರ್.ರಾವ್ ಮತ್ತು ಇಂದುಮತಿ ರಾವ್ ಅವರು ಬೆಂಗಳೂರಿನಿಂದ ವರ್ಚುವಲ್ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಸ್ಕೂಲ್ ಚಂದನದ ಸ್ಥಾಪಕ ಅಧ್ಯಕ್ಷ ಟಿ.ಈಶ್ವರ ಮಾತನಾಡಿ, ‘ಹಳ್ಳಿಗಳಲ್ಲಿ ವಿಜ್ಞಾನಿಗಳು ರೂಪುಗೊಳ್ಳಬೇಕು ಎಂಬ ಕಾರಣಕ್ಕಾಗಿ ಪ್ರೊ.ರಾವ್ ಅವರು ನಮ್ಮ ಶಾಲೆಯಲ್ಲಿ ವಿಜ್ಞಾನ ಕೇಂದ್ರ ಆರಂಭಿಸಿದ್ದಾರೆ. ಮಕ್ಕಳು ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡುವ ಭರವಸೆ ಇದೆ’ ಎಂದು ಹೇಳಿದರು.

ಕಾರ್ಯಕ್ರಮ ವೀಕ್ಷಣೆಗೆ ಗದಗ, ಹಾವೇರಿ, ಧಾರವಾಡ, ಕೊಪ್ಪಳ ಸೇರಿದಂತೆ ವಿವಿಧ ಜಿಲ್ಲೆಗಳ ಶಾಲೆಗಳ ಮಕ್ಕಳು ಬಂದಿದ್ದರು. ಹೊರ ಜಿಲ್ಲೆಗಳಿಂದ ಬಂದಿರುವ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರಿಗೆ ಊಟ, ವಸತಿ ವ್ಯವಸ್ಥೆ ಮಾಡಲಾಗಿದೆ.

> **ಲಕ್ಷ್ಮೇಶ್ವರದಂತಹ ಗ್ರಾಮೀಣ ಭಾಗದಲ್ಲಿ ವಿಜ್ಞಾನ ಬೆಳೆಸುವ ಉದ್ದೇಶದಿಂದ ಸ್ಕೂಲ್ ಚಂದನದಲ್ಲಿ ವಿಜ್ಞಾನ ಕೇಂದ್ರ ಆರಂಭಿಸಿದ್ದು, ಮಕ್ಕಳು ಇದರ ಸದುಪಯೋಗ ಪಡೆಯಬೇಕು.**
> **ಪ್ರೊ. ಸಿ.ಎನ್.ಆರ್.ರಾವ್,** ವಿಜ್ಞಾನಿ

ಶೇ 10.5ರಷ್ಟು ಮಕ್ಕಳಿಗೆ ಓದಲು ಬರಲ್ಲ!

ಬೆಂಗಳೂರು: ಕರ್ನಾಟಕದಲ್ಲಿ ಮೂರನೇ ತರಗತಿಯಲ್ಲಿರುವ ಶೇ 10.5ರಷ್ಟು ಮಕ್ಕಳಿಗೆ ಒಂದಕ್ಷರವೂ ಓದಲು ಬರುವುದಿಲ್ಲ. ಶೇ 26.9ರಷ್ಟು ಅಕ್ಷರಗಳನ್ನು ಗುರುತಿಸಿ ಓದುತ್ತಾರೆ. ಆದರೆ, ಶಬ್ದಗಳನ್ನು ಓದಲು ಬರುವುದಿಲ್ಲ ಎನ್ನುವುದನ್ನು ರಾಷ್ಟ್ರೀಯ ಮಟ್ಟದಲ್ಲಿ ನಡೆದ ಶಿಕ್ಷಣ ಸ್ಥಿತಿಗತಿ ವಾರ್ಷಿಕ ವರದಿ (ಎಎಸ್‌ಇಆರ್) ತಿಳಿಸಿದೆ.

‘ಪ್ರಥಮ ಪ್ರತಿಷ್ಠಾನ’ ಸಹಯೋಗದಲ್ಲಿ ಸಮೀಕ್ಷೆ ಕೈಗೊಂಡು ಈ ವರದಿ ಸಿದ್ಧಪಡಿಸಲಾಗಿದೆ. ಸಮೀಕ್ಷಾ ತಂಡವು ಕರ್ನಾಟಕದಲ್ಲಿ 812 ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಶೈಕ್ಷಣಿಕ ಗುಣಮಟ್ಟದ ವರದಿಯನ್ನು ನೀಡಿದೆ.

ಮೂರನೇ ತರಗತಿಯ ಶೇ 37.3ರಷ್ಟು ಮಕ್ಕಳು ಶಬ್ದಗಳನ್ನು ಓದುತ್ತಾರೆ. ಆದರೆ, ಒಂದನೇ ತರಗತಿಯ ಪಠ್ಯ ಅಥವಾ ಅದಕ್ಕಿಂತ ಹೆಚ್ಚಿನ ತರಗತಿಯ ಪಠ್ಯದಲ್ಲಿನ ಶಬ್ದಗಳನ್ನು ಓದಲು ಬರುವುದಿಲ್ಲ ಎನ್ನುವುದನ್ನು ವರದಿಯಲ್ಲಿ ವಿವರಿಸಲಾಗಿದೆ.

8ನೇ ತರಗತಿಯ ಶೇ 1.7ರಷ್ಟು ಮಕ್ಕಳಿಗೆ ಒಂದಕ್ಷರವನ್ನೂ ಓದಲು ಬರುವುದಿಲ್ಲ. ಇದೇ ತರಗತಿಯ ಶೇ 4.1ರಷ್ಟು ಮಕ್ಕಳು ಮಾತ್ರ ಒಂದೊಂದು ಅಕ್ಷರವನ್ನು ಗುರುತಿಸುತ್ತಾರೆ. ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗಿಂತ ಖಾಸಗಿ ಶಾಲೆಯ ಹೆಚ್ಚಿನ ಮಕ್ಕಳೇ ಟ್ಯೂಷನ್ ಮೊರೆ ಹೋಗುತ್ತಿದ್ದಾರೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿರುವ ಕನಿಷ್ಠ ಶೇ 7.8ರಷ್ಟು ಹಾಗೂ ಖಾಸಗಿ ಶಾಲೆಗಳ ಶೇ 13.6ರಷ್ಟು ಮಕ್ಕಳು ಟ್ಯೂಷನ್ ಪಡೆಯುತ್ತಿದ್ದಾರೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಒಂದರಿಂದ ಎಂಟನೇ ತರಗತಿ ವಿದ್ಯಾರ್ಥಿಗಳ ಸಮೀಕ್ಷೆಯಲ್ಲಿ ಈ ವಿಷಯ ಗೊತ್ತಾಗಿದೆ. ನಾಲ್ಕನೇ ತರಗತಿಯ ಶೇ 9.2ರಷ್ಟು ಮಕ್ಕಳು ಮತ್ತು ಮೂರನೇ ತರಗತಿಯ ಶೇ 16ರಷ್ಟು ಮಕ್ಕಳು ಟ್ಯೂಷನ್ ಪಡೆಯುತ್ತಿದ್ದಾರೆ.

ಕಲಿಕೆಯಲ್ಲಿ ಹಿನ್ನಡೆಯಾಗಿದ್ದರಿಂದ ಕೋವಿಡ್ ಬಳಿಕ ಖಾಸಗಿಯಾಗಿ ಟ್ಯೂಷನ್ ಪಡೆಯುವುದು ಹೆಚ್ಚಾಗಿದೆ. ಆದರೆ, ರಾಷ್ಟ್ರೀಯ ಮಟ್ಟದಲ್ಲಿ ವಿಶ್ಲೇಷಿಸಿದಾಗ ಕರ್ನಾಟಕದಲ್ಲಿ ಹಣ ಪಾವತಿಸಿ ಟ್ಯೂಷನ್ ಪಡೆಯುವುದು ಕಡಿಮೆಯಾಗಿದೆ.

‘ತೇಜಸ್ವಿ ಸೂರ್ಯ ವಿಮಾನದ ಬಾಗಿಲು ಎಳೆದಿಲ್ಲ’

ಚಿಕ್ಕಮಗಳೂರು: ‘ಸಂಸದ ತೇಜಸ್ವಿ ಸೂರ್ಯ ವಿಮಾನದ ತುರ್ತು ನಿರ್ಗಮನದ ದ್ವಾರ ತೆರೆದರು ಎಂಬುದರಲ್ಲಿ ಹುರುಳಿಲ್ಲ. ಕಾಂಗ್ರೆಸ್‌ನವರು ವೃಥಾ ಆರೋಪ ಮಾಡುತ್ತಿದ್ದಾರೆ’ ಎಂದು ಬಿಜೆಪಿಯ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಹೇಳಿದರು.

‘ಎಟಿಆರ್–72 ಸಣ್ಣ ವಿಮಾನದಲ್ಲಿ ತುರ್ತು ನಿರ್ಗಮನ ದ್ವಾರದ ಬದಿಯ ಸೀಟಿನಲ್ಲಿ ತೇಜಸ್ವಿ ಸೂರ್ಯ ಕುಳಿತಿದ್ದರು. ಅವರು ಮಾತನಾಡುವಾಗ ಕೈ ಬಾಗಿಲಿಗೆ ತಗುಲಿತು. ತಕ್ಷಣವೇ ಗಗನಸಖಿಗೆ ವಿಷಯ ತಿಳಿಸಲಾಯಿತು. ಪೈಲಟ್ ಬಂದು ಪರಿಶೀಲಿಸಿದರು. ಅವರು ಇದೆಲ್ಲವನ್ನು ಇನ್ಸಿಡೆಂಟ್ ರಿಪೋರ್ಟ್ ಫಾರ್ಮ್‌ನಲ್ಲಿ (ಘಟನಾ ವಿವರ) ಉಲ್ಲೇಖಿಸಿದ್ದಾರೆ. ನಾನು ಅವರ ಜೊತೆಗೇ ಇದ್ದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಸಮಾಜವಾದಿ ಪ.ಮಲ್ಲೇಶ್ ನಿಧನ

ಪ್ರಜಾವಾಣಿ ವಾರ್ತೆ

ಮೈಸೂರು: ಸಮಾಜವಾದಿ ಹೋರಾಟಗಾರ ಪ.ಮಲ್ಲೇಶ್ (89) ಅವರು ನಗರದಲ್ಲಿ ಗುರುವಾರ ನಿಧನರಾದರು.

ಮಧ್ಯಾಹ್ನದವರೆಗೂ ಲವಲವಿಕೆಯಿಂದ ಇದ್ದ ಅವರಿಗೆ ಏಕಾಏಕಿ ಸುಸ್ತು ಕಾಣಿಸಿಕೊಂಡಿತು. ಉಸಿರಾಟದ ಸಮಸ್ಯೆಯೂ ಉಂಟಾಯಿತು. ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಬ್ಬ ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ.

70ರ ದಶಕದಲ್ಲಿ ಬರಹಗಾರರ ಒಕ್ಕೂಟದ ಸಂಸ್ಥಾಪಕ ಕಾರ್ಯದರ್ಶಿ, ಕರ್ನಾಟಕ ವಿಚಾರವಾದಿ ಒಕ್ಕೂಟದ ಸ್ಥಾಪಕ ಅಧ್ಯಕ್ಷರಾಗಿದ್ದರು. ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್‌ಗೆ ಎರಡು ಬಾರಿ ಅಧ್ಯಕ್ಷ, ಒಮ್ಮೆ ಕಾರ್ಯದರ್ಶಿಯಾಗಿದ್ದರು.

ಜಯಪ್ರಕಾಶ್ ನಾರಾಯಣರ ಸಂಪೂರ್ಣ ಕ್ರಾಂತಿ ಆಂದೋಲನವನ್ನು ಕರ್ನಾಟಕದಲ್ಲಿ ಸ್ನೇಹಿತರೊಂದಿಗೆ ರೂಪಿಸಿದ್ದರು. ಪ್ರೊ. ಕೆ.ರಾಮದಾಸ್ ಜೊತೆಗೂಡಿ ಜಯಪ್ರಕಾಶ್ ನಾರಾಯಣರನ್ನು ಕರ್ನಾಟಕಕ್ಕೆ ಕರೆ ತಂದಿದ್ದರು. ಗೋಕಾಕ್ ಮತ್ತು ಕಾವೇರಿ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದರು. ಕೋಮುವಾದದ ವಿರುದ್ಧ ‘ದ್ವೇಷ ಬಿಟ್ಟು-ದೇಶ ಕಟ್ಟು’ ಚಳವಳಿಯನ್ನು ರೂಪಿಸಿದ್ದರು.

ಗೋಕಾಕ್ ಚಳವಳಿಯ ಸಂದರ್ಭದಲ್ಲಿ ರಚನೆಯಾದ ಮೈಸೂರಿನ ‘ಕನ್ನಡ ಕ್ರಿಯಾ ಸಮಿತಿ’ ಅಧ್ಯಕ್ಷರಾಗಿ, ಸಂಪೂರ್ಣ ಕನ್ನಡ ಮಾಧ್ಯಮದ ನೃಪತುಂಗ ಕನ್ನಡ ಶಾಲೆ ಪ್ರಾರಂಭಿಸಿದ್ದರು.

1989ರ ಲೋಕಸಭೆ ಚುನಾವಣೆಯಲ್ಲಿ ಜನತಾ ದಳದಿಂದ ಸ್ಪರ್ಧಿಸಿದ್ದರು. ‘ಗಾಂಧೀಪ್ರಣೀತ ಧರ್ಮದರ್ಶಿತ್ವ’ ಕೃತಿ ಪ್ರಕಟಿಸಿದ್ದ ಅವರ ಇನ್ನೊಂದು ಕೃತಿ ‘ಬುದ್ಧ; ನಾಗಾರ್ಜುನರ ಶೂನ್ಯಯಾನ’ ಕೃತಿ ಪ್ರಕಟಣೆಗೆ ಸಿದ್ಧತೆ ನಡೆದಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ಕರುಣೆಗಿಂತ ಮಿಗಿಲಾದ ಗುಣವಿಲ್ಲ, ಹೇಡಿತನಕ್ಕೆ ಮಿಗಿಲಾದ ರೋಗವಿಲ್ಲ.

–ಚಾಣಕ್ಯ

ರಾಜಕೀಯ ಬಿಸಿ ಏರಿಸಲಿರುವ ಈಶಾನ್ಯ ರಾಜ್ಯಗಳ ಚುನಾವಣೆ

ಈಶಾನ್ಯ ರಾಜ್ಯಗಳಾದ ತ್ರಿಪುರಾ, ಮೇಘಾಲಯ ಮತ್ತು ನಾಗಾಲ್ಯಾಂಡ್ ವಿಧಾನಸಭೆಗಳ ಚುನಾವಣಾ ದಿನಾಂಕಗಳನ್ನು ಚುನಾವಣಾ ಆಯೋಗವು ಘೋಷಿಸಿದೆ. ಈ ಮೂಲಕ ಸುದೀರ್ಘ ಚುನಾವಣಾ ಹಂಗಾಮು ದೇಶದಲ್ಲಿ ಶುರುವಾಗಿದೆ. ತ್ರಿಪುರಾದಲ್ಲಿ ಫೆಬ್ರುವರಿ 16, ಮೇಘಾಲಯ ಮತ್ತು ನಾಗಾಲ್ಯಾಂಡ್‌ನಲ್ಲಿ ಫೆಬ್ರುವರಿ 27ರಂದು ಮತದಾನ ನಡೆಯಲಿದೆ. ಈ ವರ್ಷ ಒಂಬತ್ತು ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದ್ದು, ಈ ಮೂರು ರಾಜ್ಯಗಳ ಮೂಲಕ ಪ್ರಕ್ರಿಯೆ ಆರಂಭವಾಗಿದೆ. ಈ ವರ್ಷ ನಡೆಯುವ ಚುನಾವಣೆಗಳು ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಗೆ ವೇದಿಕೆ ಸಿದ್ಧಪಡಿಸಲಿವೆ. ದೆಹಲಿಯಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ನಡೆಸಿದ ಬಿಜೆಪಿ, ಈ ಎಲ್ಲ ರಾಜ್ಯಗಳಲ್ಲಿ ಗೆಲ್ಲುವುದಾಗಿ ಘೋಷಿಸಿದೆ. ಬಿಜೆಪಿ ಸದಾ ತನ್ನ ಗುರಿಯನ್ನು ದೊಡ್ಡದಾಗಿಯೇ ಇರಿಸಿಕೊಳ್ಳುತ್ತದೆ; ಅದನ್ನು ಸಾಧಿಸುವುದಕ್ಕಾಗಿ ತನ್ನಲ್ಲಿರುವ ಎಲ್ಲ ಸಂಪನ್ಮೂಲಗಳನ್ನೂ ಗರಿಷ್ಠ ಮಟ್ಟದಲ್ಲಿ ಬಳಸಿಕೊಳ್ಳುತ್ತದೆ. ಮೊದಲಿಗೆ ಚುನಾವಣೆ ನಡೆಯಲಿರುವ ಮೂರು ಸಣ್ಣ ರಾಜ್ಯಗಳು ಭಾರತದ ರಾಜಕಾರಣದ ಕೇಂದ್ರ ಸ್ಥಾನದಲ್ಲಿಯೇನೂ ಇಲ್ಲ. ಹಾಗಿದ್ದರೂ ಬಿಜೆಪಿ ಈ ರಾಜ್ಯಗಳ ಚುನಾವಣೆಗಳನ್ನೂ ಲಘುವಾಗಿ ಪರಿಗಣಿಸುವುದಿಲ್ಲ. ಈಶಾನ್ಯ ಭಾರತದಲ್ಲಿ ಪಕ್ಷದ ಪ್ರಾಬಲ್ಯ ಇದೆ ಮತ್ತು ಅದನ್ನು ಹಾಗೆಯೇ ಉಳಿಸಿಕೊಂಡು ಹೋಗಲು ಬಿಜೆಪಿ ಬಯಸಿದೆ. ಬಿಜೆಪಿಗೆ ಇಲ್ಲಿ ಹಿನ್ನಡೆಯಾದರೆ ಅದು ದೊಡ್ಡ ಹೊಡೆತವಾಗಿಯೇ ಪರಿಣಮಿಸಬಹುದು. ಹಾಗಾಗಿ, ಬಿಜೆಪಿ ಪ್ರಾಬಲ್ಯ ಕುಗ್ಗಿಸಲು ವಿರೋಧ ಪಕ್ಷಗಳು ಎಲ್ಲ ಪ್ರಯತ್ನಗಳನ್ನೂ ನಡೆಸಬಹುದು.

ಈ ವರ್ಷ ನಡೆಯುವ ಚುನಾವಣೆಗಳು 2024ರ ಲೋಕಸಭಾ ಚುನಾವಣೆಗೆ ವೇದಿಕೆ ಸಿದ್ಧಪಡಿಸಲಿವೆ

ತ್ರಿಪುರಾದಲ್ಲಿ ಬಿಜೆಪಿಗೆ ಗಂಭೀರವಾದ ಸವಾಲೇ ಇದೆ. ಚುನಾವಣೆ ನಡೆಯಲಿರುವ ಮೂರು ರಾಜ್ಯಗಳಲ್ಲಿ ರಾಜಕೀಯವಾಗಿ ತ್ರಿಪುರಾ ಹೆಚ್ಚು ಮಹತ್ವದ್ದಾಗಿದೆ. ತ್ರಿಪುರಾದಲ್ಲಿ ಬಿಜೆಪಿಯು ಮುಖ್ಯವಾಗಿ ಪಕ್ಷಾಂತರಿಗಳಿಂದಲೇ ರೂಪುಗೊಂಡಿದೆ ಮತ್ತು ಆ ಕಾರಣಕ್ಕಾಗಿಯೇ ಹಲವು ಆಂತರಿಕ ಸಮಸ್ಯೆಗಳು ಇವೆ. ಮುಖ್ಯಮಂತ್ರಿಯಾಗಿದ್ದ ವಿಪ್ಲವ್ ದೇವ್ ಅವರನ್ನು ಕಳೆದ ವರ್ಷ ಬದಲಾಯಿಸಬೇಕಾಗಿ ಬಂದಿತ್ತು. ಮಿತ್ರ ಪಕ್ಷ ಐಪಿಎಫ್‌ಟಿ ಜೊತೆಗಿನ ಸಂಬಂಧ ಅಷ್ಟೇನೂ ಚೆನ್ನಾಗಿಲ್ಲ. ಸಿಪಿಎಂ ಮತ್ತು ಕಾಂಗ್ರೆಸ್ ನಡುವೆ ಮೈತ್ರಿ ಏರ್ಪಡಬಹುದು. ಇತ್ತೀಚಿನ ತಿಂಗಳುಗಳಲ್ಲಿ ನೆಲೆ ಕಂಡುಕೊಂಡಿರುವ ಟಿಪ್ರ ಮೊಥಾ ಪಕ್ಷವನ್ನೂ ಜೊತೆಗೆ ಸೇರಿಸಿಕೊಳ್ಳುವ ಸಾಧ್ಯತೆ ಇದೆ. ರಾಜ್ಯದಲ್ಲಿ ತೃಣಮೂಲ ಕಾಂಗ್ರೆಸ್ ಕೂಡ ಸಕ್ರಿಯವಾಗಿದೆ. ಆದರೆ, ಈ ಪಕ್ಷವು ಬಿಜೆಪಿಯೇತರ ಪಕ್ಷಗಳ ಮೈತ್ರಿಕೂಟವನ್ನು ಸೇರಿಕೊಳ್ಳಲಿಕ್ಕಿಲ್ಲ. ಹಾಗಾಗಿ, ಬಿಜೆಪಿ ವಿರೋಧಿ ಮತಗಳ ವಿಭಜನೆಗೆ ಕಾರಣವಾಗಬಹುದು. ಚುನಾವಣಾಪೂರ್ವದಲ್ಲಿ ಯಾವುದೇ ಹಿಂಸೆ ನಡೆಯದಂತೆ ನೋಡಿಕೊಳ್ಳುವ ಬಹುದೊಡ್ಡ ಹೊಣೆಗಾರಿಕೆ ಚುನಾವಣಾ ಆಯೋಗದ ಮೇಲೆ ಇದೆ.

ಮೇಘಾಲಯದಲ್ಲಿ ಬಿಜೆಪಿ ಮತ್ತು ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ನೇತೃತ್ವದ ಎನ್‌ಪಿಪಿ ನಡುವೆ ಮೈತ್ರಿ ಇದೆ. ಆದರೆ, ಈ ಎರಡೂ ಪಕ್ಷಗಳ ನಡುವಣ ಸಂಬಂಧ ಚೆನ್ನಾಗಿಲ್ಲ. ಹಾಗಾಗಿ, ಸಂಗ್ಮಾ ಅವರು ಮೈತ್ರಿಯನ್ನು ತೊರೆದು ಏಕಾಂಗಿಯಾಗಿ ಸ್ಪರ್ಧಿಸುವ ಸಾಧ್ಯತೆಯೇ ಹೆಚ್ಚು. ಏಕರೂಪ ನಾಗರಿಕ ಸಂಹಿತೆಯಂತಹ ಬಿಜೆಪಿಯ ಕೆಲವು ನೀತಿಗಳನ್ನು ಒಪ್ಪುವುದಿಲ್ಲ ಎಂದು ಸಂಗ್ಮಾ ಅವರು ಬಹಿರಂಗವಾಗಿಯೇ ಹೇಳಿದ್ದಾರೆ. ಕ್ರೈಸ್ತರೇ ಹೆಚ್ಚಾಗಿರುವ ಈ ರಾಜ್ಯದಲ್ಲಿ ಇದೊಂದು ಚುನಾವಣಾ ತಂತ್ರವಾಗಿ ಕಾಣಬಹುದು. ಮೇಘಾಲಯದ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚಿನ ಲಾಭವೇನೂ ಆಗದು. ಬಿಜೆಪಿ ಆಳ್ವಿಕೆ ಇರುವ ಅಸ್ಸಾಂ ಜೊತೆಗಿನ ಗಡಿ ವಿವಾದವು ಚುನಾವಣೆಯ ಮುಖ್ಯ ವಿಷಯಗಳಲ್ಲಿ ಒಂದಾಗಬಹುದು. ನಾಗಾಲ್ಯಾಂಡ್‌ನಲ್ಲಿಯೂ ಸ್ಥಳೀಯ ಪಕ್ಷಗಳ ಜೊತೆಗೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಈ ಮೈತ್ರಿಕೂಟವು ಅಧಿಕಾರದಲ್ಲಿಯೂ ಇದೆ. ಆದರೆ, ಈ ಪಕ್ಷಗಳ ಜೊತೆಗೂ ಬಿಜೆಪಿಯ ಸಂಬಂಧ ಅಷ್ಟಕ್ಕಷ್ಟೇ ಆಗಿದೆ. ನಾಗಾ ಬಂಡುಕೋರ ಗುಂಪುಗಳ ಜೊತೆಗೆ ನಡೆದ ಶಾಂತಿ ಮಾತುಕತೆಯು ಫಲಪ್ರದ ಆಗಿಲ್ಲ. ಪೂರ್ವ ಭಾಗದ ಅತಿ ಹಿಂದುಳಿದ ಆರು ಜಿಲ್ಲೆಗಳನ್ನು ಸೇರಿಸಿ 'ಫ್ರಾಂಟಿಯರ್ ನಾಗಾಲ್ಯಾಂಡ್' ಎಂಬ ಹೆಸರಿನಲ್ಲಿ ಪ್ರತ್ಯೇಕ ರಾಜ್ಯವಾಗಿಸಬೇಕು ಎಂಬ ಬೇಡಿಕೆ ಇದೆ. ಮೂರು ರಾಜ್ಯಗಳ ಚುನಾವಣೆಗಳು ದೇಶದಲ್ಲಿ ಚುನಾವಣಾ ಬಿಸಿ ಏರುವಂತೆ ಮಾಡಲಿವೆ.

ದಿನದ ಟ್ವೀಟ್

ಒತ್ತಡ ತಗ್ಗಿಸಿ

ಎದೆಯೊಡೆಯುವಂತೆ ಆಗಿದೆ! ಇಬ್ಬರು ಎಂಬಿಬಿಎಸ್ ವಿದ್ಯಾರ್ಥಿಗಳು ಇಂದು ಆತ್ಮಹತ್ಯೆ ಮಾಡಿಕೊಂಡ ಸುದ್ದಿ ತಿಳಿಯಿತು. ಒಬ್ಬ ಮೊದಲ ವರ್ಷದ ವಿದ್ಯಾರ್ಥಿ ಮತ್ತು ಇನ್ನೊಬ್ಬ ಎರಡನೇ ವರ್ಷದ ವಿದ್ಯಾರ್ಥಿ. ಎಂಬಿಬಿಎಸ್ ಶಿಕ್ಷಣವು ಒತ್ತಡದಿಂದ ಕೂಡಿರುವಂತಹುದು ಎಂಬುದರಲ್ಲಿ ಅನುಮಾನವೇ ಇಲ್ಲ! ಆದಾಗ್ಯೂ, ಈ ಸ್ಥಿತಿ ಮುಂದುವರಿಯಲು ಬಿಡಬಾರದು. ಭಾರತೀಯ ವೈದ್ಯಕೀಯ ಸಂಘ (ಐಎಂಎ) ಮತ್ತು ಅಖಿಲ ಭಾರತ ವೈದ್ಯಕೀಯ ಸಂಘಗಳ ಒಕ್ಕೂಟ (ಎಫ್‌ಎಐಎಂಎ) ಈ ಬಗ್ಗೆ ಗಮನಹರಿಸಬೇಕು ಎಂದು ಮನವಿ ಮಾಡುತ್ತೇನೆ.

ಡಾ. ದತ್ತ, ವೈದ್ಯ, ಎಐಐಎಂಎಸ್, ದೆಹಲಿ

ಕಿಡಿನುಡಿ



ಮಾನ್ಯ ಬಿ.ಎಸ್.ಬೊಮ್ಮಾಯಿ ಅವರೇ, ಸ್ವಿಟ್ಜರ್ಲೆಂಡ್‌ನಲ್ಲಿ ತಾಪಮಾನ ಮೈನಸ್13 ಡಿಗ್ರಿ ಸೆಲ್ಸಿಯಸ್ ಆಗಿ ಹಿಮಪಾತ ಆಗುತ್ತದೆ. ಎಷ್ಟು ದುಡ್ಡು ಕೊಟ್ಟರೂ ಕೊಡಗು, ಚಿಕ್ಕಮಗಳೂರಲ್ಲಿ ಹಿಮಪಾತ ಮಾಡಲು ಸಾಧ್ಯವೇ? ಸದ್ಯಕ್ಕೆ ಅಲ್ಲಿನ ಜನರು ಪ್ರವಾಸೋದ್ಯಮದಿಂದ ರೋಸಿ ಹೋಗಿದ್ದಾರೆ, ಆನೆಗಳಿಂದ ತತ್ತರಿಸುತ್ತಿದ್ದಾರೆ. ಆ ಕಡೆ ಗಮನಕೊಟ್ಟರೆ ಸಾಕೇನೋ?

(ಚಿಕ್ಕಮಗಳೂರು, ಕೊಡಗನ್ನು ಸ್ವಿಟ್ಜರ್ಲೆಂಡ್ ರೀತಿ ಬೆಳೆಸಿ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಕರೆ ಕೊಟ್ಟಿರುವುದಕ್ಕೆ ಪ್ರತಿಕ್ರಿಯೆ)

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

25 ವರ್ಷಗಳ ಹಿಂದೆ

ಮಂಗಳವಾರ, 20-1-1998

● ಸಮಾನ ಪ್ರಣಾಳಿಕೆಯಲ್ಲಿ ಸ್ಪರ್ಧೆಗೆ ರಂಗ ನಿರ್ಧಾರ

ಹೈದರಾಬಾದ್, ಜ. 19– ಒಂದೇ ಪ್ರಣಾಳಿಕೆಯನ್ನು ಮುಂದಿಟ್ಟುಕೊಂಡು ಲೋಕಸಭಾ ಚುನಾವಣೆಯನ್ನು ಎದುರಿಸಲು 13 ಘಟಕ ಪಕ್ಷಗಳ ಸಂಯುಕ್ತ ರಂಗ ಇಂದು ನಿರ್ಧರಿಸಿದೆ.

ಇಂದು ಇಲ್ಲಿ ನಡೆದ ರಂಗದ ನಿರ್ಣಾಯಕ ಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಚುನಾವಣಾ ಪ್ರಣಾಳಿಕೆಯನ್ನು ಜ. 30ರಂದು ದೆಹಲಿಯಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಸಭೆಯ ನಂತರ ರಂಗದ ವಕ್ತಾರ ಎಸ್. ಜೈಪಾಲ್ ರೆಡ್ಡಿ ಅವರು ಪತ್ರಕರ್ತರಿಗೆ ತಿಳಿಸಿದರು.

ಪ್ರಣಾಳಿಕೆಯಲ್ಲಿ ಬೊಫೋರ್ಸ್ ವಿಷಯವೂ ಸೇರಿದಂತೆ ಭ್ರಷ್ಟಾಚಾರ ನಿರ್ಮೂಲನೆಗೆ ಹೆಚ್ಚಿನ ಆದ್ಯತೆ ನೀಡುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.

● ಬಿಎಸ್‌ಪಿ ಜತೆ ಮೈತ್ರಿಗೆ ಬಂಗಾರಪ್ಪ ನಿರ್ಧಾರ

ಬೆಂಗಳೂರು, ಜ. 19– ಜನತಾದಳದೊಂದಿಗೆ ಚುನಾವಣಾ ಮೈತ್ರಿ ವಿಫಲವಾಗಿರುವ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ನೇತೃತ್ವದ ಕರ್ನಾಟಕ ವಿಕಾಸ ಪಕ್ಷವು ಕಾನ್ಶಿರಾಂ ನೇತೃತ್ವದ ಬಹುಜನ ಸಮಾಜ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡು ರಾಜ್ಯದಲ್ಲಿ ಲೋಕಸಭಾ ಚುನಾವಣೆ ಎದುರಿಸಲು ಸಿದ್ಧವಾಗಿದೆ.

ಹೊಂದಾಣಿಕೆ ಸಂಬಂಧ ರಾಜ್ಯ ಜನತಾದಳದ ಮುಖಂಡರು ಹಾಗೂ ಬಂಗಾರಪ್ಪ ಅವರ ನಡುವೆ ಎರಡು ಸುತ್ತಿನ ಮಾತುಕತೆ ನಡೆದರೂ ಸ್ಥಾನಗಳ ಹಂಚಿಕೆಯಲ್ಲಿ ಎರಡೂ ಪಕ್ಷಗಳ ಮುಖಂಡರ ನಡುವೆ ಒಮ್ಮತ ಏರ್ಪಡದಿದ್ದರಿಂದ ಹೊಂದಾಣಿಕೆ ಮಾತುಕತೆ ವಿಫಲವಾಯಿತು ಎನ್ನಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 20-1-1973

● 5ನೇ ಯೋಜನೆ ಧೋರಣೆ ಕರಡುವಿಗೆ ವ್ಯಾಪಕ ಸ್ವಾಗತ

ನವದೆಹಲಿ, ಜ. 19– ಐದನೇ ಯೋಜನೆಯ ಧೋರಣೆ ಕುರಿತು ಯೋಜನಾ ಆಯೋಗ ಸಿದ್ಧಪಡಿಸಿರುವ ಕರಡುವಿಗೆ ಇಂದು ಇಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆಯ ಮೊದಲ ದಿನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದ ಎಲ್ಲ ರಾಜ್ಯಗಳಿಂದಲೂ ಪೂರ್ಣ ಬೆಂಬಲ ದೊರಕಿತು.

ದಾರಿದ್ರ್ಯ ನಿವಾರಣೆ ಮತ್ತು ಸ್ವಾವಲಂಬನೆ ಸಾಧನೆಯ ಗುರಿಗಳನ್ನು ಮುಟ್ಟುವ ದೃಷ್ಟಿಯಿಂದ ರೂಪಿಸಿರುವ ಈ ಕರಡನ್ನು ಪರಿಶೀಲಿಸಲು, ಪ್ರಧಾನಿ ಇಂದಿರಾ ಗಾಂಧಿ ಅವರು ಅಧ್ಯಕ್ಷರಾಗಿರುವ ಈ ಮಂಡಲಿ ಸಭೆಯನ್ನು ಕರೆಯಲಾಗಿತ್ತು.

ಇಂದು ಹದಿನೆಂಟು ಜನ ಮುಖ್ಯಮಂತ್ರಿಗಳು ಸಭೆಯಲ್ಲಿ ಮಾತನಾಡಿದರು.

● ಈ ವರ್ಷದಲ್ಲೇ ಐದು ಲಕ್ಷ ಶಿಕ್ಷಿತರಿಗೆ ಉದ್ಯೋಗ ಸೌಲಭ್ಯ

ನವದೆಹಲಿ, ಜ. 19– ಐದು ಲಕ್ಷ ಶಿಕ್ಷಿತ ನಿರುದ್ಯೋಗಿಗಳಿಗೆ 1973–74ನೇ ಸಾಲಿನಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಡಲು ಉದ್ದೇಶಿಸಲಾಗಿರುವುದೆಂದು ಯೋಜನೆ ಸಚಿವ ಡಿ.ಪಿ.ಧರ್ ಅವರು ಇಂದು ಇಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆಗೆ ತಿಳಿಸಿದರು.

1974ರಿಂದ ಆರಂಭವಾಗಿ 1979ರಲ್ಲಿ ಅಂತ್ಯವಾಗುವ ಇಡೀ ಐದನೇ ಪಂಚವಾರ್ಷಿಕ ಯೋಜನೆಯ ಉದ್ದಕ್ಕೂ ಇದೇ ಪ್ರಮಾಣದಲ್ಲಿ ವಾರ್ಷಿಕವಾಗಿ ಉದ್ಯೋಗ ಕಲ್ಪಿಸಲಾಗುವುದೆಂದೂ ಅವರು ಹೇಳಿದರು.

ಅಭಿಪ್ರಾಯ ಆಧಾರಿತ ಸೂಚ್ಯಂಕಗಳು ನ್ಯೂನತೆಗಳಿಂದ ಹೊರತಾಗಿಲ್ಲ

ತೀರಾ ಪ್ರಶ್ನಾರ್ಹವಾದ ಸೂಚ್ಯಂಕಗಳು

ಸೂರ್ಯ–ನಮಸ್ಕಾರ

ಎ. ಸೂರ್ಯಪ್ರಕಾಶ್

ಅಭಿಪ್ರಾಯ ಆಧಾರಿತ ಸೂಚ್ಯಂಕಗಳ ಕುರಿತು ಪ್ರಧಾನಿಯವರ ಆರ್ಥಿಕ ಸಲಹಾ ಮಂಡಳಿಯು ಅಧ್ಯಯನ ವರದಿಯೊಂದನ್ನು ಈಚೆಗೆ ಬಿಡುಗಡೆ ಮಾಡಿದೆ. ಫ್ರೀಡಂ ಹೌಸ್ ಸಿದ್ಧಪಡಿಸುವ ಜಗತ್ತಿನ ಸ್ವಾತಂತ್ರ್ಯ ಸೂಚ್ಯಂಕ, ಇಐಯು ಪ್ರಜಾತಂತ್ರ ಸೂಚ್ಯಂಕ ಮತ್ತು ವೆರೈಟಿ ಆಫ್ ಡೆಮಾಕ್ರಸಿ (ವಿ–ಡೆಮ್) ಸೂಚ್ಯಂಕ ಕುರಿತ ಮೊದಲ ಅಧಿಕೃತ ಅಧ್ಯಯನ ವರದಿ ಇದು. ಈ ಸೂಚ್ಯಂಕಗಳನ್ನು ಪ್ರಕಟಿಸುವ ಸಂಸ್ಥೆಗಳು, 2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಿಯಾದ ನಂತರದಲ್ಲಿ ಅನುಸರಿಸುತ್ತಿರುವ ಪದ್ಧತಿಯ ಬಗ್ಗೆ ಹಾಗೂ ಅವುಗಳ ಅಭಿಪ್ರಾಯದ ಬಗ್ಗೆ ಈ ವರದಿಯು ಗಂಭೀರವಾದ ಅನುಮಾನಗಳನ್ನು ಹುಟ್ಟುಹಾಕಿದೆ.

ಆಡಳಿತದ ಮೌಲ್ಯಮಾಪನ, ರಾಜಕೀಯ ಸ್ಥಿರತೆ, ಕಾನೂನಿಗೆ ಅನುಗುಣವಾದ ಆಡಳಿತಕ್ಕೆ ಸಂಬಂಧಿಸಿದಂತೆ ಕೆಲವು ವಸ್ತುನಿಷ್ಠವಲ್ಲದ ಅಂಶಗಳು ಹಾಗೂ ಕೆಲವು ಆರ್ಥಿಕ ಸೂಚಕಗಳನ್ನು ಈ ಸೂಚ್ಯಂಕಗಳು ಆಧರಿಸಿವೆ ಎಂದು ವರದಿ ಹೇಳಿದೆ. ಸೂಚ್ಯಂಕಗಳಲ್ಲಿನ ಇತರ ಕೆಲವು ನ್ಯೂನತೆಗಳು: 'ಅಧ್ಯಯನ, ವಿಶ್ಲೇಷಣೆಯಲ್ಲಿ ಗಂಭೀರ ಸಮಸ್ಯೆಗಳಿವೆ'; ಇವು ಇತರರಿಗೆ ಗೊತ್ತಿಲ್ಲದ ತಜ್ಞರ ಸಣ್ಣ ಗುಂಪೊಂದು ನೀಡುವ ಅಭಿಪ್ರಾಯ ಆಧರಿಸಿ ತೀರ್ಮಾನಕ್ಕೆ ಬರುತ್ತವೆ; ತಜ್ಞರನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಪಾರದರ್ಶಕತೆಯ ಕೊರತೆ ಇದೆ; 'ವಸ್ತುನಿಷ್ಠವಾಗಿ ಉತ್ತರಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಪದಗಳನ್ನು ಹೆಣೆದು' ಪ್ರಶ್ನೆಗಳನ್ನು ಸಿದ್ಧಪಡಿಸಿರುವುದು. ಈ ಅಧ್ಯಯನ ವರದಿಯನ್ನು ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಮತ್ತು ಮಂಡಳಿಯ ಉಪ ನಿರ್ದೇಶಕಿ ಆಕಾಂಕ್ಷಾ ಅರೋರಾ ಸಿದ್ಧಪಡಿಸಿದ್ದಾರೆ. ಮೇಲೆ ಹೇಳಲಾಗಿರುವ ಸಂಸ್ಥೆಗಳ ಪೈಕಿ ವಿ–ಡೆಮ್ ತನ್ನ ತೀರ್ಮಾನಗಳನ್ನು ಸಮರ್ಥಿಸಿಕೊಂಡಿದೆ. ಆದರೆ, ವಿ–ಡೆಮ್ ಸಂಸ್ಥೆಯ ನಿರ್ದೇಶಕ ಸ್ಟಾಫನ್ ಲಿಂಡ್‌ಬರ್ಗ್ ಅವರು ಸುದ್ದಿಮಾಧ್ಯಮವೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಕೊಟ್ಟಿರುವ ಬಹುತೇಕ ವಿವರಣೆಗಳು ತೃಪ್ತಿಕರವಾಗಿಲ್ಲ.

ಉದಾಹರಣೆಗೆ, ವಿ–ಡೆಮ್ ಸಂಸ್ಥೆಯು ಕೆಲವೇ ಕೆಲವು ತಜ್ಞರ ಅಭಿಪ್ರಾಯ ಪಡೆದು ಅಂಕಗಳನ್ನು ನೀಡುತ್ತದೆ. 140 ಕೋಟಿ ಜನರಿರುವ ಭಾರತದ ಪ್ರಜಾತಂತ್ರಕ್ಕೆ ಅಂಕ ನೀಡುವಾಗ ಅದು ಗಣನೀಯ ಸಂಖ್ಯೆಯ ಜನರಿಂದ ಅಭಿಪ್ರಾಯ ಸಂಗ್ರಹಿಸುವುದಿಲ್ಲ. ನಿರ್ದಿಷ್ಟವಾಗಿ ಹೇಳಬೇಕು ಎಂದಾದರೆ, 30 ಜನರ ಅಭಿಪ್ರಾಯ ಪಡೆದು ಅದು ಒಂದು ತೀರ್ಮಾನಕ್ಕೆ ಬಂದಿದೆ. ಈ ತಜ್ಞರಿಗೆ ಒಂದಿಷ್ಟು ಪ್ರಶ್ನೆಗಳನ್ನು ಕೇಳಲಾಗುತ್ತದೆ. ಪ್ರಶ್ನೆಗಳಲ್ಲಿ ಹಲವಕ್ಕೆ ವಸ್ತುನಿಷ್ಠವಾದ ಉತ್ತರಗಳನ್ನು ನೀಡುವುದು ಸಾಧ್ಯವೇ ಇಲ್ಲ. ಹೀಗಿದ್ದರೂ ಸಂಸ್ಥೆಯ ನಿರ್ದೇಶಕರು, ತಮ್ಮ ವಿಶ್ಲೇಷಣೆಯು ಉನ್ನತ ಮಟ್ಟದ ಗಣಿತಶಾಸ್ತ್ರವನ್ನು ಆಧರಿಸಿದೆ ಎನ್ನುತ್ತಾರೆ.

ಇಂತಹ ಸಮೀಕ್ಷೆಗಳನ್ನು ನಡೆಸುವ ವಿ–ಡೆಮ್ ಹಾಗೂ ಇತರ ಸಂಸ್ಥೆಗಳಲ್ಲಿ ದೊಡ್ಡ ಲೋಪವೊಂದು ಇದೆ. ಅವು ತಮ್ಮ ಸಮೀಕ್ಷೆಗಳಲ್ಲಿ ಅಭಿಪ್ರಾಯ ನೀಡಲು ನೇಮಕ ಮಾಡಿಕೊಳ್ಳುವ 'ತಜ್ಞರ' ವಿಚಾರದಲ್ಲಿ ಗೋಪ್ಯತೆಯನ್ನು ಕಾಯ್ದುಕೊಳ್ಳುತ್ತವೆ. 180 ದೇಶಗಳ ತಜ್ಞರ ಜೊತೆ ಸಂಸ್ಥೆ ಕೆಲಸ ಮಾಡುತ್ತದೆ, ಅವರ ಹೆಸರನ್ನು ಬಹಿರಂಗಪಡಿಸಿದರೆ ಅವರಿಗೆ ಹಾಗೂ ಅವರ ಕುಟುಂಬದ ಸದಸ್ಯರಿಗೆ ತೊಂದರೆ ಆಗಬಹುದು ಎಂದು ಲಿಂಡ್‌ಬರ್ಗ್ ಅವರು ಹೇಳಿದ್ದಾರೆ. ಆದರೆ, ಬರೀ 30 ಜನ ತಜ್ಞರು ಅಭಿಪ್ರಾಯ ನೀಡಿ, ಆ ಅಭಿಪ್ರಾಯ ಆಧರಿಸಿ ವಿ–ಡೆಮ್ ಸಂಸ್ಥೆಯು ಭಾರತವು 'ಮತದಾನ ಪ್ರಕ್ರಿಯೆ ನಡೆಯುವ ಸರ್ವಾಧಿಕಾರ'ವಾಗುವತ್ತ ಸಾಗುತ್ತಿದೆ ಎಂಬ ತೀರ್ಮಾನ ನೀಡಿದರೆ, ಆ ತೀರ್ಮಾನಕ್ಕೆ ಯಾವ ಬಗೆಯ ವಿಶ್ವಾಸಾರ್ಹತೆ ಸಿಗಲು ಸಾಧ್ಯ?

ಈ ತಜ್ಞರು ಯಾರು, ಅವರ ಅಕಡೆಮಿಕ್ ಅರ್ಹತೆಗಳು ಏನು, ಅವರಿಗೆ ಇರುವ ವೃತ್ತಿ ಮನ್ನಣೆ ಏನು ಎಂಬುದನ್ನು ತಿಳಿದುಕೊಳ್ಳದೆ, ಇವೆಲ್ಲಕ್ಕಿಂತ ಮುಖ್ಯವಾಗಿ ಅವರ ರಾಜಕೀಯ ಹಿನ್ನೆಲೆ ಹಾಗೂ ಅವರ ಉದ್ದೇಶ ಏನು ಎಂಬುದನ್ನು ತಿಳಿದುಕೊಳ್ಳದೇ ಇದ್ದರೆ, ತೀರ್ಮಾನವು ಸಂಶಯಾಸ್ಪದವಾಗಿಯೇ ಇರುತ್ತದೆ.

ಬಿಜೆಪಿ ಕಡೆ ಬೊಟ್ಟುಮಾಡಿ ವಿ–ಡೆಮ್ ಸಂಸ್ಥೆಯು ಭಾರತವನ್ನು 'ಮತದಾನ ಪ್ರಕ್ರಿಯೆ ನಡೆಯುವ ಸರ್ವಾಧಿಕಾರ ವ್ಯವಸ್ಥೆ' ಎಂದು ವರ್ಗೀಕರಿಸಿದೆ. ಬಹುತ್ವ ವಿರೋಧಿ ರಾಜಕೀಯ ಪಕ್ಷಗಳು ಸರ್ವಾಧಿಕಾರದ ಅಜೆಂಡಾವನ್ನು ಕನಿಷ್ಠ ಆರು ದೇಶಗಳಲ್ಲಿ– ಭಾರತ, ಬ್ರೆಜಿಲ್, ಹಂಗರಿ, ಪೋಲೆಂಡ್, ಸರ್ಬಿಯಾ ಮತ್ತು ಟರ್ಕಿ– ಮುಂದಕ್ಕೆ ಒಯ್ಯುತ್ತಿವೆ ಎಂದು ಹೇಳಿದೆ. ಬೇರೆ ದೇಶಗಳ ಪಕ್ಷಗಳ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿದ್ದರೂ, ಒಂದಿಷ್ಟು ಮನ್ನಣೆ ಹಾಗೂ ಒಂದಿಷ್ಟು ಮತಗಳನ್ನು ಪಡೆದಿರುವ ಬಿಜೆಪಿ ಸೇರಿದಂತೆ ಭಾರತದ ಯಾವ ಪಕ್ಷವನ್ನೂ 'ಬಹುತ್ವ ವಿರೋಧಿ' ಎಂದು ಜರಿಯಲು ಆಗದು. ಈ ಆರೋಪವನ್ನು ಕೇಳಿ ನಗಬಹುದು, ಅಷ್ಟೇ. ಏಕೆಂದರೆ, ಭಾರತದ ಸಂದರ್ಭದಲ್ಲಿ ಇಲ್ಲಿನ ಸಾಮಾಜಿಕ ಬಹುತ್ವವು ರಾಜಕೀಯ ಬಹುತ್ವಕ್ಕೆ ಯಾವ ರೀತಿಯಲ್ಲಿ ಕೊಡುಗೆ ನೀಡಿದೆ ಎಂಬುದನ್ನು ಯಾವುದೇ ರಾಜಕೀಯ ಮತ್ತು ಸಮಾಜಶಾಸ್ತ್ರಜ್ಞ ಹೇಳಬಲ್ಲ. ಇಲ್ಲಿನ ಸಾಮಾಜಿಕ ಬಹುತ್ವವು ಸಣ್ಣ ಜಾತಿ, ಭಾಷೆ, ಪ್ರದೇಶಗಳನ್ನು ಆಧರಿಸಿದ ರಾಜಕೀಯ ಪಕ್ಷಗಳು ದೇಶದುದ್ದಕ್ಕೂ ದೊಡ್ಡ ಸಂಖ್ಯೆಯಲ್ಲಿ ಜನಿಸಲು ಕಾರಣವಾಗಿದೆ. ದೇಶದ ಎರಡನೆಯ ಲೋಕಸಭೆಯಲ್ಲಿ (1957–62) 12 ರಾಜಕೀಯ ಪಕ್ಷಗಳ ಪ್ರತಿನಿಧಿಗಳಿದ್ದರು. ನಾಲ್ಕು ದಶಕಗಳ ನಂತರದಲ್ಲಿ ಪ್ರಾತಿನಿಧ್ಯದ ಸಂಖ್ಯೆಯು 40 ಪಕ್ಷಗಳಿಗೆ ಏರಿತ್ತು. ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದಲ್ಲಿ (ಎನ್‌ಡಿಎ) 15 ಪಕ್ಷಗಳು, 329 ಲೋಕಸಭಾ ಸದಸ್ಯರು ಹಾಗೂ 110 ರಾಜ್ಯಸಭಾ ಸದಸ್ಯರಿದ್ದಾರೆ.

ಪೂರ್ಣ ಪ್ರಮಾಣದ ಪ್ರಜಾತಂತ್ರ ವ್ಯವಸ್ಥೆಗಳು ಗಟ್ಟಿಯಾದ ನೆಲೆಗಟ್ಟಿನ ಮೇಲೆ ನಿಂತಿರಬೇಕು ಎಂಬುದನ್ನು ವಿ–ಡೆಮ್ ಹಾಗೂ ಅದರಂತಹ ಇತರ ಸಂಸ್ಥೆಗಳು ಗುರುತಿಸಲು ವಿಫಲವಾಗುತ್ತಿವೆ. ನಮ್ಮ ಸಂವಿಧಾನದಲ್ಲಿ ಹೇಳಿರುವ ಸಮಾನತೆ ಮತ್ತು ಸಮಾನ ರಕ್ಷಣೆ (ಸಂವಿಧಾನದ 14ನೆಯ ವಿಧಿ); ತಾರತಮ್ಯಕ್ಕೆ ಅವಕಾಶ ಇಲ್ಲದಿರುವುದು (15ನೇ ವಿಧಿ); ಮುಖ್ಯಸ್ಥನನ್ನು ಆಯ್ಕೆ ಮಾಡುವ ಗಣತಂತ್ರ ಮಾದರಿಯ ಸರ್ಕಾರ (ಸಂವಿಧಾನದ ಪೀಠಿಕೆ); ಆತ್ಮಸಾಕ್ಷಿ ಹಾಗೂ ಪೂಜೆಯ ಸ್ವಾತಂತ್ರ್ಯ (25ನೇ ವಿಧಿ); ಅಲ್ಪಸಂಖ್ಯಾತರ ಹಕ್ಕುಗಳು (25, 26, 29 ಮತ್ತು 30ನೆಯ ವಿಧಿಗಳು) ಅಂತಹ ಗಟ್ಟಿ ನೆಲೆಗಟ್ಟು.

ಉದಾಹರಣೆಗೆ, ಭಾರತವು ಗಣರಾಜ್ಯ ಆದ ನಂತರದಲ್ಲಿ, ಅತ್ಯಂತ ದುರ್ಬಲ ಸಮುದಾಯಗಳಿಗೆ ಸೇರಿದ ಜನ ಕೂಡ ಸರ್ಕಾರಗಳ ಮುಖ್ಯಸ್ಥರಾಗಲು ಅವಕಾಶ ಸಿಕ್ಕಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಹಿಂದಿನ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಈ ಮಾತಿಗೆ ಈಚಿನ ಉದಾಹರಣೆಗಳು. ಆದರೆ ಸಾರ್ವಜನಿಕರ ಹಣದಲ್ಲಿ ತಮ್ಮ ರಾಜಕುಟುಂಬಗಳನ್ನು ಸಾಕುತ್ತಿರುವ ಸ್ವೀಡನ್, ಡೆನ್ಮಾರ್ಕ್‌ನಂತಹ ರಾಷ್ಟ್ರಗಳಿಗೆ ಗಣತಂತ್ರವು ಲೆಕ್ಕಕ್ಕಿಲ್ಲ. ಇನ್ನೂ ಆಘಾತಕಾರಿ ಅನ್ನಿಸುವ ಸಂಗತಿಯೊಂದು ಇದೆ. ಇಂತಹ ಸಂಸ್ಥೆಗಳು ಸಿದ್ಧಪಡಿಸುವ ಪಟ್ಟಿಯಲ್ಲಿ, ಡಜನ್‌ಗಟ್ಟಲೆ ಸಂಖ್ಯೆಯ ಇಸ್ಲಾಮಿಕ್ ಹಾಗೂ ಕ್ರೈಸ್ತ ರಾಷ್ಟ್ರಗಳು ಭಾರತದ ಸ್ಥಾನಕ್ಕಿಂತ ಉನ್ನತವಾದ ಸ್ಥಾನದಲ್ಲಿವೆ. ಈ ರಾಷ್ಟ್ರಗಳು ತಮ್ಮ ನಿಷ್ಠೆ ಇಸ್ಲಾಂ ಅಥವಾ ಕ್ರೈಸ್ತ ಧರ್ಮಕ್ಕೆ ಎಂದು ಸಾಂವಿಧಾನಿಕವಾಗಿ ಘೋಷಿಸಿವೆ. ಆದರೆ ಭಾರತವು ಧರ್ಮನಿರಪೇಕ್ಷ ರಾಷ್ಟ್ರ. ಭಾರತದ ಪ್ರಭುತ್ವವು ಎಲ್ಲ ಧರ್ಮಗಳಿಂದ ಸಮಾನ ಅಂತರ ಕಾಯ್ದುಕೊಳ್ಳುತ್ತದೆ. ಸರ್ಕಾರಗಳಿಂದ ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮ ಆಧಾರಿತ ಪಾಠಗಳು ನಡೆಯಬಾರದು ಎಂದು ಸಂವಿಧಾನದ 28ನೆಯ ವಿಧಿ ಹೇಳುತ್ತದೆ.

ವಿ–ಡೆಮ್ ಹಾಗೂ ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಸ್ಥೆಯು ಭಾರತವನ್ನು ಕೆಟ್ಟದ್ದಾಗಿ ಚಿತ್ರಿಸಲು ಯತ್ನಿಸಿದಾಗ, ಪ್ರಜಾತಂತ್ರ ದೇಶಗಳ ಸಾಲಿನಲ್ಲಿ ದೇಶವನ್ನು ಕೆಳಗಿನ ಸ್ಥಾನಕ್ಕೆ ತಳ್ಳಲು ಯತ್ನಿಸಿದಾಗ ಎರಡು ವರ್ಷಗಳ ಹಿಂದೆ ಈ ಲೇಖಕ ಇದೇ ವಿಷಯಗಳನ್ನು ಎತ್ತಿದ್ದರು. ಆದರೆ ಈ ಥಿಂಕ್–ಟ್ಯಾಂಕ್ ಮಂದಿ ಅಜೆಂಡಾ ಇಟ್ಟುಕೊಂಡು ಕೆಲಸ ಮಾಡುತ್ತಾರಾದ ಕಾರಣ, ಅವರು ಇಂತಹ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸುತ್ತಾರೆ.

ಚುರುಮುರಿ



ಇವರೇ ವಾಸಿ!

● ಬಿ.ಎನ್.ಮಲ್ಲೇಶ್

'ಹಲೋ... ಸಬ್ ಇನ್‌ಸ್ಪೆಕ್ಟರ್ ತೆಪರೇಸಿ? ನಾನು ಐ.ಜಿ. ಮಾತಾಡ್ತಿದೀನಿ'.

'ಸರ್ ನಮಸ್ಕಾರ್ರಿ... ಹೇಳ್ರಿ ಏನರೆ ಅರ್ಜೆಂಟ್ ಇತ್ತಾ ಸರ್...'

'ಅಲ್ರೀ ಆ ಎಮ್ಮೆಲ್ಲೆ ಕಡೆ ಯಾರೋ ಒಬ್ಬ ರೌಡೀನ ತಂದು ಲಾಕಪ್‌ನಾಗೆ ಹಾಕೀರಂತಲ್ಲ, ಬಿಡಿ ಅಂದ್ರೆ ಬಿಡ್ತಿಲ್ಲಂತೆ?'

'ಸರ್, ಅವಾ ಭಾರೀ ಹೊಲಸು ಅದಾನ್ರಿ, ನಮಗಾ ಕೆಟ್ಟಾಕೊಳಕ ಮಾತಾಡ್ತಾನ್ರಿ, ಅದ್ಕೇ ಒದ್ದು ಒಳಗಾಕೀನಿ'.

'ಹಂಗಲ್ರೀ ತೆಪರೇಸಿ, ಅವ ಬೈದ ಅಂತ ನಾವು ನಾಲ್ಕು ಒದೀಬಹುದು, ಅದು ಬಿಟ್ರೆ ಬೇರೇನೂ ಮಾಡಾಕೆ ಬರಲ್ಲ. ಹಂಗಂತ ಎಮ್ಮೆಲ್ಲೆಗಳನ್ನ ಎದುರು ಹಾಕ್ಕಾಬಾರ್ದು'.

'ಅವನ ಮ್ಯಾಲೆ ಬಾಳ ಕೇಸದಾವು ಸರ್, ರೌಡಿಕೇಸ್‌ನಾಗೆ ಅದಾನ, ಹಫ್ತಾ ವಸೂಲಿ ಮಾಡ್ತಾನ... ಅದೆಲ್ಲ ಹೋಗ್ಲಿ ಸರ್, ಅವನ ಬಾಯಾಗೆ ಒಳ್ಳೇ ಮಾತೇ ಇಲ್ಲ, ಬರೀ ಹೊಲಸು ಮಾತಾಡ್ತಾನ. ಅದ್ಕೇ ಸಿಟ್ಟು ಬಂದು ನಾಕು ಬಡೆದೀನ್ರಿ'.

'ಅಲ್ರೀ ಅವನು ರೌಡಿ ಅಂದ ಮೇಲೆ ಅವನ ಬಾಯಾಗೆ ಮುತ್ತು ಉದುರ್ತಾವೇನು? ಆದ್ರೆ ಈ ಎಮ್ಮೆಲ್ಲೆ ಮಾತು ಕೇಳಿದೀರಾ? ಕೇಳಿದ್ರೆ ಆ ರೌಡೀನೇ ವಾಸಿ ಅನ್ನುತ್ತೆ...'

'ಹೌದ್ರಿ ಸರ್, ಪೇಪರ್‌ನಾಗೆ ನೋಡೀನಿ. ಕೆಲವ್ರು ಎಮ್ಮೆಲ್ಲೆಗಳು ಹಂಗಂಗೆಲ್ಲ ಮಾತಾಡ್ತದಾರ, ಪೊಲೀಸರಾದ ನಮಗೇ ನಾಚಿಕಿ ಆಗ್ತತಿ'.

'ಎಲ್ರೂ ಹಂಗಿರಲ್ಲ ಕಣ್ರೆ, ಆದ್ರು ಇಂಥೋರತ್ರ ನಾವು ಮಾತು ಕೇಳಬೇಕಲ್ಲ'.

'ವೋಟು ಕೇಳಾಕೆ ಬರುವಾಗ ಎಷ್ಟು ನೈಸಾಗಿ ಮಾತಾಡ್ತಾರೆ ಸರ್, ನಿಮ್ಮ ಸೇವಕ, ಬಂಧು ಅಂತಾರೆ. ಗೆದ್ದ ಮೇಲೆ ಧಮ್ಮು, ತಾಕತ್ತು ಇನ್ನೂ ಏನೇನೋ ಕೊಳಕು ಮಾತಾಡ್ತಾರೆ'.

'ಅದ್ಕೇ ಹೇಳಿದ್ದು, ಜಾಸ್ತಿ ರಿಸ್ಕ್ ತಗೋಬೇಡಿ, ಆ ರೌಡೀನೇ ವಾಸಿ, ಬಿಟ್ಟು ಕಳಿಸಿ'.

'ಆತು ಸರ್, ಈಗ್ಲೇ ಬಿಟ್ ಕಳಿಸ್ತೀನಿ, ನಮಸ್ಕಾರ'.

ಸಂಗತ

ಹಾಜರಾತಿ ನಿಯಮ: ಮರುಚಿಂತನೆ ಅಗತ್ಯ

ದುರ್ಬಳಕೆಯ ಸಾಧ್ಯತೆಯನ್ನಷ್ಟೇ ಪರಿಗಣಿಸಿ, ನಿಜಕ್ಕೂ ಹೆಚ್ಚಿನ ವಿನಾಯಿತಿ ಅಗತ್ಯವಿರುವ ವಿದ್ಯಾರ್ಥಿಗಳನ್ನು ಕಡೆಗಣಿಸುವುದು ಸರಿಯೇ?

● ಎಚ್.ಕೆ.ಶರತ್

ಇತ್ತೀಚೆಗೆ ತರಗತಿಯಲ್ಲಿ ಪಾಠ ಮಾಡುವ ವೇಳೆ ವಿದ್ಯಾರ್ಥಿಯೊಬ್ಬ ಡೆಸ್ಕಿನ ಮೇಲೆ ತಲೆ ಹಾಕಿ ನಿದ್ರಿಸುತ್ತಿರುವುದು ಗಮನಕ್ಕೆ ಬಂತು. ಅಕ್ಕಪಕ್ಕ ಕುಳಿತವರಿಗೆ ಎಚ್ಚರಿಸುವಂತೆ ಸೂಚಿಸಿದೆ. ಕತ್ತು ಮೇಲೆತ್ತಿದ ವಿದ್ಯಾರ್ಥಿಯ ಕಣ್ಣುಗಳನ್ನು ನೋಡಿ ಆತಂಕವಾಯಿತು. ತೀರಾ ಕೆಂಪಗಾಗಿದ್ದ ಕಣ್ಣುಗಳು ಆತನನ್ನು ಬಾಧಿಸುತ್ತಿರುವ ಆರೋಗ್ಯ ಸಮಸ್ಯೆ ಮತ್ತೆ ಉಲ್ಬಣಿಸಿರುವುದಕ್ಕೆ ಪುರಾವೆ ಒದಗಿಸುತ್ತಿದ್ದವು.

ತನ್ನನ್ನು ಬಾಧಿಸುತ್ತಿದ್ದ ಆರೋಗ್ಯ ಸಮಸ್ಯೆಯಿಂದಾಗಿ, ಆ ಮೊದಲು ಈ ವಿದ್ಯಾರ್ಥಿ ಮೂರ್ನಾಲ್ಕು ವಾರಗಳ ಕಾಲ ನಿರಂತರವಾಗಿ ತರಗತಿಗಳಿಗೆ ಗೈರುಹಾಜರಾಗಿದ್ದ. ಇದೀಗ ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತಿದ್ದು, ಇನ್ನು ಮುಂದೆ ತಪ್ಪದೇ ಹಾಜರಾಗುವುದಾಗಿ ತಿಳಿಸಿದ್ದ. ಆನಂತರ ಆಡಿದ ಮಾತಿಗೆ ಅನುಗುಣವಾಗಿ ತಪ್ಪದೇ ಹಾಜರಾಗುತ್ತಿದ್ದ.

ತರಗತಿಯಲ್ಲಿ ಕುಳಿತು ಪಾಠ ಕೇಳುವ ಸ್ಥಿತಿಯಲ್ಲಿ ವಿದ್ಯಾರ್ಥಿ ಇಲ್ಲ ಎಂಬುದು ಮನದಟ್ಟಾಗಿ, 'ತರಗತಿಯಿಂದ ಹೊರಗೆ ಹೋಗಬೇಕೆನಿಸಿದರೆ ಹೋಗು' ಎಂದೆ. ಹೋಗುವುದಿಲ್ಲವೆಂದು ತಲೆ ಅಲ್ಲಾಡಿಸಿದ. ಹಾಗಾದರೆ, ಡೆಸ್ಕಿನ ಮೇಲೆ ಮಲಗಿಕೊಂಡು ವಿಶ್ರಾಂತಿ ಪಡೆಯುವಂತೆ ತಿಳಿಸಿ ಬೋಧನೆ ಮುಂದುವರಿಸಿದೆ.

ಪದವಿ ಹಂತದ ವಿದ್ಯಾರ್ಥಿ ಯಾವುದೇ ವಿಷಯದ ಅಂತಿಮ ಪರೀಕ್ಷೆ ಎದುರಿಸಲು ಅರ್ಹವಾಗಬೇಕಿದ್ದರೆ, ಆ ವಿಷಯದಲ್ಲಿ ಕನಿಷ್ಠ ಶೇಕಡ 75ರಷ್ಟು ಹಾಜರಾತಿ ಪ್ರಮಾಣವಾದರೂ ಇರಲೇಬೇಕೆಂಬ ನಿಯಮ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಇದೆ. ಶೇ 15ರಷ್ಟು ತರಗತಿಗಳಿಗೆ ಕಾರಣ ತಿಳಿಸದೆ ಗೈರುಹಾಜರಾಗಬಹುದಾದ ಅವಕಾಶವಿದೆ. ಉಳಿದ ಶೇ 10ರಷ್ಟು ಗೈರುಹಾಜರಿಗೆ ಅನಾರೋಗ್ಯ ಸಮಸ್ಯೆ, ಕ್ರೀಡಾ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮ, ವಿಚಾರ ಸಂಕಿರಣ, ಕಾರ್ಯಾಗಾರಗಳಲ್ಲಿ ಭಾಗವಹಿಸುವಿಕೆ ಹೀಗೆ ನಿರ್ದಿಷ್ಟ ಕಾರಣವಿರಬೇಕು. ಶೇ 25ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಗೈರುಹಾಜರಾದರೆ, ನಿಯಮದ ಪ್ರಕಾರ, ಅಂತಿಮ ಪರೀಕ್ಷೆ ಎದುರಿಸಲು ಅವಕಾಶವಿರುವುದಿಲ್ಲ. ಹೀಗಾಗಿ, ಆರೋಗ್ಯ ಸಮಸ್ಯೆ ಇದ್ದರೂ ಹಾಜರಾತಿಗಾಗಿ ಕಾಲೇಜು ತರಗತಿಗಳಿಗೆ ಬರಬೇಕಾದ ಒತ್ತಡ ಇದೆ.

ವಿದ್ಯಾರ್ಥಿ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವುದು ಖಾತರಿಯಾದರೂ ಆತನಿಗೆ ಹಾಜರಾತಿಯಲ್ಲಿ ಹೆಚ್ಚಿನ ವಿನಾಯಿತಿ ನೀಡುವ ಸ್ವಾತಂತ್ರ್ಯವು ಅಧ್ಯಾಪಕರಿಗೆ ಇಲ್ಲ. ಹೀಗಿದ್ದರೂ ಕೆಲವೊಮ್ಮೆ ವಿದ್ಯಾರ್ಥಿಗಳ ಅಸಹಾಯಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು, ನಿಯಮ ಮೀರಿ ದಾಖಲೆಯಲ್ಲಿ ತಿದ್ದುಪಡಿ ಮಾಡಿ, ವಿದ್ಯಾರ್ಥಿ ಶೇ 75ರಷ್ಟು ತರಗತಿಗಳಿಗೆ ಹಾಜರಾಗಿರುವುದಾಗಿ ತೋರಿಸುವುದೂ ಇದೆ. ಅನಾರೋಗ್ಯದ ಕಾರಣಕ್ಕೆ ಹಾಜರಾತಿಯಲ್ಲಿ ಹೆಚ್ಚು ವಿನಾಯಿತಿ ನೀಡಲು ಮುಂದಾದರೆ, ಅದನ್ನು ವಿದ್ಯಾರ್ಥಿಗಳು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದೆ ಎನ್ನುವ ವಾದ ಮೊದಲಿನಿಂದಲೂ ಇದೆ. ನಕಲಿ ದಾಖಲೆ ಸಲ್ಲಿಸಿ ಹಾಜರಾತಿಯಲ್ಲಿ ವಿನಾಯಿತಿ ಪಡೆಯುವರೆಂಬ ಆಕ್ಷೇಪವೂ ಇದೆ. ದುರ್ಬಳಕೆಯ ಸಾಧ್ಯತೆಯನ್ನಷ್ಟೇ ಪರಿಗಣಿಸಿ, ನಿಜಕ್ಕೂ ಹೆಚ್ಚಿನ ವಿನಾಯಿತಿ ಅಗತ್ಯವಿರುವ ವಿದ್ಯಾರ್ಥಿಗಳನ್ನು ಕಡೆಗಣಿಸಲಾದೀತೆ? ದುರ್ಬಳಕೆ ತಡೆಯಲು ಸೂಕ್ತ ನಿಯಮಾವಳಿಗಳನ್ನು ರೂಪಿಸುವುದು ಅಸಾಧ್ಯವೇನಲ್ಲ.

ಕೊರೊನಾ ಸೋಂಕು ಹರಡುವಿಕೆ ವ್ಯಾಪಕವಾಗಿದ್ದ ಸಂದರ್ಭದಲ್ಲಿ ಹಾಜರಾತಿಯನ್ನೂ ಒಳಗೊಂಡಂತೆ ಹಲವು ನಿಯಮಗಳಲ್ಲಿ ಬದಲಾವಣೆ ತರಲಾಗಿತ್ತು. ಆದರೆ, ಬಹುತೇಕ ಎಲ್ಲವೂ ಸಹಜಸ್ಥಿತಿಗೆ ಮರಳಿರುವ ಸಂದರ್ಭದಲ್ಲಿ ಮತ್ತೆ ಹಳೆ ನಿಯಮಗಳಿಗೆ ಮೊರೆ ಹೋಗಲಾಗುತ್ತಿದೆ. ಕೇರಳದ ಕೊಚ್ಚಿನ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ (ಸಿಯುಎಸ್‌ಎಟಿ) ತನ್ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡುವ ತೀರ್ಮಾನವನ್ನು ಇತ್ತೀಚೆಗೆ ಕೈಗೊಂಡಿತ್ತು. ಇದಕ್ಕಾಗಿ ಶೇ 75ರಷ್ಟಿರುವ ಕನಿಷ್ಠ ಹಾಜರಾತಿ ಮಿತಿಯನ್ನು ಶೇ 73ಕ್ಕೆ ಇಳಿಸುವುದಾಗಿ ತಿಳಿಸಿತ್ತು. ಈ ನಿರ್ಧಾರದ ಮಹತ್ವ ಅರಿತ ಕೇರಳ ಸರ್ಕಾರವು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ವಿದ್ಯಾರ್ಥಿನಿಯರಿಗೂ ಮುಟ್ಟಿನ ರಜೆ ಪಡೆಯುವ ಅವಕಾಶ ಕಲ್ಪಿಸುವುದಾಗಿ ಈಗಾಗಲೇ ಘೋಷಿಸಿದೆ. ಇದೇ ನೆಲೆಗಟ್ಟಿನಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಕೂಡ ಆಲೋಚಿಸಬೇಕಿದೆ.



ಕಾಲೇಜು ಹಂತದ ವಿದ್ಯಾರ್ಥಿಗಳು ಕೂಡ ದೀರ್ಘಕಾಲ ಚಿಕಿತ್ಸೆ ಬೇಡುವ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಗಳನ್ನು ಎದುರಿಸತೊಡಗಿದ್ದಾರೆ. ಚಿಕಿತ್ಸೆಯ ದಾಖಲೆಗಳನ್ನು ಸಲ್ಲಿಸಿದರೂ, ಕನಿಷ್ಠ ಶೇ 75ರಷ್ಟು ಹಾಜರಾತಿ ನಿಯಮ ಸಡಿಲಿಸಲು ಅವಕಾಶ ಇಲ್ಲವೆಂಬುದು ವಿದ್ಯಾರ್ಥಿಗಳಿಗೂ ತಿಳಿದಿದೆ. ಹೀಗಾಗಿ, ಅನಾರೋಗ್ಯವಿದ್ದರೂ ಅನಿವಾರ್ಯವಾಗಿ ತರಗತಿಗೆ ಹಾಜರಾಗುತ್ತಿದ್ದಾರೆ. ಕೆಲವೊಮ್ಮೆ ನೇರ ಸಂಪರ್ಕದಿಂದ ಇತರರಿಗೂ ಹರಡಬಹುದಾದ ಕಾಯಿಲೆಗಳಿಂದ ಬಳಲುತ್ತಿರುವಾಗಲೂ ತರಗತಿಗೆ ಹಾಜರಾಗುವುದಿದೆ.

ಶೇ 75ಕ್ಕಿಂತ ಕಡಿಮೆ ಪ್ರಮಾಣದಲ್ಲಿ ತರಗತಿಗಳಿಗೆ ಹಾಜರಾಗಿಯೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಸಾಮರ್ಥ್ಯವನ್ನು ವಿದ್ಯಾರ್ಥಿ ಹೊಂದಿದ್ದರೆ ಅದಕ್ಕೆ ಅನುವು ಮಾಡಿಕೊಡುವುದು ಸೂಕ್ತವಲ್ಲವೇ? ನೂತನ ಶಿಕ್ಷಣ ನೀತಿ ಜಾರಿಯ ಭಾಗವಾಗಿ, ವಿದ್ಯಾರ್ಥಿಯೊಬ್ಬ ಏಕಕಾಲದಲ್ಲಿ ಎರಡು ಪದವಿಗಳನ್ನು ಪಡೆದುಕೊಳ್ಳಲು, ಆನ್‌ಲೈನ್ ಶಿಕ್ಷಣದ ಮೂಲಕವೂ ಕೆಲ ವಿಷಯಗಳನ್ನು ಕಲಿಯಲು ಅನುವು ಮಾಡಿಕೊಡಲು ಹೊರಟಿರುವಾಗ, ಅನಾರೋಗ್ಯದ ಕಾರಣಕ್ಕೆ ಶೇ 75ಕ್ಕಿಂತ ಕಡಿಮೆ ತರಗತಿಗಳಿಗೆ ಹಾಜರಾಗಿರುವ ವಿದ್ಯಾರ್ಥಿಗಳನ್ನು ಪರೀಕ್ಷೆ ಎದುರಿಸಲು ಅನರ್ಹರನ್ನಾಗಿಸುವ ನಿಯಮವನ್ನು ಮಾತ್ರ ಹಾಗೇ ಉಳಿಸಿಕೊಳ್ಳುವ ಅಗತ್ಯವಿದೆಯೇ? ಮೊದಲೇ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರ ಮೇಲೆ ತರಗತಿಗೆ ಹಾಜರಾಗಲೇಬೇಕೆಂಬ ಒತ್ತಡ ಹಾಕುವುದು ಸೂಕ್ತವೇ?

ವಾಚಕರ ವಾಣಿ

ಪ್ರಶಸ್ತಿ ಪುರಸ್ಕೃತ ಕೃತಿಗೆ ಸಿಗಲಿ ಮನ್ನಣೆ

'ಸಮಕಾಲೀನ ಸಾಹಿತ್ಯ ಮಂಥನದ ಕಬ್ಬ'- ಜೈಪುರ ಸಾಹಿತ್ಯೋತ್ಸವ ಆರಂಭದ ಕುರಿತು (ಪ್ರ.ವಾ., ಜ. 19) ಓದಿದೆ. ಅದರಲ್ಲೂ 'ಠೋಕರಿ ಮೈ ದಿಗಂತ್' ಹಿಂದಿ ಕವನ ಸಂಕಲನಕ್ಕಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಅನಾಮಿಕಾ ಅವರೊಟ್ಟಿಗೆ ಚರ್ಚೆ ಇರುವುದು ನನ್ನ ಗಮನ ಸೆಳೆಯಿತು. 2021ರಲ್ಲಿ ಡಿ.ಎಸ್.ನಾಗಭೂಷಣ ಅವರ 'ಗಾಂಧಿ ಕಥನ' ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಯಿತಷ್ಟೇ (ಈ ಪುಸ್ತಕ ಮೂರು ವರ್ಷಗಳಲ್ಲಿ 25 ಮುದ್ರಣ ಕಂಡು 28,000 ಪ್ರತಿಗಳ ಮಾರಾಟವೂ ಆಗಿದೆ).

ಈ ಹೆಗ್ಗಳಿಕೆ ಏನೇ ಇರಲಿ, ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯವಾಗಲಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಸ್ಥಳೀಯ ಶಾಖೆಯಾಗಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಾಗಲಿ, ಕನ್ನಡ ಸಾಹಿತ್ಯ ಪರಿಷತ್ ಆಗಲಿ ಅಥವಾ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸಕ್ರಿಯವಾಗಿರುವ ಗಾಂಧಿ ಪೀಠಗಳಾಗಲಿ ಈ ಕೃತಿಯ ಬಗ್ಗೆ ವಿಚಾರ ಸಂಕಿರಣವಿರಲಿ ಒಂದು ಕಿರು ಚರ್ಚೆ ಏರ್ಪಡಿಸಿದ್ದೂ ನನ್ನ ಗಮನಕ್ಕೆ ಬಂದಿಲ್ಲ. ವಿಚಾರ ಸಂಕಿರಣ, ಚರ್ಚೆಯಂತಹ ಗೌರವ ಬರೀ ಇದೊಂದೇ ಪುಸ್ತಕಕ್ಕೆ ಎಂದಲ್ಲ, ಆಯಾ ವರ್ಷ ಉನ್ನತ ಪ್ರಶಸ್ತಿ- ಪುರಸ್ಕಾರ ಪಡೆದ ಎಲ್ಲ ಕೃತಿಗಳಿಗೂ ಸಲ್ಲಬೇಕು. 'ಗಾಂಧಿ ಕಥನ'ಕ್ಕೆ ಮೇಲೆ ಹೇಳಿದ ಸಂಸ್ಥೆಗಳಲ್ಲಿ ವಿಚಾರ ಸಂಕಿರಣದ ಗೌರವ, ಮನ್ನಣೆ ಸಿಗದಿರುವುದಕ್ಕೆ ಬಹುಶಃ ಗಾಂಧಿಯ ಬಗ್ಗೆ ಇರುವ ಉದಾಸೀನವೇ ಕಾರಣವಿರಬಹುದು. ಇದೇ 30ಕ್ಕೆ ಗಾಂಧಿ ನಿಧನರಾಗಿ 75 ವರ್ಷಗಳಾಗುತ್ತವೆ. ಈ ಸಂದರ್ಭವೂ ನೆನಪಿಗೆ ಬಂದು ಇದೆಲ್ಲಾ ಬರೆಯುವ ಹಾಗಾಯಿತು. ಬಹುಶಃ ಗಾಂಧಿ ಕಥನಕಾರ ಬದುಕಿದ್ದರೆ ಇದನ್ನೆಲ್ಲಾ ಪ್ರಸ್ತಾಪಿಸಲು ನಾನು ಧೈರ್ಯ ಮಾಡುತ್ತಿರಲಿಲ್ಲ.

ಸವಿತಾ ನಾಗಭೂಷಣ, ಶಿವಮೊಗ್ಗ

ಸಂವೇದನಾಶೀಲ ಬರಹ, ಆದರೆ...

'ಜನಪ್ರತಿನಿಧಿಗಳ ಬಾಯಿತುರಿಕೆ...'ಗೆ ಸಂಬಂಧಿಸಿದ ಸಂಪಾದಕೀಯ (ಪ್ರ.ವಾ., ಜ. 19) ನೇರ ಮತ್ತು ಸ್ಪಷ್ಟತೆಯಿಂದ ಕೂಡಿದ್ದು, ಹೃದಯಸ್ಪರ್ಶಿಯಾಗಿದೆ. 'ನೀನು ಸತ್ತು ಹೋಗು, ನಾನು ಸುಖವಾಗಿರುತ್ತೇನೆ' ಎಂದು ನೇರಾನೇರ ಹೇಳುವ ಕೊಳಕು ಮನಸ್ಸು ಸಹ ನಮ್ಮ ಘನ ಪ್ರತಿನಿಧಿಯಾಗಬಹುದು ಎಂಬುದನ್ನು ಗಮನಿಸಿದಾಗ, ಮಹಾಭಾರತ, ರಾಮಾಯಣದಲ್ಲಿ ಓದಿರುವ ಬಕಾಸುರ, ಕೀಚಕ, ತಾಟಕಾಸುರ, ಮಾರೀಚಾದಿಗಳು ಕಾಲ್ಪನಿಕ ಪಾತ್ರಗಳಷ್ಟೇ ಅಲ್ಲ ಎಂಬುದು ಸ್ಪಷ್ಟವಾದಂತಾಯಿತು! ತಾವೇ ಆಗಲಿ ಇನ್ನಾರೇ ಆಗಲಿ, ಇನ್ನೊಬ್ಬರ ಪಾದದೂಳಿಗೆ ಸಮಾನ ಎಂದು ಭಾವಿಸುವ ಅಥವಾ ಹೋಲಿಸುವ ಪರಾವಲಂಬಿ ಕ್ರಿಮಿಗಳು ಎಂದೆಂದಿಗೂ ಸ್ವಾತಂತ್ರ್ಯಕ್ಕೆ ಅರ್ಹರಾಗುವುದು ಸಾಧ್ಯವಿಲ್ಲ. ಆದರೆ ಅಂಥವರಿಗೂ ವಿಪರೀತ ವಾಕ್‌ಸ್ವಾತಂತ್ರ್ಯ ಸಿಕ್ಕಿರುವುದು ದುರ್ದೈವವಲ್ಲದೆ, ಸೌಭಾಗ್ಯವೆನಿಸಲಾರದು!

ಎಲ್ಲರೂ ಎಲ್ಲ ಕಾಲದಲ್ಲೂ ಮುಖಂಡರಾಗುವುದು ಸಾಧ್ಯವಿಲ್ಲ. ಸನ್ನಿವೇಶ ಕಾಲದ ಅಗತ್ಯಕ್ಕೆ ತಕ್ಕಂತೆ ಒಬ್ಬ ಮುಖಂಡನನ್ನು ಸೃಷ್ಟಿಸುತ್ತದೆ. ಅವರ ನಿರ್ದೇಶನದಂತೆ ಜನ ನಡೆಯುತ್ತಾರೆ. ಅಂದಮಾತ್ರಕ್ಕೆ ಆ ಮುಂದಾಳು ಸರ್ವತಂತ್ರ ಸ್ವತಂತ್ರ, ಮಿಕ್ಕವರೆಲ್ಲಾ ಆ ವ್ಯಕ್ತಿಯ ಗುಲಾಮರು ಎಂಬ ಮನೋಭಾವವೇ ಮನುಷ್ಯಸಮಾಜಕ್ಕೆ ಕಳಂಕಪ್ರಾಯ. ನಾವೆಲ್ಲರೂ ದೇಶದ ಮತ್ತು ಅದು ನಿರೂಪಿಸಿರುವ ಸಂವಿಧಾನದ ಆಳುಗಳೇ. ಆ ಪೈಕಿ ಮುಂಚೂಣಿಯಲ್ಲಿರುವ 'ಆಳು' ಮುಂದಾಳೆನಿಸುತ್ತಾರೆ. ಇದನ್ನರಿಯದೆ ಸ್ವೇಚ್ಛಾಚಾರಿಯಾಗಹೋದರೆ, ಅಂಥವರಿಗೆ ಹೊರದಾರಿ ತೋರಿಸುವ ವಿವೇಚನೆಯ ತಾಕತ್ತೂ ಪ್ರಜಾತಾಂತ್ರಿಕ ಸಮಾಜದಲ್ಲಿ ಇರಬೇಕಾಗುತ್ತದೆ.

ಆರ್.ಕೆ.ದಿವಾಕರ, ಬೆಂಗಳೂರು

ವ್ಯವಸ್ಥೆಯ ಹೆಸರಲ್ಲಿ ತಾರತಮ್ಯ ಸಲ್ಲ

ದಕ್ಷಿಣ ಕರ್ನಾಟಕದ ಹೆಸರಾಂತ ದೇಗುಲವೊಂದಕ್ಕೆ ಇತ್ತೀಚೆಗೆ ಹೋಗಿದ್ದಾಗ ಆದ ಅನುಭವವು ಹೆಣ್ಣುಮಕ್ಕಳು ದೇವಾಲಯವನ್ನು ಪ್ರವೇಶಿಸಲು ಕೇರಳ, ಮಹಾರಾಷ್ಟ್ರದಲ್ಲಿ ಮಾಡಿದಂತಹ ಉಗ್ರ ಹೋರಾಟವನ್ನು ನೆನಪಿಸಿತು. ದೇವಾಲಯದಲ್ಲಿ ಅನ್ನದಾನ ಸೇವಾ ರಸೀದಿಯನ್ನು ಮಾಡಿಸಿದಾಗ ಕುಟುಂಬದವರ ಹೆಸರಲ್ಲಿ ಪೂಜೆ ಮಾಡಿಕೊಡಲಾಗುತ್ತದೆ. ಪತಿ- ಪತ್ನಿ ಹಾಗೂ ಮಗುವಿನ ಜೊತೆಗೆ ಪತಿಯ ತಂದೆ– ತಾಯಿ ಹೆಸರಿನಲ್ಲಿ ಕೂಡ ಪೂಜಾ ಸಂಕಲ್ಪವನ್ನು ಮಾಡಲಾಯಿತು. ಅಂತೆಯೇ, ನನ್ನ ಪತಿ ನನ್ನ ತಂದೆ ತಾಯಿಯ ಹೆಸರು ಹೇಳಿದಾಗ, 'ಅವರ ಹೆಸರಲ್ಲಿ ಪೂಜೆ ಮಾಡಲು ಬರುವುದಿಲ್ಲ, ನಿಮ್ಮ ತಂದೆ ತಾಯಿ ಮಾತ್ರ ನಿಮ್ಮ ಕುಟುಂಬದವರಾಗುತ್ತಾರೆ. ಹಾಗೇನಾದರೂ ಅವರ ಹೆಸರಿನಲ್ಲಿ ಪೂಜೆ ಮಾಡಬೇಕಾದರೆ 250 ರೂಪಾಯಿಯ ಬೇರೊಂದು ರಸೀದಿ ಮಾಡಿಸಿ' ಎಂದರು. ಇಲ್ಲಿ ನಾನು ಚಿಂತಿಸುವಂತೆ ಮಾಡಿದ್ದು, ಪತಿಯ ತಂದೆ-ತಾಯಿ ನನ್ನ ಕುಟುಂಬಕ್ಕೆ ಸೇರುವುದಾದರೆ, ನನ್ನ ತಂದೆ-ತಾಯಿ ಏಕೆ ಸೇರುವುದಿಲ್ಲ ಎಂಬ ಪ್ರಶ್ನೆ. ಪೂಜೆ ಮಾಡುವವರನ್ನು ಹೀಗೆ ಪ್ರಶ್ನಿಸಿದಾಗ, ನಮ್ಮಲ್ಲಿನ ವ್ಯವಸ್ಥೆ ಇರುವುದೇ ಹೀಗೆ ಎಂಬ ಉತ್ತರ ಬಂತು.

ಪ್ರತಿಯೊಬ್ಬ ತಂದೆ– ತಾಯಿ ತಮ್ಮ ಮಕ್ಕಳ ಏಳಿಗೆಗಾಗಿ ಶ್ರಮಿಸುತ್ತಾರೆ. ಮಗಳು ಗರ್ಭಿಣಿಯಾದಾಗ, ಬಾಣಂತನ, ಮಗುವಿನ ಲಾಲನೆ ಪಾಲನೆಯ ಜವಾಬ್ದಾರಿ ಎಲ್ಲವನ್ನೂ ಹೆಣ್ಣಿನ ತಂದೆ-ತಾಯಿ ನಿರ್ವಹಿಸುವ ಪದ್ಧತಿ ಸಮಾಜದಲ್ಲಿದೆ. ಆದರೆ ಅವರು ಮಾತ್ರ ಮಗಳ ಕುಟುಂಬಕ್ಕೆ ಸೇರಿದವರಲ್ಲ ಎಂದರೆ, ಎಂತಹ ಸಮಾಜ ಮತ್ತು ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ? ಇದೊಂದು ನೋವಿನ ಹಾಗೂ ಆಘಾತಕಾರಿ ಸಂಗತಿಯಾಗಿದೆ. ವ್ಯವಸ್ಥೆಯ ಹೆಸರಿನಲ್ಲಿ ಇಂತಹ ತಾರತಮ್ಯವನ್ನು ಎಸಗುತ್ತಿರುವ ಮೂಢರಿಗೆ ಜ್ಞಾನದ ಅರಿವು ಮೂಡಲಿ.

ಸುಷ್ಮಾ ಬಿ.ಎಸ್., ಬೆಂಗಳೂರು

ಕೂಡಲಸಂಗಮ: ಅವ್ಯವಸ್ಥೆ ನಿವಾರಿಸಿ

ಇತ್ತೀಚೆಗೆ ಪರಿವಾರ ಸಮೇತ ಕೂಡಲಸಂಗಮಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ ಅಲ್ಲಿನ ಐಕ್ಯ ಮಂಟಪದೊಳಗಿನ ಅವ್ಯವಸ್ಥೆ ಕಂಡು ದುಃಖವಾಯಿತು. ಬಸವಣ್ಣನವರು ಐಕ್ಯವಾದ ಸ್ಥಳದಲ್ಲಿ ಇರಬೇಕಾದ ಪಾವಿತ್ರ್ಯ, ನಿಶ್ಶಬ್ದ ಹಾಗೂ ಶಿಸ್ತು ಸಂಪೂರ್ಣ ಮಾಯವಾಗಿ, ಮಂಟಪದ ಒಳ ಆವರಣದಲ್ಲಿ ಮಕ್ಕಳ ಕೇಕೆ, ಕಲರವ ಹಾಗೂ ಕಿರುಚಾಟ ತುಂಬಿಕೊಂಡಿತ್ತು. ಇನ್ನು ದೊಡ್ಡವರೆನಿಸಿಕೊಂಡವರು ತಮ್ಮ ಜವಾಬ್ದಾರಿ ಮರೆತು, ತಾವೇನೂ ಕಡಿಮೆಯಿಲ್ಲ ಎಂಬಂತೆ ಫೋಟೊ, ಸೆಲ್ಫಿ ತೆಗೆಯುವುದರಲ್ಲಿ ಮುಳುಗಿದ್ದರಿಂದ ಇಡೀ ವಾತಾವರಣ ಗದ್ದಲಮಯವಾಗಿತ್ತು. ಜಿಲ್ಲಾಡಳಿತ ಕೂಡಲೇ ಇತ್ತ ಗಮನಹರಿಸಿ ಈ ಪ್ರದೇಶದಲ್ಲಿ ಪ್ರಶಾಂತತೆ ಕಾಪಾಡಲು ಕ್ರಮ ಜರುಗಿಸಬೇಕು.

ಡಾ. ವಸಂತ ಕುಮಾರ್, ಯರಬಳ್ಳಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಮಾನದಲ್ಲಿ ದುರ್ವರ್ತನೆ ಶಿಕ್ಷಾರ್ಹ ಅಪರಾಧ

ವಿಮಾನದಲ್ಲಿ ಮತ್ತು ವಿಮಾನ ಹಾರಾಟದ ಸಂದರ್ಭದಲ್ಲಿ ಪ್ರಯಾಣಿಕರು ದುರ್ವರ್ತನೆ ತೋರಿದ ಹಲವು ಘಟನೆಗಳು ಒಂದು ತಿಂಗಳಲ್ಲಿ ವರದಿಯಾಗಿವೆ. ಅವುಗಳಲ್ಲಿ ಪ್ರಯಾಣಿಕರೊಬ್ಬರು ಸಹ ಪ್ರಯಾಣಿಕರೊಬ್ಬರ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದಾರೆ ಎನ್ನಲಾದ ಪ್ರಕರಣ ಮತ್ತು ಸಂಸದ ತೇಜಸ್ವಿ ಸೂರ್ಯ ಅವರು ವಿಮಾನದ ತುರ್ತು ನಿರ್ಗಮನ ಬಾಗಿಲನ್ನು ತೆರೆದಿದ್ದರು ಎನ್ನಲಾದ ಪ್ರಕರಣ ಹೆಚ್ಚು ಸದ್ದು ಮಾಡುತ್ತಿವೆ. ಈ ಸ್ವರೂಪದ ಅವಘಡಗಳ ಸಂದರ್ಭದಲ್ಲಿ ವಿಮಾನದ ಸಿಬ್ಬಂದಿ ಮತ್ತು ವಿಮಾನಯಾನ ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಾಗರಿಕ ವಿಮಾನಯಾನ ಸಚಿವಾಲಯವು ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು (ಎಸ್‌ಒಪಿ) ಜಾರಿಯಲ್ಲಿಟ್ಟಿದೆ. ಆದರೆ, ವಿಮಾನಯಾನ ಸಂಸ್ಥೆಗಳು ಒಂದೊಂದು ಪ್ರಕರಣದಲ್ಲಿ ಒಂದೊಂದು ರೀತಿಯಲ್ಲಿ ಕ್ರಮ ತೆಗೆದುಕೊಂಡಿವೆ. ಪ್ರಯಾಣಿಕರು ತುರ್ತು ನಿರ್ಗಮನ ಬಾಗಿಲನ್ನು ತೆರೆದ ಹಲವು ಘಟನೆಗಳು ಈ ಹಿಂದೆ ನಡೆದಿವೆ. ಆ ಎಲ್ಲಾ ಪ್ರಕರಣಗಳಲ್ಲಿ ಅಂತಹ ದುರ್ವರ್ತನೆ ತೋರಿದ ಪ್ರಯಾಣಿಕರ ವಿರುದ್ಧ ಎಫ್‌ಐಆರ್ ದಾಖಲಿಸಿ, ಅವರನ್ನು ಬಂಧಿಸಲಾಗಿತ್ತು. ಆದರೆ ಈಚಿನ ಪ್ರಕರಣದಲ್ಲಿ ಕ್ಷಮಾಪಣೆ ಪತ್ರ ಬರೆಸಿಕೊಂಡು, ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಲಾಗಿದೆ

ಪ್ರಜಾವಾಣಿ ವಾರ್ತೆ

ವಿಮಾನದಲ್ಲಿ ದುರ್ವರ್ತನೆ ತೋರುವ ಪ್ರಯಾಣಿಕರನ್ನು ನಿರ್ವಹಿಸಲು ಮತ್ತು ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಡಿಜಿಸಿಎ 2010ರಲ್ಲೇ ಎಸ್‌ಒಪಿಯನ್ನು ಜಾರಿಗೆ ತಂದಿತ್ತು. 2017ರಲ್ಲಿ ಈ ಎಸ್‌ಒಪಿಯನ್ನು ವಿಸ್ತರಿಸಲಾಯಿತು. ವಿಮಾನದ ಸುರಕ್ಷತಾ ವ್ಯವಸ್ಥೆಗಳಿಗೆ ಧಕ್ಕೆ ಮಾಡುವುದು ಮತ್ತು ಕಾರ್ಯಾಚರಣೆಗೆ ಅಡ್ಡಿಪಡಿಸುವಂತಹ ದುರ್ವರ್ತನೆಯನ್ನು 'ವಿಮಾನ, ವಿಮಾನದ ಸಿಬ್ಬಂದಿ ಮತ್ತು ಪ್ರಯಾಣಿಕರನ್ನು ಅಪಾಯಕ್ಕೆ ದೂಡುವ ಕ್ರಿಯೆ' ಎಂದು ಈ ಎಸ್‌ಒಪಿಗಳು ವ್ಯಾಖ್ಯಾನಿಸುತ್ತವೆ. ಇಂತಹ ದುರ್ವರ್ತನೆ ತೋರುವ ಪ್ರಯಾಣಿಕರ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಈ ಎಸ್‌ಒಪಿಯಲ್ಲಿ ವಿವರಿಸಲಾಗಿದೆ.

ವಿಮಾನಯಾನ ಸಂಸ್ಥೆಯ ನಿಯಮಗಳನ್ನು ಉಲ್ಲಂಘಿಸುವ, ವಿಮಾನದ ಸಿಬ್ಬಂದಿ ಮತ್ತು ಪೈಲಟ್‌ಗಳ ನಿರ್ದೇಶನವನ್ನು ಉಲ್ಲಂಘಿಸುವ ಹಾಗೂ ಅಪಾಯಕಾರಿ ವರ್ತನೆ ತೋರುವ ಪ್ರಯಾಣಿಕರನ್ನು 'ದುರ್ವರ್ತನೆ ತೋರಿದ ಪ್ರಯಾಣಿಕ' ಎಂದು ವ್ಯಾಖ್ಯಾನಿಸಲಾಗಿದೆ. ಭಾರತದ ಪ್ರತಿಯೊಬ್ಬ ಪ್ರಜೆಗೂ ಈ ನಿಯಮಗಳು ಅನ್ವಯವಾಗುತ್ತವೆ. ಭಾರತದ ವಾಯುಗಡಿಯೊಳಗೆ ಹಾರುವ ವಿಮಾನದಲ್ಲಿರುವ ವಿದೇಶಿ ಪ್ರಯಾಣಿಕರಿಗೂ ಇವು ಅನ್ವಯವಾಗುತ್ತವೆ. ಈ ಎಲ್ಲಾ ಅಂಶಗಳನ್ನು ಎಸ್‌ಒಪಿಯ 2.1 ಮತ್ತು 3.1ನೇ ಸೆಕ್ಷನ್‌ಗಳು ಹಾಗೂ ಅವುಗಳ ಉಪಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ.

ದುರ್ವರ್ತನೆ ತೋರುವ ಪ್ರಯಾಣಿಕರನ್ನು ತಕ್ಷಣವೇ ವಿಮಾನದಿಂದ ಇಳಿಸಬೇಕು ಮತ್ತು ಈ ಬಗ್ಗೆ ವಿಮಾನಯಾನ ಭದ್ರತಾ ಅಧಿಕಾರಿ, ವಿಮಾನ ನಿಲ್ದಾಣ ಪೊಲೀಸ್ ಅಧಿಕಾರಿ, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ಮತ್ತು ವಿಮಾನ ನಿಲ್ದಾಣ ನಿರ್ವಹಣಾ ಕಂಪನಿಗೆ ಮಾಹಿತಿ ನೀಡಬೇಕು ಎಂದು ಎಸ್‌ಒಪಿಯ 4.4 ಮತ್ತು 6.7ನೇ ಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ.

ಪ್ರಯಾಣಿಕರು ತೋರುವ ದುರ್ವರ್ತನೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. ಕಿರುಚಾಟ, ಬೈಗುಳ, ವಾಗ್ವಾದದಲ್ಲಿ ತೊಡಗುವುದನ್ನು ಪ್ರಾಥಮಿಕ ಮಟ್ಟದ ದುರ್ವರ್ತನೆ ಎಂದು ಪರಿಗಣಿಸಲಾಗುತ್ತದೆ. ಹಲ್ಲೆಯಂತಹ ದುರ್ವರ್ತನೆಗಳನ್ನು ದ್ವಿತೀಯ ಮಟ್ಟದ ದುರ್ವರ್ತನೆ ಎಂದು ಪರಿಗಣಿಸಲಾಗುತ್ತದೆ. ವಿಮಾನ, ವಿಮಾನದ ಸಿಬ್ಬಂದಿ ಮತ್ತು ಪ್ರಯಾಣಿಕರಿಗೆ ಅಪಾಯ ಉಂಟು ಮಾಡುವಂತಹ ವರ್ತನೆಗಳನ್ನು ತೃತೀಯ ಮಟ್ಟದ ದುರ್ವರ್ತನೆ ಎಂದು ಪರಿಗಣಿಸಲಾಗುತ್ತದೆ. ಇವುಗಳಲ್ಲಿ ತೃತೀಯ ಮಟ್ಟದ ದುರ್ವರ್ತನೆಗಳು ಭಾರತೀಯ ದಂಡ ಸಂಹಿತೆಯ ಅಡಿ ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲು ಅವಕಾಶವಿದೆ. ರಾಷ್ಟ್ರೀಯ ಭದ್ರತಾ ಕಾಯ್ದೆಯ ಅಡಿಯಲ್ಲೂ ಪ್ರಕರಣ ದಾಖಲಿಸಲು ಅವಕಾಶವಿದೆ. ಈ ಅಂಶಗಳನ್ನು ಎಸ್‌ಒಪಿಯ 4.10 ಮತ್ತು 7ನೇ ಸೆಕ್ಷನ್‌ಗಳಲ್ಲಿ ವಿವರಿಸಲಾಗಿದೆ.

ಮೂರನೇ ಮಟ್ಟದ ದುರ್ವರ್ತನೆ ತೋರುವ ಪ್ರಯಾಣಿಕರನ್ನು ತಕ್ಷಣವೇ ಅಥವಾ ವಿಮಾನವು ನೆಲಕ್ಕಿಳಿದ ತಕ್ಷಣವೇ ವಿಮಾನ ನಿಲ್ದಾಣ ಪೊಲೀಸರ ವಶಕ್ಕೆ ನೀಡಬೇಕು ಮತ್ತು ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ವಿಮಾನ ನಿಲ್ದಾಣ ಪೊಲೀಸರು ಅಂತಹ ಪ್ರಯಾಣಿಕರನ್ನು ಬಂಧಿಸಬೇಕು ಎಂದು ಇದೇ ಎಸ್‌ಒಪಿಯ 4.13ನೇ ಸೆಕ್ಷನ್‌ನಲ್ಲಿ ಸೂಚಿಸಲಾಗಿದೆ. ಇಂತಹ ವರ್ತನೆ ತೋರುವ ಪ್ರಯಾಣಿಕರ ಮೇಲೆ ಕನಿಷ್ಠ ಎರಡು ವರ್ಷಗಳವರೆಗೆ ವಿಮಾನ ಪ್ರಯಾಣ ನಿಷೇಧ ಹೇರಬೇಕು ಎಂದು 8.1ನೇ ಸೆಕ್ಷನ್‌ನಲ್ಲಿ ಸೂಚಿಸಲಾಗಿದೆ.

ಆದರೆ, ಇಂತಹ ಪ್ರಕರಣಗಳಲ್ಲಿ ಇಂಡಿಗೊ ಸಂಸ್ಥೆಯು ಭಿನ್ನ ಸ್ವರೂಪದ ಕ್ರಮಗಳನ್ನು ತೆಗೆದುಕೊಂಡಿರುವುದು ದಾಖಲಾಗಿದೆ. ಹಿಂದಿನ ಪ್ರಕರಣದಲ್ಲಿ ಇಂತಹ ದುರ್ವರ್ತನೆ ತೋರಿದ ಪ್ರಯಾಣಿಕನ ವಿರುದ್ಧ ಇಂಡಿಗೊ ಎಫ್‌ಐಆರ್ ದಾಖಲಿಸಿತ್ತು. ಆ ಪ್ರಯಾಣಿಕನನ್ನು ಪೊಲೀಸರು ಬಂಧಿಸಿದ್ದರು. ಆದರೆ, 2022ರ ಡಿಸೆಂಬರ್ 10ರಂದು ಚೆನ್ನೈನಿಂದ ತಿರುಚಿರಾಪಲ್ಲಿಗೆ ಹೊರಡಬೇಕಿದ್ದ ಇಂಡಿಗೊ ವಿಮಾನದ ತುರ್ತು ನಿರ್ಗಮನದ ಬಾಗಿಲು ತೆಗೆದ ಪ್ರಯಾಣಿಕನಿಂದ ಇಂಡಿಗೊ ಸಂಸ್ಥೆಯು ಕ್ಷಮಾಪಣಾ ಪತ್ರವನ್ನು ಮಾತ್ರ ಪಡೆದುಕೊಂಡಿದೆ. ಪ್ರಕರಣವನ್ನು ಮುಗಿಸಿದೆ.

ತುರ್ತು ನಿರ್ಗಮನ ಬಾಗಿಲು ತೆಗೆದಿದ್ದಕ್ಕೆ ಬಂಧಿಸಲಾಗಿತ್ತು...

2017ರ ಫೆಬ್ರುವರಿಯಲ್ಲಿ ಮುಂಬೈನಿಂದ ಚಂಡೀಗಡಕ್ಕೆ ಹೊರಡಬೇಕಿದ್ದ ಇಂಡಿಗೊ ವಿಮಾನದಲ್ಲಿ ಈ ಘಟನೆ ನಡೆದಿತ್ತು. ಪ್ರಯಾಣಿಕರೊಬ್ಬರು ವಿಮಾನದ ತುರ್ತು ನಿರ್ಗಮನದ ಬಾಗಿಲನ್ನು ತೆರೆದಿದ್ದರು. ಇಂಡಿಗೊ ಸಿಬ್ಬಂದಿಯು ಆ ಪ್ರಯಾಣಿಕನ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸಿ, ಪೊಲೀಸರ ವಶಕ್ಕೆ ನೀಡಿದ್ದರು. ಪೊಲೀಸರು ಆತನನ್ನು ಬಂಧಿಸಿದ್ದರು.

ಅದೇ ವರ್ಷದ ಜುಲೈನಲ್ಲಿ ದೆಹಲಿಯಿಂದ ರಾಂಚಿಗೆ ಹೊರಟಿದ್ದ ಏರ್‌ಏಷ್ಯಾ ವಿಮಾನದಲ್ಲೂ ಇಂಥದ್ದೇ ಘಟನೆ ನಡೆದಿತ್ತು. ತುರ್ತು ನಿರ್ಗಮನ ಬಾಗಿಲನ್ನು ತೆರೆಯಲು ಪ್ರಯಾಣಿಕರು ಯತ್ನಿಸಿದ್ದರು. ಆ ಪ್ರಯಾಣಿಕನ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧಿಸಲಾಗಿತ್ತು. ಈ ಎರಡೂ ಪ್ರಕರಣಗಳ ಅಂತಿಮ ವರದಿಯನ್ನು ಡಿಜಿಸಿಎ ಇನ್ನೂ ಬಿಡುಗಡೆ ಮಾಡಿಲ್ಲ.

ತುರ್ತು ನಿರ್ಗಮನದ ಬಾಗಿಲು ತೆರೆಯಬಾರದೇಕೆ?: ವಿಮಾನದಲ್ಲಿರುವ ತುರ್ತು ನಿರ್ಗಮನದ ಬಾಗಿಲುಗಳನ್ನು ಅಪಘಾತದ ಸಂದರ್ಭದಲ್ಲಷ್ಟೇ ಬಳಸಬೇಕು. ವಿಮಾನ ಟೇಕ್‌ಆಫ್, ಲ್ಯಾಂಡಿಂಗ್ ಮತ್ತು ಹಾರಾಟದ ಸಂದರ್ಭದಲ್ಲಿ ತೆಗೆಯುವುದು ಅಪಾಯಕಾರಿಯಾಗಿ ಪರಿಗಣಿಸುತ್ತದೆ. ಹಾರಾಟದ ಸಂದರ್ಭದಲ್ಲಿ ವಾತಾವರಣದಲ್ಲಿನ ಗಾಳಿಯ ಒತ್ತಡ ಕಡಿಮೆ ಇರುತ್ತದೆ. ಆದರೆ, ನೆಲಮಟ್ಟದಲ್ಲಿ ಇರುವಷ್ಟೇ ಗಾಳಿಯ ಒತ್ತಡವನ್ನು ಹಾರಾಟದ ಸಂದರ್ಭದಲ್ಲಿ ವಿಮಾನದೊಳಗೆ ಕಾಯ್ದುಕೊಳ್ಳಬೇಕು. ಈ ಒತ್ತಡ ಕಡಿಮೆಯಾದರೆ, ಪ್ರಯಾಣಿಕರ ಮೂಗು-ಕಿವಿ, ಬಾಯಿಯಿಂದ ರಕ್ತಸ್ರಾವವಾಗುವ ಹಾಗೂ ಜೀವ ಹೋಗುವ ಅಪಾಯವಿರುತ್ತದೆ.

ವಿಮಾನವು ಟೇಕ್‌ಆಫ್‌ಗೆ ಸಿದ್ಧತೆ ಮಾಡಿಕೊಂಡ ನಂತರ ವಿಮಾನದ ಒಳಗೆ ಸೂಕ್ತ ಮಟ್ಟದ ಗಾಳಿಯ ಒತ್ತಡವನ್ನು ಕಾಯ್ದುಕೊಳ್ಳಲಾಗುತ್ತದೆ. ಆಗ ತುರ್ತು ನಿರ್ಗಮನದ ಬಾಗಿಲನ್ನು ತೆರೆದರೆ, ವಿಮಾನದೊಳಗಿನ ಗಾಳಿಯು ಭಾರಿ ಒತ್ತಡದೊಂದಿಗೆ ಹೊರಕ್ಕೆ ನುಗ್ಗುತ್ತದೆ. ಆಗ ವಿಮಾನದಲ್ಲಿರುವ ವಸ್ತುಗಳು, ಪ್ರಯಾಣಿಕರು ಬಾಗಿಲಿನಿಂದ ಆಚೆಗೆ ತೂರಿಹೋಗುವ ಅಪಾಯವಿರುತ್ತದೆ. ಹಲವು ಸಂದರ್ಭಗಳಲ್ಲಿ ವಿಮಾನ ಪತನವಾಗುವ ಅಪಾಯವೂ ಇರುತ್ತದೆ. ಹೀಗಾಗಿ ಅನಗತ್ಯ ಸಂದರ್ಭದಲ್ಲಿ ತುರ್ತು ನಿರ್ಗಮನದ ಬಾಗಿಲನ್ನು ತೆರೆಯುವುದನ್ನು 'ಅಪಾಯಕಾರಿ ವರ್ತನೆ' ಎಂದು ಪರಿಗಣಿಸಲಾಗುತ್ತದೆ.

ಪ್ರಮುಖ ಘಟನೆಗಳು

ಮೂತ್ರ ವಿಸರ್ಜನೆ ಪ್ರಕರಣ

ನ್ಯೂಯಾರ್ಕ್‌ನಿಂದ ದೆಹಲಿಗೆ ಬರುತ್ತಿದ್ದ ವಿಮಾನದಲ್ಲಿ ಹಿರಿಯ ವಯಸ್ಸಿನ ಮಹಿಳೆಯ ಮೇಲೆ ಶಂಕರ್ ಮಿಶ್ರಾ ಎಂಬ ಪ್ರಯಾಣಿಕ ಮೂತ್ರ ವಿಸರ್ಜನೆ ಮಾಡಿದ್ದಾರೆ ಎನ್ನಲಾದ ಘಟನೆಯು ಜಾಗತಿಕವಾಗಿ ಸುದ್ದಿಯಾಗಿತ್ತು. ಮಹಿಳೆ ಹಾಗೂ ವಿಮಾನದ ಸಿಬ್ಬಂದಿ ನೀಡಿದ ದೂರಿನ ಮೇಲೆ ಆರೋಪಿಯನ್ನು ಬೆಂಗಳೂರಿನಲ್ಲಿ ಬಂಧಿಸಲಾಯಿತು. ಆರೋಪಿಯನ್ನು ಕೋರ್ಟ್ ನ್ಯಾಯಾಂಗ ಬಂಧನಕ್ಕೆ ನೀಡಿದೆ. ಮಿಶ್ರಾನಿಗೆ ನಾಲ್ಕು ತಿಂಗಳು ವಿಮಾನ ಪ್ರಯಾಣ ನಿಷೇಧ ಹೇರಲಾಗಿದೆ. ಇಂತಹದ್ದೇ ಮತ್ತೊಂದು ಘಟನೆ ಇದೇ ಅವಧಿಯಲ್ಲಿ ನಡೆಯಿತು. ಪ್ಯಾರಿಸ್-ದೆಹಲಿ ಮಾರ್ಗದ ವಿಮಾನದಲ್ಲಿ ಮದ್ಯಪಾನ ಮಾಡಿದ್ದ ಪ್ರಯಾಣಿಕನೊಬ್ಬ ಮಹಿಳಾ ಪ್ರಯಾಣಿಕರಿಗೆ ಸೇರಿದ ಹೊದಿಕೆಯ ಮೇಲೆ ಮೂತ್ರ ವಿಸರ್ಜನೆ ಮಾಡಿದ ಘಟನೆ ಡಿಸೆಂಬರ್ 6ರಂದು ವರದಿಯಾಗಿತ್ತು. ವಿಮಾನದ ಸಹಾಯಕರು ನೀಡಿದ ದೂರಿನ ಮೇರೆಗೆ ದೆಹಲಿ ನಿಲ್ದಾಣದಲ್ಲಿ ಪ್ರಯಾಣಿಕನನ್ನು ವಶಕ್ಕೆ ಪಡೆಯಲಾಗಿತ್ತು. ಆರೋಪಿಯು ಕ್ಷಮೆ ಕೇಳಿದ್ದರಿಂದ ಯಾವುದೇ ಕ್ರಮ ಜರುಗಿಸದೇ ಆತನನ್ನು ಬಿಟ್ಟು ಕಳುಹಿಸಲಾಗಿತ್ತು.

ಮದ್ಯಪಾನ ಮಾಡಿ ವಿಮಾನದಲ್ಲಿ ಕೋಲಾಹಲ

ಮದ್ಯಪಾನ ಮಾಡಿ ದೆಹಲಿ-ಪಟ್ನಾ ವಿಮಾನದಲ್ಲಿ ಕೋಲಾಹಲ ಎಬ್ಬಿಸಿದ ಆರೋಪದ ಮೇಲೆ ಇಬ್ಬರು ಪ್ರಯಾಣಿಕರನ್ನು ಇದೇ 12ರಂದು ಪಟ್ನಾದಲ್ಲಿ ಬಂಧಿಸಲಾಗಿತ್ತು. ಅವರು ವಿಮಾನದಲ್ಲಿ ದುರ್ವರ್ತನೆ ತೋರಿದ್ದರು ಎಂಬುದಾಗಿ ಇಂಡಿಗೊ ವ್ಯವಸ್ಥಾಪಕ ನೀಡಿದ್ದ ದೂರು ಆಧರಿಸಿ ಪ್ರಯಾಣಿಕರನ್ನು ಬಂಧಿಸಲಾಗಿತ್ತು. ವಿಮಾನದಲ್ಲಿ ಇಂತಹ ವರ್ತನೆ ತೋರಿದವರನ್ನು, ಅವರು ನಿಲ್ದಾಣದಲ್ಲಿ ಇಳಿದ ಕೂಡಲೇ ಬಂಧಿಸಬೇಕು ಎಂದು ನಿಯಮಗಳು ಹೇಳುತ್ತವೆ.

ಕುನಾಲ್ ಕಾಮ್ರಾಗೆ ಪ್ರಯಾಣ ನಿರ್ಬಂಧ

ಕುನಾಲ್

ಸ್ಟ್ಯಾಂಡಪ್ ಕಮಿಡಿಯನ್ ಕುನಾಲ್ ಕಾಮ್ರಾ ಅವರು ಪತ್ರಕರ್ತ ಅರ್ಣಬ್ ಗೋಸ್ವಾಮಿ ಅವರ ಜೊತೆ ಮುಂಬೈ-ಲಖನೌ ಮಾರ್ಗದ ಇಂಡಿಗೊ ವಿಮಾನದಲ್ಲಿ ಪ್ರಯಾಣಿಸುವ ವೇಳೆ ವಾಗ್ವಾದ ನಡೆಸಿದ್ದರು ಎಂಬ ಆರೋಪ 2020ರಲ್ಲಿ ಕೇಳಿಬಂದಿತ್ತು. ಅರ್ಣಬ್ ಅವರ ಮುಂದೆ ಕೆಲವು ಪ್ರಶ್ನೆಗಳನ್ನು ಇಟ್ಟು, ಉತ್ತರಿಸುವಂತೆ ಕಾಮ್ರಾ ಪಟ್ಟು ಹಿಡಿದಿದ್ದರು ಎನ್ನಲಾಗಿದೆ. ಕಾಮ್ರಾ ಅವರು ವಿಮಾನದಲ್ಲಿ ದುರ್ವರ್ತನೆ ತೋರಿದ್ದಾರೆ ಎಂಬ ಕಾರಣಕ್ಕೆ ಅವರಿಗೆ 6 ತಿಂಗಳು ವಿಮಾನ ಯಾನ ನಿಷೇಧ ಹೇರಲಾಗಿತ್ತು. ನಾಗರಿಕ ವಿಮಾನಯಾನ ಸಚಿವಾಲಯದ ಸೂಚನೆಯಂತೆ ನಾಲ್ಕು ವಿಮಾನಯಾನ ಸಂಸ್ಥೆಗಳು ಅವರಿಗೆ ನಿಷೇಧ ಹೇರಿದ್ದವು ಎನ್ನಲಾಗಿದೆ.

ಪ್ರಯಾಣ ನಿಷೇಧ ನಿರ್ಧಾರವು ಭಾರಿ ಚರ್ಚೆಗೂ ಕಾರಣವಾಗಿತ್ತು. ತಮ್ಮ ಅಭಿಪ್ರಾಯವನ್ನು ಪಡೆಯದೇ ಕಾಮ್ರಾ ಅವರಿಗೆ ನಿಷೇಧ ಹೇರಿದ್ದು ಏಕೆ ಎಂದು ಇಂಡಿಗೊ ವಿಮಾನದ ಪೈಲಟ್ ದನಿ ಎತ್ತಿದ್ದರು. ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಆಧರಿಸಿ ಪ್ರಯಾಣ ನಿರ್ಬಂಧ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅವರು ಆರೋಪಿಸಿದ್ದರು. ಕಾಮ್ರಾ ಅವರ ವರ್ತನೆ ಸರಿಯಲ್ಲದಿದ್ದರೂ, ದುರ್ವರ್ತನೆಯ ಮಟ್ಟದಲ್ಲಿ ಇರಲಿಲ್ಲ ಎಂದು ಅವರು ಹೇಳಿದ್ದರು ಎಂದು 'ದಿ ವೈರ್' ಜಾಲತಾಣ ವರದಿ ಮಾಡಿತ್ತು.

ಮಹಿಳೆಯ ಮೇಲೆ ಮೂತ್ರ ವಿಸರ್ಜನೆ ಮಾಡಿದ ಆರೋಪಿಗೆ ಪ್ರಯಾಣ ನಿಷೇಧ ಹೇರಿರುವ ನಿರ್ಧಾರವನ್ನು ತಮ್ಮ ಪ್ರಕರಣದ ಜೊತೆ ತುಲನೆ ಮಾಡಿ, ಕಾಮ್ರಾ ಅವರು ಟ್ವೀಟ್ ಮಾಡಿದ್ದಾರೆ. ತಾರತಮ್ಯ ಮಾಡಲಾಗಿದೆ ಎಂಬುದನ್ನು 'ಎರಡು ರೀತಿಯ ಭಾರತ' (2 Air India's) ಎಂದು ಅವರು ಉಲ್ಲೇಖಿಸಿದ್ದಾರೆ.

ವಿಮಾನದಲ್ಲಿ ಪ್ರಯಾಣಿಕರ ಘರ್ಷಣೆ

ಬ್ಯಾಂಕಾಕ್-ಕೋಲ್ಕತ್ತ ಮಾರ್ಗದ ವಿಮಾನದಲ್ಲಿ ಪ್ರಯಾಣಿಕರ ನಡುವಣ ವಾಗ್ವಾದವು ಘರ್ಷಣೆಗೆ ತಿರುಗಿದ ಘಟನೆ ಕಳೆದ ತಿಂಗಳು ವರದಿಯಾಗಿತ್ತು. ಡಿಸೆಂಬರ್ 27ರಂದು ಸೀಟನ ವಿಚಾರಕ್ಕೆ ಇಬ್ಬರು ವ್ಯಕ್ತಿಗಳು ಘರ್ಷಣೆ ನಡೆಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ಪ್ರಕರಣದ ಬಗ್ಗೆ ನಾಗರಿಕ ವಿಮಾನ ಭದ್ರತಾ ಸಂಸ್ಥೆಯು (ಬಿಸಿಎಎಸ್) ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿತ್ತು. ತನಿಖೆಯ ಬಳಿಕ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಸಂಸ್ಥೆ ತಿಳಿಸಿತ್ತು. ವಿಮಾನದಲ್ಲಿ ಪ್ರಯಾಣಿಕರು ತೋರಿದ ದುರ್ವರ್ತನೆಯನ್ನು ಸಹಿಸಲಾಗದು ಎಂದು ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಪ್ರತಿಕ್ರಿಯಿಸಿದ್ದರು.

ಕೆಟ್ಟದಾಗಿ ಮಾತನಾಡಿದ್ದಕ್ಕೆ ಕೆಳಗಿಳಿಸಲಾಗಿತ್ತು

ಗೋವಾ-ಮುಂಬೈ ಮಾರ್ಗದ ಗೋಫಸ್ಟ್ ವಿಮಾನದಲ್ಲಿ ಸಿಬ್ಬಂದಿಯ ಬಗ್ಗೆ ಕೆಟ್ಟದಾಗಿ ಮಾತನಾಡಿದ ಆರೋಪದ ಮೇಲೆ ಇಬ್ಬರು ವಿದೇಶಿ ಪ್ರಯಾಣಿಕರನ್ನು ವಿಮಾನದಿಂದ ಕೆಳಗಿಳಿಸಿದ ಘಟನೆ ಇದೇ 6ರಂದು ವರದಿಯಾಗಿತ್ತು. ಕೆಲವು ಪ್ರಯಾಣಿಕರ ಜೊತೆಗೂ ಅನುಚಿತವಾಗಿ ವರ್ತಿಸಿದ್ದ ಅವರ ವಿರುದ್ಧ, ನಿಯಮಾವಳಿ ಉಲ್ಲಂಘನೆ ಆರೋಪದ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ವಿಮಾನಯಾನ ಸಂಸ್ಥೆಯ ವಕ್ತಾರರು ತಿಳಿಸಿದ್ದರು. ಕೆಳಗೆ ಇಳಿಸಿದ ಇಬ್ಬರನ್ನೂ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿಗೆ ಹಸ್ತಾಂತರಿಸಲಾಗಿತ್ತು.

ಆಧಾರ: ಪ್ರಯಾಣಿಕರ ದುರ್ವತನೆ ವರದಿ ಪ್ರಕ್ರಿಯೆ ನಿಯಮಗಳು–2010, ಪ್ರಯಾಣಿಕರ ದುರ್ವತನೆ ನಿರ್ವಹಣೆ ಎಸ್‌ಒಪಿ–2017, ಡಿಜಿಸಿಎ, ಪಿಟಿಐ, ರಾಯಿಟರ್ಸ್

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಭಾರತೀಯ ಕುಸ್ತಿ ಫೆಡರೇಶನ್ ಅಧ್ಯಕ್ಷರ ವಿರುದ್ಧದ ಗುರುತರ ಆರೋಪದ ಹಿನ್ನೆಲೆಯಲ್ಲಿ ಕ್ರೀಡಾ ಒಕ್ಕೂಟಗಳ ಆಡಳಿತ ವ್ಯವಸ್ಥೆಯನ್ನು ಸರಿಪಡಿಸಲು ಇದು ಸಕಾಲ ಎಂದು ಅನ್ನಿಸುತ್ತಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಚುನಾವಣೆ: ಮತ್ತೆ ಪ್ರತ್ಯೇಕ ರಾಜ್ಯದ ಕೂಗು

ಪ್ರತಿಪಕ್ಷಗಳ ಒಗ್ಗಟ್ಟಿಗೆ 'ಟಿಪ್ರಲ್ಯಾಂಡ್' ಅಡ್ಡಿ?

• ಸುಮೀರ್ ಕರ್ಮಾಕರ್

ಜನತಂತ್ರದ ಹಬ್ಬ 2023

ಗುವಾಹಟಿ: ಫೆಬ್ರುವರಿ 16ರಂದು ನಿಗದಿಯಾಗಿರುವ ತ್ರಿಪುರಾ ವಿಧಾನಸಭಾ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ವಿರುದ್ಧ ಪ್ರತಿಪಕ್ಷಗಳ ಒಗ್ಗಟ್ಟಿಗೆ 'ಟಿಪ್ರಲ್ಯಾಂಡ್' ಪ್ರತ್ಯೇಕ ರಾಜ್ಯ ವಿಚಾರ ಅಡ್ಡಿಯಾದಂತೆ ಕಾಣುತ್ತಿದೆ.

ಪ್ರತಿಪಕ್ಷಗಳಾದ ಸಿಪಿಎಂ ಹಾಗೂ ಕಾಂಗ್ರೆಸ್ ನಡುವೆ ಸೀಟು ಹೊಂದಾಣಿಕೆ ಮಾತುಕತೆ ನಡೆಯುತ್ತಿದೆ. ಆದರೆ, ಗ್ರೇಟರ್ ಟಿಪ್ರಲ್ಯಾಂಡ್ ಪ್ರತ್ಯೇಕ ರಾಜ್ಯ ಹೋರಾಟದ ಮುಂಚೂಣಿಯಲ್ಲಿರುವ ಪ್ರಾದೇಶಿಕ ಪಕ್ಷಗಳ ಒಕ್ಕೂಟವಾದ 'ಟಿಪ್ರಮೋಥಾ' ಪ್ರತಿಪಕ್ಷಗಳ ಮೈತ್ರಿಕೂಟವನ್ನು ಇನ್ನಷ್ಟೇ ಸೇರಬೇಕಿದೆ. ಗ್ರೇಟರ್ ಟಿಪ್ರಲ್ಯಾಂಡ್ ರಚನೆ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂದು ಮೋಥಾ ಮುಖ್ಯಸ್ಥ ಪ್ರದ್ಯೋತ್ ದೇಬಬರ್ಮಾ ಅವರು ಸ್ಪಷ್ಟಪಡಿಸಿದ್ದು, ಈ ಬೇಡಿಕೆಯ ಬಗ್ಗೆ ಲಿಖಿತ ಭರವಸೆ ನೀಡಿದರೆ ಮೈತ್ರಿಕೂಟ ಸೇರುವುದಾಗಿ ತಿಳಿಸಿದ್ದಾರೆ.

ಬಿಜೆಪಿಯನ್ನು ಅಧಿಕಾರದಿಂದ ಇಳಿಸುವ ಉದ್ದೇಶದಿಂದ ಪ್ರತಿಪಕ್ಷಗಳ ಮೈತ್ರಿಕೂಟವನ್ನು ರಚಿಸಲಾಗುತ್ತಿದ್ದು, ಈ ಕುರಿತ ಮಾತುಕತೆಗೆ ಬರುವಂತೆ ಪ್ರದ್ಯೋತ್ ಅವರಿಗೆ ಸಿಪಿಎಂ ಹಾಗೂ ಕಾಂಗ್ರೆಸ್ ಪದೇ ಪದೇ ಮನವಿ ಮಾಡಿದ್ದರೂ ಅವರು ತಮ್ಮ ನಿಲುವಿಗೆ ಅಂಟಿಕೊಂಡಿದ್ದಾರೆ. ತ್ರಿಪುರಾದ ಭೌಗೋಳಿಕ ಹಾಗೂ ಸಾಂಸ್ಕೃತಿಕ ವಿಭಜನೆಯನ್ನು ವಿರೋಧಿಸುವುದಾಗಿ ಸಿಪಿಎಂ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಚೌಧರಿ ಅವರು ಹೇಳಿದ್ದಾರೆ. ಆದರೆ ಬುಡಕಟ್ಟುಗಳ ಕಲ್ಯಾಣಕ್ಕೆ ಸಂವಿಧಾನದತ್ತವಾಗಿ ದೊರೆಯಬೇಕಿರುವ ಹಕ್ಕುಗಳು ಹಾಗೂ ಗರಿಷ್ಠ ಸ್ವಾಯತ್ತೆಯ ಪರ ಇರುವುದಾಗಿ ಅವರು ತಿಳಿಸಿದ್ದಾರೆ.

ತ್ರಿಪುರಾ ಬುಡಕಟ್ಟು ಪ್ರದೇಶಗಳ ಸ್ವಾಯತ್ತ ಜಿಲ್ಲಾ ಮಂಡಳಿಯ (ಟಿಟಿಎಡಿಸಿ) ನಿಯಂತ್ರಣಕ್ಕೆ ಒಳಪಟ್ಟ ಪ್ರದೇಶಗಳನ್ನು ಟಿಪ್ರಲ್ಯಾಂಡ್ ಒಳಗೊಂಡಿದೆ. ಪ್ರತ್ಯೇಕ ರಾಜ್ಯ ರಚನೆ ವಿಚಾರ ಇಟ್ಟುಕೊಂಡೇ, ಬಿಜೆಪಿ ಹಾಗೂ ಅದರ ಮಿತ್ರಪಕ್ಷ 'ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರಾ'ವನ್ನು (ಐಪಿಎಫ್‌ಟಿ) ಕಳೆದ ಮಾರ್ಚ್‌ನಲ್ಲಿ ನಡೆದ ಮಂಡಳಿ ಚುನಾವಣೆಯಲ್ಲಿ ಟಿಪ್ರಮೋಥಾ ಪರಾಭವಗೊಳಿಸಿತ್ತು. 60ರ ಪೈಕಿ 20 ವಿಧಾನಸಭಾ ಕ್ಷೇತ್ರಗಳು ವ್ಯಾಪಿಸಿರುವ ಟಿಟಿಎಡಿಸಿ ಪ್ರದೇಶದಲ್ಲಿ ಈ ಬಾರಿ ಬಿಜೆಪಿ ಹಾಗೂ ಐಪಿಎಫ್‌ಟಿಗೆ ಟಿಪ್ರಮೋಥಾ ಕಠಿಣ ಸ್ಪರ್ಧೆ ಒಡ್ಡುವ ಸಾಧ್ಯತೆಯಿದೆ.

ತನ್ನ ಮತಬ್ಯಾಂಕ್ ಆಗಿರುವ ಬಂಗಾಳಿ ಜನರು ರಾಜ್ಯ ವಿಭಜನೆಯ ವಿರುದ್ಧ ಇದ್ದಾರೆ ಎಂಬ ಕಾರಣಕ್ಕೆ ತೃಣಮೂಲ ಕಾಂಗ್ರೆಸ್ ಪಕ್ಷವೂ ಪ್ರತ್ಯೇಕತೆಯನ್ನು ಒಪ್ಪುತ್ತಿಲ್ಲ.

ಬಿಜೆಪಿ ಸಖ್ಯ ತೊರೆಯುವುದೇ ಐಪಿಎಫ್‌ಟಿ?

ಬಿಜೆಪಿ ಜೊತೆಗಿನ ಸಖ್ಯ ತೊರೆದು ಬರುವಂತೆ ಐಪಿಎಫ್‌ಟಿಗೆ ಟಿಪ್ರಮೋಥಾ ಆಹ್ವಾನ ನೀಡಿದೆ. ಟಿಪ್ರಲ್ಯಾಂಡ್ ಪ್ರತ್ಯೇಕತೆ ಉದ್ದೇಶದಿಂದ ವಿಧಾನಸಭಾ ಚುನಾವಣೆಯಲ್ಲಿ ಒಗ್ಗಟ್ಟಿನ ಹೋರಾಟದಲ್ಲಿ ಜೊತೆಯಾಗುವಂತೆ ಮನವಿ ಮಾಡಿದೆ. ಈ ಆಹ್ವಾನವನ್ನು ಪರಿಗಣಿಸಿರುವ ಐಪಿಎಫ್‌ಟಿ, ಮೈತ್ರಿಕೂಟ ಸೇರ್ಪಡೆ ಅಥವಾ ಸಂಭಾವ್ಯ ವಿಲೀನ ಕುರಿತ ಮಾತುಕತೆಗೆ ಒಪ್ಪಿಗೆ ಸೂಚಿಸಿದೆ.

ಆದರೆ, ಪ್ರತ್ಯೇಕ ರಾಜ್ಯದ ವಿರೋಧಿಯಾಗಿರುವ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡು 2018ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಐಪಿಟಿಎಫ್, ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. ಈ ಬಳಿಕ ಟಿಪ್ರಮೋಥಾ ಪ್ರವರ್ಧಮಾನಕ್ಕೆ ಬಂದಿತು.

> **ಲಿಖಿತ ಭರವಸೆಯ ಬದಲಾಗಿ, ಮೈತ್ರಿಕೂಟದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಈ ವಿಚಾರವನ್ನು ಹೇಗೆ ಸೇರ್ಪಡೆ ಮಾಡಬಹುದು ಎಂಬ ಬಗ್ಗೆ ಮಾತುಕತೆಗೆ ಸಿದ್ಧ**
> **ಸುದೀಪ್ ರಾಯ್,** ಕಾಂಗ್ರೆಸ್ ಶಾಸಕ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ವಿದೇಶಿ ಅಧಿಕಾರಿಗಳು ಬಾಳೆ ಎಲೆಯಲ್ಲಿ ಊಟ ಮಾಡುತ್ತಿರುವುದರ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಭಾರತದ ಪ್ರಮುಖ ಹಬ್ಬಗಳಲ್ಲಿ ಒಂದಾಗಿರುವ 'ಪೊಂಗಲ್' ಹಬ್ಬವನ್ನು (ಸಂಕ್ರಾಂತಿ) ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ತಮ್ಮ ಕಚೇರಿಯಲ್ಲಿ ಆಚರಿಸಿದ್ದಾರೆ ಎಂದು ಭಾರತದ ಹಲವು ಸುದ್ದಿ ಮಾಧ್ಯಮಗಳು ವರದಿ ಮಾಡಿವೆ. 'ಪ್ರಧಾನಿ ಕಚೇರಿಯ ಸಿಬ್ಬಂದಿಗೆ ಸಾಂಪ್ರದಾಯಿಕ ಬಾಳೆಎಲೆಯ ಊಟ ಬಡಿಸಲಾಗಿದೆ. ರಿಷಿ ಸುನಕ್ ಅವರು ಭಾರತದ ಹಬ್ಬ ಹಾಗೂ ಸಂಪ್ರದಾಯಗಳನ್ನು ಮರೆತಿಲ್ಲ' ಎಂದು ಜಾಲತಾಣ ಬಳಕೆದಾರರು ಪ್ರಶಂಸಿಸಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.

ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ತಮ್ಮ ಕಚೇರಿಯ ಸಿಬ್ಬಂದಿಗೆ ಸಂಕ್ರಾಂತಿ ಭೋಜನಕೂಟ ಏರ್ಪಡಿಸಿದ್ದರು ಎಂದು ತಪ್ಪಾಗಿ ಅರ್ಥೈಸಲಾಗಿದೆ ಎಂದು 'ಆಲ್ಟ್‌ನ್ಯೂಸ್' ವೆಬ್‌ಸೈಟ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಈ ವಿಡಿಯೊ ಕೆನಡಾದ ವಾಟರ್‌ಲೂಗೆ ಸಂಬಂಧಿಸಿದ್ದು. ಅಲ್ಲಿನ ತಮಿಳ್ ಸಂಘವು ಏರ್ಪಡಿಸಿದ್ದ ಪೊಂಗಲ್ ಹಬ್ಬದೂಟದಲ್ಲಿ ಸ್ಥಳೀಯ ಮೇಯರ್, ಕೌನ್ಸಿಲರ್‌ಗಳು ಹಾಗೂ ಪೊಲೀಸ್ ಅಧಿಕಾರಿಗಳು ಭಾಗಿಯಾಗಿದ್ದರು. ಈ ವಿಡಿಯೊವನ್ನು ತಮಿಳ್ ಸಂಘವು ತನ್ನ ಫೇಸ್‌ಬುಕ್ ಪುಟದಲ್ಲಿ ಪ್ರಕಟಿಸಿದೆ. ಇದನ್ನೇ ತಪ್ಪಾಗಿ ಅರ್ಥೈಸಿ, ಸುನಕ್ ಅವರು ಆಯೋಜಿಸಿದ್ದ ಭೋಜನಕೂಟ ಎಂದು ಬಿಂಬಿಸಲಾಗಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಅಭಯಪಥ

ಶುಭವಾವುದಶುಭವಾವುದು ಲೋಕದಲಿ ನೋಡೆ?
ವಿಭಜಿಸಲ್ಕಾಗದನ್ಯೋನ್ಯ ಸಂಬಂಧ ||
ಉಭಯವನು ಮೀರ್ದ ಸಾಮ್ಯದ ನೀತಿಯೊಂದಿಹುದು |
ಅಭಯಪಥವದು ನಿನಗೆ – ಮಂಕುತಿಮ್ಮ || 804 ||

ಪದ-ಅರ್ಥ: ಶುಭವಾವುದಶುಭವಾವುದು = ಶುಭವು + ಯಾವುದು + ಅಶುಭ ವು + ಯಾವುದು, ವಿಭಜಿಸಲ್ಕಾಗದನ್ಯೋನ್ಯಸಂಬAಧ = ವಿಭಜಿಸಲ್ಕೆ(-ವಿಭಜಿಸಲು) + ಆಗದ + ಅನ್ಯೋನ್ಯ + ಸಂಬಂಧ, ಉಭಯವನು = ಎರಡನ್ನು, ಮೀರ್ದ = ಮೀರಿದ, ಸಾಮ್ಯದ = ಅನ್ಯೋನ್ಯತೆಯ, ಅಭಯಪಥವದು = ಅಭಯ(ಭಯವಿಲ್ಲದ) + ಪಥವದು (ಮಾರ್ಗವದು).

ವಾಚ್ಯಾರ್ಥ: ಸರಿಯಾಗಿ ನೋಡಿದರೆ ಜಗತ್ತಿನಲ್ಲಿ ಶುಭ ಯಾವುದು, ಅಶುಭ ಯಾವುದು? ಅವೆರಡಕ್ಕೂ ವಿಭಜಿಸಲಾಗದ ಅನ್ಯೋನ್ಯ ಸಂಬಂಧವಿದೆ. ಇವೆರಡನ್ನೂ ಸಮನ್ವಯಗೊಳಿಸಿದ ನೀತಿಯೊಂದಿದೆ. ಅದೇ ನಿನಗೆ ಅಭಯದ ಹಾದಿ.

ವಿವರಣೆ: ಬದುಕಿನಲ್ಲಿ ಅನೇಕ ಕಾರ್ಯಗಳನ್ನು ಶುಭ ಕಾರ್ಯಗಳು ಮತ್ತು ಅಶುಭಕಾರ್ಯಗಳು ಎಂದು ನಂಬಿಕೊಂಡಿದ್ದೇವೆ. ರಸ್ತೆಯಲ್ಲಿ ಹೋಗುವಾಗ ಬೆಕ್ಕು ಅಡ್ಡಬಂದರೆ ಅಶುಭ ಎನ್ನುತ್ತೇವೆ. ಅದು ನಿಜವಾಗಿಯೂ ಅಶುಭವಾಗುವುದು ನಮಗೋ, ಬೆಕ್ಕಿಗೋ ತಿಳಿಯದು. ನನ್ನ ಗೆಳೆಯನೊಬ್ಬ ಇಂಥದನ್ನು ಬಲವಾಗಿ ನಂಬುವವನು. ಅವನ ಪ್ರಕಾರ ಮನೆಯಿಂದ ಕೆಲಸಕ್ಕೆ ಹೊರಟರೆ, ಎದುರಿಗೆ ಹುಬ್ಬಿನ ನಡುವೆ ಕುಂಕುಮ ಹಚ್ಚಿದ ಹುಡುಗಿ ಎದುರು ಬಂದರೆ ಶುಭವಾಗುತ್ತದೆ. ಅದಕ್ಕೊಂದು ಉಪಾಯ ಮಾಡಿಕೊಂಡಿದ್ದ. ತಾನು ಮನೆಯಿಂದ ಹೊರಡುವ ಮೊದಲು ಪಕ್ಕದ ಮನೆಯಲ್ಲಿದ್ದ ಹುಡುಗಿಗೆ ಫೋನ್ ಮಾಡಿ, "ನಾನು ಹೊರಡ್ತಾ ಇದ್ದೇನೆ, ಬೇಗನೆ ಹಣೆಗೆ ಕುಂಕುಮ ಇಟ್ಟುಕೊಂಡು ಎದುರಿಗೆ ಬಾ" ಎಂದು ಕೂಗಿ ನಂತರ ಹೊರಗೆ ಬಂದು, ಆಕೆಯನ್ನು ಎದುರಿಗೆ ಕಂಡು, ಇಂದು ಶುಭವಾಗುತ್ತದೆ ಎಂದು ಹೋಗುತ್ತಿದ್ದ. ಆ ಭ್ರಮೆ ಬಹಳ ದಿನ ಉಳಿಯಲಿಲ್ಲ. ಶುಭ, ಅಶುಭಗಳೆಲ್ಲ ನಾವು ಮಾಡಿಕೊಂಡ ವಿಂಗಡನೆಗಳು. ದೇಹ ನಮ್ಮದೇ. ಅದರ ಪ್ರತಿಯೊಂದು ಅಣುವಿನಲ್ಲೂ ನಾವೇ. ಆದರೆ ಬಲಗಾಲು ಶುಭ, ಎಡಗಾಲು ಅಶುಭ! ಎಡಗೈ ಅಶುಭ, ಬಲಗೈ ಶುಭ! ಹೀಗೆ ದೇಹದಲ್ಲೇ ಇಷ್ಟು ಭೇದ ಮಾಡುವ ನಾವು ಜಗತ್ತಿನಲ್ಲಿ ಅದೆಷ್ಟು ಭೇದ ಮಾಡುತ್ತೇವಲ್ಲ! ಎಲ್ಲ ದಿನಗಳೂ ಸೂರ್ಯನವೇ. ಆದರೆ, ನಮಗೆ ಕೆಲದಿನಗಳು ಶುಭ ದಿನಗಳು, ಮತ್ತೆ ಕೆಲವು ಅಶುಭದ ದಿನಗಳು. ಆ ದಿನಗಳಲ್ಲೇ ಕೆಲವು ಗಂಟೆಗಳು ಶುಭದ ಗಂಟೆಗಳು ಮತ್ತೆ ಉಳಿದವು ಅಶುಭದ ಕಾಲದ ಸಮಯ.

ಈ ಶುಭ ಮತ್ತು ಅಶುಭಗಳಿಗೆ ಅನ್ಯೋನ್ಯವಾದ ಸಂಬಂಧವಿದೆ. ನಮಗೆ ಈ ಭೇದಗಳು ಕೇವಲ ತೋರಿಕೆ. ತೆರೆಗಳನ್ನು ನೋಡುವವರಿಗೆ ಸಮುದ್ರ ಕಾಣುವುದಿಲ್ಲ. ಸಮುದ್ರವನ್ನು ನೋಡುವವರಿಗೆ ತೆರೆಗಳು ಮಾಯವಾಗುತ್ತವೆ. ಸಂತರು ಮೂಲವಸ್ತುವನ್ನು ಕಂಡರು. ಅದರ ಅಭೇದತೆಯನ್ನು ಅನುಭವಿಸಿದರು. ಶುಭ, ಅಶುಭಗಳೆಲ್ಲ ಮೂಲಸತ್ವದ ವಿಭಿನ್ನ ಮುಖಗಳು, ಒಂದನ್ನು ಬಿಟ್ಟು ಮತ್ತೊಂದಿಲ್ಲ ಎಂಬುದನ್ನು ಅರಿತರು. ಅವರು ವಿಶ್ವದ ಆದಿ ಅಂತ್ಯಗಳಲ್ಲಿ ನೆಲೆಸಿದ ಸತ್ಯವನ್ನು ಕಂಡರು. ಆಗ ಶುಭಾಶುಭಗಳ ಭೇದವೇ ಇಲ್ಲ. ಆ ಮೂಲವನ್ನು ಕಂಡು, ತೋರಿಕೆಯ ಶುಭ ಮತ್ತು ಅಶುಭಗಳನ್ನು ಮನಸ್ಸಿಗೆ ತಂದುಕೊಳ್ಳದೆ ಬದುಕುವುದೇ ಭಯರಹಿತವಾದ ಮಾರ್ಗ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜನವರಿ 20, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ತ್ರಯೋದಶಿ ಗಂ. 10-00, ಚತುರ್ದಶಿ ಗಂ. 30-18 ನಕ್ಷತ್ರ: ಮೂಲಾ ಗಂ. 12-40 ಯೋಗ: ವ್ಯಾಘಾತ ಗಂ. 18-57, ಕರಣ: ವಣಿಜ ಗಂ. 10-00, ಮಕರ ಮಾಸದ 06 ನೇ ದಿನ.ರಾಹುಕಾಲ : ಬೆಳಿಗ್ಗೆ 10-30 –12-00 ಸೂರ್ಯೋದಯ : 07-01 ಸೂರ್ಯಾಸ್ತ : 06-22, ಮುಸ್ಲಿಂ ದಿನಾಂಕ : 27 ಜುಮಾದುಸ್ಸಾನಿ ದಿನ ವಿಶೇಷ : ಮೇರು ತ್ರಯೋದಶಿ (ಜೈನ್), ರತಾಂತಿ ಕಾಳಿಕಾ ಪೂಜೆ, ಅದೃಷ್ಟ ಸಂಖ್ಯೆ : 1, 4

ಮೇಷ: ಆಹಾರ ಪದಾರ್ಥಗಳ ತಯಾರಕರಿಗೆ, ವ್ಯಾಪಾರಸ್ಥರಿಗೆ ಉತ್ತಮ ಲಾಭ ಸಿಗಲಿದೆ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಅಪೇಕ್ಷಿಸಬಹುದು. ಕುಟುಂಬದಲ್ಲಿ ಅತ್ಯಂತ ಸಂತೋಷದ ವಾತಾವರಣವಿರಲಿದೆ.

ವೃಷಭ: ವೃತ್ತಿ ಸಂಬಂಧಿತ ಯೋಜನೆಗಳಿಗೆ ಗುರಿಗಳನ್ನುರೂಪಿಸಿಕೊಳ್ಳುವುದರ ಬಗ್ಗೆ ಹಿರಿಯ ವ್ಯಕ್ತಿಗಳಿಂದ ನಿಮಗೆಮಾರ್ಗದರ್ಶನ ಪಡೆಯಿರಿ. ಸಾರಿಗೆ ವ್ಯವಹಾರ ನಡೆಸುವವರಿಗೆ ಆದಾಯ-ಖರ್ಚು ಸಮನಾಗಿರುತ್ತದೆ.

ಮಿಥುನ: ಕೆಲವು ವಾರಗಳಿಂದ ನೀವು ಮಾಡಿದ ಕಠಿಣ ಪರಿಶ್ರಮಕ್ಕೆ ಈಗ ಪ್ರತಿಫಲ ದೊರೆಯಲಿದೆ. ಅನಿರೀಕ್ಷಿತವಾಗಿ ಶುಭ ಸುದ್ದಿ ಕೇಳುವಿರಿ. ಆಧ್ಯಾತ್ಮಿಕ ವಿಷಯಗಳ ಬಗ್ಗೆ ಅಥವಾ ಪೌರಾಣಿಕ ವಿಚಾರಗಳ ಬಗ್ಗೆ ಆಸಕ್ತಿ ಮೂಡಲಿದೆ.

ಕರ್ಕಾಟಕ: ವಿದ್ಯಾಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರಮದ ಅಗತ್ಯವಿದೆ. ಅಧ್ಯಾಪಕ ವರ್ಗದವರಿಗೆ ಹೆಚ್ಚಿನ ಕೆಲಸ ಅನಿವಾರ್ಯವಾಗಬಹುದು. ವ್ಯವಹಾರದಲ್ಲಿ ಎಚ್ಚರವಹಿಸುವುದು ಸೂಕ್ತ, ನಾರಾಯಣನ ನಾಮ ಸ್ಮರಣೆ ಮಾಡಿ.

ಸಿಂಹ: ಗುತ್ತಿಗೆ ವ್ಯವಹಾರಗಳನ್ನು ಒಪ್ಪಿಕೊಳ್ಳುವ ಮೊದಲು ನಿಮ್ಮಲ್ಲಿರುವ ಜನಸಂಪತ್ತಿನ ಬಗ್ಗೆ ಯೋಚಿಸುವುದು ಅಗತ್ಯವೆನಿಸಲಿದೆ. ಹೂವು ಮತ್ತು ಹಣ್ಣಿನ ಬೆಳೆಗಾರರಿಗೆ, ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ದೊರೆಯುತ್ತದೆ.

ಕನ್ಯಾ: ಆಫೀಸಿನಲ್ಲಿ ನಿಮ್ಮ ಕೆಲಸವೊಂದಕ್ಕೆ ಸಿಬ್ಬಂದಿಗಳಿಂದ ಉತ್ತಮ ಸಹಕಾರ ಸಿಗಲಿದೆ. ಆಸ್ತಿ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳು ನಿಮ್ಮ ಕೈಸೇರಲಿದೆ. ರಫ್ತು ವ್ಯಾಪಾರದ ಒಪ್ಪಂದ ಮಾಡಿಕೊಳ್ಳಬಹುದು.

ತುಲಾ: ಅಧಿಕವಾದ ಖರ್ಚು ವೆಚ್ಚಗಳಿಂದ ಹೊರಬರಲು, ದುರಭ್ಯಾಸದಿಂದ ಹೊರಬರುವ ಯೋಚನೆ ಮಾಡಿರಿ. ಕೃಷಿ ಭೂಮಿಗೆ ಸಂಬಂಧಿಸಿದಂತೆ ರಿಯಲ್ ಎಸ್ಟೇಟ್ ಏಜೆಂಟರುಗಳಿಗೆ ಅಧಿಕ ಲಾಭ

ವೃಶ್ಚಿಕ: ಜೀವನದಲ್ಲಿ ನಿಮ್ಮದ್ದೇ ಆದ ನಿಯಮವನ್ನು ರೂಢಿಸಿಕೊಳ್ಳಿ. ಉದ್ಯೋಗದಲ್ಲಿ ಅನಿರೀಕ್ಷಿತ ಲಾಭ ಅಥವಾ ಮುಂಬಡ್ತಿ ಇರುವುದು. ಮಾನಸಿಕ ಸಮತೋಲನದಿಂದ ಈ ದಿನ ಶುಭ , ಅಭಿವೃದ್ಧಿದಾಯಕವಾಗಲಿದೆ.

ಧನು: ಮನೆಯಲ್ಲಿ ನಡೆಯಬೇಕಾಗಿರುವ ಮಂಗಳ ಕಾರ್ಯಕ್ಕೆ ವಿಘ್ನ ಸಂಭವಿಸದಂತೆ ದೇವರ ಮೊರೆ ಹೋಗಬೇಕಾಗುತ್ತದೆ. ಇಂದು ಬಂಧುಗಳಲ್ಲಿ ಮಾಡಿದ ಲೇವಾದೇವಿ ವ್ಯವಹಾರವು ಲಾಭದಾಯಕವಾಗಿರುವುದು.

ಮಕರ: ಕೆಲಸ ಕಾರ್ಯದಲ್ಲಿ ಪದೇ ಪದೇ ತೋರಿ ಬರುತ್ತಿದ್ದ ಅಡ್ಡಿ ಆತಂಕಗಳು ದೂರಾಗಲಿವೆ. ನಿಮ್ಮ ಇಷ್ಟದ ಪ್ರಕಾರವೇ ನಿಮ್ಮ ಎಲ್ಲಾ ಕಾರ್ಯಗಳೂ ನಡೆಯುವ ಕಾಲ ಈ ದಿನವಾಗಿದೆ. ಮಹಾಗಣಪತಿಯನ್ನು ಆರಾಧಿಸಿ.

ಕುಂಭ: ಈ ದಿನ ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು.

ಮೀನ: ಈ ದಿನದ ಕೆಲಸಗಳಿಗೆ ಆತ್ಮಸ್ಥೈರ್ಯ ಬಹಳ ಅಗತ್ಯವಾಗುವುದು. ಕ್ರೀಡಾಸಕ್ತರಿಗೆ ಅಥವಾ ಕ್ರೀಡಾಪಟುಗಳಿಗೆ ಇಂದು ಶುಭದಾಯಕವಾದ ದಿನ. ಅಭಿನಯಿಸಲು ಅವಕಾಶ ಲಭಿಸುವುದು.

ಪದಬಂಧ 5205

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕರದಲ್ಲಿಟ್ಟುಕೊಂಡಿರುವ ಸಲಕರಣೆ (4)
3.ವಂಚಕ ಇಲ್ಲಿದ್ದಾನೆ (4)
5.ಮುಂದುಗಡೆಯೇ ಪ್ರತ್ಯಕ್ಷ! (3)
7.ಗುರಾಣಿ ಹಿಡಿದಿರುವ ಅರಸಿ! (2)
8.ತಡಸಲು ಸೇರುವಾಗಿನ ನಿಧಾನ (2)
11.ದಾಖಲೆಗಳಲ್ಲಿ ಗಮನಿಸಬೇಕೆಂದು ಸೇರಿಸುವ ವಿಶೇಷ ಅಂಶ (2)
13.ಬೀಜ ಬಿತ್ತಲು ಮಾಡಿರುವ ಮಡಿ (2)
14.ಕಾಠಿಣ್ಯವನ್ನು ಹೀಗೆನ್ನಿ (3)
16.ಉಗ್ರವಾಗಿ ಚಿಕಿತ್ಸೆ ಮಾಡುವವನು (4)
17.ಹಣ್ಣು ದುಂಬಿ ಇಲ್ಲಿದೆ (4)

ಮೇಲಿಂದ ಕೆಳಕ್ಕೆ

1.ಈತ ಸೋಲಿಸಲ್ಪಟ್ಟವನು (4)
2.ರಭಸದಲ್ಲಿ ಹರಿದ ದ್ರವ (2)
3.ಮುಕ್ತಿಗೊಂದು ಪರ್ಯಾಯ ಪದ (2)
4.ಮಣಿ ಧರಿಸಿದ ಚಲುವೆ (3)
6.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
7.ಮುಚ್ಚುಮರೆಯಿಲ್ಲದ ಬಹಿರಂಗ ವ್ಯವಹಾರ (4)
9.ಕಾಯಿಗಾಗಿ ನಡೆದ ದರೋಡೆ! (4)
10.ಬಡವನ ಮನೆ ಹತ್ತಿರ ಕಾಣಿಸಿದ ಕೆಸರು (3)
12.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
13.ಈತ ತಿಳುವಳಿಕೆ ಇಲ್ಲದವನು (3)
14.ಪದ್ಯವಲ್ಲದ ಛಂದೋಬದ್ಧವಾದ ವಾಕ್ಯ (2)
15.ಪುಷ್ಪ ಇಲ್ಲಿ ಕಾಣುತ್ತಿದೆ (2)

1			2	■	3			4
	■	■	5	6		■	■	
	■	■	■		■	■	7	
8	9	■	■		■	■		■
■		■	■	■	■	■		■
■		■	■	10	■	■	11	12
13		■	■		■	■	■	
	■	■	14		15	■	■	
16				■	17			

5204ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಶಾಪ 5.ಪಳಿಯುಳಿಕೆ
6.ಗಡವ 7.ಪಾರ್ಥಿವ
8.ಸಾರ್ವಜನಿಕ 9.ಸಂಧಾನ
10.ಪ್ರವಾತ 13.ಸೋದಾಹರಣ
14.ನಿಜ

ಮೇಲಿಂದ ಕೆಳಕ್ಕೆ:
1.ಅನುರಾಗ 2.ಆಯುಧ
4.ಪರಾಭವ 5.ಪರ್ಯವಸಾನ
7.ಪಾಕಪ್ರವೀಣ
9.ಸಂಜೀವಿನಿ 11.ತಡಸಲು
12.ಕುಹಕಿ

ಸುಡೊಕು 5591

		6					5	
		7	5		6	3		2
3	8						6	
	2					9		4
			2	4	7			
	7					5		8
		9			8		4	
4		2					8	1
	6		4		2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5590 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಸಾಹಿತಿ ಬರಗೂರು ರಾಮಚಂದ್ರಪ್ಪ ಬೇಸರ • ಅಲಿಡಾ ಗೆವಾರ, ಎಸ್ತಿಫಾನಿಯಾಗೆ ನಾಗರಿಕ ಸನ್ಮಾನ

‘ಬಹು ಸಂಸ್ಕೃತಿ ನಾಶದ ಪ್ರವೃತ್ತಿ ಹೆಚ್ಚುತ್ತಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಬಹುಮುಖದ ಆಶಯದಲ್ಲಿ ಸರ್ವಾಧಿಕಾರ ನಡೆಯುತ್ತಿದೆ. ಹುಸಿ ಸಂಸ್ಕೃತಿಯನ್ನೇ ನಿಜ ಸಂಸ್ಕೃತಿ ಎಂದು ಮೆರೆಯಲಾಗುತ್ತಿದೆ. ಬಹುತ್ವ ಪ್ರತಿಪಾದಿಸುವ ಈ ದೇಶದಲ್ಲಿ ಬಹು ಸಂಸ್ಕೃತಿಯನ್ನು ನಾಶ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಬೇಸರ ವ್ಯಕ್ತಪಡಿಸಿದರು.

ವಿವಿಧ ಸಂಘಟನೆಗಳ ಸೌಹಾರ್ದ ಸಮಿತಿ ನಗರದಲ್ಲಿ ಗುರುವಾರ ಹಮ್ಮಿಕೊಂಡ ಕ್ಯೂಬಾ ಸೌಹಾರ್ದತೆಯ ಸಮಾರಂಭದಲ್ಲಿ ಚೆ ಗೆವಾರ ಅವರ ಪುತ್ರಿ ಡಾ. ಅಲಿಡಾ ಗೆವಾರ ಮತ್ತು ಮೊಮ್ಮಗಳು ಎಸ್ತಿಫಾನಿಯಾ ಅವರಿಗೆ ನಾಗರಿಕ ಸನ್ಮಾನ ಮಾಡಲಾಯಿತು.

‘ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ‘ಸಾಮಾಜಿಕ ಚಿಂತನ ಮಾಲೆ’ ಎಂಬ ಕೃತಿಯನ್ನು ಹೊರತರಲಾಗಿತ್ತು. ಚೆ ಗೆವಾರ ಅವರ ಕುರಿತಾದ ಲೇಖನವೂ ಅದರಲ್ಲಿತ್ತು. ಅದು ಪ್ರಜಾಪ್ರಭುತ್ವದ ಸ್ವಾತಂತ್ರ್ಯ. ಈಗ ಆ ರೀತಿಯ ಲೇಖನ ಪ್ರಕಟಿಸಿದರೆ ದೇಶದ್ರೋಹಿಗಳಾಗುತ್ತೇವೆ. ಚೆ ಗೆವಾರ ಅವರು ಅಗಲಿ 55 ವರ್ಷಗಳಾದರೂ ಜಗತ್ತು ಅವರ ಕ್ರಾಂತಿಯನ್ನು ನೆನಪಿಸಿಕೊಳ್ಳುತ್ತದೆ. ಟಿ ಶರ್ಟ್, ಟೋಪಿ, ಹಚ್ಚೆ ಸೇರಿ ವಿವಿಧೆಡೆ ಅವರ ಭಾವಚಿತ್ರವನ್ನು ಕಾಣಬಹುದು. ಅವರು ಜನ ಸಂಸ್ಕೃತಿಯನ್ನು ಪ್ರತಿಪಾದಿಸಿದ್ದರು. ಅವರು ಆಶಾವಾದಕ್ಕೆ ಪ್ರೇರಣೆ ಆಗಿದ್ದಾರೆ’ ಎಂದು ಬರಗೂರು ರಾಮಚಂದ್ರಪ್ಪ ಹೇಳಿದರು.

‘ಸಮಾನತೆ, ಸೌಹಾರ್ದತೆ ಪರವಾದ ಬದ್ಧತೆ ಭಾರತಕ್ಕೆ ಬೇಕು. ಜಾತಿವಾದ, ಕೋಮುವಾದದ ವಿರುದ್ಧದ ಹೋರಾಟಕ್ಕೆ ಚೆ ಗೆವಾರ ಅವರೇ ನಮ್ಮ ಚೇತನ’ ಎಂದರು.

ಚಿಂತಕ ಜಿ. ರಾಮಕೃಷ್ಣ, ‘ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಶ್ವ ನಾಯಕ ಎಂದು ಉಲ್ಲೇಖಿಸುವವರು ಭ್ರಮಾ ಲೋಕದಲ್ಲಿ ಬದುಕುತ್ತಿದ್ದಾರೆ. ವಿಶ್ವದಲ್ಲಿ ಯಾರಾದರೂ ವಿಶ್ವ ನಾಯಕ ಇದ್ದರೆ, ಅದು ಕೇವಲ ಚೆ ಗೆವಾರ ಮಾತ್ರ. ಅವರ ಕ್ರಾಂತಿಯ ಪಾಠ ನಮಗೆ ಬೇಕಾಗಿದೆ. ನಮ್ಮ ದೇಶ 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧಿಸಲಿದೆ ಎನ್ನುವವರಿಗೆ ಇದರ ಮೌಲ್ಯವನ್ನು ರೂಪಾಯಿಗಳಲ್ಲಿ ಹೇಳಲು ಬರುತ್ತಿಲ್ಲ. ಯಾರನ್ನು ದ್ವೇಷಿಸುವುದಿಲ್ಲ ಎಂದು ಹೇಳುತ್ತ ಎಲ್ಲರನ್ನೂ ದ್ವೇಷ ಮಾಡಲಾಗುತ್ತಿದೆ. ನಮಗೆ ಚೆ ಗೆವಾರ ಅವರ ವಿಶ್ವಮಾನವ ಕಲ್ಪನೆ ಅಗತ್ಯ’ ಎಂದು ಹೇಳಿದರು.

ನಾಗರಿಕ ಸನ್ಮಾನ ಸ್ವೀಕರಿಸಿದ ಅಲಿಡಾ ಗೆವಾರ ಅವರ ಚಿತ್ರವನ್ನು ಮಗಳು ಎಸ್ತಿಫಾನಿಯಾ ಮೊಬೈಲಿನಲ್ಲಿ ಸೆರೆಹಿಡಿದರು. – ಪ್ರಜಾವಾಣಿ ಚಿತ್ರ

ನ್ಯಾಯದ ವಿರುದ್ಧ ಒಗ್ಗಟ್ಟಿನ ಹೋರಾಟ: ಡಾ. ಅಲಿಡಾ ಗೆವಾರ

‘ಚೆ ಗೆವಾರ ಹಾಗೂ ಫಿಡೆಲ್ ಕ್ಯಾಸ್ಟ್ರೊ ಅವರು ಹೇಳಿದಂತೆ ಜನರು ಒಗ್ಗಟ್ಟಾಗಿ ಹೋರಾಡಿದಲ್ಲಿ ಅನ್ಯಾಯ ನಡುಗಿ ಹೋಗುತ್ತದೆ. ಜನಸಾಮಾನ್ಯರಿಗೆ ನಮ್ಮ ಮೌಲ್ಯಗಳನ್ನು ತಲುಪಿಸುವುದು ಅತ್ಯಂತ ಅಗತ್ಯ. ಕೋವಿಡ್ ಕಾಣಿಸಿಕೊಂಡ ಬಳಿಕ ನಮ್ಮಲ್ಲಿ ಹಲವು ಸಾಮಾಜಿಕ ಬದಲಾವಣೆಯಾಗಿದ್ದು, ಮಾನವೀಯತೆಯ ಪಾಠವನ್ನು ಕಲಿತಿದ್ದೇವೆ. ಕೋವಿಡ್‌ನಿಂದಾಗಿ ಕ್ಯೂಬಾ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ಸಂಕಷ್ಟವನ್ನು ಅನುಭವಿಸಿತು’ ಎಂದು ಮಕ್ಕಳ ವೈದ್ಯೆಯೂ ಆಗಿರುವ ಡಾ. ಅಲಿಡಾ ಗೆವಾರ ತಿಳಿಸಿದರು.

‘ಕ್ಯೂಬಾದಲ್ಲಿ ವೈದ್ಯ ವೃತ್ತಿಯನ್ನು ಮಾನವೀಯ ಸೇವೆಯೆಂದು ಪರಿಗಣಿಸಲಾಗಿದೆ. ಅಮೆರಿಕಾದ ನಿರ್ಬಂಧಗಳ ನಡುವೆಯೂ ಲಸಿಕೆಯನ್ನು ಆವಿಷ್ಕರಿಸಿ, ಹೋರಾಟ ನಡೆಸಲಾಯಿತು. ಚೆ ಗೆವಾರ ಅವರು ಗೆಲ್ಲುವವರೆಗೂ ಹೋರಾಡುತ್ತಲೇ ಇರೋಣ ಎಂದು ಹೇಳಿದ್ದಾರೆ. ಇದನ್ನು ಕ್ಯೂಬಾದ ಜನರು ಪಾಲಿಸುತ್ತಿದ್ದಾರೆ’ ಎಂದರು.

ಸುದ್ದಿ 2 ನಿಮಿಷ

ವಕೀಲರ ಮೇಲೆ ಹಲ್ಲೆ ಪ್ರಕರಣ: ₹ 3 ಲಕ್ಷ ಪರಿಹಾರಕ್ಕೆ ಆದೇಶ

ಬೆಂಗಳೂರು: ಸಿವಿಲ್ ವ್ಯಾಜ್ಯವೊಂದರಲ್ಲಿ ಮಧ್ಯಪ್ರವೇಶಿಸಿ ವಕೀಲರೊಬ್ಬರ ಮೇಲೆ ಕ್ರಿಮಿನಲ್ ಕೇಸ್ ದಾಖಲಿಸಿ ಅಮಾನವೀಯ ಹಲ್ಲೆ ನಡೆಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಆರೋಪಿತ ಸಂತ್ರಸ್ತ ವಕೀಲರಿಗೆ ಪೊಲೀಸ್ ಅಧಿಕಾರಿ ₹ 3 ಲಕ್ಷ ಪರಿಹಾರ ನೀಡಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

‘ದಕ್ಷಿಣ ಕನ್ನಡ ಜಿಲ್ಲೆಯ ಪುಂಜಾಲಕಟ್ಟೆ ಸಬ್‌ಇನ್‌ಸ್ಪೆಕ್ಟರ್ ಕೆ.ಪಿ. ಸುತೇಶ್ ನನ್ನ ಮೇಲೆ ಹಲ್ಲೆ ನಡೆಸಿದ್ದು, ಈ ಬಗ್ಗೆ ಪೊಲೀಸ್ ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕು. ಪ್ರಕರಣ ಕುರಿತು ಇಲಾಖಾ ವಿಚಾರಣೆ ನಡೆಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಹಾಗೂ ನನಗೆ ಪರಿಹಾರ ನೀಡಲು ಆದೇಶಿಸಬೇಕು’ ಎಂದು ಕೋರಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಪುತ್ತಿಲ ಗ್ರಾಮದ ವಕೀಲ ಕುಲದೀಪ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ತೀರ್ಪು ಪ್ರಕಟಿಸಿದ್ದು, ಪರಿಹಾರದ ಮೊತ್ತವನ್ನು ತಪ್ಪಿತಸ್ಥ ಪೊಲೀಸ್ ಅಧಿಕಾರಿಯಿಂದಲೇ ವಸೂಲು ಮಾಡುವಂತೆ ನಿರ್ದೇಶಿಸಿದೆ.

‘ಈಗಾಗಲೇ ತಪ್ಪಿತಸ್ಥ ಅಧಿಕಾರಿ ವಿರುದ್ಧ ಕೈಗೊಂಡಿರುವ ಇಲಾಖಾ ವಿಚಾರಣೆಯನ್ನು ಒಂದು ತಿಂಗಳ ಒಳಗೆ ಪೂರ್ಣಗೊಳಿಸಿ ಹೈಕೋರ್ಟ್‌ಗೆ ವರದಿ ಸಲ್ಲಿಸಬೇಕು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ನ್ಯಾಯಪೀಠ ನಿರ್ದೇಶಿಸಿತು.

ಬೌರಿಂಗ್ ಆಸ್ಪತ್ರೆಯಲ್ಲಿ ಸ್ಯಾಂಟ್ರೊ ರವಿ ವೈದ್ಯಕೀಯ ಪರೀಕ್ಷೆ

ಬೆಂಗಳೂರು: ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ, ಹಲ್ಲೆ ಮಾಡಿ, ಕೊಲೆ ಬೆದರಿಕೆಯೊಡ್ಡಿದ್ದ ಪ್ರಕರಣದಲ್ಲಿ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿಯನ್ನು (51) ಕಸ್ಟಡಿಗೆ ಪಡೆದಿರುವ ಸಿಐಡಿ ಅಧಿಕಾರಿಗಳು, ವಿಚಾರಣೆ ಮುಂದುವರಿಸಿದ್ದಾರೆ.

ಮೈಸೂರಿನ ವಿಜಯನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದೆ. ಸ್ಥಳೀಯ ನ್ಯಾಯಾಲಯದ ಮೂಲಕ ಸ್ಯಾಂಟ್ರೊ ರವಿಯನ್ನು ಕಸ್ಟಡಿಗೆ ಪಡೆದಿರುವ ಸಿಐಡಿ ಅಧಿಕಾರಿಗಳು, ಆತನನ್ನು ಬೆಂಗಳೂರಿಗೆ ಕರೆತಂದಿದ್ದಾರೆ.

ರವಿಯನ್ನು ಬೌರಿಂಗ್ ಆಸ್ಪತ್ರೆಗೆ ಗುರುವಾರ ಕರೆದೊಯ್ದಿದ್ದ ಸಿಐಡಿ ಅಧಿಕಾರಿಗಳು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು. ಆಸ್ಪತ್ರೆ ವೈದ್ಯರು, ರಕ್ತ ಹಾಗೂ ಇತರೆ ಮಾದರಿಗಳನ್ನು ಸಂಗ್ರಹಿಸಿದರು.

‘ರವಿ ವಿರುದ್ಧದ ಆರೋಪಗಳಿಗೆ ಸಂಬಂಧಪಟ್ಟಂತೆ ಪುರಾವೆಗಳನ್ನು ಸಂಗ್ರಹಿಸಬೇಕಿದೆ. ಅದಕ್ಕೂ ಮುನ್ನ ಆರೋಪಿಯ ವಿಚಾರಣೆ ನಡೆಸಿ, ಮಾಹಿತಿ ಕಲೆಹಾಕಬೇಕಿದೆ. ಹೀಗಾಗಿ, ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು’ ಎಂದು ಸಿಐಡಿ ಮೂಲಗಳು ಹೇಳಿವೆ.

ಮುಟ್ಟಿನ ರಜೆ: ಕೇರಳದ ಎಲ್ಲ ವಿವಿಗಳಿಗೆ ವಿಸ್ತರಣೆ

ತಿರುವನಂತಪುರ: ಕೇರಳ ಸರ್ಕಾರವು ಮುಟ್ಟಿನ ರಜೆಯನ್ನು ರಾಜ್ಯದ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿನಿಯರಿಗೆ ವಿಸ್ತರಿಸಲು ಹಾಗೂ 18 ವರ್ಷ ದಾಟಿದ ವಿದ್ಯಾರ್ಥಿನಿಯರಿಗೆ 60 ದಿನಗಳ ಹೆರಿಗೆ ರಜೆ ನೀಡಲು ನಿರ್ಧರಿಸಿದೆ.

ಪರೀಕ್ಷೆ ಎದುರಿಸಲು ವಿದ್ಯಾರ್ಥಿಗಳಿಗೆ ಶೇ 75ರಷ್ಟು ಹಾಜರಾತಿ ಅಗತ್ಯವಿದೆ.ಆದರೆವಿದ್ಯಾರ್ಥಿನಿಯರಿಗೆಮುಟ್ಟಿನ ರಜೆ ಜಾರಿ ಆಗುವುದರಿಂದ ಅವರಿಗೆ ಶೇ 73ರಷ್ಟು ಹಾಜರಾತಿ ಇದ್ದರೆ ಸಾಕು.

ಕೊಚ್ಚಿನ್‌ನ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ನೀಡಲು ಮೊದಲಾಗಿ ನಿರ್ಧರಿಸಿತ್ತು. ಬಳಿಕ ಕೇರಳದ ಎ.ಪಿ.ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯವೂ ಅದನ್ನು ಅನುಸರಿಸಿತ್ತು.

ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಲನಚಿತ್ರ ಪ್ರಚಾರ ಸಂಸ್ಥೆ ಶ್ರೀರಾಘವೇಂದ್ರ ಚಿತ್ರವಾಣಿಯ 25ನೇ ವಾರ್ಷಿಕ ಪ್ರಶಸ್ತಿ ಪ್ರಕಟವಾಗಿವೆ. 2021 ಮತ್ತು 2022ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ಸಂಸ್ಥೆಯ ಸಂಸ್ಥಾಪಕ ದಿವಂಗತ ಡಿ.ವಿ. ಸುಧೀಂದ್ರ ಅವರ ಜನ್ಮದಿನವಾದ ಜ. 25ರಂದು ಈ ಪ್ರಶಸ್ತಿ ಪ್ರದಾನ ನಡೆಯಲಿದೆ. ಚಾಮರಾಜಪೇಟೆಯ ಕನ್ನಡ ಚಲನಚಿತ್ರ ಕಲಾವಿದರ ಸಂಘದಲ್ಲಿ ಅಂದು ಸಂಜೆ 5ಕ್ಕೆ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥ ಸುಧೀಂದ್ರ ವೆಂಕಟೇಶ್ ತಿಳಿಸಿದ್ದಾರೆ.

ಪ್ರಶಸ್ತಿ ವಿವರ: 2021ನೇ ಸಾಲಿನ ಶ್ರೀರಾಘವೇಂದ್ರ ಚಿತ್ರವಾಣಿ ಪ್ರಶಸ್ತಿ: ಪಿ. ಧನರಾಜ್ (ಹಿರಿಯ ನಿರ್ಮಾಪಕ), ಈಶ್ವರ ದೈತೋಟ (ಹಿರಿಯ ಪತ್ರಕರ್ತ) 2022ನೇ ಸಾಲಿನ ಪ್ರಶಸ್ತಿ: ಕುಮಾರ ಗೋವಿಂದ್ (ನಟ, ನಿರ್ಮಾಪಕ), ಸದಾಶಿವ ಶೆಣೈ (ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ), ರಾಜೇಶ್ ಕೃಷ್ಣನ್ (ಹಿನ್ನೆಲೆ ಗಾಯಕ– ಡಾ.ರಾಜ್‌ಕುಮಾರ್ ಪ್ರಶಸ್ತಿ), ಸಾಯಿಪ್ರಕಾಶ್ ಹಿರಿಯ ನಿರ್ದೇಶಕ, ನಿರ್ಮಾಪಕ (ಆರ್. ಶೇಷಾದ್ರಿ ಸ್ಮರಣಾರ್ಥ ಪ್ರಶಸ್ತಿ), ತುಳಸಿ (ಹಿರಿಯ ನಟಿ. ಇವರಿಗೆ ನಟಿ ಡಾ. ಜಯಮಾಲಾ ಎಚ್.ಎಂ.ರಾಮಚಂದ್ರ ಪ್ರಶಸ್ತಿ), ನೋಬಿನ್ ಪಾಲ್ (ಅತ್ಯುತ್ತಮ ಸಂಗೀತ ನಿರ್ದೇಶನ, ‘777 ಚಾರ್ಲಿ’ ಚಿತ್ರಕ್ಕಾಗಿ ಎಂ.ಎಸ್. ರಾಮಯ್ಯ ಮೀಡಿಯಾ ಅಂಡ್ ಎಂಟರ್ಟೈನ್ಮೆಂಟ್ ಪ್ರೈ ಲಿ. ಪ್ರಶಸ್ತಿ), ಮಧುಚಂದ್ರ (ಅತ್ಯುತ್ತಮ ಕಥಾಲೇಖಕರು, ‘ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ’ ಚಿತ್ರಕ್ಕಾಗಿ ನಿರ್ದೇಶಕ-ನಿರ್ಮಾಪಕ ಕೆ.ವಿ.ಜಯರಾಂ ಪ್ರಶಸ್ತಿ), ಎಂ.ಜಿ. ಶ್ರೀನಿವಾಸ್ (ಶ್ರೀನಿ) (ಅತ್ಯುತ್ತಮ ಸಂಭಾಷಣೆ, ‘ಓಲ್ಡ್ ಮಾಂಕ್’ ಚಿತ್ರಕ್ಕಾಗಿ ಚಿತ್ರಸಾಹಿತಿ ಹುಣಸೂರು ಕೃಷ್ಣಮೂರ್ತಿ ಸ್ಮರಣಾರ್ಥ), ಕಿರಣ್ ರಾಜ್ (‘777 ಚಾರ್ಲಿ’ ಚೊಚ್ಚಲ ಚಿತ್ರದ ನಿರ್ದೇಶನಕ್ಕಾಗಿ ಹಿರಿತೆರೆ-ಕಿರುತೆರೆ ನಿರ್ದೇಶಕ ಬಿ. ಸುರೇಶ ಪ್ರಶಸ್ತಿ), ಪ್ರಮೋದ್ ಮರವಂತೆ (‘ಕಾಂತಾರ’ ಚಿತ್ರದ ‘ಸಿಂಗಾರ ಸಿರಿಯೇ ...’ ಗೀತರಚನೆಗಾಗಿ ಹಿರಿಯ ಪತ್ರಕರ್ತ ಪಿ.ಜಿ. ಶ್ರೀನಿವಾಸಮೂರ್ತಿ ಅವರ ಸ್ಮರಣಾರ್ಥ ಪ್ರಶಸ್ತಿ), ಶ್ರೀನಿವಾಸಮೂರ್ತಿ (ಹಿರಿಯ ಪೋಷಕ ಕಲಾವಿದರು, ಹಿರಿಯ ಪತ್ರಕರ್ತ ಸಿ. ಸೀತಾರಾಂ ಸ್ಮರಣಾರ್ಥ ಪ್ರಶಸ್ತಿ).

ಕಿರಗಂದೂರು, ಅಶ್ವಿನಿ, ತಾರಾಗೆ ವಿಶೇಷ ಪ್ರಶಸ್ತಿ

ರಾಘವೇಂದ್ರ ಚಿತ್ರವಾಣಿಯಿಂದ ಮೂವರು ಸಾಧಕರಿಗೆ ವಿಶೇಷ ಪ್ರಶಸ್ತಿ ಪ್ರಕಟಿಸಲಾಗಿದೆ. ಹೊಂಬಾಳೆ ಫಿಲ್ಮ್ಸ್‌ನ ವಿಜಯ್ ಕಿರಗಂದೂರು, ಅಶ್ವಿನಿ ಪುನೀತ್ ರಾಜಕುಮಾರ್ ಮತ್ತು ತಾರಾ ಅನುರಾಧಾ ಅವರು ರಾಘವೇಂದ್ರ ಚಿತ್ರವಾಣಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

‘ಕೆಜಿಎಫ್ 2’ ಮತ್ತು ‘ಕಾಂತಾರ’ ಎರಡೂ ಚಿತ್ರಗಳನ್ನು ನಿರ್ಮಿಸಿ, ಕನ್ನಡ ಚಿತ್ರರಂಗಕ್ಕೆ ಕೀರ್ತಿ ತಂದ ನಿರ್ಮಾಣ ಸಂಸ್ಥೆ ಎಂಬ ಕಾರಣಕ್ಕೆ ಹೊಂಬಾಳೆ ಫಿಲ್ಮ್ಸ್‌ಗೆ ಈ ಪ್ರಶಸ್ತಿ ಸಂದಿದೆ. ಕಳೆದ ವರ್ಷ ಬಿಡುಗಡೆಯಾದ ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ ‘ಗಂಧದ ಗುಡಿ’ ಡಾಕ್ಯುಚಿತ್ರದ ನಿರ್ಮಾಣಕ್ಕಾಗಿ ಪಿಆರ್‌ಕೆ ಸ್ಟುಡಿಯೋಸ್‌ನ ಮುಖ್ಯಸ್ಥೆ, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಕನ್ನಡ ಚಿತ್ರರಂಗಕ್ಕೆ ನಟಿ ತಾರಾ ಅನುರಾಧಾ ಅವರ ಕೊಡುಗೆಯನ್ನು ಸ್ಮರಿಸಿ, ಈ ಬಾರಿ ವಿಶೇಷ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದು ಸುಧೀಂದ್ರ ವೆಂಕಟೇಶ್ ತಿಳಿಸಿದ್ದಾರೆ.



ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಬಾಂಗ್ಲಾದೇಶದ ಉಪ ಹೈ ಕಮಿಷನರ್ ಡಾ. ಶೆಲ್ಲಿ ಸಲೇಹಿನ್ ಅವರನ್ನು ಕುಲಪತಿ ಪ್ರೊ. ಎಸ್.ಎಂ. ಜಯಕರ ಸ್ವಾಗತಿಸಿದರು. ಅಂತರರಾಷ್ಟ್ರೀಯ ಕೋಶದ ನಿರ್ದೇಶಕಿ ಪ್ರೊ. ಸುದೇಷ್ಣ ಮುಖರ್ಜಿ, ಪ್ರೊ. ಸಿಂಥಿಯಾ ಮೆನೇಜ್ಸ್, ಕುಲಸಚಿವ ಎನ್. ಮಹೇಶ್ ಬಾಬು, ಪ್ರೊ. ವಿ ಸುದೇಶ್ ಇದ್ದರು.

ಬಾಂಗ್ಲಾ– ಬೆಂಗಳೂರು ವಿ.ವಿ. ನಡುವೆ ಶೈಕ್ಷಣಿಕ ಸಹಯೋಗ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಾಂಗ್ಲಾದೇಶದ ಉಪ ಹೈಕಮಿಷನರ್ ಡಾ. ಶೆಲ್ಲಿ ಸಲೇಹಿನ್ ಅವರು ಶೈಕ್ಷಣಿಕ ಸಹಯೋಗ ಕಾರ್ಯಕ್ರಮದ ಯೋಜನೆಗಾಗಿ ಭೇಟಿ ನೀಡಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್.ಎಂ. ಜಯಕರ, ಕುಲಸಚಿವ ಎನ್. ಮಹೇಶ್ ಬಾಬು ಮತ್ತು ಪ್ರಾಧ್ಯಾಪಕರೊಂದಿಗೆ ಸಮಾಲೋಚನೆ ನಡೆಸಿದರು.

ಬಾಂಗ್ಲಾದೇಶದ ವಿಶ್ವವಿದ್ಯಾಲಯಗಳು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ನಡುವೆ ಅಭಿವೃದ್ಧಿ ಕಾರ್ಯಕ್ರಮಗಳು, ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು, ವಿವಿಧ ವಿಭಾಗಗಳಲ್ಲಿ ಜಂಟಿ ಸಂಶೋಧನಾ ಚಟುವಟಿಕೆ ಮತ್ತು ಇ-ಆಧಾರಿತ ಶೈಕ್ಷಣಿಕ ಸಂಪನ್ಮೂಲಗಳ ವಿನಿಮಯವನ್ನು ಉತ್ತೇಜಿಸಲು ಈ ಸಂದರ್ಭದಲ್ಲಿ ಒಪ್ಪಿಗೆ ಸೂಚಿಸಲಾಯಿತು.

ಬಾಂಗ್ಲಾದೇಶ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ನಡುವಿನ ಸಂಭಾವ್ಯ ಸಹಯೋಗಗಳ ಬಗ್ಗೆ ವಿವರಗಳನ್ನು ಅಂತಿಮಗೊಳಿಸಲು ಇನ್ನೂ ಹೆಚ್ಚಿನ ಚರ್ಚೆಗಳನ್ನು ಕೈಗೊಳ್ಳಬೇಕು ಹಾಗೂ ಅಂತಹ ಸಹಯೋಗಗಳಿಂದ ಪರಸ್ಪರ ಪ್ರಯೋಜನಗಳನ್ನು ಖಚಿತಪಡಿಸಿಕೊಳ್ಳಲು ಬಾಂಗ್ಲಾದೇಶ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದು ಸಮ್ಮತಿಸಲಾಯಿತು.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ಎಂ. ಜಯಕರ ಮಾತನಾಡಿ, ಜಾಗತಿಕ ವಿದ್ವಾಂಸರ ಸಮುದಾಯವನ್ನು ರಚಿಸುವ ಸಲುವಾಗಿ ಶೈಕ್ಷಣಿಕ ಪಾಲುದಾರಿಕೆಗಳ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಅಂತರಾಷ್ಟ್ರೀಯ ಸಹಯೋಗವನ್ನು ಉತ್ತೇಜಿಸುವ ಸಲುವಾಗಿ ಬೆಂಗಳೂರು ವಿಶ್ವವಿದ್ಯಾಲಯದ ವತಿಯಿಂದ ತೆಗೆದುಕೊಂಡಿರುವ ವಿವಿಧ ಕ್ರಮಗಳನ್ನು ಅವರು ಈ ಸಂದರ್ಭದಲ್ಲಿ ವಿವರಿಸಿದರು.

‘ಮಹಾಯೋಗಿ ವೇಮನರ ಆದರ್ಶ ಪಾಲಿಸಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಮಹಾಯೋಗಿ ವೇಮನರ ಆದರ್ಶಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು’ ಎಂದು ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಕೆ.ಆರ್.ಪುರದ ಪೂರ್ವ ತಾಲ್ಲೂಕು ವತಿಯಿಂದ ಆಯೋಜಿಸಿದ್ದ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ವೇಮನರು ಮಹಾತ್ಯಾಗಿಗಳು. ಇಂಥವರ ಆದರ್ಶಗಳನ್ನು ಎಲ್ಲೆಡೆ ಪಸರಿಸುವ ಕೆಲಸ ಮಾಡಬೇಕು’ ಎಂದರು.

ಬೆಂಗಳೂರು ಪೂರ್ವ ತಾಲ್ಲೂಕು ರೆಡ್ಡಿ ಜನಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ರೆಡ್ಡಿ ಮಾತನಾಡಿ, ‘21ನೇ ಶತಮಾನದಲ್ಲಿ ವೇಮನರ ತತ್ವಗಳು ನಮಗೆ ಮಾರ್ಗದರ್ಶನವಾಗಿವೆ’ ಎಂದು ಹೇಳಿದರು.

ಇದೇ ವೇಳೆ 2023ರ ನೂತನ ಕ್ಯಾಲೆಂಡರನ್ನು ಬಿಡುಗಡೆಗೊಳಿಸಲಾಯಿತು. ಪೂರ್ವ ತಾಲ್ಲೂಕು ತಹಶೀಲ್ದಾರ್ ಮಹೇಶ್, ಬೆಂಗಳೂರು ಪೂರ್ವ ತಾಲ್ಲೂಕು ರೆಡ್ಡಿ ಜನಸಂಘ ಅಧ್ಯಕ್ಷ ಚಂದ್ರಶೇಖರ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ರೆಡ್ಡಿ, ಮುಖಂಡರಾದ ನಟರಾಜ್, ಜಯರಾಮ್ ರೆಡ್ಡಿ, ಅಶೋಕ್ ರೆಡ್ಡಿ ಇದ್ದರು.

ಶಾಸಕ ಅರವಿಂದ ಲಿಂಬಾವಳಿ ಅವರು ಮಹಾಯೋಗಿ ವೇಮನರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಪುನರ್ವಸತಿ ಕೇಂದ್ರದಲ್ಲಿ ಕೊಲೆ: ಕೆಲಸಗಾರರ ಬಂಧನ

‘ಹೊಡೆದು ಕೊಂದು, ಆಸ್ಪತ್ರೆಗೆ ಮೃತದೇಹ ಸಾಗಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ನ್ಯೂ ಟೌನ್ ಠಾಣೆ ವ್ಯಾಪ್ತಿಯಲ್ಲಿರುವ ಶ್ರೀಸಾಯಿ ದೀನಬಂಧು ಪುನರ್ವಸತಿ ಕೇಂದ್ರದಲ್ಲಿ ಆರೀಫ್ (30) ಎಂಬುವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ ಆರೋಪದಡಿ ಕೇಂದ್ರದ ಕೆಲಸಗಾರರಿಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಪ್ರವೀಣ್ ಹಾಗೂ ಲೂಯಿಸ್ ಬಂಧಿತರು. ಇವರಿಬ್ಬರು ಕೇಂದ್ರದಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಮದ್ಯವ್ಯಸನಿ ಆಗಿದ್ದ ಆರೀಫ್ ಅವರಿಗೆ ಚಿಕಿತ್ಸೆ ಕೊಡಿಸುವುದಕ್ಕಾಗಿ ಇತ್ತೀಚೆಗೆ ಕೇಂದ್ರಕ್ಕೆ ಸೇರಿಸಲಾಗಿತ್ತು’ ಎಂದು ತಿಳಿಸಿದರು.

ಹಲ್ಲೆ, ಮಲಗಿದ್ದಲ್ಲೇ ಸಾವು: ‘ಬುಧವಾರ ಸ್ನಾನ ಮಾಡಲು ಹೊರಟಿದ್ದ ಆರೀಫ್, ಬಿಸಿ ನೀರು ಕೊಡುವಂತೆ ಕೆಲಸಗಾರರನ್ನು ಕೇಳಿದ್ದರು. ಬಿಸಿ ನೀರು ಇಲ್ಲವೆಂದು ಹೇಳಿದ್ದ ಕೆಲಸಗಾರರು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಹೀಗಾಗಿ, ಪರಸ್ಪರ ಗಲಾಟೆ ಶುರುವಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳಾದ ಪ್ರವೀಣ್ ಹಾಗೂ ಲೂಯಿಸ್, ಆರೀಫ್ ಅವರನ್ನು ಥಳಿಸಿದ್ದರು. ಕೋಲಿನಿಂದ ದೇಹದ ಹಲವು ಭಾಗಗಳಿಗೆ ಹೊಡೆದಿದ್ದರು. ರಕ್ತ ಸೋರುತ್ತಿದ್ದ ಸ್ಥಿತಿಯಲ್ಲೇ ಆರೀಫ್ ಕೊಠಡಿಗೆ ಹೋಗಿ ಮಲಗಿದ್ದರು. ಅವರಿಗೆ ಯಾವುದೇ ಚಿಕಿತ್ಸೆ ಸಹ ಕೊಡಿಸಿರಲಿಲ್ಲ. ಅವರತ್ತ ಯಾರೂ ಹೋಗಿರಲಿಲ್ಲ. ಮಲಗಿದ್ದ ಜಾಗದಲ್ಲೇ ಅವರು ರಾತ್ರಿ ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

ಮೃತದೇಹ ಆಸ್ಪತ್ರೆಗೆ ಸಾಗಣೆ: ‘ಗುರುವಾರ ಬೆಳಿಗ್ಗೆ ಆರೀಫ್ ಎಚ್ಚರಗೊಂಡಿರಲಿಲ್ಲ. ಕೆಲಸಗಾರರು ಎಬ್ಬಿಸಲು ಹೋದಾಗ ಮೃತಪಟ್ಟಿದ್ದು ಗೊತ್ತಾಗಿತ್ತು. ಗಾಬರಿಗೊಂಡ ಕೆಲಸಗಾರರು, ಮೃತದೇಹವನ್ನು ತರಾತುರಿಯಲ್ಲಿ ಯಲಹಂಕ ಆಸ್ಪತ್ರೆಗೆ ಸಾಗಿಸಿದ್ದರು. ಆರೀಫ್ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆಂದು ಸುಳ್ಳು ಹೇಳಿದ್ದರು.’

‘ಮೃತದೇಹದ ಬಗ್ಗೆ ವೈದ್ಯರು ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಮೃತದೇಹದ ಮೇಲೆ ಗಾಯದ ಗುರುತುಗಳಿದ್ದವು. ಆ ಬಗ್ಗೆ ಕೆಲಸಗಾರರನ್ನು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು’ ಎಂದು ಅವರು ಹೇಳಿದರು.

‘ಕೇಂದ್ರ ಬಂದ್ ಮಾಡಲು ಕ್ರಮ’

‘ಮದ್ಯದ ಚಟ ಬಿಡಿಸಲು ಚಿಕಿತ್ಸೆ ನೀಡಬೇಕಾದ ಕೇಂದ್ರದ ಕೆಲಸಗಾರರೇ ಆರೀಫ್ ಅವರನ್ನು ಕೊಂದಿದ್ದಾರೆ. ಕೇಂದ್ರದಲ್ಲಿರುವ ಇತರರಿಗೆ ಕೆಲಸಗಾರರು ದೈಹಿಕವಾಗಿ ಹಲ್ಲೆ ಮಾಡುತ್ತಿರುವ ಮಾಹಿತಿ ಇದೆ. ಹೀಗಾಗಿ, ಕೇಂದ್ರವನ್ನು ಬಂದ್ ಮಾಡಲು ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

‘ಸದ್ಯ ಕೇಂದ್ರದಲ್ಲಿ ಕೆಲವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಆರೋಗ್ಯ ಸ್ಥಿತಿ ನೋಡಿಕೊಂಡು ಮುಂದುವರಿಯಲಾಗುವುದು’ ಎಂದರು.

ಅಪರಾಧ ಸುದ್ದಿಗಳು

ಇ.ಡಿ.ವಿಚಾರಣೆಗೆ ಹಾಜರಾದ ಕೆಜಿಎಫ್ ಬಾಬು

ನವದೆಹಲಿ: ಅಕ್ರಮ ಆಸ್ತಿ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಉದ್ಯಮಿ ಯೂಸುಫ್ ಶರೀಫ್ (ಕೆಜಿಎಫ್ ಬಾಬು) ಜಾರಿ ನಿರ್ದೇಶನಾಲಯದ ವಿಚಾರಣೆಗೆ ಗುರುವಾರ ಹಾಜರಾದರು.

ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ ತನಿಖೆ ನಡೆಸುತ್ತಿರುವ ನಿರ್ದೇಶನಾಲಯವು ವಿಚಾರಣೆಗೆ ಹಾಜರಾಗುವಂತೆ ಕೆಜಿಎಫ್ ಬಾಬುಗೆ ಸಮನ್ಸ್ ನೀಡಿತ್ತು. ರಿಯಲ್ ಎಸ್ಟೇಟ್ ಉದ್ಯಮಿಯಾದ ಶರೀಫ್, 2021ರ ಡಿಸೆಂಬರ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬೆಂಗಳೂರು ನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ₹1,744 ಕೋಟಿ ಆಸ್ತಿ ಹೊಂದಿದ್ದೇನೆ ಎಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ತಿಳಿಸಿದ್ದರು.

ವಿಚಾರಣೆಗೆ ಹಾಜರಾದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕೆಜಿಎಫ್ ಬಾಬು, ‘ನನ್ನ ವಿರೋಧಿಗಳು ಪದೇ ಪದೇ ತೊಂದರೆ ಕೊಡುತ್ತಿದ್ದಾರೆ. ಹೀಗಾಗಿ, ಜಾರಿ ನಿರ್ದೇಶನಾಲಯದವರು ವಿಚಾರಣೆಗೆ ಕರೆಯುತ್ತಿದ್ದಾರೆ. ವಿರೋಧಿಗಳು ಯಾರು ಎಂಬುದು ನಿಮಗೇ ಗೊತ್ತಿದೆ’ ಎಂದರು.

‘ಆಸ್ತಿಯ ಎಲ್ಲ ವಿವರಗಳನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ಇ.ಡಿಯವರ ಬಳಿ ಇರುವ 4 ಕೆ.ಜಿ.ಚಿನ್ನ ಹಾಗೂ ವಜ್ರ ಬಿಡಿಸಿಕೊಳ್ಳಲು ಅರ್ಜಿ ಹಾಕಿದ್ದೇನೆ. ಅದರೂ ನನ್ನ ಕರೆಯುತ್ತಿದ್ದಾರೆ. ಚಿಕ್ಕಪೇಟೆ ಜನರಿಗೆ ₹350 ಕೋಟಿ ಕೊಡ್ತೇನೆ ಹಾಗೂ ಮನೆ ಕಟ್ಟಿಸಿಕೊಡುತ್ತೇನೆ ಎಂದು ಹೇಳಿದ ದಿನದಿಂದ ಹೀಗೆ ತೊಂದರೆ ಎದುರಾಗುತ್ತಿದೆ’ ಎಂದು ಅವರು ಹೇಳಿದರು.

ರೋಗಿ ಚಿನ್ನಾಭರಣ ಕಳವು: ಬಂಧನ

ಬೆಂಗಳೂರು: ಸೇಂಟ್ ಫಿಲೋಮಿನಾ ಆಸ್ಪತ್ರೆಯಲ್ಲಿ ರೋಗಿಯೊಬ್ಬರ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ಶುಶ್ರೂಷಕಿ ಲಕ್ಷ್ಮಿ (38) ಎಂಬಾಕೆಯನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

‘ಕೋರಮಂಗಲದಲ್ಲಿ ವಾಸವಿದ್ದ ಲಕ್ಷ್ಮಿ, ಸೇಂಟ್ ಫಿಲೋಮಿನಾ ಆಸ್ಪತ್ರೆಯಲ್ಲಿ ಕೆಲ ತಿಂಗಳು ಕೆಲಸ ಮಾಡಿದ್ದರು. ಕೆಲ ಕಾರಣಗಳಿಂದಾಗಿ ಅವರನ್ನು ಕೆಲಸದಿಂದ ತೆಗೆಯಲಾಗಿತ್ತು. ಹೀಗಾಗಿ, ಲಕ್ಷ್ಮಿ ಬೇರೆಡೆ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವೃದ್ಧೆ ಮಗಳು ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ ಆರೋಪಿ ಸುಳಿವು ಸಿಕ್ಕಿತ್ತು’ ಎಂದು ಹೇಳಿವೆ.

‘ಪೋಕ್ಸೊ: ಶಿಕ್ಷೆ ಇಳಿಕೆಗೆ ಅವಕಾಶವಿಲ್ಲ’

ಬೆಂಗಳೂರು: ‘ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯಗಳು ಪೋಕ್ಸೊ ಕಾಯ್ದೆ- 2012ರ ಅಡಿಯಲ್ಲಿ ಅಪರಾಧ ಕೃತ್ಯಕ್ಕೆವಿಧಿಸಲಾಗುವ ನಿಗದಿತ ಪ್ರಮಾಣದ ಶಿಕ್ಷೆಯನ್ನು ಕಡಿಮೆ ಮಾಡುವ ಯಾವುದೇ ಅಧಿಕಾರ ಹೊಂದಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕಾಲವಾಡಿ ಗ್ರಾಮದ ಶೇಖ್ ರೌಫ್ ಎಂಬ ಆರೋಪಿಗೆ ಸ್ಥಳೀಯ ಪೋಕ್ಸೊ ವಿಶೇಷ ನ್ಯಾಯಾಲಯ ಏಳು ವರ್ಷಗಳಿಗೆ ಬದಲಾಗಿ ಐದು ವರ್ಷ ಜೈಲು ಶಿಕ್ಷೆ ವಿಧಿಸಿದ್ದನ್ನು ಪ್ರಶ್ನಿಸಿ ಭಾಲ್ಕಿ ಟೌನ್ ಠಾಣಾ ಪೊಲೀಸರ ಪರ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಆರೋಪಿ ಶೇಖ್ ರೌಫ್‌ನನ್ನು ದೋಷಿಯಾಗಿ ತೀರ್ಮಾನಿಸಿರುವ ವಿಶೇಷ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿರುವ ನ್ಯಾಯಪೀಠ, ಅಪರಾಧಿಗೆ ವಿಧಿಸಲಾಗಿದ್ದ ಐದು ವರ್ಷಗಳ ಜೈಲು ಶಿಕ್ಷೆಯನ್ನು ಏಳು ವರ್ಷಕ್ಕೆ ಹೆಚ್ಚಿಸಿ, ‘ಈ ಆದೇಶದಲ್ಲಿ ಹೈಕೋರ್ಟ್ ಮಧ್ಯಪ್ರವೇಶಿಸುವ ಅಗತ್ಯ ಕಂಡುಬರುತ್ತಿಲ್ಲ’ ಎಂದು ತಿಳಿಸಿದೆ.

ಆರು ವರ್ಷ ಪ್ರೀತಿ: ಪ್ರೇಯಸಿ ದೂರವಾಗಿದ್ದಕ್ಕೆ ಆತ್ಮಹತ್ಯೆ

ಬೆಂಗಳೂರು: ಉಲ್ಲಾಳ ಉಪನಗರದಲ್ಲಿ ರೋಹಿತ್ (24) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿ ಲೋಹಿತ್, ಕೋರಿಯರ್ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. ತಮ್ಮ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬುಧವಾರ ಈ ಸಂಗತಿ ಮನೆಯವರಿಗೆ ಗೊತ್ತಾಗಿದೆ. ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಜ್ಞಾನಭಾರತಿ ಠಾಣೆ ಪೊಲೀಸರು ಹೇಳಿದರು.

‘ರೋಹಿತ್, ಸ್ಥಳೀಯ ಯುವತಿಯೊಬ್ಬರನ್ನು ಆರು ವರ್ಷಗಳಿಂದ ಪ್ರೀತಿಸುತ್ತಿದ್ದರು. ಯುವತಿ, ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇವರಿಬ್ಬರು ಹಲವೆಡೆ ಸುತ್ತಾಡುತ್ತಿದ್ದರು. ಇವರ ಪ್ರೀತಿಯ ವಿಷಯ ಮನೆಯವರಿಗೂ ಗೊತ್ತಾಗಿತ್ತು’ ಎಂದು ತಿಳಿಸಿದರು.

‘ಇಬ್ಬರ ನಡುವೆ ಇತ್ತೀಚೆಗೆ ಗಲಾಟೆ ಆಗಿತ್ತು. ಪ್ರೀತಿ ಮುಂದುವರಿಸಲು ಸಾಧ್ಯವಿಲ್ಲವೆಂದು ಹೇಳಿದ್ದ ಯುವತಿ, ರೋಹಿತ್ ಅವರಿಂದ ದೂರವಾಗಲು ಮುಂದಾಗಿದ್ದರು. ರೋಹಿತ್ ಜೊತೆ ಮಾತನಾಡುವುದನ್ನೂ ನಿಲ್ಲಿಸಿದ್ದರು.’

‘ಪ್ರೀತಿ ಮುಂದುವರಿಸುವಂತೆ ದುಂಬಾಲು ಬಿದ್ದಿದ್ದ ರೋಹಿತ್, ಯುವತಿ ಕಾಲೇಜು ಬಳಿ ಹೋಗಿ ಮನವೊಲಿಸಲು ಯತ್ನಿಸಿದ್ದರು. ಅದಕ್ಕೆ ಯುವತಿ ಒಪ್ಪಿರಲಿಲ್ಲ. ಪ್ರೀತಿ ಮುಂದುವರಿಸಲು ಸಾಧ್ಯವಿಲ್ಲವೆಂದು ಪುನಃ ಹೇಳಿದ್ದರು. ಅದರಿಂದ ನೊಂದಿದ್ದರು ಎನ್ನಲಾದ ರೋಹಿತ್, ಮನೆಗೆ ಹೋಗಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಸದ್ಯದ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ರೋಹಿತ್–ಯುವತಿ ನಡುವಿನ ಪ್ರೀತಿಯ ವಿಚಾರವಾಗಿ ಸ್ನೇಹಿತರು ಹೇಳಿಕೆ ನೀಡಿದ್ದಾರೆ. ಯುವತಿಯಿಂದಲೂ ಮಾಹಿತಿ ಪಡೆಯಲಾಗಿದೆ’ ಎಂದು ತಿಳಿಸಿದರು.

ಎಟಿಎಂ ಕಳ್ಳತನಕ್ಕೆ ಯತ್ನ: ಬಾರ್ ಕೆಲಸಗಾರ ಬಂಧನ

ಬೆಂಗಳೂರು: ಆಕ್ಸಿಸ್ ಬ್ಯಾಂಕ್ ಎಟಿಎಂ ಯಂತ್ರ ಒಡೆದು ಕಳ್ಳತನಕ್ಕೆ ಯತ್ನಿಸಿದ್ದ ಆರೋಪದಡಿ ಕೆ. ಕರಿಚಿತ್ತಪ್ಪ (21) ಎಂಬಾತನನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ರಂಗನಾಥಪುರ ನಿವಾಸಿ ಕರಿಚಿತ್ತಪ್ಪ, ಬಾರ್‌ವೊಂದರಲ್ಲಿ ಸಪ್ಲೈಯರ್ ಕೆಲಸ ಮಾಡುತ್ತಿದ್ದ. ಹೆಚ್ಚು ಹಣ ಗಳಿಸಬೇಕೆಂದು ಕಳ್ಳತನಕ್ಕೆ ಸಂಚು ರೂಪಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಮಾಗಡಿ ರಸ್ತೆಯ ಜಯಲಕ್ಷ್ಮಿ ಕಾಂಪ್ಲೆಕ್ಸ್‌ನಲ್ಲಿ ಆಕ್ಸಿಸ್ ಬ್ಯಾಂಕ್ ಎಟಿಎಂ ಘಟಕವಿದೆ. ಜ. 14 ರಂದು ರಾತ್ರಿ ಘಟಕಕ್ಕೆ ನುಗ್ಗಿದ್ದ ಆರೋಪಿ, ಎಟಿಎಂ ಯಂತ್ರವನ್ನು ಒಡೆಯಲು ಯತ್ನಿಸಿದ್ದ. ಆದರೆ, ಯಂತ್ರ ಒಡೆದಿರಲಿಲ್ಲ. ನಂತರ, ಸ್ಥಳದಿಂದ ಕಾಲ್ಕಿತ್ತಿದ್ದ.’

‘ಜ. 15ರಂದು ಕೆಲಸಕ್ಕೆ ಬಂದಿದ್ದ ಬ್ಯಾಂಕ್ ಸಿಬ್ಬಂದಿ, ಯಂತ್ರಕ್ಕೆ ಧಕ್ಕೆಯಾಗಿರುವುದನ್ನು ಗಮನಿಸಿದ್ದರು. ನಂತರ, ಠಾಣೆಗೆ ಮಾಹಿತಿ ನೀಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಆರೋಪಿ ಮುಖಚಹರೆ ಸೆರೆಯಾಗಿತ್ತು’ ಎಂದು ತಿಳಿಸಿದರು.

ಬೆಟ್ಟಿಂಗ್ ಸಾಲ ತೀರಿಸಲು ಕಳ್ಳತನ: ಮಣಪ್ಪುರಂ ವ್ಯವಸ್ಥಾಪಕ ಸೆರೆ

ಬೆಂಗಳೂರು: ಗ್ರಾಹಕರೊಬ್ಬರು ಅಡವಿಟ್ಟಿದ್ದ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ಮಣಪ್ಪುರಂ ಫೈನಾನ್ಸ್ ಕಂಪನಿ ವ್ಯವಸ್ಥಾಪಕ ಸಿದ್ದೇಶ್ ಎಂಬಾತನನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಧುಗಿರಿಯ ಸಿದ್ದೇಶ್, ನಂದಿನಿ ಲೇಔಟ್‌ನಲ್ಲಿ ವಾಸವಿದ್ದ. ಮಣಪ್ಪುರಂ ಫೈನಾನ್ಸ್ ಕಂಪನಿಯ ಸ್ಥಳೀಯ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದ. ಕಂಪನಿ ಆಡಳಿತ ಮಂಡಳಿ ನೀಡಿರುವ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಸಿದ್ದೇಶ್, ಕ್ರಿಕೆಟ್ ಬೆಟ್ಟಿಂಗ್ ಆಡುತ್ತಿದ್ದ. ಇದಕ್ಕಾಗಿ ಹಲವರ ಬಳಿ ಸಾಲ ಮಾಡಿದ್ದ. ಬೆಟ್ಟಿಂಗ್‌ನಲ್ಲಿ ಸೋತು ಹಣ ಕಳೆದುಕೊಂಡಿದ್ದ. ಸಾಲ ನೀಡಿದ್ದ ಜನ, ವಾಪಸು ನೀಡುವಂತೆ ಒತ್ತಾಯಿಸಲಾರಂಭಿಸಿದ್ದರು. ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಚಿನ್ನಾಭರಣ ಕಳ್ಳತನ ಮಾಡಲು ಆರೋಪಿ ಸಂಚು ರೂಪಿಸಿದ್ದ.’

ಇಬ್ಬರು ಮಕ್ಕಳೊಂದಿಗೆ ಕೆರೆಗೆ ಹಾರಿದ ತಾಯಿ

ಮಾಲೂರು: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ತಾಯಿ ತನ್ನ ಇಬ್ಬರು ಮಕ್ಕಳನ್ನು ಕೆರೆಗೆ ತಳ್ಳಿ ಕೊಂದು, ತಾನೂ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಗುರುವಾರ ಇಲ್ಲಿ ನಡೆದಿದೆ. ಮೃತರನ್ನು ಚೊಕ್ಕಂಡಹಳ್ಳಿ ನಿವಾಸಿ ಬೇಬಿ (35), ಪುತ್ರಿಯರಾದ ಜಯಶ್ರೀ (8), ದರ್ಶನಿ (5) ಎಂದು ಗುರುತಿಸಲಾಗಿದೆ.

ಶಾಲೆ ಮಾನ್ಯತೆ ನವೀಕರಣ: ಅವಧಿ ವಿಸ್ತರಣೆ

ಬೆಂಗಳೂರು: ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳ ಮಾನ್ಯತೆಯ ನವೀಕರಣದ ಅವಧಿಯನ್ನು ಶಿಕ್ಷಣ ಇಲಾಖೆ ಜ.25 ರವರೆಗೂ ವಿಸ್ತರಿಸಿದೆ.

ಶಾಲೆಗಳ ಮಾನ್ಯತೆ ನವೀಕರಣದ ಅವಧಿ ಕಳೆದ ನವೆಂಬರ್‌ನಲ್ಲೇ ಮುಕ್ತಾಯವಾಗಿತ್ತು. 2022– 23ನೇ ಶೈಕ್ಷಣಿಕ ಅವಧಿಗೆ ಮಾನ್ಯತೆ ಮುಕ್ತಾಯವಾಗುವ ಶಾಲೆಗಳು ನವೀಕರಣಕ್ಕೆ ಅರ್ಜಿ ಸಲ್ಲಿಸದಿದ್ದರೆ, ಅವುಗಳನ್ನು ಅನಧಿಕೃತ ಶಾಲೆಗಳೆಂದು ಪರಿಗಣಿಸಲಾಗುವುದು. ಮಾನ್ಯತೆ ನವೀಕರಣ ಮಾಡದ ಶಾಲೆಗಳ ವಿದ್ಯಾರ್ಥಿಗಳನ್ನು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಕೂರಿಸಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಕೊನೆಯ ಅವಕಾಶ ನೀಡಲಾಗುತ್ತಿದೆ. ‘ಈ ಬಾರಿಯೂ ಅವಕಾಶ ಬಳಸಿಕೊಳ್ಳದ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಆಯುಕ್ತ ವಿಶಾಲ್ ಎಚ್ಚರಿಸಿದ್ದಾರೆ.

ರಸಪ್ರಶ್ನೆ: ಗುಡ್ಡೇಕೇರಿ ಸರ್ಕಾರಿ ಶಾಲೆ ಪ್ರಥಮ

ಬೆಂಗಳೂರು: ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ತೀರ್ಥಹಳ್ಳಿ ತಾಲ್ಲೂಕು ಹೊಸೂರು ಗುಡ್ಡೇಕೇರಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಾದ ಶ್ರೀರಾಮ್ ಭಟ್ ಹೊಸೂರು, ಅಭಿಜ್ಞಾ ಓಣಿಮನೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಶಿಕ್ಷಕರಾದ ಟಿ.ವಿರೇಶ್, ಶೌಕತ್ ಆಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದರು. ಬೆಂಗಳೂರಿನ ರಾಜಭವನದಲ್ಲಿ ಇದೇ 25ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ರಾಜ್ಯಪಾಲರು ಬಹುಮಾನ ವಿತರಿಸುವರು.

ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಶ್ರೀರಾಮ್ ಭಟ್ ಹೊಸೂರು, ಅಭಿಜ್ಞಾ ಓಣಿಮನೆ ಜೊತೆ ನಿರೂಪಕ ನಾ.ಸೋಮಶೇಖರ್ ಇದ್ದಾರೆ.

ಬೀರೇದೇವರುಗಳ ಮಹೋತ್ಸವ ನಾಳೆ

ಬೆಂಗಳೂರು: ಇದೇ 21ರಂದು ಆರ್.ಟಿ. ನಗರದ ಎಚ್‌ಎಂಟಿ ಮೈದಾನದಲ್ಲಿ ಬೀರೇದೇವರುಗಳ ಮೆರವಣಿಗೆ, ಪೂಜಾ ಮಹೋತ್ಸವ ಅದ್ದೂರಿಯಿಂದ ನಡೆಯಲಿದೆ ಎಂದು ಬೀರೇಶ್ವರ ಸ್ವಾಮಿ ನಾಲ್ಕು ಗಡಿ ದೇವರುಗಳ ಉತ್ಸವ ಸಮಿತಿ ತಿಳಿಸಿದೆ.

ಅಂದು ಸಂಜೆ 5 ಗಂಟೆಗೆ ಬೀರೇಶ್ವರ ಸ್ವಾಮಿ ಆಲೂರು, ಹುಲಿ ಹುಚ್ಚಪ್ಪ ಸ್ವಾಮಿ ಬೀರೇಶ್ವರ ಸ್ವಾಮಿ, ಮಲವಪ್ಪ ಸ್ವಾಮಿ ಬೀರೇಶ್ವರ ಸ್ವಾಮಿ ಮಾಗಡಿ, ಸಣ್ಣಕ್ಕರಾಯಸ್ವಾಮಿ ಬೀರೇಶ್ವರ ಸ್ವಾಮಿ ಅರಸಿನಕೆರೆ ದೇವರುಗಳ ಮಹೋತ್ಸವ ನಡೆಯಲಿದೆ.

‘ನಾಲ್ಕು ಗಡಿ ದೇವರುಗಳ ಉತ್ಸವ, ಹೂ– ಹೊಂಬಾಳೆ, ವೀರಭದ್ರಕಾಸೆಗಳು ಮುಂತಾದ ಕಾರ್ಯಕ್ರಮ ನಡೆಯಲಿದೆ. ಮರುದಿನ ಬೆಳಿಗ್ಗೆ 8 ಗಂಟೆಗೆ ಹುಲಿ ಪ್ರದರ್ಶನ, ಕತ್ತಿ ಪವಾಡಗಳು ನಡೆಯಲಿದೆ’ ಎಂದು ಬಿಬಿಎಂಪಿ ಗಂಗೇನಹಳ್ಳಿ ವಾರ್ಡ್‌ನ ನಿಕಟಪೂರ್ವ ಸದಸ್ಯ ಎಂ. ನಾಗರಾಜ ತಿಳಿಸಿದ್ದಾರೆ.

ಮತ್ತೆ ಹಿಡಿತಕ್ಕೆ ಬಿಜೆಪಿ ಶತಪ್ರಯತ್ನ

• ಆರ್. ಮಂಜುನಾಥ್

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೆಂಗಳೂರು: ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ವಿಜಯಕುಮಾರ್ ಅವರ ವೈಯಕ್ತಿಕ ವರ್ಚಸ್ಸಿನಿಂದ ಬಿಜೆಪಿ ಎರಡು ಬಾರಿ ಜಯ ಸಾಧಿಸಿತ್ತು. ಹ್ಯಾಟ್ರಿಕ್ ಸಾಧಿಸುವ ವಿಶ್ವಾಸದಲ್ಲಿದ್ದ ವಿಜಯಕುಮಾರ್ ಕಳೆದ ಚುನಾವಣೆಯಲ್ಲಿ ಅಭ್ಯರ್ಥಿಯಾಗಿದ್ದಾಗಲೇ ಮೃತಪಟ್ಟರು. ಹೀಗಾಗಿ ಚುನಾವಣೆಯನ್ನು ಒಂದು ತಿಂಗಳು ಮುಂದೂಡಲಾಗಿತ್ತು.

ಕಾಂಗ್ರೆಸ್– ಜೆಡಿಎಸ್ ಸಮ್ಮಿಶ್ರ ಸರ್ಕಾರ ರಚನೆಯಾದ ಮೇಲೆ ನಡೆದ ಚುನಾವಣೆಯಲ್ಲಿ ರಾಮಲಿಂಗಾರೆಡ್ಡಿ ಅವರ ಪುತ್ರಿ ಸೌಮ್ಯಾರೆಡ್ಡಿ ಗೆಲುವು ಸಾಧಿಸಿದ್ದರು. ವಿಜಯಕುಮಾರ್ ಸೋದರ ಪ್ರಹ್ಲಾದ್ ಅವರಿಗೆ ಟಿಕೆಟ್ ನೀಡಿದ್ದ ಬಿಜೆಪಿ, ಅನುಕಂಪದ ಮತಪಡೆದು ಜಯಗಳಿಸುವ ಪ್ರಯತ್ನ ನಡೆಸಿತು. ಅದು ಕೈಗೂಡಲಿಲ್ಲ. ಹೀಗಾಗಿ ಈ ಬಾರಿ ಮತ್ತೆ ಕ್ಷೇತ್ರವನ್ನು ಬಿಜೆಪಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಶತಪ್ರಯತ್ನ ಮಾಡುತ್ತಿದೆ. ಟಿಕೆಟ್ ಆಕಾಂಕ್ಷಿಗಳೂ ಹೆಚ್ಚಾಗಿದ್ದಾರೆ.

ಪ್ರತಿಷ್ಠಿತ ಬಡಾವಣೆಗಳನ್ನು ಒಳಗೊಂಡಿರುವ ಜಯನಗರ ಅಭಿವೃದ್ಧಿ ವಿಷಯದಲ್ಲಿ ಸಾಕಷ್ಟು ಮುಂದಿದ್ದರೂ ಸಣ್ಣಪುಟ್ಟ ಲೋಪದೋಷಗಳಿಗೇನೂ ಕಡಿಮೆ ಇಲ್ಲ. ರಸ್ತೆ, ಗುಂಡಿ, ಚರಂಡಿಯಂತಹ ಸಮಸ್ಯೆಗಳು ಇದ್ದೇ ಇವೆ. ತ್ಯಾಜ್ಯ ನಿರ್ವಹಣೆಯ ಸಮಸ್ಯೆಗಳು ಆಗಾಗ್ಗೆ ಬೆಳಕಿಗೆ ಬರುತ್ತವೆ. ರಾಜಕಾಲುವೆ ಒತ್ತುವರಿಯಂತಹ ಪ್ರಮುಖ ಪ್ರಕರಣಗಳಿವೆ. ಬಿಜೆಪಿಯ ಕಾರ್ಪೊರೇಟರ್‌ಗಳೇ ಹೆಚ್ಚಿದ್ದ ಕ್ಷೇತ್ರ ಇದು. ಹೀಗಾಗಿ, ಈ ಬಾರಿಯ ವಿಧಾನಸಭಾ ಕ್ಷೇತ್ರದ ಚುನಾವಣೆ ಪೈಪೋಟಿ ಬೇರೆಯದ್ದೇ ರೀತಿಯದ್ದು ಎಂದು ಅಂದಾಜಿಸಲಾಗಿದೆ.

ಕ್ಷೇತ್ರ ಸ್ಥಿತಿ–ಗತಿ

ಕಾಂಗ್ರೆಸ್ ಸೌಮ್ಯಾರೆಡ್ಡಿ ಅವರಿಗೇ ಮತ್ತೆ ಟಿಕೆಟ್ ನೀಡುವ ಸಂಭವವಿದೆ. ಸಮ್ಮಿಶ್ರ ಸರ್ಕಾರವಿದ್ದುದ್ದರಿಂದ ಕಳೆದ ಬಾರಿ ಜೆಡಿಎಸ್ ಸ್ಪರ್ಧೆಯಿಂದ ಹಿಂದೆ ಸರಿದಿತ್ತು. ರಾಮಲಿಂಗಾರೆಡ್ಡಿ ಪುತ್ರಿ ಪರವಾಗಿ ಕ್ಷೇತ್ರದಲ್ಲಿ ಪ್ರಚಾರ ನಡೆಸಿತ್ತು. ಈ ಬಾರಿ ಚಿತ್ರಣ ಬದಲಾಗಲಿದೆ. ಜೆಡಿಎಸ್ ಸ್ಪರ್ಧಿಸಲಿದೆ.

ಕಳೆದ ಬಾರಿ ಸುಮಾರು ಎರಡು ಸಾವಿರ ಮತಗಳ ಅಂತರದಲ್ಲಿ ಸೋಲು ಕಂಡಿದ್ದ ಬಿಜೆಪಿ ಈ ಬಾರಿ ಕ್ಷೇತ್ರವನ್ನು ಮತ್ತೆ ತೆಕ್ಕೆಗೆ ತೆಗೆದುಕೊಳ್ಳಲು ಶತಪ್ರಯತ್ನ ನಡೆಸಿದೆ. ಮಾಜಿ ಕಾರ್ಪೊರೇಟರ್‌ಗಳು ಇದೀಗ ಮುಂಚೂಣಿಯಲ್ಲಿದ್ದಾರೆ. ಅಪ್ಪ–ಮಗಳ ಒಟ್ಟಾರೆ ಪ್ರಯತ್ನದಿಂದ ಕಳೆದ ಬಾರಿ ಗೆದ್ದ ಕಾಂಗ್ರೆಸ್‌ಗೆ ಪೈಪೋಟಿ ನೀಡಲು ಸನ್ನದ್ಧರಾಗಿದ್ದಾರೆ.

ವಿಜಯಕುಮಾರ್ ಅವರು ಚುನಾವಣೆಗೆ ಸ್ಪರ್ಧಿಸಿದ್ದಾಗಲೂ ಚುನಾವಣೆಯನ್ನು ನಿರ್ವಹಿಸುತ್ತಿದ್ದದ್ದು ಕಾರ್ಪೊರೇಟರ್‌ಗಳೇ. ಅದರಲ್ಲಿ ಸಿ.ಕೆ. ರಾಮಮೂರ್ತಿ ಮುಂದಿದ್ದು, ಕಾರ್ಪೊರೇಟರ್ ಆಗಿ ಮಾಡಿದ ಕಾರ್ಯ, ಅವರ ಪತ್ನಿ ಕಾರ್ಪೊರೇಟರ್ ಆಗಿ ಮಾಡಿದ ಅಭಿವೃದ್ಧಿ ಕಾರ್ಯಗಳ ಜೊತೆಗೆ ಇನ್ನೆರಡು ಕಾರ್ಪೊರೇಟರ್‌ಗಳ ಬೆಂಬಲದ ಜೊತೆಗೆ ಸಮುದಾಯದ ನೆರವು ಪಡೆದು ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಎನ್.ಆರ್. ರಮೇಶ್ ತಮ್ಮ ಹೋರಾಟಗಳ ಮೂಲಕವೇ ಪ್ರಚಾರದಲ್ಲಿದ್ದು, ಅವರು ಜಯನಗರ ಕ್ಷೇತ್ರವನ್ನು ಪ್ರಥಮ ಆಯ್ಕೆಯಾಗಿರಿಸಿಕೊಂಡಿದ್ದಾರೆ. ಇನ್ನು ಮೇಯರ್ ಆಗಿ ಇಮೇಜ್ ಬೆಳೆಸಿಕೊಂಡಿದ್ದ ಎಸ್.ಕೆ. ನಟರಾಜ್ ಅವರು 2008ರಲ್ಲಿಯೇ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ಸಿಗದೆ ಬಂಡಾಯ ಅಭ್ಯರ್ಥಿಯೂ ಆಗಿದ್ದರು. ಭರವಸೆ ಮೇರೆಗೆ ಅಂದು ನಾಮಪತ್ರ ವಾಪಸ್ ಪಡೆದಿದ್ದರು. ಇದೀಗ ಪ್ರಬಲ ಆಕಾಂಕ್ಷಿಯಾಗಿದ್ದಾರೆ.

ರವಿ ಕೃಷ್ಣಾರೆಡ್ಡಿ ಕಳೆದ ಬಾರಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೂರನೇ ಅತಿ ಹೆಚ್ಚು ಮತ (1,861) ಪಡೆದಿದ್ದರು. ಜೆಡಿಎಸ್‌ನ ಕಾಳೇಗೌಡ ಕಳೆದ ಬಾರಿ ಸಮ್ಮಿಶ್ರ ಸರ್ಕಾರದ ಸೂಚನೆ ಮೇರೆಗೆ ಕಣದಿಂದ ಹಿಂದೆ ಸರಿದಿದ್ದರು.

ಜಯನಗರ

ಸೌಮ್ಯಾರೆಡ್ಡಿ
ಹಾಲಿ ಶಾಸಕಿ (ಕಾಂಗ್ರೆಸ್)



ಹಾಲಿ ಮತದಾರರ ವಿವರ

1,01,537 ಪುರುಷರು
1,00,073 ಮಹಿಳೆಯರು
15 ತೃತೀಯ ಲಿಂಗಿಗಳು
2,01,625 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	53,411	31,642	11,882
ಬಿಜೆಪಿ	51,568	43,895	43,164
ಜೆಡಿಎಸ್	-	12,074	20,570

ಫೆ.15ರೊಳಗೆ ಬಿಬಿಎಂಪಿ ಬಜೆಟ್ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಬಜೆಟ್ ತಯಾರಿ ಆರಂಭವಾಗಿದ್ದು, ಫೆ.15 ರೊಳಗೆ ಸಿದ್ಧಗೊಳ್ಳಲಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬಜೆಟ್ ತಯಾರಿಗಾಗಿ ಸಭೆಗಳನ್ನು ನಡೆಸಲಾಗುತ್ತಿದೆ. 2021–22ರ ಪೂರ್ಣ ವೆಚ್ಚವನ್ನು ಪರಿಶೀಲಿಸಲಾಗುತ್ತಿದೆ. 2022–23ರ ಬಜೆಟ್ ಸಿದ್ಧತೆ ನಡೆಯುತ್ತಿದ್ದು, ರಾಜ್ಯ ಸರ್ಕಾರದ ಬಜೆಟ್ ಮಂಡನೆಯಾದ ಮೇಲೆ ಅಂತಿಮಗೊಳಿಸಲಾಗುತ್ತದೆ. ನಂತರ ಅನುಮೋದನೆಗೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಎಂದು ಸುದ್ದಿಗಾರರಿಗೆ ಗುರುವಾರ ಮಾಹಿತಿ ನೀಡಿದರು.

ಮಹದೇಪುರ ವಲಯ ವ್ಯಾಪ್ತಿಯಲ್ಲಿ ಮತಗಟ್ಟೆ ಹಾಗೂ ಕಾಮಗಾರಿಗಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಹೆಣ್ಣೂರು ಜಂಕ್ಷನ್ ಬಳಿಯ ಹೊರ ವರ್ತುಲ ರಸ್ತೆ ಮಾರ್ಗದಲ್ಲಿ ಸರ್ವೀಸ್ ರಸ್ತೆ ಹಾಗೂ ಪಾದಚಾರಿ ಮಾರ್ಗದ ಅಭಿವೃದ್ಧಿ ಕಾರ್ಯವನ್ನು ಕೂಡಲೇ ಪ್ರಾರಂಭಿಸಲು ಸೂಚಿಸಿದರು.

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ಹೊರಮಾವು ವಾರ್ಡ್ ಮುನಿಶಾಮಪ್ಪ ಬಡಾವಣೆಯಲ್ಲಿ 750 ಮೀಟರ್ ಉದ್ದದ ರಾಜಕಾಲುವೆ ಕಾಮಗಾರಿಯನ್ನು ಪರಿಶೀಲಿಸಿದರು. ಒತ್ತುವರಿಯಾಗಿದ್ದ ಪ್ರದೇಶದಲ್ಲಿ ಎಲ್ಲವನ್ನೂ ತೆರವು ಮತ್ತೆ ಈ ಭಾಗ ಜಲಾವೃತವಾಗದಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ರಾಜಕಾಲುವೆಯ ಎರಡೂ ಬದಿ ಸಸಿಗಳನ್ನು ನೆಡಲು ಹೇಳಿದರು.

ಎಸ್.ಆರ್ ಲೇಔಟ್‌ನಲ್ಲಿ ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದ 17 ಕಟ್ಟಡಗಳ ಭಾಗಗಳನ್ನು ತೆರವುಗೊಳಿಸಿ, 270 ಮೀಟರ್ ಉದ್ದದ 30 ಅಡಿ ರಾಜಕಾಲುವೆ ಕಾಮಗಾರಿ ಪ್ರಗತಿಯಲ್ಲಿದೆ. ಇದನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು.

ವಲಯ ಆಯುಕ್ತ ಡಾ. ತ್ರಿಲೋಕ್ ಚಂದ್ರ, ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಮುಖ್ಯ ಎಂಜಿನಿಯರ್ ಲೋಕೇಶ್ ಇದ್ದರು.

‘ಕೊಲಿಜಿಯಂ ಶಿಫಾರಸು ಆತುರದಲ್ಲಿ ಹಿಂದಿರುಗಿಸುವಂತಿಲ್ಲ’

ನವದೆಹಲಿ(ಪಿಟಿಐ): ಕಲ್ಕತ್ತಾ ಹೈಕೋರ್ಟ್‌ಗೆ ನ್ಯಾಯಮೂರ್ತಿಗಳಾಗಿ ವಕೀಲರಾದ ಅಮಿತೇಶ್ ಬ್ಯಾನರ್ಜಿ ಮತ್ತು ಸಾಕ್ಯಾ ಸೇನ್ ಅವರನ್ನೇ ನೇಮಿಸಲು ಎರಡನೇ ಬಾರಿಗೆ ಶಿಫಾರಸು ಮಾಡಿದ್ದು, ಈ ಪ್ರಸ್ತಾವವನ್ನು ಪದೇ ಪದೇ ಆತುರದಲ್ಲಿ ವಾಪಸ್ ಕಳುಹಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಕೊಲಿಜಿಯಂ ಗುರುವಾರ ಹೇಳಿದೆ.

ಈ ಮೂಲಕ ಕೊಲಿಜಿಯಂ ವ್ಯವಸ್ಥೆ ಮೂಲಕ ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ಸುಪ್ರೀಂ ಕೋರ್ಟ್ ಮತ್ತು ಸಂಸತ್ ನಡುವಿನ ತಿಕ್ಕಾಟ ಮುಂದುವರಿದಿದೆ.

ಇದೇ ತಿಂಗಳ 18ರಂದು ಸಭೆ ಸೇರಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ಸಂಜಯ್ ಕಿಶನ್ ಕೌಲ್ ಮತ್ತು ಕೆ.ಎಂ. ಜೋಸೆಫ್ ಅವರನ್ನು ಒಳಗೊಂಡ ಕೊಲಿಜಿಯಂ, ಕಲ್ಕತ್ತಾ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಅಮಿತೇಶ್ ಬ್ಯಾನರ್ಜಿ ಮತ್ತು ಸಾಕ್ಯಾ ಸೇನ್ ಅವರನ್ನೇ ನೇಮಿಸುವಂತೆ ಮೇಲಿನ ಕಾರಣಕ್ಕೆ ಮತ್ತೊಮ್ಮೆ ಶಿಫಾರಸು ಮಾಡಲು ನಿರ್ಧರಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Engg/ Production Technical

REQD. DIP/B.E(ELECTR) site Eng's, Supervisors, Electr Autocad and Tendering with 2 years experience for electrical firm in BLR. info@naseer.co.in

General

REQUIRED FOLLOWING staff to work in & around Bangalore. 1. Office Staff, Knowledge in Computer at Malleswaram 2. Office Boy at Malleswaram 3. Store Keeper (2 years' experience in handling stores & records) 4. Service Technicians (ITI/ Diploma holders) for Bangalore & other cities. Contact in person at RP Associates #202, 1st Floor, 36, Emami Nest, 8th main, 16th Cross, Malleswaram, Bangalore-55. Contact: 9900098631/ 080-23322350 or apply email: hr@rpassociatesblr.com.

HRD & Admin

WANTED HR Executive. Candidates should have exposure to handling PF/ ESI challan preparation, remittances, Maintenance of PF/ ESI records, Master File creation, personal record keeping, updation etc., Legal compliance and assist in salary preparation and office administration at Malleswaram. Should hold MSW/ MBA/ PG in HR area. Salary will be paid based on experience. Mail resume to chandrangssa@gmail.com & 9900098631

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Marketing & Sales

DELHI BASED wire and cable manufacturing company is hiring Sales and Marketing Executive for sale of their products in corporates. Interested person can contact: 9810038580, 9341233523

Teachers/ Professors

HEAD MISTRESS For State Board School in JPNagar with MA.B.Ed. Candidate should have Experience In Similar Field Minimum 5Years. WhatsApp 9606298800

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

PUBLIC NOTICE

IN THE COURT OF THE PRINCIPAL CITY CIVIL JUDGE AT BENGALURU
Misc. No. 936/2022

Between:
1. Sri. Muruga Manickam, Aged about 59 years, S/o Seevan Manickam, R/at No. 10/5-1, 3rd cross, Jai Bharath Nagar, Bangalore - 560033,
2. Sri. Commandy Manickam, Aged about 56 years, S/o Seevan Manickam, R/at No. 10/5-1, 3rd cross, Jai Bharath Nagar, Bangalore - 560033, ...Petitioners
And:
1. People Charity Fund
Renamed as People Charity Fund Trust,
A public trust having its office at No. 15, 2nd floor, Madras Bank Road, Bangalore -560001,
And also at #D8, Smilee Planters Association, Huskier Road, Goolamangala village, Bangalore-560099
Represented by its Authorised Signatory,
2. Ms. Nalini Ramalingam,
The Managing Trustee, (And presently the sole trustee) People Charity Fund Trust, (Renamed as People Charity Fund Trust) No. 15, 2nd floor, Madras Bank Road, Bangalore -560001,
Also at #D8, Smilee Planters Association, Huskier Road, Goolamangala village, Bangalore - 560099,
And also at #6468, Bayview Drive, Oaklad CA 94605, USA,

Notice to Respondents by way of Paper Publication

Take notice that the Petitioners i.e., (1) Sri. Muruga Manickam, aged about 59 years, S/o Seevan Manickam, R/at No. 10/5-1, 3rd cross, Jai Bharath Nagar, Bangalore - 560033, and (2) Sri. Commandy Manickam, aged about 56 years, S/o Seevan Manickam, R/at No. 10/5-1, 3rd cross, Jai Bharath Nagar, Bangalore-560033, have instituted the above Petition for removal of the 2nd respondent as a trustee of the 1st respondent trust and directing the 2nd respondent to furnish accounts and for framing a scheme for proper administration of the 1st respondent trust and for other reliefs. The above petition is posted for your appearance on 16/2/2023
You are hereby directed to appear before the Prl. City Civil & Sessions Judge, Bengaluru, (CCH-1) at 11:00 a.m. on the above said date, i.e., 16/2/2023, either in person or through a duly authorized agent in support of your defense. Failing which, the above petition shall be determined Ex-parte.
Given under my hand and the seal of this Hon'ble court on this the 18th day of January 2023, at Bangalore.

BY ORDER OF COURT
Assistant Registrar,
City Civil Court, Bengaluru
Sri. Mahesh Kiran Shetty,
Advocate, MKS Law Chambers,
Advocates and Solicitors,
No. 8, 2nd Cross, NS Iyengar Street, Seshadripuram, Bangalore - 560020

AIR INDIA sats
IMPORTANT NOTICE

This is to bring to the notice of Importers / Consignees / Airlines / Agents, that at Air India SATS Airport Services Pvt. Ltd., Air Cargo Complex, KIA, BIAL, Devanahalli, Bengaluru - 560 300, holding accumulation of Import Unmarked / Un manifested / Unclaimed shipments of various types lying in our Import warehouse for long time.
Since these shipments do not carry proper marks and identifications on the shipment packages, in consultation and with consensus from Customs, Under Customs Act 1962 as per Section 48, Section 153 and Section 155. These shipments were taken up for physical verification and examination.
Notification and the shipment details of the above mentioned are uploaded in our web site www.aisats.in to view.
Importers / Consignees / Airlines / Agents, are here by informed that if they have any claim on these shipments of their belongs. Please approach the undersigned with the relevant details on or before 20th Feb` 2023, Mon.
If no response on claim of these shipments on or before the mentioned date 20th Feb` 2023, Mon. It will be deemed to consider no claim and further course of action on disposal of these shipments will be initiated for further progress.
For Any clarification please contact our representative or visit our website for details of shipments.
Vigneswaran M
Manager, Cargo Services
Air India SATS
Airport Services Pvt. Ltd.
Plot No. C-05L, Kempegowda International Airport, Devanahalli, Bengaluru -560300,
T: +91 080 66783429
M: +91 9448238762
Email: vigneswaran.m@aisats.in
Website: www.aisats.in
ROUNAQH

PUBLIC NOTICE

Members of the public are hereby notified that our client M/s. MAIA Estates LLP, a limited liability partnership, incorporated under the Limited Liability Partnership Act, 2008 and having its registered office at No. 43/39, 3rd Floor, 2nd Cross, Promenade Road, Bengaluru - 560005 is in the process of finalizing the terms of joint development with: (i) Mrs. Nandini Alva, wife of Late Dr. Jeevaraj Alva; (ii) Mr. Vivek Seth, son of Mr. Roop Kishore Seth; and (iii) Mrs. Sonia Vohra, wife of Mr. Sanjeev Vohra (hereinafter referred collectively as 'Owners') in relation to the development of the below detailed properties, hereinafter referred to as 'Schedule Properties'.

SCHEDULE PROPERTIES

All that piece and parcel of immovable properties being converted for residential purpose, situated at Dasarahalli Village, K.R Pura Hobli, Bangalore East Taluk, Bangalore Urban District, described in the table below:

Sl. No.	Survey No.	Extent	Boundaries				Name of the Owner
			East by	West by	North by	South by	
1.	24/9	19,949.90 Square Feet	Sy No. 24/10 and 24/11	Sy No. 24/8	Sy No. 24/15	Road	Mrs. Nandini Alva
		10,000 Square Feet	Property belonging to Mrs. Nandini Alva	Private Property	Road & Private Property	Property belonging to Mrs. Nandini Alva	Mrs. Sonia Vohra
2	24/10	09 Guntas	Sy No. 24/12A	Sy No. 24/9	Mariyappanapalya	Sy No. 24/11	Mrs. Nandini Alva
3.	24/11	12 Guntas	Sy No. 24/12A	Sy No. 24/9	Sy No. 24/10	Road	
4.	24/12A	10 Guntas	Sy No. 24/12B	Sy No. 24/10 & 24/11	Mariyappanapalya	Road	
5.	24/12B	11 Guntas	Sy No. 24/13	Sy No. 24/12A	Mariyappanapalya	Road	
6.	24/13	20 Guntas	Sy. No.24/14	Sy No. 24/12B	Mariyappanapalya	Road	
7.	24/14	01 Acre 06 Guntas	Sy. No. 24/16 & 24/18	Sy. No. 24/13	Mariyappanapalya	Road	
8.	24/15	23 Guntas	Sy No. 23	Sy. No. 24/16	Mariyappanapalya	Sy. No. 24/17	Mr. Vivek Seth, son of Mr. Roop Kishore Seth
9.	24/16	13 Guntas	Sy. No. 24/15	Sy No. 24/14	Mariyappanapalya	Sy. No. 24/18	
10.	24/17	07 Guntas	Sy No. 23	Sy. No. 24/18	Sy. No. 24/15	Road	Mrs. Nandini Alva
11.	24/18	07 Guntas	Sy. No. 24/17	Sy. No. 24/14	Sy. No. 24/16	Road	

Any person (other than the aforesaid Owners) having any manner of right, title, interest or claims over the Schedule Properties (or any part thereof) may submit their claims/ particulars of interest with respect to the Schedule Properties (or any part thereof) and/ or submit their objections to the proposed joint development of the Schedule Properties (in view of their claim to/ interest over the Schedule Properties), to the undersigned in writing, at the below mentioned address, within 15 (fifteen) days from the date of publication of this Notice. The said claims/ objections, if any, must be supported with appropriate documents and explanation (in writing).
If no objection/ reply to this Notice is received within the said 15 (fifteen) days from date of issue of this Notice, it will be deemed that there are no third party claims over the Schedule Properties and that there are no objections to the proposed joint development arrangement referred above.

Date: 20.01.2023
Place: Bengaluru
Sd/- Mr. Srinivas B.R. & Ms. Brijita Prakash, Partners
DSK Legal, Prestige Loka, No. 201, 2nd Floor, No. 7/1 & 7/7 Brunton Road, Craig Park Layout, Bengaluru-560025.
Tel: 080-69548770

REAL ESTATE SELLING

Flat

Yelahanka

SALE 1075SQFT Flat In Provident Welworth City Doddaballapura Main Road 3BHK With Cover Car-Parking 'E' Khata Call:6361613734

Sites

Banashankari

BANASHANKARI 6TH Stage WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT. Contact: 8050908920/ 9986866661

Vishweshwariah Layout

40X60 COMMERCIAL Site Bharthnagar 60ft Road (North) and Attach BBMP A Katha 40x40 Corner Site: 9964971895

House

BTM Layout

SALE EAST Facing A Khata Building with Lift Shantiniketan Layout, Sai Baba Temple, Arekere: 7975774265

50X80, 3 BHK duplex old house for sale BTM 2nd Stage Dollars Layout Genuine Buyers call- 9845472938, 9886434063

Srinagar

4BHK BRAND new fully Furnished House with Lift & Covered Parking, near Srinagar Jain Temple for Sale- 8277362538

REAL ESTATE BUYING

Agricultural Land Converted

Multiple Locations

WANTED 30 to 50 Acres Converted Land for out right purchase in and around Bangalore. (Brokers Excuse) Call VERNA DEVELOPERS, Barton Centre, MG-Road. 9916310226/ 9353128035. www.vernadevelopers.com

General

General

WE DO Agriculture Land Conversions, Change of Land use, Phodi Work,Survey, Approvals, Property Buying and Selling,Joint Development, Property related all services. Call VERNA DEVELOPERS, Barton Centre, MG-Road. 9916310226/ 9353128035.

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

PERSONAL

Change of Name

CHANGE OF NAME
I, G. MURALI DAS S/o. Guruvappa P.M. R/a #. 18, 5th Cross, Gunjur Palya, Varthur, Bengaluru-87, have changed my name to G. MURALI RAJ S/o. P. M. Gurappa, vide affidavit dated 18.01.2023, before notary N. Kanchivaradaraju, Bengaluru. Henceforth I shall be called G. MURALI RAJ S/o. P. M. Gurappa, only.

I,HEMACHANDRAN DHAICHRAJU YUVARAJ, changed-my name-to HEMACHANDRAN DHAKSHARAJU YUVARAJ dated: 13.01.2023. Sworn before Notary H.S.Sakalesh Aradhya, Bengaluru.

I, SUNIDHI D/o. Vasudeva Adiga, Aged 25 years, R/at No. M-14, 26th Main, 1st Phase, JP Nagar, Bengaluru, Karnataka 560078, have changed my name from SUNIDHI to SUNIDHI ADIGA vide affidavit dt.19.01.2023 sworn before Veena .K, Advocate & Notary, Bangalore.

I, SUDHAKARA KRISHNAPPA R/@ 327, Jambusavari Dinne, JP Nagar 8th Phase, Bengaluru-76 have changed my name to SUDHAKAR KRISHNAPPA Vide affidavit dated 19/01/2023, before notary K.V. Mani

CHANGE OF NAME
I, RAMA RAO JANARDHAN RAO Residing at 29/8, 3rd cross, Laljinagar, Bengaluru-560030 have changed my name to JANARDHAN RAO vide affidavit dated 19/01/2023 before notary A. Gerard Bengaluru, Henceforth I shall be called JANARDHAN RAO only.

CHANGE OF NAME
I, TEJAS VENKATESH residing at C-2023, Sobha Moonstone Apartment, Dasarahalli, Outer Ring Road, Hebbal, Bengaluru-560024 have changed my name to TEJAS V RAO vide affidavit dated 18/01/2023 before notary Gangambike H.S, Bengaluru. Henceforth I shall be called TEJAS V RAO only.

I,SANTHOSH DEVARAMANE,S/o. Mahalingappa Devaramane,R/a #1212,7th A`Main,1st C`Cross, Hampinagar Bengaluru- 560040 Have Changed`My Name to SANTOSH DEVARAMANE vide Affidavit Dated: 19-01-2023 Before Notary H.S.Sakalesh Aradhya Bangalore

CHANGE OF NAME
I, PRASHANT S/o RAMA SHANKAR PRASAD YADAV Residing at 1509, 1st Floor, 10th cross 13th Main, BTM 2nd Stage, Sunshine Colony, Bengaluru-560076 have changed my name to PRASHANT YADAV vide affidavit dated 19.01.2023, before notary Bhagya Kumari. N. Bengaluru. Henceforth I shall be called PRASHANT YADAV only.

CHANGE OF NAME
I, SHRIYA VENKATESH, residing at No. A202, 2nd Floor, Nagarjuna Gardens, F-Block, Sahakarnagar, Bengaluru-560092, have changed my name to SHRIYA RAO vide affidavit dated 18/01/2023 before notary Gangambike. H.S, Bengaluru. Henceforth I shall be called SHRIYA RAO only.

CONNECT ಕ್ಲಾಸಿಫೈಡ್ಸ್



REQUIRED
Land 8000 to 15000 sqft in Old Airport Road, New Airport Road, Marathalli Ring Road, Hosur Road, Bangalore-Nelamangala Road or any other major Roads for PETROL BUNK - Rent / Lease for 20 years with rent between Rs. 20/50. Building Tax will be paid by us.
Contact: 96861 75666 / 99451 55688
Email: gmsudev@yahoo.com

ST. BENEDICT'S ACCDAMY RESEDENTIAL
CBSE School, PU, Degree and Nursing Colleges for Boys & Girls.
ADMISSION OPEN FOR 2023 - 24
Fee, Food, Hostel facilities for One (1) Year- One Lakh only in Installments
Free Academy for NCC, Karate, Kung Fu-Wu, Counseling, Yoga.
St. Benedict's Group of Institutions, Anchpalaya, Kengeri, Mysore Road, Bangalore.
Contact: 6360498834/ 9886812398
Mail: jeromeosb@gmail.com / www.sbab.in

ಭಾರತೀಯ ರೈಲ್ವೆ
ಮಹಾಶಿವರಾತ್ರಿ ವಿಶೇಷ ರೈಲು
ವಾರಣಾಸಿ- ಗಯಾ ಪ್ರಯಾಗರಾಜ್ - ಅಯೋಧ್ಯ
12.02.23- 9 ದಿವಸ - 2SL Rs 16500
ರೈಲಿನಲ್ಲಿ ಪ್ರಯಾಣ- ವಸತಿ ಬಸ್-ಊಟ ಸೆಕ್ಯೂರಿಟಿ ಟೂರ್ ಮ್ಯಾನೇಜರ್
8754404260-9620393938
ಭಾರತ ಸರ್ಕಾರದಿಂದ ಮಾನ್ಯತೆ ಪಡೆದಿದೆ ಟ್ರಾವೆಲ್ ಟೈಮ್ಸ್
BOOK ONLINE - WWW.ULARAIL.COM

PS ASSOCIATES
INSTANT LOAN
INSTANT CASH ONLY PAN CARD, AADHAR CARD AND BANK ACCOUNT NEEDED
8940142392

ONE STOP SOLUTION FOR YOUR HEALTH ISSUES
LEG PAIN
BACK PAIN
KNEE PAIN
MIGRAINE
FREE Consultation and Healing Therapy
SHRI RAJENDRA GURUJI
From AJMER, RAJASTHAN
LOCATION: The President Hotel Railway Parallel Road, Kumarapark West
DATE: 23rd January 2023 to 30th January 2023
For more details contact : 8970409660

DH DECCAN HERALD ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA + PRAJAVANI BENGALURU ON FRIDAY + SATURDAY + SUNDAY
@ 2400/-* FOR 15 WORDS
conditions apply*
For More Details Contact:
9731810277 | 9901641752 | 9886213331 | 9845114560
080- 45557163 | 45557164

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ, ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ:ಕಾಇಂಲೋವಿಚಿಜೆಇ-3:ಟೆಂಡರ್ ವಿಸ್ತರಣೆ-91:2022-23 ದಿನಾಂಕ:18.01.2023

ಅಲ್ಪಾವಧಿ ಇ-ಟೆಂಡರ್ ವಿಸ್ತರಣೆ

ಈ ಮೂಲಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ ಈ ಕಛೇರಿ ಇ-ಟೆಂಡರ್ ಪ್ರಕಟಣೆ ಸಂಖ್ಯೆ: ಕಾಇಂ:ಲೋವಿಚಿ:ಟೆಂಡರ್-91:2022-23, ದಿನಾಂಕ: 09.01.2023ರಲ್ಲಿ ಆಹ್ವಾನಿಸಿದ ಕಾಮಗಾರಿಯ ವ.ಇಂ. 156833 (2ನೇ ಕರೆ)ರ ಟೆಂಡರ್ ಅವಧಿಯನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮರು ನಿಗಧಿಪಡಿಸಿದೆ.

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 24.01.2023 ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 25.01.2023 ಸಮಯ 16:00. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 27.01.2023 ಸಮಯ 16:15. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 31.01.2023 ಸಮಯ 11:00.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.karnataka.gov.in/eportal/index.seamನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂ.ಸಂ: 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂ.ಸಂ: 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

RO No. 893: DIPR/CTA/KSMCA/2022-23 ಸಹಿ/- ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ಸರಕಾರ

ಕಾರ್ಯಕಾರಿ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

E-mail: eepwdudp02@gmail.com Website: www.kpwd.gov.in

ನಂ/ಪಿಡಬ್ಲ್ಯೂಡಿ/ಯುಡಿಎನ್/ಎನ್‌ಐಟಿ-69/2022-23/ಎಇ2 ದಿನಾಂಕ: 17.01.2023

ಟೆಂಡರು ಪ್ರಕಟಣೆ

ಈ ಕೆಳಕಂಡ ಕಾಮಗಾರಿಗೆ 'ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್' **https://www.eproc.karnataka.gov.in"** ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 02.02.2023 ರ ಸಂಜೆ-5.30 ಘಂಟೆವರೆಗೆ. **ಅರ್ಹ ಗುತ್ತಿಗೆದಾರರು:** ಕ್ರ.ಸಂ. (1)ಕ್ಕೆ 2ನೇ ದರ್ಜೆ ಮತ್ತು ಕ್ರ.ಸಂ. (2)ಕ್ಕೆ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಟೆಂಡರು ಸಲ್ಲಿಸಬಹುದಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರಿಗಿರಿಸಿದ ಅಂದಾಜು ಮೊಬಲಗು (ರೂ.ಗಳಲ್ಲಿ)
1	ಉಡುಪಿ ಜಿಲ್ಲೆ, ಕಾಪು ತಾಲೂಕು, ಪಡುಬಿದ್ರಿ, ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಗರ್ಭಗುಡಿ ಮತ್ತು ತೀರ್ಥಮಂಟಪದ ಪುನರ್ ನಿರ್ಮಾಣ (160994) (ಮರು ಟೆಂಡರ್)	ರೂ. 2,49,72,083.00
2	ಬ್ರಹ್ಮಾವರ ತಾಲೂಕು, ಬಿಲ್ಲಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಕನಬೈಲಿನಿಂದ ಕಕ್ಕುಂಜೆ ತೆಂಕಬೆಟ್ಟುವರೆಗೆ ರಸ್ತೆ ಅಭಿವೃದ್ಧಿ. (ಒಂದು ಬಾರಿ ಅಭಿವೃದ್ಧಿ)	ರೂ. 61,33,569.00

ಕೆಲಸದ ಕುರಿತಾದ ಯಾವುದೇ ಇತರ ವಿವರಗಳನ್ನು ಕಚೇರಿಯ ವೇಳೆಯಲ್ಲಿ ಈ ಕಛೇರಿಯಲ್ಲಿ ಪಡೆಯಬಹುದಾಗಿದೆ. ಸಹಿ/- ಕಾರ್ಯನಿರ್ವಾಹಕ ಇಂಜಿನಿಯರು,

ವಾಸಾಇಂ/ಸನಿಉ/ಎಂಸಿಎ/799/22-23 ದಿ: 19.01.2023 ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಆರ್.ಡಿ.ಪಿ.ಆರ್.ಯೋಜನಾ ವಿಭಾಗ, ಎನ್.ಆರ್.ಮೊಹಲ್ಲಾ, ಮೈಸೂರು .

ದೂರವಾಣಿ.ಸಂ/FAX: 0821-2492254,

Email: eepdmys@gmail.com, kn-mys-1@pmgsy.nic.in

ಟೆಂಡರ್ ಪ್ರಕಟಣೆ (ಅಲ್ಪಾವಧಿ) ಸಂಖ್ಯೆ: 05/2022-23 ದಿ: 17.01.2023

ಸೂಚನೆ ಸಂಖ್ಯೆ: ಕಾಅ/ಗ್ರಾಅಪಂರಾ/ಯೋವಿ/ತಾಂತ್ರಿಕ/ಟೆಂಡರ್/2022-23/1126 ದಿನಾಂಕ: 17.01.2023

ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರ ಪರವಾಗಿ ಮೈಸೂರು ಜಿಲ್ಲೆಯ ವ್ಯಾಪ್ತಿಯ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ-3 (ಬ್ಯಾಚ್-1 & 2 2020-21) ರಡಿಯ 01 ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. (ಟೆಂಡರ್‌ಗಿಟ್ಟ ಮೊತ್ತ ರೂ.124.10 ಲಕ್ಷ ಮತ್ತು ಇ ಎಂ ಡಿ ಟೆಂಡರ್‌ಗಿಟ್ಟ ಮೊತ್ತಕ್ಕೆ ಸಾಮಾನ್ಯ ವರ್ಗಕ್ಕೆ 2.00%) ಈ ಕಛೇರಿಯಿಂದ ಇ-ಪ್ರೊಕ್ಯೂರ್ಮೆಂಟ್ ಮುಖಾಂತರ ದ್ವಿ-ಲಕೋಟೆಯಲ್ಲಿ ಟೆಂಡರ್‌ಅನ್ನು ಕರೆಯಲಾಗಿದ್ದು, ಇ-ಪ್ರೊಕ್ಯೂರ್ಮೆಂಟ್ ನಲ್ಲಿ ಟೆಂಡರ್ ಅನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿ: 04.02.2023 @ 4.30 PM, ಟೆಂಡರ್ ಅನ್ನು ತೆರೆಯುವ ದಿ: 06.01.2023 @ 4.30 PM ಎಂದು ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಮೈಸೂರು ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0821-2492254 ಹಾಗೂ ವಿವರಗಳನ್ನು https://www.eproc.karnataka.gov. in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹಾಗೂ ಕಾರ್ಯಪಾಲಕ ಇಂಜಿನಿಯರ್, ಗ್ರಾ ಅ ಪಂ ರಾ ಯೋಜನಾ ವಿಭಾಗ, ಮೈಸೂರು.

DIPR/DDMYS/KSMCA/891/2022-23

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ

ಸಿ.ಬಿ.ಐ. ಕಛೇರಿ ಎದುರು, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು - 560024.

ದೂರವಾಣಿ: 8277100200 ಇ-ಮೇಲ್: kawb2021@gmail.com

ಸಂಖ್ಯೆ: ಸಕಾ/ಕಪ್ರಾಕಮಂ/2022-23 ದಿನಾಂಕ: 18-01-2023

ಸಾರ್ವಜನಿಕ ಪ್ರಕಟಣೆ

ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ನವದೆಹಲಿ ಇವರ ಅಧಿಸೂಚನೆ ದಿನಾಂಕ: 23.05.2017 ಮತ್ತು 06.09.2018 ರ ಅನುಸಾರ ನಾಯಿಗಳ ತಳಿ ಸಂವರ್ಧನೆ, ಮಾರಾಟ ಹಾಗೂ ಮುದ್ದಿನ ಪ್ರಾಣಿಗಳ ಮಳಿಗೆ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿ / ಸಂಸ್ಥೆಗಳು ಸ್ಥಳೀಯ ಸಂಸ್ಥೆಗಳಿಂದ (Local Bodies) ಪರವಾನಗಿ (License) ಪಡೆಯುವ ಮುನ್ನ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯಲ್ಲಿ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯಿದೆ (ನಾಯಿ ತಳಿ ಸಂವರ್ಧನೆ ಮತ್ತು ಮಾರಾಟ ನಿಯಮ - 2017 ಮತ್ತು ಮುದ್ದಿನ ಪ್ರಾಣಿ ಮಳಿಗೆ ನಿಯಮ 2018) ರ ಸೆಕ್ಷನ್ 3, 4 ಮತ್ತು 5 ರ ಅಡಿಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ, ನಾಯಿಗಳ ತಳಿ ಸಂವರ್ಧನೆ, ಮಾರಾಟ ಹಾಗೂ ಮುದ್ದಿನ ಪ್ರಾಣಿಗಳ ಮಳಿಗೆ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿ / ಸಂಸ್ಥೆಗಳು ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿನದೊಳಗೆ ಭರ್ತಿ ಮಾಡಿದ ನಮೂನೆ (Form-I) ಯಲ್ಲಿ ಅಗತ್ಯ ದಾಖಲಾತಿಗಳು ಹಾಗೂ ನಿಗದಿಪಡಿಸಿದ ಶುಲ್ಕದೊಂದಿಗೆ ನೋಂದಣಿ ಕೋರಿ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಗೆ ಸಲ್ಲಿಸಲು ಸೂಚಿಸಿದೆ, ತಪ್ಪಿದಲ್ಲಿ ಅಂಥಹವರ ವಿರುದ್ಧ ಮೇಲೆ ವಿವರಿಸಿದ ಕಾಯಿದೆ ಹಾಗೂ ನಿಯಮಗಳನುಸಾರ ಕ್ರಮ ಜರುಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

Website: www.kawb.karnataka.nic.in / E-mail: kawb2021@gmail.com / Phone No: 080-29901411

ಸಹಿ/- ಸದಸ್ಯ ಕಾರ್ಯದರ್ಶಿಗಳು ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ

ವಾಸಾಸಂಇ/ವಾ.ಪ್ರ/4175/ಅಡ್ವರ್ಟೋರ್/2022-23

ಲೋಕೋಪಯೋಗಿ ಇಲಾಖೆ, ಕಾರ್ಯಪಾಲಕ ಇಂಜಿನಿಯರ್, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ , ಬೆಂಗಳೂರು-560 001 ದೂರವಾಣಿ: 080-22133370 ಫ್ಯಾಕ್ಸ್ ಸಂಖ್ಯೆ:080-22133365 (www.kpwd.gov.in)

ಸಂಖ್ಯೆ:44/2022-23 ದಿನಾಂಕ:17.01.2023

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರುರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.2 ಉತ್ತರ ಮತ್ತು ದೇವನಹಳ್ಳಿ ಉಪವಿಭಾಗಗಳಿಗೆ ಸಂಬಂಧಿಸಿದಂತೆ **17 ಸಂಖ್ಯೆಯ (ರೂ.35.00 ಲಕ್ಷಗಳು ರಿಂದ 495.00 ಲಕ್ಷಗಳು)** ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಗಳ ಇಎಂಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೊಸಸಿಂಗ್ ಶುಲ್ಕವನ್ನು ಇ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ. (1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://eproc.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ **ದಿನಾಂಕ:17.01.2023ರಿಂದ. (2)** ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ:25.01.2023 ಸಂಜೆ 4.00 ಗಂಟೆಯವರೆಗೆ. (3)** ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತರೆಯುವ **ದಿನಾಂಕ: 27.01.2023 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ಉನಿ-ಸಿ.ಪಿ/4165/ಎಂಸಿಎ/2022-23

ರಾಮಸೇತು ಸ್ಮಾರಕ ಪರಿಶೀಲನೆ: ಕೇಂದ್ರ

ನವದೆಹಲಿ (ಪಿಟಿಐ): ರಾಮಸೇತುವನ್ನು ರಾಷ್ಟ್ರೀಯ ಪಾರಂಪರಿಕ ಸ್ಮಾರಕವಾಗಿ ಘೋಷಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಬಗ್ಗೆ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಲಿಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠಕ್ಕೆ ಕೇಂದ್ರ ಮಾಹಿತಿ ನೀಡಿದೆ.

'ಪ್ರಸ್ತುತ ಸಂಸ್ಕೃತಿ ಸಚಿವಾಲಯದಲ್ಲಿ ಈ ಪ್ರಕ್ರಿಯೆ ನಡೆಯುತ್ತಿದೆ. ಅರ್ಜಿದಾರರು ಬಯಸಿದರೆ ಹೆಚ್ಚುವರಿ ಮಾಹಿತಿಯನ್ನು ಸಲ್ಲಿಸಬಹುದು' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದರು.



'ಇದರಲ್ಲಿ ತಾವು ಸರ್ಕಾರದ ಪ್ರತಿನಿಧಿಯಾಗಲು ಬಯಸುತ್ತೀರಾ? ನಿಮ್ಮ ಅಭಿಪ್ರಾಯವೇನು' ಎಂದು ಪೀಠವು ಅರ್ಜಿದಾರ ಸ್ವಾಮಿ ಅವರನ್ನು ಪ್ರಶ್ನಿಸಿತು.

ಈ ಬಗ್ಗೆ ನಿರ್ಧಾರಕ್ಕೆ ಬರಲು ಕೇಂದ್ರ ಸರ್ಕಾರಕ್ಕೆ ಸೂಚಿಸಿದ ಪೀಠವು, ಇದರಲ್ಲಿ ಸ್ವಾಮಿ ಅವರಿಗೆ ಅಸಮಾಧಾನವಿದ್ದರೆ ಮತ್ತು ಅವರ ಮಧ್ಯಂತರ ಅರ್ಜಿ ವಿಲೇವಾರಿ ಮಾಡಿದರೆ ಅವರು ಮುಂದಿನ ಹಂತಕ್ಕೆ ಹೋಗಲು ಸ್ವತಂತ್ರರು ಎಂದು ಹೇಳಿತು. ಮುಂದಿನ ವಿಚಾರಣೆಯನ್ನು ಫೆಬ್ರುವರಿಯಲ್ಲಿ ನಡೆಸುವುದಾಗಿ ಪ್ರಕಟಿಸಿತು.

'ನಾನು ಯಾರನ್ನೂ ಭೇಟಿಯಾಗುವುದಿಲ್ಲ. ನಾವು ಒಂದೇ ಪಕ್ಷದಲ್ಲಿದ್ದೇವೆ. ಈ ವಿಷಯ ನಮ್ಮ ಪ್ರಣಾಳಿಕೆಯಲ್ಲಿತ್ತು. ಅವರು ಆರು ವಾರಗಳಲ್ಲಿ ನಿರ್ಧರಿಸಲಿ ಅಥವಾ ಏನಾದರೂ ಮಾಡಲಿ. ನಾನು ಮತ್ತೆ ಬರುತ್ತೇನೆ' ಎಂದು ಹೇಳಿದ ಸ್ವಾಮಿ ಕಾನೂನು ಸಮರ ಮುಂದುವರಿಸುವ ಮುನ್ಸೂಚನೆ ನೀಡಿದರು.

ಮೂತ್ರ ವಿಸರ್ಜನೆ ಪ್ರಕರಣ: 4 ತಿಂಗಳು ಪ್ರಯಾಣ ನಿಷೇಧ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನದ ಬ್ಯುಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸುತ್ತಿದ್ದ ಹಿರಿಯ ಮಹಿಳೆ ಮೇಲೆ ಮದ್ಯದ ಅಮಲಿನಲ್ಲಿ ಮೂತ್ರ ವಿಸರ್ಜನೆ ಮಾಡಿದ್ದ ಪ್ರಕರಣದ ಆರೋಪಿ ಶಂಕರ್ ಮಿಶ್ರಾಗೆ, ಏರ್ ಇಂಡಿಯಾ ವಿಮಾನ ಯಾನ ಸಂಸ್ಥೆಯು ನಾಲ್ಕು ತಿಂಗಳು ವಿಮಾನ ಪ್ರಯಾಣ ನಿಷೇಧಿಸಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಹೈಕೋರ್ಟ್‌ಗೆ ನ್ಯಾಯಮೂರ್ತಿ ನೇಮಕ

ಕೃಪಾಲ್ ಹೆಸರು ಮತ್ತೆ ಶಿಫಾರಸು

ನವದೆಹಲಿ (ಪಿಟಿಐ): ಸಲಿಂಗಕಾಮಿ ಎಂದು ಬಹಿರಂಗವಾಗಿ ಹೇಳಿಕೊಂಡಿರುವ ಹಿರಿಯ ವಕೀಲ ಸೌರಭ್ ಕೃಪಾಲ್ ಅವರನ್ನು ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಿಸುವ ಸಂಬಂಧ ತಾನು 2021ರ ನವೆಂಬರ್ 11ರಂದು ಮಾಡಿದ್ದ ಶಿಫಾರಸನ್ನು ಸುಪ್ರೀಂಕೋರ್ಟ್‌ನ ಕೊಲಿಜಿಯಂ ಪುನರುಚ್ಚರಿಸಿದೆ.

ಕೇಂದ್ರ ಸರ್ಕಾರವು, 'ಭಾರತದಲ್ಲಿ ಸಲಿಂಗಕಾಮವನ್ನು ಅಪರಾಧವೆಂದು ಪರಿಗಣಿಸದೇ ಇದ್ದರೂ, ಸಲಿಂಗಿಗಳ ವಿವಾಹಕ್ಕೆ ಇನ್ನೂ ಮನ್ನಣೆಯಿಲ್ಲ' ಎಂದು ಹೇಳುವ ಮೂಲಕ ಕೊಲಿಜಿಯಂನ ಈ ಹಿಂದಿನ ಶಿಫಾರಸನ್ನು ತಿರಸ್ಕರಿಸಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಕೆ.ಎಂ. ಜೋಸೆಫ್ ಅವರನ್ನೊಳಗೊಂಡ ಕೊಲಿಜಿಯಂ, ಕೃಪಾಲ್ ಅವರನ್ನು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸುವ ಪ್ರಸ್ತಾವ ಐದು ವರ್ಷಗಳಿಂದ ಬಾಕಿಯಿದ್ದು, ತ್ವರಿತವಾಗಿ ಪ್ರಕ್ರಿಯೆ ನಡೆಸಬೇಕಿದೆ ಎಂದು ತಿಳಿಸಿದೆ. ಈ ಕುರಿತ ತನ್ನ ಹೇಳಿಕೆಯನ್ನು ಕೊಲಿಜಿಯಂ ಸುಪ್ರೀಂಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಕೃಪಾಲ್ ಅವರು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಬಿ.ಎನ್. ಕೃಪಾಲ್ ಅವರ ಮಗ. ದೆಹಲಿ ಹೈಕೋರ್ಟ್‌ನ ಕೊಲಿಜಿಯಂ 2017ರ ಅಕ್ಟೋಬರ್ 13ರಂದು ಕೃಪಾಲ್ ಹೆಸರನ್ನು ಸರ್ವಾನುಮತದಿಂದ ಶಿಫಾರಸು ಮಾಡಿತ್ತು. ಅದನ್ನು ಸುಪ್ರೀಂಕೋರ್ಟ್ ಕೊಲಿಜಿಯಂ 2021ರ ನವೆಂಬರ್ 11ರಂದು ಅನುಮೋದಿಸಿತ್ತು. ಈ ಸಂಬಂಧ ಕೊಲಿಜಿಯಂ ಶಿಫಾರಸನ್ನು ಕೇಂದ್ರ ಸರ್ಕಾರ 2022ರ ನವೆಂಬರ್ 25ರಂದು ಮರು ಪರಿಶೀಲಿಸುವಂತೆ ಹಿಂದಿರುಗಿಸಿತ್ತು ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಕೃಪಾಲ್ ಅವರು ಲೈಂಗಿಕ ದೃಷ್ಟಿಕೋನದ ಬಗ್ಗೆ ಮುಕ್ತವಾಗಿರುವುದಕ್ಕೆ ಕೊಲಿಜಿಯಂ ಹೇಳಿಕೆಯಲ್ಲಿ ಶ್ಲಾಘಿಸಿದೆ.

ಸುಪ್ರೀಂಕೋರ್ಟ್ ಶಿಫಾರಸಿಗೆ 'ರೀಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್' (ಆರ್‌ಎಡಬ್ಲ್ಯು) 2019ರ ಏಪ್ರಿಲ್ 11 ಮತ್ತು 2021ರ 18ರಂದು ಆಕ್ಷೇಪಣೆ ಸಲ್ಲಿಸಿತ್ತು. ಕೃಪಾಲ್ ಅವರ ಸಂಗಾತಿ ಸ್ವಿಸ್ ಪ್ರಜೆಯಾಗಿದ್ದು, ಅವರಿಬ್ಬರು ಆತ್ಮೀಯ ಸಂಬಂಧ ಹೊಂದಿದ್ದಾರೆ. ಈ ಬಗ್ಗೆ ಅವರು ಮುಕ್ತವಾಗಿ ಹೇಳಿಕೊಂಡಿದ್ದಾರೆ ಎಂಬುದೇ ಅದರ ಆಕ್ಷೇಪಣೆಯಾಗಿತ್ತು ಎಂದು ಹೇಳಿಕೆಯಲ್ಲಿ ಉಲ್ಲೇಖಿಸಿದೆ.

ಜಾನ್ ಹೆಸರೂ ಪುನರುಚ್ಚಾರ

ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿ ಪೋಸ್ಟ್‌ಗಳನ್ನು ಹಾಕಿದ್ದ ವಕೀಲ ಆರ್. ಜಾನ್ ಸತ್ಯಂ ಅವರನ್ನು ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಿಸುವ ಸಂಬಂಧ ತಾನು 2022ರ ಫೆಬ್ರುವರಿ 16ರಂದು ಮಾಡಿದ್ದ ಶಿಫಾರಸನ್ನು ಸುಪ್ರೀಂಕೋರ್ಟ್ ಕೊಲಿಜಿಯಂ ಪುನರುಚ್ಚರಿಸಿದೆ.

ಜಾನ್ ಸತ್ಯಂ ಅವರಿಗೆ ಸಂಬಂಧಿಸಿದಂತೆ ಗುಪ್ತಚರ ಬ್ಯೂರೊ (ಐಬಿ) ಎತ್ತಿದ್ದ ಆಕ್ಷೇಪಣೆಗಳನ್ನು ಕೊಲಿಜಿಯಂ ಬದಿಗೊತ್ತಿದೆ. ಸತ್ಯಂ ಅವರು ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕಗೊಳ್ಳಲು ಯೋಗ್ಯರಾಗಿದ್ದಾರೆ ಎಂದಿರುವ ಕೊಲಿಜಿಯಂ ತನ್ನ ನಿರ್ಣಯವನ್ನು ಸುಪ್ರೀಂಕೋರ್ಟ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದೆ.

> **ನ್ಯಾಯಾಂಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದು ಅಗತ್ಯ. ಹೀಗಾಗಿ, ಕೇಂದ್ರ ಸರ್ಕಾರವು ನ್ಯಾಯಾಂಗವನ್ನು ಗೌರವಿಸುತ್ತದೆ**
>
> **ಕಿರಣ್ ರಿಜಿಜು,** ಕೇಂದ್ರ ಕಾನೂನು ಸಚಿವ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು - 560009

ಸಂ: ಕಾಪಾಅ/ಪಂರಾಇಂವಿ/ಬೆಂಗ್ರಾಂ/ಸ.ಇಂ-1/15/2022-23 ದಿನಾಂಕ: 18.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 15/2022-23 (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದಡಿ ಅನುಮೋದನೆಯಾದ ಕಾಮಗಾರಿಗಳಿಗಾಗಿ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 27.01.2023 ಸಂಜೆ 4.00 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು **http://eproc.karnataka.gov.in** ವೆಬ್‌ಸೈಟ್ ನಲ್ಲಿ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು

DIPR/CP/4173/AAA/2022-23

ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-2ರವರ ಕಚೇರಿ (ಬಿಎಸ್‌ಡಬ್ಲ್ಯೂಎಂಎಲ್), 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು - 560052.

No:DGM-2/BSWML/TEND/15/2022-23 Date:19.01.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ ಲಕೋಟೆ ಪದ್ದತಿ) (ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು-2, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ಇವರು ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿನಿ, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
3) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ದಿನಾಂಕ: **03.02.2023ರ ಸಂಜೆ 4:00 ಗಂಟೆಯೊಳಗೆ** ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬಹುದು ಮತ್ತು ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮಾರ್ಗದರ್ಶನದಂತೆ ತೆರೆಯಲಾಗುವುದು.
4) ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ವೆಚ್ಚ ರೂ. ಲಕ್ಷಗಳಲ್ಲಿ	ಇಎಂಡಿ ರೂ.ಗಳಲ್ಲಿ
1.	ಚಿಕ್ಕನಾಗಮಂಗಲ ಸಂಸ್ಕರಣಾ ಘಟಕದ (ಆನೇಕಲ್ ಕ್ಷೇತ್ರ) ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು.	500.00	ಇ-ಪಾವತಿ ಅಡಿಯಲ್ಲಿ ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಒಟಿಸಿ ಮೂಲಕ ರೂ. 1,00,000/- ಹಾಗೂ ಉಳಿಕೆ ರೂ.3,45,000/- ರಾಷ್ಟ್ರೀಕೃತ ಬ್ಯಾಂಕ್/ಷೆಡ್ಯೂಲ್ಡ್ ಬ್ಯಾಂಕ್‌ನ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.

ಟೆಂಡರ್ ಫಾರಂ ಶುಲ್ಕ ವೆಚ್ಚ (ಹಿಂತಿರುಗಿಸಲಾಗದ್ದು) : ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ. **ಪೂರ್ಣಗೊಳಿಸುವ ಅವಧಿ:** 6 ತಿಂಗಳು

ಸೂಚನೆ:

1) ಆಸಕ್ತ ಅರ್ಹ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು ಮತ್ತು ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು ಮತ್ತು ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸಬೇಕು. ಬೇರೆ ಯಾವುದೇ ರೀತಿಯಲ್ಲಿ ಸಲ್ಲಿಸಿದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್‌ದಾರರು ಗೊತ್ತುಪಡಿಸಿದ ಸಂಸ್ಥೆಗಳಿಂದ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಭ್ಯವಿದೆ) ಹಂತ III ಡಿಜಿಟಲ್ ಸಹಿಯನ್ನು ಪಡೆಯಬೇಕು ಮತ್ತು ನಂತರ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಅವರ ಐಡಿ ಮತ್ತು ಡಿಜಿಟಲ್ ಸಹಿ ಉಪಯೋಗಿಸಿ ಟೆಂಡರ್‌ನ್ನು ಸಲ್ಲಿಸಬೇಕು.
2) ಪೂರ್ವಭಾವಿ ಸಭೆಯನ್ನು **ದಿನಾಂಕ: 30-01-2023 ರ ಮಧ್ಯಾಹ್ನ 3:00 ಗಂಟೆಗೆ** ಮುಅ&ಮುಪ್ರವ್ಯ(ತಾಂ) ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು -560026, ಇಲ್ಲಿ ನಡೆಸಲಾಗುವುದು.
3) ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮತ್ತು ತಾಂತ್ರಿಕತೆಯನ್ನು ಒಳಗೊಂಡಿರುವ ಮೊದಲ ಫೋಲ್ಡರ್‌ಗೆ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ **03.02.2023 ರಂದು 16:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ** ಅಪ್‌ಲೋಡ್ ಮಾಡಬೇಕು. ತಾಂತ್ರಿಕ ದಾಖಲೆಗಳನ್ನು ನಿಗದಿತ ಸ್ಥಳದಲ್ಲಿ, ಹಾಜರಾಗಲು ಬಯಸುವ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಬಿಡ್ ಅನ್ನು ಇ-ಪೋರ್ಟಲ್ ಮೂಲಕ ದಿನಾಂಕ: **04.02.2023ರಂದು 16:30 ಗಂಟೆಯ ನಂತರ** ತೆರೆಯಲಾಗುತ್ತದೆ. ನಿರ್ದಿಷ್ಟಪಡಿಸಿದಂತೆ ಟೆಂಡರ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಟೆಂಡರ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ತೆರೆಯಲಾಗುತ್ತದೆ.
4) ತನ್ನ ನಿಯಂತ್ರಣಕ್ಕೆ ಮೀರಿ ಯಾವುದೇ ತಂತ್ರಜ್ಞಾನದ ವಿಫಲದಿಂದ ವಿಳಂಬವಾದಲ್ಲಿ ನಿಯಮಿತವು ಜವಾಬ್ದಾರಿ ವಹಿಸುವುದಿಲ್ಲ. ಯಾವುದೇ ಟೆಂಡರ್‌ನ ಅಪ್‌ಡೇಟ್‌ಗಳನ್ನು ಟೆಂಡರ್‌ದಾರರಿಗೆ ತಂತ್ರಜ್ಞಾನದಿಂದ ಸೂಚಿಸಲು ಪ್ರಯತ್ನಿಸುವ ವಿಧಾನಗಳಿದ್ದರೂ ಸಹ ಒಂದು ವೇಳೆ ಟೆಂಡರ್‌ದಾರರಿಗೆ ಮಾಹಿತಿಗಳು ತಲುಪದಿದ್ದಲ್ಲಿ ನಿಯಮಿತದ ಹೊಣೆಯಲ್ಲ. ಟೆಂಡರಿಗೆ ಸಂಬಂಧಿಸಿದಂತೆ ಟೆಂಡರ್‌ದಾರರು ನೂತನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಗೆ ನಿಯಮಿತವಾಗಿ ಭೇಟಿ ನೀಡಬೇಕು. ಸಹಾಯವಾಣಿ ಇ-ಮೇಲ್ ವಿಳಾಸ: **hphelpdesk.blr@intarvo.com** ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080-22371090/22373788. ಟೆಂಡರ್‌ದಾರರು ಟೆಂಡರನ್ನು ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯಕ್ಕೆ ಮುಂಚಿತವಾಗಿ ತಮ್ಮ ಕಂಪ್ಯೂಟರ್ ಬ್ರೌಸರ್ ಸಾಮರ್ಥ್ಯವನ್ನು ಸೂಕ್ತವಾಗಿ ಇರಿಸಲು ಜಾಗ್ರತೆ ವಹಿಸಬೇಕು. ಇಂಟರ್‌ನೆಟ್ ವಿಫಲದ ಕಾರಣದಿಂದಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರತಿಕ್ರಿಯಿಸಲು ಅಥವಾ ಯಾವುದೇ ತಾಂತ್ರಿಕ ಅಡಚಣೆ ಉಂಟಾದಲ್ಲಿ ನಿಯಮಿತವು ಜವಾಬ್ದಾರಿ ಹೊರುವುದಿಲ್ಲ.
5) ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
6) ಜಿಎಸ್‌ಟಿಯನ್ನು ಪ್ರತ್ಯೇಕವಾಗಿ ಪಾವತಿಸಬೇಕು.

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-2, ಬಿಎಸ್‌ಡಬ್ಲ್ಯೂಎಂಎಲ್

DIPR/CP/4192/AAA/22-23

ಕೇಂದ್ರಿಯ ಹಿಂದಿ ಸಂಸ್ಥಾನ, ಆಗ್ರಾ

(ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ)

ಹಿಂದಿ ಸಂಸ್ಥಾನ ಮಾರ್ಗ, ಆಗ್ರಾ-282005

ಕೇಂದ್ರಗಳು: ದೆಹಲಿ, ಹೈದರಾಬಾದ್, ಗುವಾಹತಿ, ಶಿಲ್ಲಾಂಗ್, ಮೈಸೂರು, ದೀಮಾಪುರ, ಭುವನೇಶ್ವರ, ಅಹ್ಮದಾಬಾದ್

2023-25ನೇ ಸಾಲಿಗೆ ಪ್ರವೇಶಾತಿ ಪ್ರಕಟಣೆ

ಹಿಂದಿಯೇತರ ರಾಜ್ಯಗಳಿಗೆ ಮಾತ್ರ

ಕೆಳಕಂಡ ಎರಡು ವರ್ಷದ ಕೋರ್ಸ್‌ಗಳಿಗೆ ಪ್ರವೇಶಾತಿಗಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(1)ಹಿಂದಿ ಶಿಕ್ಷಣ ನಿಷ್ಣಾತ (ಎಂ.ಇಡಿ. ತತ್ಸಮಾನ) ಒಟ್ಟು ಸೀಟ್‌ಗಳು-44

ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಹಿಂದಿ ವಿಧಾನದಲ್ಲಿ ಪಡೆದ ಬಿ.ಇಡಿ/ಎಲ್.ಟಿ ಅಥವಾ 50% ಅಂಕಗಳನ್ನು ಪಡೆದಿರುವ ಹಿಂದಿ ಶಿಕ್ಷಣ ಪಾರಂಗತ

(2)ಹಿಂದಿ ಶಿಕ್ಷಣ ಪಾರಂಗತ (ಬಿ.ಇಡಿ. ತತ್ಸಮಾನ) ಒಟ್ಟು ಸೀಟ್‌ಗಳು-44

ವಿದ್ಯಾರ್ಹತೆ:
1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಹಿಂದಿಯಲ್ಲಿ 50% ಅಂಕಗಳೊಂದಿಗೆ ಬಿ.ಎ. ಮತ್ತು/ಅಥವಾ ಎಂ.ಎ. ಪಡೆದಿರಬೇಕು

ಅಥವಾ

ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ 50% ಅಂಕಗಳೊಂದಿಗೆ ಪದವಿ ಮತ್ತು/ಅಥವಾ ಸ್ನಾತಕೋತ್ತರ ಪದವಿ ಜೊತೆಗೆ ಮಾನ್ಯತೆ ಪಡೆದ ಮಂಡಳಿಯಿಂತ ಹಿಂದಿ ಇಂಟರ್‌ಮೀಡಿಯೇಟ್ ಪಡೆದಿರಬೇಕು ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದಿರುವ ಯಾವುದೇ ಸಂಸ್ಥೆಯಿಂದ ಹಿಂದಿಯಲ್ಲಿ ಬಿ.ಎ.ಲೆವೆಲ್ ಡಿಪ್ಲೋಮ (ವಿದ್ವಾನ್, ರತ್ನ, ಶಾಸ್ತ್ರಿ ಮುಂತಾದವು) ಪಡೆದಿರಬೇಕು.

2. ಪದವಿ ಹಂತದಲ್ಲಿ, ಸಮಾಜ ಅಧ್ಯಯನ ವಿಷಯಗಳಲ್ಲಿ ಒಂದನ್ನು - ಇತಿಹಾಸ (ಭಾರತೀಯ ಇತಿಹಾಸದಲ್ಲಿ ಹೆಗ್ಗುರುತು), ಭೂಗೋಳಶಾಸ್ತ್ರ, ಪೌರನೀತಿ (ಭಾರತೀಯ ರಾಜಕೀಯ, ರಾಜಕೀಯ ವಿಜ್ಞಾನ), ಸಮಾಜಶಾಸ್ತ್ರ (ಭಾರತೀಯ ಸಮಾಜ ಮತ್ತು ಸಂಸ್ಕೃತಿ), ಅರ್ಥಶಾಸ್ತ್ರ (ಭಾರತೀಯ ಅರ್ಥಶಾಸ್ತ್ರ, ವ್ಯವಹಾರಿಕ ಅರ್ಥಶಾಸ್ತ್ರ) ಕಡ್ಡಾಯವಾಗಿ ಓದಿರಬೇಕು.

(3)ಹಿಂದಿ ಶಿಕ್ಷಣ ಪ್ರವೀಣ (ಡಿ.ಇಎಲ್.ಇಡಿ ತತ್ಸಮಾನ) ಒಟ್ಟು ಸೀಟ್‌ಗಳು-44

ವಿದ್ಯಾರ್ಹತೆ:
1. ಮಾನ್ಯತೆ ಪಡೆದಿರುವ ಮಂಡಳಿಯಿಂದ 50% ಅಂಕಗಳೊಂದಿಗೆ ಹಿಂದಿಯಲ್ಲಿ ಇಂಟರ್‌ಮೀಡಿಯೇಟ್ (ಹೈಯರ್ ಸೆಕಂಡರಿ ಪ್ರಿ-ಯೂನಿವರ್ಸಿಟಿ) ಪಡೆದಿರಬೇಕು.

ಅಥವಾ

ಮಾನ್ಯತೆ ಪಡೆದ ಮಂಡಳಿಯಿಂದ 50% ಅಂಕಗಳೊಂದಿಗೆ ಯಾವುದೇ ವಿಷಯದಲ್ಲಿ ಇಂಟರ್‌ಮೀಡಿಯೇಟ್ (ಹೈಯರ್ ಸೆಕಂಡರಿ, ಪ್ರಿ-ಯೂನಿವರ್ಸಿಟಿ) ಪಡೆದಿರಬೇಕು ಜೊತೆಗೆ ಮಾನ್ಯತೆ ಪಡೆದ ಮಂಡಳಿಯಿಂದ ಹಿಂದಿಯಲ್ಲಿ ಹೈಸ್ಕೂಲ್ ಪೂರೈಸಿರಬೇಕು ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದಿರುವ ಯಾವುದೇ ಸಂಸ್ಥೆಯಿಂದ ಹಿಂದಿಯಲ್ಲಿ ಇಂಟರ್‌ಮೀಡಿಯೇಟ್ ಲೆವೆಲ್ ಸರ್ಟಿಫಿಕೇಟ್ (ಕೋವಿದ, ಭೂಷಣ ಮುಂತಾದವು) ಹೊಂದಿರಬೇಕು.

2. ಇಂಟರ್‌ಮೀಡಿಯೇಟ್ ಹಂತದಲ್ಲಿ, ಸಮಾಜ ಅಧ್ಯಯನ ವಿಷಯಗಳಲ್ಲಿ ಒಂದನ್ನು - ಇತಿಹಾಸ (ಭಾರತೀಯ ಇತಿಹಾಸದಲ್ಲಿ ಹೆಗ್ಗುರುತು), ಭೂಗೋಳಶಾಸ್ತ್ರ, ಪೌರನೀತಿ (ಭಾರತೀಯ ರಾಜಕೀಯ, ರಾಜಕೀಯ ವಿಜ್ಞಾನ), ಸಮಾಜಶಾಸ್ತ್ರ (ಭಾರತೀಯ ಸಮಾಜ ಮತ್ತು ಸಂಸ್ಕೃತಿ), ಅರ್ಥಶಾಸ್ತ್ರ (ಭಾರತೀಯ ಅರ್ಥಶಾಸ್ತ್ರ, ವ್ಯವಹಾರಿಕ ಅರ್ಥಶಾಸ್ತ್ರ) ಕಡ್ಡಾಯವಾಗಿ ಓದಿರಬೇಕು.

ಪ್ರಿ-ಸರ್ವೀಸ್ ಅರ್ಜಿದಾರರಿಗೆ ಮೇಲ್ಕಾಣಿಸಿದ ಕೋರ್ಸ್‌ಗಳಿಗಾಗಿ 28ನೇ ಮೇ, 2023 ರಂದು ಹೈದರಾಬಾದ್, ಗುವಾಹತಿ ಮತ್ತು ಮೈಸೂರು ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆ ಕೈಗೊಳ್ಳಲಾಗುತ್ತದೆ. ಮುಂಬರುವ ಅವಧಿಯು ಜುಲೈ, 2023 ರಲ್ಲಿ ಆರಂಭವಾಗುವ ನಿರೀಕ್ಷೆಯಿದೆ. ಭಾರತ ಸರ್ಕಾರದ ನಿಯಮಗಳನ್ವಯ ಸೀಟ್‌ಗಳಿಗೆ ಮೀಸಲಾತಿ ಅನ್ವಯಿಸುತ್ತದೆ.

ಸಂಸ್ಥಾನದ www.khsindia.org ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಬಹುದು ಮತ್ತು ಸದರಿ ಅರ್ಜಿಯ ಕರಡು ಪ್ರತಿಯನ್ನು ಅಗತ್ಯ ದಾಖಲಾತಿಗಳ ಸಮೇತ ಸಲ್ಲಿಸುವುದು. ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಲು ಆರಂಭಿಕ ದಿನಾಂಕ 01.02.2023 ಮತ್ತು ಅಂತಿಮ ದಿನಾಂಕ 28.02.2023. ಅರ್ಜಿಗಳ ಕರಡು ಪ್ರತಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ 15.03.2023. ಇನ್ನಿತರ ಹೆಚ್ಚಿನ ವಿವರಗಳು ಸಂಸ್ಥಾನದ www.khsindia.org ವೆಬ್‌ಸೈಟ್‌ನಲ್ಲಿರುತ್ತವೆ.

-ಡಾ. ಚಂದ್ರ ಕಾಂತ್ ತ್ರಿಪಾಠಿ
ರಜಿಸ್ಟ್ರಾರ್

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು-09.

ದೂ:0821-2545894, ಮೊ:9480813107, ಇಮೇಲ್: kwbcemys2014@gmail.com website: https://eproc.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣ : **https://eproc.karnataka.gov.in**

ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ನಿರ್ದೇಶನದನ್ವಯ ಕುಕ್ಕೆ ಸುಬ್ರಹ್ಮಣ್ಯ ಪಟ್ಟಣದಲ್ಲಿ ಹಾಲಿ ಇರುವ 2.60 ಎಂ.ಎಲ್.ಡಿ ಏರೇಟೆಡ್ ಲಗೂನ್ ಮಾದರಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಎಸ್.ಬಿ.ಆರ್ ಮಾದರಿಗೆ ಮೇಲ್ದರ್ಜೆಗೇರಿಸುವ ಕಾಮಗಾರಿಗೆ, 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ, ಇಂಡೆಂಟ್ ನಂ. KUWSDB/2022-23/WS/WORK_INDENT3284ರಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್‌ನ್ನು (ಲಂಪ್ಸಮ್) ಆಹ್ವಾನಿಸಲಾಗಿರುತ್ತದೆ. ಟೆಂಡರ್ ಮೊತ್ತ: ರೂ.569.51 ಲಕ್ಷಗಳು. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಸಂಪರ್ಕಿಸುವುದು.

ಸಹಿ/- ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು

DIPR/CP/KAVITA/899/2022-23

(ಕರ್ನಾಟಕ ಸರ್ಕಾರ)

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾರ್ಯಪಾಲಕ ಅಭಿಯಂತರವರ ಕಚೇರಿ, ಹಾಸನ ವಿಭಾಗ, ಹಾಸನ-573201

Ph:08172-261640 Email ID:eerdwsd.hsn@gmail.com

ದ್ವಿ-ಲಕೋಟೆ ಪದ್ದತಿಯಲ್ಲಿಅಲ್ಪಾವದಿಟೆಂಡರ್ ಪ್ರಕಟಣೆ:21/2022-23 ದಿನಾಂಕ:18.01.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ ರವರಿಂದ 2022-23ನೇ ಸಾಲಿನಲ್ಲಿ MVS ಯೋಜನೆಗೆ ಪಿ.ಎಂ.ಸಿ ಮೂಲಕ ಸೇವೆಯನ್ನು ಒದಗಿಸಲು ಅನುಮೋದನೆಯಾಗಿರುವ, ಚನ್ನರಾಯಪಟ್ಟಣ , ಆಲೂರು, ಬೇಲೂರು, ಹಾಸನ, ಸಕಲೇಶಪುರ ತಾಲ್ಲೂಕಿನ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ದ್ವಿ-ಲಕೋಟೆ ಪದ್ಧತಿ ಕಾಮಗಾರಿಗಳು ಚನ್ನರಾಯಪಟ್ಟಣ ತಾಲ್ಲೂಕಿನ 01 ಕಾಮಗಾರಿ (ಸಾಮಾನ್ಯ ವರ್ಗದ ಕಾಮಗಾರಿ). ಆಲೂರು, ಬೇಲೂರು, ಹಾಸನ, ಸಕಲೇಶಪುರ ತಾಲ್ಲೂಕುಗಳ 01 ಕಾಮಗಾರಿ (ಸಾಮಾನ್ಯ ವರ್ಗದ ಕಾಮಗಾರಿ). ಸದರಿ ಕಾಮಗಾರಿಗಳಿಗೆ ದ್ವಿ-ಲಕೋಟೆ ಪದ್ದತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು e-procurement portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು ದಿನಾಂಕ:31-12-2022ರ ಸಂಜೆ 5.30 ರಿಂದ www.e-procurement.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 23-01-2023 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 24-01-2023 ರಂದು ಬೆಳಿಗ್ಗೆ 11.30 ಗಂಟೆಗೆ ಸದರಿ ಯೋಜನೆಯ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸ್ಥಳ: - ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು-560009. ದಿನಾಂಕ:30-01-2023 ರಂದು ಸಂಜೆ 05:00 ಘಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ:01-02-2023ರ ಬೆಳಿಗ್ಗೆ 11:00 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ,ಹಾಸನ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/978/2022-23

ಸುವರ್ಣ ಕರ್ನಾಟಕ

ಪುರಸಭೆ ಕಾರ್ಯಾಲಯ ಸಿಂದಗಿ

ಜಿಲ್ಲಾ : ವಿಜಾಪೂರ | ರಾಜ್ಯ: ಕರ್ನಾಟಕ | Phone: 08488-221202

ಕ್ರ.ಸಂ/ಪುಸಸಿಂ/ಕಾಮಗಾರಿ/ಎಸ್.ಬಿ.ಎಮ್/ಇ-ಪ್ರೊಕ್ಯುರಮೆಂಟ್/ಅ.ಟೆ.ಪ್ರ/2022-23 ದಿ: 19-01-2023

ಅಲ್ಪಾವಧಿ ಟೆಂಡರ ಪ್ರಕಟಣೆ

(ಇ-ಪ್ರೊಕ್ಯುರಮೆಂಟ್ ಮುಖಾಂತರ ಮಾತ್ರ)

ಈ ಕೆಳಕಂಡ ಸೂಚಿ ಪಟ್ಟಿಯಲ್ಲಿ ವಿವರಸಲಾದ ಕಾಮಗಾರಿಗಳಿಗೆ ಗುತ್ತಿಗೆಗಳನ್ನು ಮುಖ್ಯಾಧಿಕಾರಿಗಳು, ಪುರಸಭೆ ಸಿಂದಗಿ ಕೆ.ಪಿ.ಡಬ್ಲ್ಯೂ.ಡಿ ನೊಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯುರಮೆಂಟ್ ಸ್ಟ್ಯಾಂಡರ್ಡ್ ಟೆಂಡರ ಡಾಕ್ಯುಮೆಂಟ ಮುಖ್ಯಾಂತರ ಐಟಂವಾರು ಟೆಂಡರನ್ನು ಆಮಂತ್ರಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್ ಲೈನ್ ಮೂಲಕ ವೆಬಸೈಟ್ www.https//eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನುಖಚಿತಪಡಿಸಿಕೊಂಡು ಟೆಂಡರನಲ್ಲಿ ಭಾಗವಹಿಸಬಹುದು.

ಪ್ಯಾಕೇಜ ನಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಮ್.ಡಿ ಮೊತ್ತ	ಗುತ್ತಿಗೆದಾರರ ದರ್ಜೆ	ಕೆಲಸದ ಅವಧಿ
ಸ್ವಚ್ಛಭಾರತ ಯೋಜನೆಯಡಿಯಲ್ಲಿ					
1	Construction of Processing Shed At SWM Site in Sindagi **DMA/2022-23/OW/WORK_INDENT145540**	86.00	215000.00	1 ನೇ ದರ್ಜೆ ಮೇಲ್ಪಟ್ಟು	75 ದಿವಸ

1) ಟೆಂಡರ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ: 02-02-2023 ರಂದು ಮಧ್ಯಾಹ್ನ 4-00 ಘಂಟೆಯವರೆಗೆ
2) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 03-02-2023 ರಂದು ಮಧ್ಯಾಹ್ನ 4-00 ಘಂಟೆಯುವರೆಗೆ
3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04-02-2023 ರಂದು ಮಧ್ಯಾಹ್ನ 4-30 ಘಂಟೆಯುವರೆಗೆ

ಸಹಿ/- ಮುಖ್ಯಾಧಿಕಾರಿಗಳು, ಪುರಸಭೆ ಸಿಂದಗಿ ಸಹಿ/- ಅಧ್ಯಕ್ಷರು, ಪುರಸಭೆ ಸಿಂದಗಿ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)

ಹಟ್ಟಿ-584115, ರಾಯಚೂರು ಜಿಲ್ಲೆ, ಕರ್ನಾಟಕ. ದೂರವಾಣಿ: 08537-275022

ಸಿಐಎನ್ ನಂ. ಯು85110ಕೆಎ1947ಎಸ್‌ಜಿಸಿ001321

ಸಂಖ್ಯೆ:ಹೆಚ್‌ಜಿಎಂಎಲ್/ಇಡಿ/ಓಆರ್/2022-23 ದಿನಾಂಕ: 19.01.2023

ಪ್ರಕಟಣೆ

ಹಟ್ಟಿ ಚಿನ್ನದ ಗಣಿಯಲ್ಲಿ ಸ್ಥಳೀಯ ಮತ್ತು ಸ್ಥಳೀಯೇತರ (ರೆಸಿಡುಯಲ್ ಪೇರೆಂಟ್ ಕೇಡರ್) ವೃಂದದಲ್ಲಿ ವಿವಿಧ ವರ್ಗದ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ನಿಗದಿ ಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆ, ಅನುಭವ ಹೊಂದಿರುವ, ಈ ಕೆಳಗೆ ಪ್ರಸ್ತಾಪಿಸಲಾದ ಪ್ರತಿಯೊಂದು ಹುದ್ದೆಗೆ ಉಲ್ಲೇಖಿಸಿರುವ ರೋಸ್ಟರ್ ಅವಶ್ಯಕತೆಗಳನ್ನು ಪೂರೈಸುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಪದನಾಮ	ದರ್ಜೆ	ವೇತನ ಶ್ರೇಣಿ	ಸ್ಥಳೀಯ ವೃಂದದ ಹುದ್ದೆಗಳು	ರೋಸ್ಟರ್ ಅಗತ್ಯತೆ	ಸ್ಥಳೀಯೇತರ ವೃಂದದ ಹುದ್ದೆಗಳು	ರೋಸ್ಟರ್ ಅಗತ್ಯತೆ
1)	ಪ್ರಧಾನ ವ್ಯವಸ್ಥಾಪಕರು	E-9	106400 - 143700	—	—	01	ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲಾಗುವುದು
2)	ಉಪ ಪ್ರಧಾನ ವ್ಯವಸ್ಥಾಪಕರು	E-8	96400 - 137500	02	ಪ.ಜಾ (ಸಾಮಾನ್ಯ) ಪ.ಪಂ. (ಸಾಮಾನ್ಯ)	—	—
3)	ಹಿರಿಯ ವ್ಯವಸ್ಥಾಪಕರು	E-7	81300 - 128200	03	ಪ.ಪಂ. (ಸಾಮಾನ್ಯ) ಜಿ.ಎಂ.(ಮಹಿಳೆ) ಪ್ರವರ್ಗ.1(ಸಾಮಾನ್ಯ)	01	ಮೆರಿಟ್ ಆಧಾರದ ಮೇಲೆ ಭರ್ತಿ ಮಾಡಲಾಗುವುದು
4)	ವ್ಯವಸ್ಥಾಪಕರು	E-6	70150 - 119800	01	ಪ.ಜಾ (ಸಾಮಾನ್ಯ)	01	ಮೆರಿಟ್ ಆಧಾರದ ಮೇಲೆ ಭರ್ತಿಮಾಡಲಾಗುವುದು

ಸೂಚನೆ: (1) ಮೇಲೆ ಸೂಚಿಸಲಾದ ಖಾಲಿ ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು, ಅಗತ್ಯತೆಗಳಿಗೆ ಅನುಗುಣವಾಗಿ ಹುದ್ದೆಗಳನ್ನು ಮಾರ್ಪಡಿಸುವ ಸಾಧ್ಯತೆ ಇರುತ್ತದೆ. **(2)** ಮೇಲಿನ ಖಾಲಿ ಹುದ್ದೆಗಳ ವರ್ಗೀಕರಣ ಮತ್ತು ಅರ್ಜಿ ನಮೂನೆ ಹಾಗೂ ಇತರೆ ವಿವರಗಳಿಗಾಗಿ ನಮ್ಮ ಅಧಿಕೃತ ವೆಬ್‌ಸೈಟ್ **www.huttigold.karnataka.gov.in** ಗೆ ಭೇಟಿ ನೀಡಿ.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು.

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ವಿಭಿನ್ನ ಪಾತ್ರಗಳತ್ತ ಮಿಲನ ಚಿತ್ತ

'ಲವ್ ಮಾಕ್ಟೇಲ್' ಜೋಡಿ ಇದೀಗ 'ಲವ್‌ಬರ್ಡ್ಸ್' ಆಗಿ ತೆರೆ ಮೇಲೆ ಬರಲು ಸಜ್ಜಾಗಿದೆ. ಫೆಬ್ರುವರಿಯಲ್ಲಿ ಈ ಸಿನಿಮಾ ತೆರೆಗೆ ಬರಲಿದ್ದು, ಫ್ಯಾಷನ್ ಡಿಸೈನರ್ ಆಗಿ ನಟಿ ಮಿಲನ ನಾಗರಾಜ್ ಇಲ್ಲಿ ಕಾಣಿಸಿಕೊಳ್ಳಲಿದ್ದಾರೆ...

ಅಭಿಲಾಷ್ ಪಿ.ಎಸ್.

• 'ಲವ್ ಮಾಕ್ಟೇಲ್' ನೆನಪು...

'ಲವ್ ಮಾಕ್ಟೇಲ್' ಕಥೆ ಹುಟ್ಟಿಕೊಳ್ಳುವುದಕ್ಕೂ ಮೊದಲು ನಾನು, ಡಾರ್ಲಿಂಗ್ ಕೃಷ್ಣ ಹಲವು ಸಿನಿಮಾಗಳಲ್ಲಿ ನಟಿಸಿದ್ದೆವು. ಆದರೆ ಈ ಸಿನಿಪಯಣದಲ್ಲಿ ಒಂದು ಬ್ರೇಕ್ ಸಿಕ್ಕಿರಲಿಲ್ಲ. ನಮಗೆ ಬೇಕಾದಂತಹ ಪಾತ್ರಗಳು, ನಮ್ಮ ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಲು ಅವಕಾಶವಿರುವ ಕಥೆಗಳು ಬರುತ್ತಿರಲಿಲ್ಲ. ನಟಿಸುತ್ತಿರುವ ಸಿನಿಮಾಗಳು ನಮಗೆ ತೃಪ್ತಿ ನೀಡುತ್ತಿರಲಿಲ್ಲ. ಸಿನಿ ಜರ್ನಿ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆ ಮೂಡಿದ ಕ್ಷಣವದು. ಇಂತಹ ಸಂದರ್ಭದಲ್ಲಿ ತೆಗೆದುಕೊಂಡ ನಿರ್ಧಾರ 'ಲವ್ ಮಾಕ್ಟೇಲ್' ಪ್ರಾಜೆಕ್ಟ್. ನಾನು ಈ ಪ್ರಾಜೆಕ್ಟ್‌ಗೆ ಸಿದ್ಧಳಾಗಿದ್ದೆ. ಸಿನಿಪಯಣದಲ್ಲಿ ಕಲಾವಿದನೊಬ್ಬ ಸೋಲು ಗೆಲುವುಗಳ ನಡುವೆಯೇ ಹೆಜ್ಜೆ ಇಡುತ್ತಿರುತ್ತಾನೆ. ಗೆಲ್ಲಲೇಬೇಕು, ಒಂದೊಳ್ಳೆ ಸಿನಿಮಾ ಮಾಡಲೇಬೇಕು ಎನ್ನುವ ಹಂಬಲ ಇಬ್ಬರಲ್ಲೂ ಇದ್ದದ್ದು 'ಲವ್ ಮಾಕ್ಟೇಲ್' ಯಶಸ್ಸಿಗೆ ಕಾರಣ ಅಂದುಕೊಳ್ಳುತ್ತೇನೆ. ಈ ಕಥೆ ಹುಟ್ಟುಕೊಳ್ಳುವಾಗಲೇ we were part of each others life. ಹೀಗಾಗಿ ನಾವಿಬ್ಬರೇ ನಟಿಸುವ ನಿರ್ಧಾರಕ್ಕೆ ಬಂದೆವು. ಕಥೆ ಆದ ನಂತರ ನಿರ್ಮಾಪಕರನ್ನು ಹುಡುಕಿ, ಅವರನ್ನು ಒಪ್ಪಿಸುವ ಕೆಲಸಕ್ಕಿಂತ ನಾವೇ ನಿರ್ಮಾಣ ಮಾಡುವ ನಿರ್ಧಾರ ತೆಗೆದುಕೊಂಡೆವು. ನಿರ್ದೇಶನದ ಜವಾಬ್ದಾರಿಯನ್ನು ಕೃಷ್ಣ ತೆಗೆದುಕೊಂಡರೆ ನಿರ್ಮಾಣದ ಜವಾಬ್ದಾರಿ ಹಂಚಿಕೊಂಡೆವು.

ಲಾಕ್‌ಡೌನ್ ಆದ ಸಂದರ್ಭದಲ್ಲಿ ಕುಳಿತು ಬರೆದ ಕಥೆ 'ಲವ್ ಮಾಕ್ಟೇಲ್–2'. ಎರಡನೇ ಭಾಗದ ಯೋಚನೆಯೂ ನಮ್ಮಲ್ಲಿ ಇರಲಿಲ್ಲ. ಮೊದಲ ಭಾಗವನ್ನು ಜನ ಮೆಚ್ಚಿದ್ದ ಕಾರಣ ನಮ್ಮ ಮೇಲೆ ಜವಾಬ್ದಾರಿ ಇನ್ನೂ ಹೆಚ್ಚಿತ್ತು. ಸುಮ್ಮನೆ ಒಂದು ಸಿನಿಮಾ ಮಾಡಲು ಸಾಧ್ಯವಿಲ್ಲ. ಮೊದಲ ಭಾಗದಲ್ಲಿ ನನ್ನ ಪಾತ್ರ ಸತ್ತು ಹೋಗಿದ್ದ ಕಾರಣ, ಕಥೆ ಏನಾಗುತ್ತದೆ ಎನ್ನುವ ಕುತೂಹಲವೂ ಜನರಲ್ಲಿ ಇತ್ತು.

• 'ಲವ್ ಮಾಕ್ಟೇಲ್' ಸರಣಿ ಆದ ಬಳಿಕ 'ಕ್ರಿಸ್ಮಿ' ಜೋಡಿ ಮೇಲೆ ನಿರೀಕ್ಷೆ ಹೆಚ್ಚಿದೆ ಅಲ್ಲವೇ?

ಕೃಷ್ಣ ಅವರ ನಿಜ ಜೀವನದ ಅನುಭವಗಳೇ 'ಲವ್ ಮಾಕ್ಟೇಲ್'ನಲ್ಲಿವೆ. ಆರಂಭದಲ್ಲಿ ಕೃಷ್ಣ ಅವರು ಲೀಡ್‌ನಲ್ಲಿ ಮಾಡುವುದು ಖಚಿತವಾಗಿತ್ತು. ಒಳ್ಳೆಯ ಸಿನಿಮಾ ಮಾಡಬೇಕು ಎನ್ನುವುದು ತಲೆಯಲ್ಲಿದ್ದ ಕಾರಣ, ಜೊತೆಯಲ್ಲಿ ಮಾಡುತ್ತೇವೆಯೋ ಇಲ್ಲವೋ ಎನ್ನುವುದನ್ನು ನಾವು ಆಗ ಯೋಚಿಸಿರಲಿಲ್ಲ. ಆದರೆ ಸಿನಿಮಾ ಬಿಡುಗಡೆಯಾದಾಗ ನಾನು ಊಹಿಸಿದಕ್ಕಿಂತಲೂ ದೊಡ್ಡ ಮಟ್ಟದಲ್ಲಿ ಸಿನಿಮಾ ಜನರನ್ನು ತಲುಪಿತು. ನಮ್ಮಿಬ್ಬರ ಜೋಡಿಯನ್ನು ಜನ ಮೆಚ್ಚಿಕೊಂಡಿದ್ದರು. ಹಲವಾರು ಕಾರಣಗಳಿಂದ ಸಿನಿಮಾ ತುಂಬಾ ರೀಚ್ ಆಯಿತು. ಜನರಿಗೆ ನಿರೀಕ್ಷೆಗಳು ಖಂಡಿತಾ ಇರುತ್ತವೆ. ಕೆಲವೊಮ್ಮೆ ಜನರ ನಿರೀಕ್ಷೆಯನ್ನು ಊಹಿಸಲೂ ಸಾಧ್ಯವಿಲ್ಲ. ಹೀಗಾಗಲು ಸಾಧ್ಯವಿದ್ದರೆ ಸಿನಿಮಾ ಮಾಡುವವರೆಲ್ಲರೂ ಹಿಟ್ ಸಿನಿಮಾಗಳನ್ನೇ ನೀಡುತ್ತಿದ್ದರು. ಜನರ ನಿರೀಕ್ಷೆಯ ಸೀಕ್ರೆಟ್ ಯಾರಿಗೂ ಗೊತ್ತಿಲ್ಲ!

ಮುಂದೆ, ನಾವಿಬ್ಬರು ಜೊತೆಯಾಗಿ ಸಿನಿಮಾ ಮಾಡಿದರೆ ಕೌಟುಂಬಿಕ ಸಿನಿಮಾಗಳನ್ನು ಮಾಡಬೇಕು ಎಂದು ನಿರ್ಧರಿಸಿದ್ದೇವೆ. ನಾವು ಚಿಕ್ಕವರಿದ್ದಾಗಲಿಂದಲೂ ನೋಡಿದ ಬಹುತೇಕ ಸಿನಿಮಾಗಳು ಪುನೀತ್ ರಾಜ್‌ಕುಮಾರ್ ಅವರದ್ದು. 'ಅಪ್ಪು' ಅವರ ಸಿನಿಮಾಗಳೆಂದರೆ ಫ್ಯಾಮಿಲಿ ಸಿನಿಮಾಗಳೆಂದೇ ಹೆಸರುವಾಸಿ. ಸಿನಿಮಾ ಮೊದಲು ನಮ್ಮಿಬ್ಬರಿಗೆ ಖುಷಿ ನೀಡಿದರೆ ಖಂಡಿತವಾಗಿಯೂ ಜನರ ನಿರೀಕ್ಷೆಯೂ ಈಡೇರುತ್ತದೆ ಎನ್ನುವುದು ನನ್ನ ನಂಬಿಕೆ.

• 'ಲವ್‌ಬರ್ಡ್ಸ್'ನಲ್ಲಿ ಮಿಲನ 'ಪೂಜಾ' ಆಗಿ ಹೇಗಿದ್ದಾರೆ?

ನಿಜ ಜೀವನದಲ್ಲಿ ನಾನು ಕೃಷ್ಣ ಜಗಳವಾಡೋದು ಬಹಳ ಕಮ್ಮಿ. 'ಲವ್‌ಬರ್ಡ್ಸ್' ಎಂಬ ಶೀರ್ಷಿಕೆ ಇರುವ ಕಾರಣ ಈ ಸಿನಿಮಾ ಪ್ರೇಮಕಥೆಯನ್ನು ಹೊಂದಿದೆ ಎಂದುಕೊಳ್ಳಬಹುದು. ಆದರೆ ಕಥೆ ಹಾಗಿಲ್ಲ. ಪ್ರೀತಿ ಎನ್ನೋದು ಈ ಸಿನಿಮಾದ ಭಾಗವಷ್ಟೇ. 'ಲವ್ ಮಾಕ್ಟೇಲ್' ಮಾಡುವ ಸಂದರ್ಭದಲ್ಲಿ ನನ್ನ ಪಾತ್ರಕ್ಕೆ ಹೆಚ್ಚಿನ ಸವಾಲು ಇರಲಿಲ್ಲ. ಆದರೆ ಒಂದು ಒಳ್ಳೆಯ ಪಾತ್ರ ಇಲ್ಲಿ ಸಿಕ್ಕಿದೆ. ಗಂಡ–ಹೆಂಡತಿ ನಡುವೆ ನಡೆಯುವ ಮನಃಸ್ತಾಪ, ಜಗಳ ಈ ಕಥೆಯ ಎಳೆಯಲ್ಲಿದೆ. ಇದೊಂದು ಕೌಟುಂಬಿಕ ಚಿತ್ರ. ನಿರ್ದೇಶಕರಾದ ಪಿ.ಸಿ.ಶೇಖರ್ ಅವರು ಪ್ರಸಕ್ತ ಸಮಾಜದಲ್ಲಿ ಇರುವ ಕುಟುಂಬಗಳ ಕಥೆಗಳನ್ನೇ ಹೆಕ್ಕಿ ತಂದು ಸಿನಿಮಾ ಮಾಡಿದ್ದಾರೆ. ರಿಯಲ್ ಲೈಫ್ ಮಿಲನಾಗೂ, 'ಲವ್‌ಬರ್ಡ್ಸ್'ನಲ್ಲಿರೋ ಮಿಲನಾಗೂ ಬಹಳ ವ್ಯತ್ಯಾಸವಿದೆ! ನಾನಿಲ್ಲಿ ಇಂಡಿಪೆಂಡೆಂಟ್ ಹುಡುಗಿಯಾಗಿ, ಫ್ಯಾಷನ್ ಡಿಸೈನರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಇಂದಿನ ನಗರ ಜೀವನದಲ್ಲಿ ಗಂಡು ಮಕ್ಕಳಂತೆಯೇ ಹೆಣ್ಣು ಮಕ್ಕಳನ್ನು ಬೆಳೆಸಿರುತ್ತಾರೆ. ಇಷ್ಟಪಟ್ಟು ಮದುವೆಯಾದ ಗಂಡ–ಹೆಂಡತಿಯ ನಡುವೆ ಸಣ್ಣಸಣ್ಣ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಬಂದರೆ ಅದು ಎತ್ತ ಸಾಗಲಿದೆ ಎನ್ನುವುದೇ ಚಿತ್ರಕಥೆ. ಜನಕ್ಕೆ ಇದು ಬೇಗ ಕನೆಕ್ಟ್ ಆಗಲಿದೆ.

ಜನರ ಮನಸ್ಸಿನಲ್ಲಿ ಆದಿ–ನಿಧಿ ಛಾಪು ಇನ್ನೂ ಇದೆ. ಹೀಗಾಗಿ ನನಗೆ ದೊಡ್ಡ ಸವಾಲಿತ್ತು. ನನ್ನ ಪಾತ್ರಕ್ಕೆ ಬ್ರೇಕ್ ಬೇಕಿತ್ತು. ಈ ಪ್ರಯತ್ನವನ್ನು 'ಲವ್‌ಬರ್ಡ್ಸ್'ನಲ್ಲಿ ಮಾಡಿದ್ದೇನೆ. ಒಂದು ಗೆಲುವು ಸಿಕ್ಕ ನಂತರ ಅವಕಾಶಗಳು ಬರಲಾರಂಭಿಸುತ್ತವೆ. ನಾನು ಸಿನಿಮಾ ಆಯ್ಕೆ ಸಂದರ್ಭದಲ್ಲಿ ಫ್ರೆಶ್ ಕಾಂಬಿನೇಷನ್ ನೋಡುತ್ತಿದ್ದೇನೆ. ಕೃಷ್ಣ ಅವರ ಜೊತೆ ಮೂರು ಪ್ರಾಜೆಕ್ಟ್‌ಗಳು ಆಯಿತು. ಒಂದೇ ರೀತಿಯ ಪಾತ್ರಗಳು ಮಾಡುವುದಕ್ಕಿಂತ, ಲುಕ್‌ನಲ್ಲಿ, ಗುಣಲಕ್ಷಣಗಳಲ್ಲಿ ಭಿನ್ನತೆ ಇರುವ ಪಾತ್ರಗಳನ್ನು ಮಾಡುವತ್ತ ಚಿತ್ತಹರಿಸಿದ್ದೇನೆ.

• ಒಪ್ಪಿಕೊಂಡಿರುವ ಪ್ರಾಜೆಕ್ಟ್...

ಪೃಥ್ವಿ ಅಂಬಾರ್ ಅವರ ಜೊತೆಗಿನ 'ಫಾರ್ ರಿಜಿಸ್ಟ್ರೇಷನ್' ಸಿನಿಮಾ ರಿಲೀಸ್‌ಗೆ ಸಜ್ಜಾಗಿದೆ. ನನ್ನ ಹೊಸ ಪ್ರಾಜೆಕ್ಟ್ 'ಆರಾಮ್ ಅರವಿಂದ ಸ್ವಾಮಿ' ಸಿನಿಮಾದಲ್ಲಿ ನಾನು ಶಿಕ್ಷಕಿಯ ಪಾತ್ರ ಮಾಡುತ್ತಿದ್ದೇನೆ. ಬೆಂಗಳೂರಿನಲ್ಲಿ ಬಂದು ನೆಲೆಸಿದ ಕೇರಳ ಮೂಲದ ಹುಡುಗಿಯ ಪಾತ್ರ ನನ್ನದು. ಈಗಾಗಲೇ ಒಂದು ಶೆಡ್ಯೂಲ್ ಪೂರ್ಣಗೊಂಡಿದೆ. ಈ ಸಿನಿಮಾವೂ ಇದೇ ವರ್ಷ ತೆರೆಕಾಣಲಿದೆ. ಮತ್ತೊಂದು ಹೊಸ ಸಿನಿಮಾ ಒಪ್ಪಿಕೊಂಡಿದ್ದೇನೆ. ಅದು ಶೀಘ್ರದಲ್ಲೇ ಘೋಷಣೆಯಾಗಲಿದೆ. ಬೇರೆ ಭಾಷೆಗಳಿಂದಲೂ ಆಫರ್ಸ್ ಬರುತ್ತಿವೆ. ಆದರೆ ಸದ್ಯ ಕನ್ನಡ ಚಿತ್ರಗಳಲ್ಲೇ ತೊಡಗಿಸಿಕೊಳ್ಳುತ್ತೇನೆ, ಅತ್ತ ಗಮನವಿಲ್ಲ. ನಮ್ಮ ಬೇರಿನಲ್ಲಿ ಕೆಲಸ ಮಾಡುವ ಖುಷಿ ಬೇರೆಲ್ಲೂ ಸಿಗಲ್ಲ. ❖

'ಹೊಂದಿಸಿ ಬರೆಯಿರಿ' ಫೆ.10ಕ್ಕೆ

ಶೀರ್ಷಿಕೆಯಿಂದಲೇ ಸದ್ದು ಮಾಡುತ್ತಿರುವ, ರಾಮೇನಹಳ್ಳಿ ಜಗನ್ನಾಥ್ ಅವರ ನಿರ್ದೇಶನದ ಚೊಚ್ಚಲ ಚಿತ್ರ 'ಹೊಂದಿಸಿ ಬರೆಯಿರಿ' ಫೆಬ್ರುವರಿ 10ರಂದು ಬಿಡುಗಡೆಯಾಗಲಿದೆ.

ಬಹುತಾರಾಗಣದ ಈ ಚಿತ್ರದ 'ಸೋಲ್ ಆಫ್ ಹೊಂದಿಸಿ ಬರೆಯಿರಿ' ಹಾಡು ಇತ್ತೀಚೆಗೆ ಬಿಡುಗಡೆಯಾಗಿದ್ದು, ಪ್ರೇಕ್ಷಕರ ಗಮನ ಸೆಳೆದಿದೆ. ಹಾಡಿಗೆ ರಾಮೇನಹಳ್ಳಿ ಜಗನ್ನಾಥ್ ಸಾಹಿತ್ಯ ಬರೆದಿದ್ದು, ಐಶ್ವರ್ಯ ರಂಗರಾಜನ್ ದನಿಯಾಗಿದ್ದಾರೆ. ಇಡೀ ಸಿನಿಮಾದ ಆಶಯವನ್ನು ಕಟ್ಟಿಕೊಡುವ ಈ ಹಾಡು ಚಿತ್ರದ ಹೈಲೈಟ್ ಎಂದಿದೆ ಚಿತ್ರತಂಡ. ಜೋ ಕೋಸ್ಟ ಸಂಗೀತ ಸಂಯೋಜನೆ ಈ ಹಾಡಿಗಿದೆ.

ಪರಿಸ್ಥಿತಿಗಳೊಂದಿಗೆ ಹೊಂದಿಕೊಂಡು ಸಾಗುವ ಬದುಕಿನ ಪಯಣವೇ ಜೀವನ ಎಂಬ ಎಳೆಯ ಸುತ್ತ ಹೆಣೆಯಲಾದ ಕಥಾಹಂದರವನ್ನು ಈ ಚಿತ್ರ ಹೊಂದಿದೆ. ಐದು ಜನ ಸ್ನೇಹಿತರ ಬದುಕಿನ ಕಥೆ ಹಾಗೂ ಭಾವನಾತ್ಮಕ ಪಯಣವನ್ನು ಒಳಗೊಂಡ ಈ ಚಿತ್ರದಲ್ಲಿ ಪ್ರವೀಣ್ ತೇಜ್, ಭಾವನಾ ರಾವ್, ಸಂಯುಕ್ತ ಹೊರನಾಡು, ಐಶಾನಿ ಶೆಟ್ಟಿ, ನವೀನ್ ಶಂಕರ್, ಶ್ರೀ ಮಹದೇವ್, ಅರ್ಚನಾ ಜೋಯಿಸ್, ಅನಿರುದ್ಧ್ ಆಚಾರ್ಯ ಒಳಗೊಂಡ ಕಲಾವಿದರು ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

ಚಿತ್ರದಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಎಂಟು ಹಾಡುಗಳಿದ್ದು ಈಗಾಗಲೇ ನಾಲ್ಕು ಹಾಡುಗಳು ಬಿಡುಗಡೆಯಾಗಿವೆ. ಸುನೀಲ್ ಪುರಾಣಿಕ್, ಪ್ರವೀಣ್ ಡಿ. ರಾವ್, ಧರ್ಮೇಂದ್ರ ಅರಸ್, ನಂಜುಂಡೇ ಗೌಡ, ಸುಧಾ ನರಸಿಂಹರಾಜು ಒಳಗೊಂಡ ಕಲಾವಿದರ ಬಳಗ ಚಿತ್ರದಲ್ಲಿದೆ. ಶಾಂತಿ ಸಾಗರ್ ಹೆಚ್. ಜಿ. ಛಾಯಾಗ್ರಹಣ ಚಿತ್ರಕ್ಕಿದೆ. ಮಾಸ್ತಿ, ಪ್ರಶಾಂತ್ ರಾಜಪ್ಪ ಹಾಗೂ ರಾಮೇನಹಳ್ಳಿ ಜಗನ್ನಾಥ್ ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ. ❖

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

'ದಿ' ಮಾರ್ಚ್‌ನಲ್ಲಿ ತೆರೆಗೆ

ದಿ
ವಿನಯ್, ದಿಶಾ

ನಿರ್ದೇಶಕ ವಿನಯ್ 'ದಿ' ಸಿನಿಮಾ ಮೂಲಕ ಮತ್ತೆ ಬಂದಿದ್ದಾರೆ. 'ದಿ' ಮೂಲಕ ನಾಯಕ ಹಾಗೂ ನಿರ್ದೇಶಕನಾಗಿ ವಿನಯ್ ತೆರೆ ಮೇಲೆ ಬರುತ್ತಿದ್ದು, ಚಿತ್ರದ ಟ್ರೈಲರ್ ಬಿಡುಗಡೆ ಆಗಿದೆ. ಚಿತ್ರಕ್ಕೆ ವಿನಯ್ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸದ್ದಿಲ್ಲದೇ ಸೆಟ್ಟೇರಿ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ನಡೆಸಿದೆ ಚಿತ್ರತಂಡ.

'ಈ ಚಿತ್ರ ಡಾಲರ್‌ನ ಸುತ್ತ ನಡೆಯುವ ಪ್ರೇಮಕಥೆ. ಮುಕ್ಕಾಲು ಭಾಗ ಸಿನಿಮಾ ಕಾಡಿನಲ್ಲಿ ಚಿತ್ರೀಕರಣಗೊಂಡಿದೆ. 'ದಿ', ಕೋವಿಡ್ ಸಮಯದಲ್ಲಿ ಸಿದ್ಧವಾದ ಕಥೆ. 'ದಿ' ಅಂದ್ರೆ ದಿವ್ಯ ಮತ್ತು ದೀಪಕ್. ವಾರಾಂತ್ಯದಲ್ಲಿ ಕಾಡಿಗೆ ಹೋದ ಪ್ರೇಮಿಗಳ ಜೀವನದಲ್ಲಿ ಏನೇನು ಆಗುತ್ತದೆ, ಅವರಿಗೆ ಗೊತ್ತಿಲ್ಲದೇ ಅವರ ಜೀವನದಲ್ಲಿ ಇನ್ಯಾರ ಪ್ರವೇಶ ಆಗುತ್ತದೆ, ಮುಂದೆ ಅವರೇನಾದರು ಎಂಬುದು ತಿರುಳು. ಚಿತ್ರದಲ್ಲಿ ಆರು ಮುಖ್ಯ ಪಾತ್ರಗಳಿವೆ. ಎಲ್ಲಾ ಪಾತ್ರಗಳಿಗೂ ಸಮನಾದ ಪ್ರಾಮುಖ್ಯತೆ ಇದೆ. ಫೆಬ್ರುವರಿ ಕೊನೆ ಅಥವಾ ಮಾರ್ಚ್ ಮೊದಲ ವಾರದಲ್ಲಿ ಸಿನಿಮಾ ತೆರೆಗೆ ತರಲು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದರು ಚಿತ್ರದ ನಿರ್ದೇಶಕ ವಿನಯ್.

ದಿಶಾ ಈ ಚಿತ್ರದ ನಾಯಕಿ. 'ದೇವರ ನಾಡಲ್ಲಿ', 'ಎಸ್‌ಎಲ್‌ವಿ' ಚಿತ್ರಗಳಲ್ಲಿ ನಟಿಸಿದ ಅನುಭವ ಅವರದ್ದು. ನಾಗೇಂದ್ರ ಅರಸ್ ಅವರು ಅರಣ್ಯಾಧಿಕಾರಿ ಪಾತ್ರದಲ್ಲಿದ್ದಾರೆ. ಭರತ್ ಅವರ ಛಾಯಾಗ್ರಹಣವಿದೆ.

ಹರಿಣಿ, ಬಾಲ ರಾಜ್ವಾಡಿ, ನಾಗೇಂದ್ರ ಅರಸ್, 'ಕಾಮಿಡಿ ಕಿಲಾಡಿಗಳು' ಖ್ಯಾತಿಯ ಚಂದ್ರು, ಶರಣ್, ಸುರೇಶ್ ಬಾಬು, ಗಣೇಶ್, ಕಲಾರತಿ ಮಹದೇವ್ ಒಳಗೊಂಡ ತಾರಾಬಳಗ ಚಿತ್ರದಲ್ಲಿದೆ. 'ವಿಡಿಕೆ' ಸಿನಿಮಾಸ್ ಬ್ಯಾನರ್ ನಡಿ 'ವಿಡಿಕೆ' ಗ್ರೂಪ್ 'ದಿ' ಚಿತ್ರವನ್ನು ನಿರ್ಮಾಣ ಮಾಡಿದೆ. ಯುಎಂ ಸ್ಟೀವನ್ ಸತೀಶ್ ಸಂಗೀತ ನಿರ್ದೇಶನ, ಕವಿರಾಜ್ ಹಾಗೂ ವಿನಯ್ ಸಾಹಿತ್ಯ, ಸಿದ್ದಾರ್ಥ ಸಂಕಲನ, ಚಂದ್ರು ಬಂಡೆ ಸಾಹಸ ನಿರ್ದೇಶನ ಚಿತ್ರಕ್ಕಿದೆ. ❖

ಕಿರುತೆರೆ

ರೇಣುಕಾ ಯಲ್ಲಮ್ಮ ಚರಿತ್ರೆ

ನಾಡಿನ ಶಕ್ತಿದೇವತೆ ರೇಣುಕಾ ಯಲ್ಲಮ್ಮನ ಕಥೆ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಧಾರಾವಾಹಿಯಾಗಿ ಮೂಡಿಬರಲಿದೆ. 'ಉಧೋ ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ' ಈ ಧಾರಾವಾಹಿಯ ಶೀರ್ಷಿಕೆ. ಜ.23ರಿಂದ ಸೋಮವಾರದಿಂದ ಶನಿವಾರದವರೆಗೆ ರಾತ್ರಿ 8.30ಕ್ಕೆ ಪ್ರಸಾರವಾಗಲಿದೆ.

'ರೇಣುಕಾ' ಪಾತ್ರದಲ್ಲಿ '777 ಚಾರ್ಲಿ' ಸಿನಿಮಾ ಖ್ಯಾತಿಯ ಬಾಲನಟಿ ಶಾರ್ವರಿ ನಟಿಸಿದ್ದಾರೆ.

ಕಥೆಯೇನು?: ಪುರಾಣ ಕಾಲದಲ್ಲಿ ಒಮ್ಮೆ ಸುದರ್ಶನ ಚಕ್ರವು ಅಹಂಕಾರದಿಂದ ಮೆರೆಯಿತು. ಆಗ ಭೂಲೋಕದಲ್ಲಿ ಮಾನವನ ರೂಪದಲ್ಲಿ ಜನ್ಮ ತಾಳುವಂತೆ ವಿಷ್ಣುವು ಶಾಪ ನೀಡಿ, ನನ್ನಿಂದಲೇ ನಿನ್ನ ಅಂತ್ಯವಾಗುವುದು ಎಂದು ಹೇಳುತ್ತಾನೆ. ಹೀಗೆ ಭೂಲೋಕದಲ್ಲಿ ಕಾರ್ತವೀರ್ಯಾರ್ಜುನನ ರೂಪದಲ್ಲಿ ಸುದರ್ಶನ ಚಕ್ರವು ಜನ್ಮ ತಾಳುತ್ತದೆ. ಶ್ರೀ ವಿಷ್ಣುವು ಮಾನವ ರೂಪದಲ್ಲಿ ಜನ್ಮತಾಳಲು ಆತನ ತಾಯಿಯಾಗಿ ಪಾರ್ವತಿಯು ರೇಣು ಮಹಾರಾಜನ ಮಗಳಾಗಿ ಜನ್ಮತಾಳುತ್ತಾಳೆ. ಲೋಕ ಕಲ್ಯಾಣಕ್ಕಾಗಿ ಹಾಗೂ ದುಷ್ಟ ಸಂಹಾರಕ್ಕಾಗಿ ಒಂದೇ ಆತ್ಮದ ಎರಡು ಶಕ್ತಿಗಳು ಒಂದಾಗಿ ಬರುವುದೇ ಕಥೆ ಎಂದಿದೆ ವಾಹಿನಿ. ❖

ರಾಜ್ಯಪಾಲರಾದ್ರು 'ರಾಘಣ್ಣ'!



'ಧ್ರುವ369' ಚಿತ್ರದಲ್ಲಿ ರಾಘವೇಂದ್ರ ರಾಜ್‌ಕುಮಾರ್ ರಾಜ್ಯಪಾಲರಾಗಿ ಕಾಣಿಸಿಕೊಂಡಿದ್ದಾರೆ. ಸಿನಿಮಾದ ಕ್ಲೈಮಾಕ್ಸ್ ಚಿತ್ರೀಕರಣವು ನಂದಿಬೆಟ್ಟ ಬಳಿಯ ಖಾಸಗಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಿತು.

ನಿರ್ದೇಶಕ ಶಂಕರ್‌ನಾಗ್ ಪ್ರಕಾರ, 'ರಾಘವೇಂದ್ರ ರಾಜ್‌ಕುಮಾರ್ ಅವರು ಕಥೆಯ ಪ್ರಾರಂಭ, ಮಧ್ಯಂತರ ಹಾಗೂ ಕ್ಲೈಮ್ಯಾಕ್ಸ್‌ನಲ್ಲಿ ಇರುತ್ತಾರೆ. ಪುರಾಣ ಕಾಲದ ಧ್ರುವ ನಕ್ಷತ್ರ ಕಥೆಗೂ ಈಗಿನ ಖಗೋಳಶಾಸ್ತ್ರಕ್ಕೂ ಸಂಬಂಧವಿರುವ ಕಥೆಯಿದೆ. ಅಲ್ಲದೆ ಕುತೂಹಲಕಾರಿ ಅಂಶ ಅಡಗಿದೆ. ಮುಖ್ಯ ಪಾತ್ರದಲ್ಲಿ ರಮೇಶ್ ಭಟ್, ಅತೀಶ್ ಶೆಟ್ಟಿ, ಚಂದನಾ, ನಮಿತಾ, ಸಂದೀಪ್ ಮಲಾನಿ, ಅರುಣ್ ಸಾಗರ್, ಮೇಘಾ ಗೌಡ, ಭಾಸ್ಕರ್ ಮಣಿಪಾಲ ಹಾಗೂ ಮಂಗಳೂರಿನ ರಂಗಭೂಮಿ ಕಲಾವಿದರಿಗೆ ಅವಕಾಶ ಮಾಡಿಕೊಡಲಾಗಿದೆ. ನಾನು ಸಹ ಒಂದು ಪಾತ್ರಕ್ಕೆ ಬಣ್ಣ ಹಚ್ಚಿದ್ದೇನೆ' ಎಂದು ಮಾಹಿತಿ ನೀಡಿದರು.

ಶ್ರೀಕೃಷ್ಣ ಕಾಂತಿಲ ಅವರು ಅಚಿಂತ್ಯ ಸ್ಟುಡಿಯೋಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಸತೀಶ್‌ಬಾಬು ಸಂಗೀತ ನಿರ್ದೇಶನ, ಮಹಾಬಲ ಛಾಯಾಗ್ರಹಣ, ಸುಬ್ರಹ್ಮಣ್ಯ ಐರೋಡಿ ಸಂಕಲನ ಚಿತ್ರಕ್ಕಿದೆ. ❖

'ಪ್ರೀತಿ ಜೊತೆಗೇ ಪ್ರೀತಿಯಲ್ಲಿ'

ರಾಜ್ ಬಿ. ಶೆಟ್ಟಿ
ಸಿರಿ ರವಿಕುಮಾರ್

ಸಂಕ್ರಾಂತಿ ಸಂಭ್ರಮದ ಸಂದರ್ಭದಲ್ಲಿ ನಟಿ ರಮ್ಯಾ ತಮ್ಮ ನಿರ್ಮಾಣದ ಹೊಸ ಪ್ರಾಜೆಕ್ಟ್‌ನ ಕೆಲವು ಸನ್ನಿವೇಶಗಳ ಛಾಯಾಚಿತ್ರಗಳನ್ನು ಬಿಡುಗಡೆ ಮಾಡಿದ್ದಾರೆ. ಇದು ಚಿತ್ರದ ಕುರಿತು ಮತ್ತಷ್ಟು ಕುತೂಹಲವನ್ನು ಹುಟ್ಟಿಸಿದೆ.

2023ರ ನಿರೀಕ್ಷಿತ ಚಲನಚಿತ್ರಗಳಲ್ಲಿ ಒಂದಾದ ಈ ಸಿನಿಮಾ ಈಗಾಗಲೇ ಹಲವು ಕಾರಣಗಳಿಗೆ ಗಾಂಧಿನಗರದಲ್ಲಿ ಸದ್ದು ಮಾಡಿದೆ. ತಮ್ಮ ನಿರ್ಮಾಣ ಸಂಸ್ಥೆ 'ಆ್ಯಪಲ್ ಬಾಕ್ಸ್ ಸ್ಟುಡಿಯೋಸ್'ನಡಿ ನಿರ್ಮಾಪಕಿಯಾಗಿ ರಮ್ಯಾ ಚಂದನವನದಲ್ಲಿ ತಮ್ಮ ಹೊಸ ಪಯಣ ಆರಂಭಿಸಿದ್ದು, 'ಲೈಟರ್ ಬುದ್ಧ ಫಿಲಂಸ್' ಸಂಸ್ಥೆಯೊಂದಿಗೆ ಕೈಜೋಡಿಸಿದ್ದಾರೆ. ನಟ, ನಿರ್ದೇಶಕ ರಾಜ್ ಬಿ. ಶೆಟ್ಟಿ ನಟಿಸಿ ನಿರ್ದೇಶಿಸಿರುವ ಈ ಚಿತ್ರವು ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ರಾಜ್‌ಗೆ ನಟಿ ಸಿರಿ ರವಿಕುಮಾರ್ ಇಲ್ಲಿ ಜೋಡಿಯಾಗಿದ್ದಾರೆ. 'ಪ್ರೇರಣಾ' ಮತ್ತು 'ಅನಿಕೇತ್' ಎಂಬ ಪಾತ್ರಗಳಲ್ಲಿ ಕ್ರಮವಾಗಿ ಸಿರಿ ಹಾಗೂ ರಾಜ್ ಕಾಣಿಸಿಕೊಳ್ಳಲಿದ್ದಾರೆ.

ಸಿನಿಮಾ ಕುರಿತು ಅನುಭವ ಹಂಚಿಕೊಂಡಿರುವ ರಮ್ಯಾ, 'ಈ ಚಿತ್ರವು ನಮ್ಮೆಲ್ಲರನ್ನು ಪ್ರೀತಿ-ಪ್ರೇಮದೊಂದಿಗೇ ಒಲವಾಗುವಂತೆ ಮಾಡುತ್ತದೆ. ಮೊದಲ ಬಾರಿ ನಾನು ನಿರ್ಮಾಪಕಿಯ ಜವಾಬ್ದಾರಿ ನಿರ್ವಹಿಸುತ್ತಾ ಬಹಳಷ್ಟು ವಿಷಯಗಳನ್ನು ಕಲಿತೆ' ಎಂದಿದ್ದಾರೆ.

ತಡೆಯಾಜ್ಞೆ: ಈ ಚಿತ್ರದ ಶೀರ್ಷಿಕೆಗೆ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಅವರು ತಡೆಯಾಜ್ಞೆ ತಂದಿದ್ದಾರೆ. ಸಿಂಗ್ ಅವರ ಅರ್ಜಿ ಪರಿಗಣಿಸಿದ ಹೆಚ್ಚುವರಿ ಸಿವಿಲ್ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. ನಿರ್ಮಾಣ ತಂಡ ಮುಂದೇನು ಮಾಡಲಿದೆ ಎಂಬ ಕುತೂಹಲ ಸಿನಿ ಪ್ರೇಕ್ಷಕರದ್ದು. ❖

ಸಿನಿ ಸಂಕ್ಷಿಪ್ತ

'ಮಂಡ್ಯಹೈದ'ನ ಕಥೆ

'ಮನಸಾಗಿದೆ' ಚಿತ್ರದ ಮುಖಾಂತರ ಚಂದನವನಕ್ಕೆ ಕಾಲಿಟ್ಟಿದ್ದ ಅಭಯ್ ಚಂದ್ರಶೇಖರ್ ಇದೀಗ 'ಮಂಡ್ಯಹೈದ'ನಾಗಲು ಸಜ್ಜಾಗಿದ್ದಾರೆ. ಎಸ್. ಚಂದ್ರಶೇಖರ್ ನಿರ್ಮಾಣದ ಐದನೇ ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು.

'ತನ್ನ ಮಗನನ್ನೇ ನಾಯಕ ನಟನನ್ನಾಗಿ ಮಾಡಿ ನಾನು ನಿರ್ಮಾಣ ಮಾಡುತ್ತಿರುವ ಎರಡನೇ ಚಿತ್ರವಿದು. ಮಂಡ್ಯ ನನ್ನ ಊರು. ಚಿತ್ರದ ಕಥಾಹಂದರವೂ ಹಳ್ಳಿಯ ಕಥೆಯನ್ನು ಒಳಗೊಂಡಿದ್ದು, ಮಂಡ್ಯದಲ್ಲೇ ಹೆಚ್ಚಿನ ಚಿತ್ರೀಕರಣ ನಡೆಯಲಿದೆ. ವಿ.ಶ್ರೀಕಾಂತ್ ನಿರ್ದೇಶನದ ಈ ಚಿತ್ರಕ್ಕೆ ಥ್ರಿಲ್ಲರ್ ಮಂಜು ಅವರು ಎರಡು ಸಾಹಸ ದೃಶ್ಯಗಳನ್ನು ನಿರ್ದೇಶನ ಮಾಡಲಿದ್ದಾರೆ. 'ಕಾಮಿಡಿ ಕಿಲಾಡಿಗಳು' ತಂಡದ 15 ಕಲಾವಿದರು ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಪ್ರೀತಿ, ಸ್ನೇಹದ ಕಥಾಹಂದರ ಹೊಂದಿರುವ ಈ ಚಿತ್ರವು ಮಾಸ್ ಸಬ್ಜೆಕ್ಟ್ ಒಳಗೊಂಡಿದೆ' ಎನ್ನುತ್ತಾರೆ ಚಂದ್ರಶೇಖರ್.

ಕಿರುತೆರೆ ನಟಿ ಭೂಮಿಕಾ ಈ ಚಿತ್ರದ ಮುಖಾಂತರ ನಾಯಕಿಯಾಗಿ ಬೆಳ್ಳಿತೆರೆ ಪ್ರವೇಶಿಸುತ್ತಿದ್ದಾರೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಸುರೇಂದ್ರನಾಥ್ ಅವರು ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಮನುಗೌಡ ಅವರ ಛಾಯಾಗ್ರಹಣ ಚಿತ್ರಕ್ಕಿದೆ. ❖

ಮಂಡ್ಯಹೈದ
ಭೂಮಿಕಾ, ಅಭಯ್

ಪ್ರಜಾವಾಣಿ
ಕನ್ನಡ ಸಿನಿ ಸಮ್ಮಾನ
ನಮ್ಮ ಹೆಮ್ಮೆ ನಮ್ಮ ವೈಭವ
ಕರ್ನಾಟಕದ ಶ್ರೀಮಂತ ಚಲನಚಿತ್ರ ಪರಂಪರೆಯ ಸಂಭ್ರಮಾಚರಣೆ

ವಿವಿಧ ವಿಭಾಗಗಳ ಪಟ್ಟಿಯಲ್ಲಿ ನಿಮಗೆ ಸೂಕ್ತವಾದ ವಿಭಾಗಕ್ಕೆ ನಾಮಿನೇಷನ್ ಸಲ್ಲಿಸಿ
ನೋಂದಾಯಿಸಿಕೊಳ್ಳಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/PrajavaniCS ಗೆ ಭೇಟಿ ನೀಡಿ. (ಕೊನೆಯ ದಿನಾಂಕ: 31 ಜನವರಿ 2023)
*ಷರತ್ತುಗಳು ಅನ್ವಯ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,165
ಇಂದಿನ ಅಂತ್ಯ	18,108
▼	57
ದಿನದ ಕನಿಷ್ಠ	18,063

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹577

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (---)
ಸೋಯಾ (ರಿಫೈನ್ಡ್)	₹1220 (---)
ಸೂರ್ಯಕಾಂತಿ (ರಿಫೈನ್ಡ್)	₹1220 (---)
ಪಾಮೋಲಿನ್	₹918 (---)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1600-2000
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಪ್ರ.ಕೆ)	₹500-604
ದ್ವಿತಳಿ (ಬಿ.ವಿ)	₹266-806

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹138
ಆರ್‌ಎಸ್‌ಎಸ್-5	₹133
ಗುಡ್ ಲಾಟ್	₹128

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀಮತಿ ರಾಮಾಂಜಮ್ಮನವರು (ಅಮ್ಮಯ್ಯ) (82 ವರ್ಷ)
(ನಿವೃತ್ತ ಮುಖ್ಯಶಿಕ್ಷಕರಾದ ಶ್ರೀ ಹೆಚ್. ನರಸೇಗೌಡರ ಧರ್ಮಪತ್ನಿ)
ಯಲಹಂಕ ಬೆಂಗಳೂರು–64
ಇವರು ತಾ.19.1.2023ರಂದು ಗುರುವಾರ ಬೆಳಗ್ಗೆ 10.20 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅಂತ್ಯಕ್ರಿಯೆ ತಾ : 21.1.2023 ರಂದು ಶನಿವಾರ ಮಧ್ಯಾಹ್ನ 12 ಗಂಟೆಗೆ ಯಲಹಂಕ ರೈತರ ಸಂತೆ ಪಕ್ಕದ ನಮ್ಮ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

ನೀರಿನ ವಹಿವಾಟು: ಅದಾನಿ ಎಂಟರ್‌ಪ್ರೈಸಸ್ ಚಿಂತನೆ

ಮುಂಬೈ (ಪಿಟಿಐ): ನೀರು ಶುದ್ಧೀಕರಣ, ಸಂಸ್ಕರಣೆ ಹಾಗೂ ವಿತರಣೆ ಉದ್ಯಮವನ್ನು ಪ್ರವೇಶಿಸುವ ಆಲೋಚನೆ ಇರುವುದಾಗಿ ಅದಾನಿ ಎಂಟರ್‌ಪ್ರೈಸಸ್ ಗುರುವಾರ ತಿಳಿಸಿದೆ.

ಅದಾನಿ ಸಮೂಹವು ಮೂಲಸೌಕರ್ಯ ವಲಯದ ಬಂದರು, ವಿಮಾನ ನಿಲ್ದಾಣ, ರಸ್ತೆ, ಎಕ್ಸ್‌ಪ್ರೆಸ್ ಹೆದ್ದಾರಿ, ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ವಹಿವಾಟುಗಳಲ್ಲಿ ಈಗಾಗಲೇ ತೊಡಗಿಸಿಕೊಂಡಿದೆ.

ಅದಾನಿ ಎಂಟರ್‌ಪ್ರೈಸಸ್‌ನ ಎಫ್‌ಪಿಒ ಜನವರಿ 27ರಿಂದ ಆರಂಭವಾಗಲಿದ್ದು, ಪ್ರತಿ ಷೇರಿಗೆ ₹ 3,112–₹ 3,276 ಬೆಲೆ ನಿಗದಿ ಮಾಡಲಾಗಿದೆ ಎಂದು ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ಜುಗೇಶಿಂದರ್ ಸಿಂಗ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

‘ಮೂಲಸೌಕರ್ಯ ವಲಯದಲ್ಲಿ ದೊಡ್ಡ ಕಂಪನಿಯಾಗಿ, ನಾವು ನೀರಿನ ವಹಿವಾಟಿನಲ್ಲಿ ತೊಡಗಿಸಿಕೊಳ್ಳಲು ಉತ್ಸುಕರಾಗಿದ್ದೇವೆ’ ಎಂದು ಸಿಂಗ್ ತಿಳಿಸಿದ್ದಾರೆ. ಈ ವಿಚಾರವಾಗಿ ಅವರು ಹೆಚ್ಚಿನ ವಿವರಗಳನ್ನು ನೀಡಿಲ್ಲ.

‘ನಾವು ಈಗ ಇದರಲ್ಲಿನ ಅವಕಾಶಗಳ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇವೆ. ಜಂಟಿ ಪಾಲುದಾರಿಕೆ, ಸ್ವಾಧೀನ ಸಾಧ್ಯತೆಯ ಬಗ್ಗೆ ಪರಿಶೀಲಿಸುತ್ತಿದ್ದೇವೆ’ ಎಂದು ಸಿಂಗ್ ಹೇಳಿದ್ದಾರೆ.

187 ಅಂಶ ಇಳಿಕೆ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ಎರಡು ದಿನಗಳ ಗಳಿಕೆಗೆ ಗುರುವಾರ ತಡೆ ಬಿದ್ದಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 187 ಅಂಶ ಇಳಿಕೆ ಕಂಡರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 57 ಅಂಶ ಇಳಿಕೆ ಕಂಡಿತು.

ಅಮೆರಿಕದ ಗ್ರಾಹಕರ ಖರೀದಿ ಸಾಮರ್ಥ್ಯ ಕುಗ್ಗಿರುವುದು ಹಾಗೂ ಹಣದುಬ್ಬರ ನಿಯಂತ್ರಣಕ್ಕೆ ಬಿಗಿಯಾದ ಹಣಕಾಸು ನೀತಿ ಮುಂದುವರಿಸುವ ಫೆಡರಲ್ ರಿಸರ್ವ್‌ನ ಹೇಳಿಕೆಯು ಜಾಗತಿಕ ಷೇರುಪೇಟೆಗಳ ವಹಿವಾಟಿನ ಮೇಲೆ ಪರಿಣಾಮ ಬೀರಿತು. ಇದರಿಂದಾಗಿ ದೇಶಿ ಷೇರುಪೇಟೆಗಳಲ್ಲಿಯೂ ನಕಾರಾತ್ಮಕ ವಹಿವಾಟು ನಡೆಯಿತು. ಸೆನ್ಸೆಕ್ಸ್‌ನಲ್ಲಿ ಏಷ್ಯನ್ ಪೇಂಟ್ಸ್ ಷೇರು ಮೌಲ್ಯ ಶೇ 2.64ರಷ್ಟು ಇಳಿಕೆ ಕಂಡಿತು.

2022–23ರಲ್ಲಿ ₹ 35 ಸಾವಿರ ಕೋಟಿ ಸಂಗ್ರಹ: ಕೋಟಕ್ ಅಂದಾಜು

‘ಷೇರು ವಿಕ್ರಯ: ಗುರಿ ಕಡಿತ’

ಮುಖ್ಯಾಂಶಗಳು

- ಹೂಡಿಕೆ ಹಿಂತೆಗೆತದ ಗುರಿ ತಲುಪುವ ಸಾಧ್ಯತೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಡಿಮೆ
- ಮುಂದಿನ ಆರ್ಥಿಕ ವರ್ಷದಲ್ಲಿ ಗುರಿ ₹ 50 ಸಾವಿರ ಕೋಟಿ: ನೊಮುರ

ಮುಂಬೈ (ರಾಯಿಟರ್ಸ್): ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿನ ಹೂಡಿಕೆಯನ್ನು ಹಿಂಪಡೆಯುವ ಮೂಲಕ ಸಂಗ್ರಹಿಸಬಹುದಾದ ವರಮಾನದ ಮೊತ್ತವನ್ನು ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ತುಸು ಕಡಿಮೆ ಮಾಡುವ ಸಾಧ್ಯತೆ ಇದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹೂಡಿಕೆ ಹಿಂತೆಗೆತದಿಂದ ಸಂಗ್ರಹಿಸಿದ ಮೊತ್ತವು ಬಜೆಟ್ ಅಂದಾಜಿಗಿಂತ ತುಸು ಕಡಿಮೆ ಇದೆ.

‘2022–23ರಲ್ಲಿ ಹೂಡಿಕೆ ಹಿಂತೆಗೆತದಿಂದ ಬಂದ ಮೊತ್ತ ₹35 ಸಾವಿರ ಕೋಟಿ ಎಂಬುದು ನಮ್ಮ ಅಂದಾಜು. 2023–24ನೆಯ ಸಾಲಿನಲ್ಲಿ ಹೂಡಿಕೆ ಹಿಂತೆಗೆತದಿಂದ ₹ 50 ಸಾವಿರ ಕೋಟಿ ವರಮಾನ ಸಂಗ್ರಹವಾಗಬಹುದು’ ಎಂದು ಕೋಟಕ್ ಇನ್‌ಸ್ಟಿಟ್ಯೂಷನಲ್ ಸೆಕ್ಯುರಿಟೀಸ್ ಹೇಳಿದೆ. 2022–23ರಲ್ಲಿ ಹೂಡಿಕೆ ಹಿಂತೆಗೆತದಿಂದ ಒಟ್ಟು ₹ 65 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಕೇಂದ್ರ ಹೊಂದಿದೆ.

ಭಾರತೀಯ ಜೀವ ವಿಮಾ ನಿಗಮ, ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಹಾಗೂ ಇತರ ಕೆಲವು ಕಂಪನಿಗಳ ಷೇರುಗಳನ್ನು ಇನ್ನಷ್ಟು ಮಾರಾಟ ಮಾಡುವ ಮೂಲಕ ಕೇಂದ್ರ ಸರ್ಕಾರವು ವರಮಾನ ಸಂಗ್ರಹಿಸಬಹುದು ಎಂದು ಈ ಸಂಸ್ಥೆ ಭಾವಿಸಿದೆ.

2023–24ರಲ್ಲಿ ಬಂಡವಾಳ ಹಿಂತೆಗೆತದ ಮೂಲಕ ₹50 ಸಾವಿರ ಕೋಟಿ ಮಾತ್ರ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಬಹುದು ಎಂದು ನೊಮುರ ಕೂಡ ಅಂದಾಜಿಸಿದೆ. ‘ಹೂಡಿಕೆ ಹಿಂತೆಗೆತ ಹಾಗೂ ಖಾಸಗೀಕರಣದ ಪ್ರಕ್ರಿಯೆಯು ವಿಳಂಬವಾಗುವುದು ಮುಂದುವರಿದಿದೆ’ ಎಂದು ಮಾರ್ಗನ್ ಸ್ಟ್ಯಾನ್ಲಿ ಹೇಳಿದೆ.

ಹೂಡಿಕೆ ಹಿಂತೆಗೆತದ ಗುರಿಯನ್ನು ಕೇಂದ್ರ ಸರ್ಕಾರವು ಈ ಹಿಂದೆ 32 ಸಂದರ್ಭಗಳ ಪೈಕಿ ಎಂಟು ಬಾರಿ ಮಾತ್ರ ತಲುಪಿದೆ ಎಂದು ‘ಬ್ಯಾಂಕ್ ಆಫ್ ಬರೋಡ’ದ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

‘ಮಾರುಕಟ್ಟೆಗಳಿಗೆ ಸ್ಪಷ್ಟ ಚಿತ್ರಣ ಸಿಗಬೇಕು ಎಂದಾದರೆ ಹೂಡಿಕೆ ಹಿಂತೆಗೆತದ ಕುರಿತು ಸ್ಪಷ್ಟತೆ ಬೇಕು’ ಎಂದು ಅವರು ಹೇಳಿದ್ದಾರೆ. ಕೇಂದ್ರವು ಈ ಬಾರಿ ₹ 40 ಸಾವಿರ ಕೋಟಿಯಿಂದ ₹ 50 ಸಾವಿರ ಕೋಟಿವರೆಗೆ ವರಮಾನವನ್ನು ಹೂಡಿಕೆ ಹಿಂತೆಗೆತದ ಮೂಲಕ ಸಂಗ್ರಹಿಸುವ ಗುರಿ ಹೊಂದಬಹುದು ಎಂದು ಅವರು ಅಂದಾಜಿಸಿದ್ದಾರೆ.

‘ನಿಗಮದ ಕಾರ್ಯನಿರ್ವಾಹಕ ನಿರ್ದೇಶಕರಿಂದ ಅಧಿಕೃತ ಮಾಹಿತಿ’

ವಿಐಎಸ್‌ಎಲ್ ಸಂಪೂರ್ಣ ಸ್ಥಗಿತ?

● ವೆಂಕಟೇಶ್ ಜಿ.ಎಚ್.

ಶಿವಮೊಗ್ಗ: ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ (ವಿಐಎಸ್‌ಎಲ್) ಕಾರ್ಯಾಚರಣೆಯನ್ನು ಸಂಪೂರ್ಣ ಸ್ಥಗಿತಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಜನವರಿ 16ರಂದು ನಡೆದಿರುವ ಭಾರತೀಯ ಉಕ್ಕು ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಕಾರ್ಖಾನೆ ಮುಚ್ಚುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

‘ಕಾರ್ಖಾನೆ ಮುಚ್ಚುವ ಬಗ್ಗೆ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕರು ನಮಗೆ ಅಧಿಕೃತವಾಗಿ ಮಾಹಿತಿ ನೀಡಿದ್ದಾರೆ. ಇನ್ನೊಂದು ತಿಂಗಳಲ್ಲಿ ಪ್ರಕ್ರಿಯೆ ಆರಂಭವಾಗಲಿದೆ’ ಎಂದು ಕಾರ್ಖಾನೆಯ ಕಾರ್ಮಿಕರ ಸಂಘದ ಅಧ್ಯಕ್ಷ ಜಿ. ಜಗದೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

1923ರಿಂದ ಈ ಕಾರ್ಖಾನೆಯು ಕಬ್ಬಿಣ ಮತ್ತು ಉಕ್ಕು ಉತ್ಪಾದನೆ ಆರಂಭಿಸಿತ್ತು. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಲಕ್ಷಾಂತರ ಕಾರ್ಮಿಕರಿಗೆ ಉದ್ಯೋಗ ನೀಡಿತ್ತು. ಬದಲಾದ ತಂತ್ರಜ್ಞಾನ, ಖಾಸಗಿ ಕಂಪನಿಗಳ ಪೈಪೋಟಿ ಹಾಗೂ ಮಾರುಕಟ್ಟೆಯಲ್ಲಿ ಉಂಟಾದ ಏರಿಳಿತಗಳ ಕಾರಣ ಕಳೆದೊಂದು ದಶಕದಿಂದ ಕಾರ್ಖಾನೆ ನಷ್ಟಕ್ಕೊಳಗಾಗಿದೆ.

ಕಾರ್ಖಾನೆ ಮುಚ್ಚುವ ನಿರ್ಧಾರವನ್ನು ಆಡಳಿತ ಮಂಡಳಿ ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂಬ ಸುದ್ದಿ ಇದೆ. ಆದರೆ, ಇನ್ನೂ ಅಧಿಕೃತ ಆದೇಶ ಹೊರಬಿದ್ದಿಲ್ಲ

ಪ್ರವೀಣ್‌ಕುಮಾರ್, ವಿಐಎಸ್‌ಎಲ್ ಮುಖ್ಯ ವ್ಯವಸ್ಥಾಪಕ

ನಿಯಮಾವಳಿಯಂತೆ ಸರ್ಕಾರವು ಕಾರ್ಖಾನೆಯನ್ನು ಮುಚ್ಚುವ ನಿರ್ಧಾರ ಕೈಗೊಂಡಿದೆ. ಕಾರ್ಖಾನೆ ಉಳಿಸುವ ಪ್ರಯತ್ನ ಮುಂದುವರಿಸಲಿದ್ದೇವೆ

ಬಿ.ವೈ. ರಾಘವೇಂದ್ರ, ಶಿವಮೊಗ್ಗ ಸಂಸದ

ಹುಸಿಯಾದ ಭರವಸೆ: ಅಳಲು

‘2018ರಲ್ಲಿ ಕೇಂದ್ರದ ಉಕ್ಕು ಸಚಿವರು ಕಾರ್ಖಾನೆಗೆ ಭೇಟಿ ನೀಡಿದ್ದರು. ಕಾರ್ಖಾನೆಯನ್ನು ಖಾಸಗಿಯವರಿಗೆ ನೀಡುವುದಿಲ್ಲ, ಬದಲಿಗೆ ಭಾರತೀಯ ಉಕ್ಕು ನಿಗಮದ ಮೂಲಕ ₹ 6,000 ಕೋಟಿ ಬಂಡವಾಳ ಹೂಡಿಕೆ ಮಾಡಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದರು. ಅದು ಭರವಸೆಯಾಗಿಯೇ ಉಳಿಯಿತು’ ಎಂದು ಕಾರ್ಖಾನೆಯ ಕಾರ್ಮಿಕರ ಸಂಘದ ಪದಾಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

‘ಈ ಮೊದಲು ಕಾರ್ಖಾನೆ ವಾರ್ಷಿಕ ₹ 100 ಕೋಟಿ ನಷ್ಟ ಅನುಭವಿಸುತ್ತಿತ್ತು. ಆದರೆ, ನಮ್ಮ (ಕಾರ್ಮಿಕರ) ಪ್ರಯತ್ನದಿಂದ ನಷ್ಟದ ಬಾಬ್ತು ₹ 35 ಕೋಟಿಗೆ ಇಳಿದಿತ್ತು. ಕಾರ್ಖಾನೆಗೆ ಕೇಂದ್ರ ಸರ್ಕಾರವೇ ಬಂಡವಾಳ ತೊಡಗಿಸಿದ್ದರೆ ಇಲ್ಲಿನ ಚಿತ್ರಣವೇ ಬದಲಾಗುತ್ತಿತ್ತು’ ಎಂದರು.

ಖರೀದಿಗೆ ನಿರಾಸಕ್ತಿ: ಖಾಸಗೀಕರಣಕ್ಕೆ ಕೇಂದ್ರ ಸಚಿವ ಸಂಪುಟ 2016ರಲ್ಲಿ ಒಪ್ಪಿಗೆ ನೀಡಿತ್ತು. ಸಂಸ್ಥೆಯನ್ನು ಸಂಪೂರ್ಣ ಮಾರಾಟ ಮಾಡಲು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ (ಡಿಐಪಿಎಎಂ) ಮೂಲಕ ಬಿಡ್ ಕೂಡ ಕರೆಯಲಾಗಿತ್ತು. ಆದರೆ, ಬಿಡ್‌ದಾರರು ಆಸಕ್ತಿ ವಹಿಸದ ಕಾರಣಕ್ಕೆ ಖಾಸಗೀಕರಣ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವು ಕಳೆದ ಅಕ್ಟೋಬರ್ 11ರಂದು ಹಿಂಪಡೆದಿತ್ತು.

ಸಂಸ್ಥೆಯ ಖಾಸಗೀಕರಣ ಪ್ರಕ್ರಿಯೆಗೆ ವಿರೋಧ ವ್ಯಕ್ತಪಡಿಸಿದ್ದ ಕಾರ್ಮಿಕ ಸಂಘವು ಸಂಸ್ಥೆಯ ಪುನರುಜ್ಜೀವನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿತ್ತು.

ಬ್ಲೂ ಟಿಕ್: ಆಂಡ್ರಾಯ್ಡ್ ಬಳಕೆದಾರರಿಗೆ 11 ಡಾಲರ್

ಬೆಂಗಳೂರು (ರಾಯಿಟರ್ಸ್): ಟ್ವಿಟರ್ ಕಂಪನಿಯು ಆಂಡ್ರಾಯ್ಡ್ ಬಳಕೆದಾರರಿಗೆ ‘ಬ್ಲೂ ಟಿಕ್’ ಚಂದಾದಾರಿಕೆ ಪಡೆಯಲು ತಿಂಗಳಿಗೆ 11 ಅಮೆರಿಕನ್ ಡಾಲರ್ (₹ 894.96) ಶುಲ್ಕ ನಿಗದಿಮಾಡಿದೆ. ಐಒಎಸ್ ವ್ಯವಸ್ಥೆಯಲ್ಲಿ ಟ್ವಿಟರ್ ಬಳಸುವವರು ಕೂಡ ಬ್ಲೂ ಟಿಕ್‌ಗೆ ಇಷ್ಟೇ ಶುಲ್ಕ ಪಾವತಿಸಬೇಕು.

ಮೊಬೈಲ್ ಬಳಕೆದಾರರಿಗೆ ವಿಧಿಸಿರುವ ತಿಂಗಳ ಶುಲ್ಕಕ್ಕೆ ಹೋಲಿಸಿದರೆ ವೆಬ್ ಬಳಕೆದಾರರಿಗೆ ವಾರ್ಷಿಕ ಶುಲ್ಕವು 84 ಅಮೆರಿಕನ್ ಡಾಲರ್ (₹ 6,834.24) ಇದೆ. ವೆಬ್ ಬಳಕೆದಾರರಿಗೆ ತಿಂಗಳ ರಿಯಾಯಿತಿ ಶುಲ್ಕ 8 ಡಾಲರ್ (₹ 650.88) ಇದೆ.

ಆಂಡ್ರಾಯ್ಡ್‌ನ ಗೂಗಲ್ ಪ್ಲೇ ಸ್ಟೋರ್ ಮತ್ತು ಆ್ಯಪಲ್‌ನ ಆ್ಯಪ್ ಸ್ಟೋರ್‌ಗಳು ವಿಧಿಸುವ ಶುಲ್ಕಕ್ಕೆ ಸರಿಹೊಂದಿಸುವ ಸಲುವಾಗಿ ಆ್ಯಂಡ್ರಾಯ್ಡ್ ಮತ್ತು ಐಒಎಸ್ ಬಳಕೆ ಮಾಡುವ ಗ್ರಾಹಕರಿಗೆ ಹೆಚ್ಚಿನ ಶುಲ್ಕ ನಿಗದಿಮಾಡಲಾಗಿದೆ ಎಂದು ಟ್ವಿಟರ್ ತಿಳಿಸಿದೆ.

ಹೊಸ ಆದಾಯದ ಮೂಲವನ್ನು ಸೃಷ್ಟಿಸುವ ಉದ್ದೇಶದಿಂದ ಕಂಪನಿಯು ಕಳೆದ ವರ್ಷ ಬ್ಲೂ ಟಿಕ್‌ಗೆ ಶುಲ್ಕ ವಿಧಿಸುವುದನ್ನು ಆರಂಭಿಸಿತು.

ಟ್ವಿಟರ್ ಹಕ್ಕಿಯ ಪ್ರತಿಮೆಗೆ ₹ 81.36 ಲಕ್ಷ: ಸ್ಯಾನ್ ಫ್ರಾನ್ಸಿಸ್ಕೊ (ಎಎಫ್‌ಪಿ): ಟ್ವಿಟರ್ ಹಕ್ಕಿಯ ಪ್ರತಿಮೆಯು ₹ 81.36 ಲಕ್ಷಕ್ಕೆ ಮಾರಾಟ ಆಗಿದೆ.

ಟ್ವಿಟರ್ ಪ್ರತಿಮೆ

ಇಲಾನ್ ಮಸ್ಕ್ ಅವರು ಸ್ಯಾನ್ ಫ್ರಾನ್ಸಿಸ್ಕೊ ಮುಖ್ಯ ಕಚೇರಿಯಲ್ಲಿನ ಪೀಠೋಪಕರಣಗಳು, ಆಲಂಕಾರಿಕ ವಸ್ತುಗಳು, ಅಡುಗೆ ಮನೆಯಲ್ಲಿ ಬಳಸುವ ವಸ್ತುಗಳು ಮತ್ತು ಇನ್ನಿತರೆ ವಸ್ತುಗಳನ್ನು ಬುಧವಾರ ಹರಾಜು ಹಾಕಿದ್ದಾರೆ.

ಟ್ವಿಟರ್ ಹಕ್ಕಿಯ ಚಿನ್ಹೆ ಇರುವ 10 ಅಡಿ ಎಲೆಕ್ಟ್ರಿಕಲ್ ಡಿಸ್‌ಪ್ಲೇ ₹32.54 ಲಕ್ಷಕ್ಕೆ ಮಾರಾಟ ಆಗಿದೆ ಎಂದು ಹರಾಜು ಸೇವೆಗಳನ್ನು ನಿರ್ವಹಿಸುವ ಹೆರಿಟೇಜ್ ಗ್ಲೋಬಲ್ ಪಾರ್ಟ್ನರ್ಸ್ ಕಂಪನಿಯು ಖಚಿತಪಡಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	500
ಬಂಟ್ವಾಳ	
ಕೋಕ	12500-25000
ಹಳತು	48000-54500
ಕಾರ್ಕಳ	
ಹೊಸತು	30000-40000
ಹಳತು	40000-54600
ಸಾಗರ	
ಬಿಳಿಗೋಟು	17110-30299
ಚಾಲಿ	33110-39999
ಕೋಕ	23899-32300
ಕೆಂಪುಗೋಟು	30099-38199
ರಾಶಿ	39009-46329
ಸಿಪ್ಪೆಗೋಟು	4290-21288
ಶಿರಸಿ	
ಬೆಟ್ಟೆ	36099-44099
ಬಿಳಿಗೋಟು	15899-36239
ಚಾಲಿ	33709-44572
ಕೆಂಪುಗೋಟು	22299-34509
ರಾಶಿ	37099-45699
ಯಲ್ಲಾಪುರ	
ಬಿಳಿಗೋಟು	24899-35261
ಕೋಕ	14601-30212
ಹಳೆಚಾಲಿ	36261-43399
ಹೊಸಚಾಲಿ	3289-36000
ಕೆಂಪುಗೋಟು	24899-35899
ರಾಶಿ	37809-44939
ಸಿದ್ದಾಪುರ	
ಬಿಳಿಗೋಟು	27299-33099
ಚಾಲಿ	38399-41299
ಕೋಕ	26899-31909
ಕೆಂಪುಗೋಟು	29112-31700
ರಾಶಿ	42899-45689
ತಟ್ಟಿಬೆಟ್ಟೆ	37199-43099

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	13950	13900	155 ಸೆಂಟ್ಸ್
ಎಸಿ	6720	6850	6050	
ಆರ್‌ಪಿ	8400	8300	7950	ಲಂಡನ್
ಆರ್‌ಸಿ	4500	164 on OT	4250	1902 ಡಾಲರ್ಸ್

ಮಹಿಳೆಯರ ಉಡುಪು ವಿಭಾಗಕ್ಕೆ ಮರುಪ್ರವೇಶ: ಪಿ.ಎನ್. ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮುಖ ಫ್ಯಾಷನ್ ಬ್ರ್ಯಾಂಡ್‌ಗಳಲ್ಲಿ ಒಂದಾಗಿರುವ ಪಿ.ಎನ್. ರಾವ್ ತನ್ನ ಶತಮಾನೋತ್ಸವದ ಪ್ರಯುಕ್ತ ಮಹಿಳೆಯರ ಉಡುಪಿನ ವಿಭಾಗವನ್ನು ಮತ್ತೆ ಪ್ರವೇಶಿಸುವ ಉದ್ದೇಶ ಹೊಂದಿದೆ. ಈ ಮೂಲಕ ಪುರುಷರಿಗೂ ಮಹಿಳೆಯರಿಗೂ ಒಪ್ಪುವಂತಹ ಉಡುಪುಗಳನ್ನು ನೀಡುವ ಬ್ರ್ಯಾಂಡ್ ಆಗಿ ರೂಪುಗೊಳ್ಳಲಿದೆ ಎಂದು ಕಂಪನಿ ತಿಳಿಸಿದೆ.

ಕಂಪನಿಯು ಬೆಂಗಳೂರಿನಲ್ಲಿ ಐದು ಮತ್ತು ಚೆನ್ನೈನಲ್ಲಿ ಎರಡು ಮಳಿಗೆಗಳನ್ನು ಹೊಂದಿದೆ.

‘ಶತಮಾನೋತ್ಸವವು ನಮ್ಮ ಬ್ರ್ಯಾಂಡ್ ಮೌಲ್ಯ, ದೂರದೃಷ್ಟಿ ಮತ್ತು ಗುರಿಯನ್ನು ತಿಳಿಸುತ್ತದೆ. ಗ್ರಾಹಕರ ಮನಃಸ್ಥಿತಿಯನ್ನು ಅರ್ಥಮಾಡಿಕೊಂಡು ಅವರಿಗೆ ಉತ್ತಮ ಉಡುಪುಗಳನ್ನು ನೀಡಲು ನಾವು ಬದ್ಧರಾಗಿದ್ದೇವೆ’ ಎಂದು ಕಂಪನಿಯ ಪಾಲುದಾರ ಕೇತನ್ ಪಿಶೆ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘1923ರಲ್ಲಿ ಲೇಡಿಸ್ ಟೈಲರಿಂಗ್ ಬ್ರ್ಯಾಂಡ್ ಆಗಿ ಆರಂಭವಾದ ಪಿ.ಎನ್. ರಾವ್, ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷ್ ಮಹಿಳೆಯರಿಗೆ ಉಡುಪುಗಳನ್ನು ಒದಗಿಸುತ್ತಿತ್ತು. ಸ್ವಾತಂತ್ರ್ಯಾನಂತರ ಪಿ.ಎನ್. ಪಾಂಡುರಂಗ ರಾವ್ ಅವರಿಂದಾಗಿ ಪುರುಷರ ಉಡುಪುಗಳಿಗೂ ಬ್ರ್ಯಾಂಡ್ ವಿಸ್ತರಣೆ ಆಯಿತು. ಆ ಬಳಿಕ ಪುರುಷರ ಸೂಟ್ಸ್ ಬ್ರ್ಯಾಂಡ್ ಆಗಿ ಜನಪ್ರಿಯವಾಗಿದೆ’ ಎಂದು ಕೇತನ್ ತಿಳಿಸಿದರು.

ವಿನಿಮಯ ದರ

ಡಾಲರ್	81.37
ಪೌಂಡ್	100.38
ಯುರೊ	88.08
ಯೆನ್ (100ಕ್ಕೆ)	63

ಮುಂಬೈ ಧಾರಣೆ

ಶೇಂಗಾ

19–1-2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10550
ದಪ್ಪ ಗುಜರಾತ್(ಹೊಸ)	11600-11650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (---)
ಒಂದು ವಾರದ ಡೆಲಿವರಿ	1620 (---)
ಸೋಯಾ ಕಚ್ಚಾ	--- (---)
ಪಾಮ್ ವಾರದ ಡೆಲಿವರಿ	916 (---)
ಸೂರ್ಯಕಾಂತಿ ಎಣ್ಣೆ ಕಚ್ಚಾ	1120 (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,450 (---)
ಬೆಳ್ಳಿ ಕೆ.ಜಿ 67,450 (---)

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
Others

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

General
ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಇದೆ 10,000- 15,000. 8951315839, 9880545002

TATA MOTORS Connecting Aspirations
ಸಂಕ್ರಾಂತಿಯಂದು ಟಾಟಾ ವಾಹನ ಖರೀದಿಸಿ ನಿಮ್ಮ ಬಾಳಿನ ಹೊಸ ಅಧ್ಯಾಯ ಪ್ರಾರಂಭಿಸಿ
₹45 000/-* ವರೆಗೆ ಗ್ರಾಹಕರ ಕೊಡುಗೆಗಳು
+
₹1999 ಪಾವತಿಸಿ 2ವರ್ಷ/50000km ಸಿಲ್ವರ್ AMC ಪಡೆಯಿರಿ*
TATA ACE GOLD DIESEL+
81235 23146
*T & C Apply

ಉದ್ಯೋಗಾವಕಾಶ
Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ.8884777502, 8884777503.

Wanted
ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ರೋಗಿಯನ್ನು ವಯಸ್ಸಾದವರನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು-56 ಸಂಪರ್ಕಿಸಿ: 9606523337, 9606385001

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಶಿಕ್ಷಣ
Training

RAXA (A GMR Group Company) GMR SERVICES
DRONE TRAINING
DGCA APPROVED DRONE PILOT TRAINING
Industrial Level Survey, Mapping & Drone Data Analysis
Best in class training at the most cost effective rates & a high Demand Sector
Minimum qualification: 10th Pass & above, 18 years of Age, Male / Female candidates welcome (Passport Mandatory).
RAXA SECURITY SERVICES LTD
Raxa Academy, Near Kodikonda checkpost, NH-7, Chillamatur, Morampalli post, Hindpur Taluk, Sri Satya Sai District, Andhra Pradesh- 515601
Ph: 70657 84244 / 70775 25013
001anujsinghchauhan@gmail.com / jagannath.parida@gmrgroup.in

TRAVEL CORNER
ಭಾರತೀಯ ರೈಲ್ವೆ
ಮಹಾಶಿವರಾತ್ರಿ ವಿಶೇಷ ರೈಲು
ವಾರಣಾಸಿ- ಗಯಾ ಪ್ರಯಾಗರಾಜ್ - ಅಯೋಧ್ಯ
12.02.23- 9 ದಿವಸ - 2SL Rs 16500
ರೈಲಿನಲ್ಲಿ ಪ್ರಯಾಣ- ವಸತಿ ಬಸ್-ಊಟ ಸೆಕ್ಯೂರಿಟಿ ಟೂರ್ ಮ್ಯಾನೇಜರ್
8754404260-9620393938
ಭಾರತ ಸರ್ಕಾರದಿಂದ ಮಾನ್ಯತೆ ಪಡೆದಿದೆ ಟ್ರಾವೆಲ್ ಟೈಮ್ಸ್
BOOK ONLINE - WWW.ULARAIL.COM

02.02.2023 5 ದಿನಗಳು ಗಾಣಗಾಪುರ ಬೀದರ್,ತುಳಜಾಪುರ ಪಂಡರಾಪುರ ಕೊಲ್ಲಾಪುರ. 10.02.2023 5 ದಿನಗಳು ಮಧುರೈ,ಕನ್ಯಾಕುಮಾರಿ ರಾಮೇಶ್ವರ ತಂಜಾವೂರು ಶ್ರೀರಂಗಂ ಇತ್ಯಾದಿ. ಸಂಪರ್ಕಿಸಿ: ವೈಷ್ಣವಿ ಟೂರ್ಸ್ ಅಂಡ್ ಟ್ರಾವಲ್ಸ್, ಗಾಂಧಿಬಜಾರ್ ಬೆಂಗಳೂರು-4. 9448683374 26914273

23.1.2023 ಕೇರಳ, ತಮಿಳುನಾಡು ಪ್ರವಾಸ 4.2.2023 ಗುಜರಾತ್, ಮಧ್ಯಪ್ರದೇಶ 19.2.2023 ದೆಹಲಿ, ಅಮೃತ್‌ಸರ್ ವೈಷ್ಣೋದೇವಿ, ಹರಿದ್ವಾರ, ಅಯೋಧ್ಯಾ, ಕಾಶಿ 23.4.2023 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್(ಹನುಮಂತನಗರ) 9845035349, 9482435755

ದೆಹಲಿ ಯುಮುನೋತ್ರಿ, ಗಂಗೋತ್ರಿ ಬದರಿನಾಥ್ ಕೇದಾರನಾಥ್ 27.04.2023 03.05.2023 08.05.2023 12.05.2023 ರಿಂದ 14/18 ದಿನಗಳು. ಪುರಿ ಕೊನಾರ್ಕ್ ಭುವನೇಶ್ವರ್ ಕಾಶಿ,ಗಯಾ,ಪ್ರಯಾಗ,ಹರಿದ್ವಾರ್ ದೆಹಲಿ 01.04.2023 07.04.2023 14.04.2023 22.04.2023 ರಿಂದ 14/10 ದಿನಗಳು. ಸೋಮನಾಥ್ ದ್ವಾರಕಾ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ್ 02.02.2023 ರಿಂದ 15/10 ದಿನಗಳು. ವಿಜಯವಾಡ ಭದ್ರಾಚಲಂ ವಿಶಾಖಪಟ್ಟಣಂ ಪಂಚರಾಮ ಮಂದಿರಗಳು 03.02.2023 ರಿಂದ 10 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು18

08.03.2023 10.04.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 11/7 ದಿನಗಳು. 08.03.2023 05.04.2023 ನೇಪಾಳ 9 ದಿನಗಳು. 10.02.2023 15.03.2023 ದುಬೈ ಅಬುಧಾಬಿ 5 ದಿನಗಳು. 15.03.2023 15.04.2023 ಭೂತಾನ್ 8 ದಿನಗಳು. 23.02.2023. 16.03.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 09.02.2023 11.03.2023 ಗುಜರಾತ್ 8 ದಿನಗಳು. 23.02.2023. 17.03.2023 ರಾಜಸ್ಥಾನ್ 9 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248 7022547922

ಸಂಕ್ರಾಂತಿ ಮತ್ತು ಕ್ರೈಸ್ತ ವರ್ಷದ ಶುಭಾಶಯಗಳು: 5 ದಿನಗಳ ರಾಮೇಶ್ವರ ಪ್ರವಾಸ. 5 ದಿನಗಳ ಕಾಶಿ ಪ್ರವಾಸ. 11 ದಿನಗಳ ಕಾಶಿ ಮತ್ತು ಹರಿದ್ವಾರ್ ಪ್ರವಾಸ. 10 ದಿನಗಳ ರಾಜಸ್ಥಾನ್ ಪ್ರವಾಸ. 12 ದಿನಗಳ ಗುಜರಾತ್ ಮತ್ತು ಮಧ್ಯಪ್ರದೇಶ 14 ದಿನಗಳ ಚಾರ್ ಧಾಮ್ ಪ್ರವಾಸ. ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಸ್ಕೈ N.R.ಕಾಲೋನಿ ಬೆಂಗಳೂರು19. 8277467677 9535169658

ಪ್ರವಾಸ
Travel

★ಶ್ರೇಯಸ್ ಟೂರ್ಸ್★ 26.02.2023 7ದಿನಗಳು ಕಾಶಿ ನೈಮಿಷ್ಯಾರಣ್ಯಾ,ಅಯೋಧ್ಯ ಪ್ರಯಾಗ ಗಯಾ ಬುದ್ಧಗಯಾ, ಸೀತಾಮಡು.20.02.2023 11ದಿನಗಳು ಚಂಡೀಗಡ್,ಸಿಮ್ಲಾ ಕುಲುಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ., 04.03.2023 10ದಿನಗಳು ಅಖಂಡ ನೇಪಾಳ ರಾಷ್ಟ್ರಪ್ರವಾಸ (ಮುಕ್ತಿನಾಥ ಸಹಿತ) 25.03.2023,15.04.2023 06.05.2023 21/16/13ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್‌ಸಿಸ್ಟರ್ಸ ಪ್ರವಾಸ)ಅಸ್ಸಾಂ, ಅರುಣಾಚಲ, ನಾಗಲ್ಯಾಂಡ್,ಮಣಿಪುರ ತ್ರಿಪುರ ಮೇಘಾಲಯ,ಮಿಝೋರಾಂ. 8073824856, 6366322639, 9206979202

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ಮಾಘ ಸ್ನಾನ ಪ್ರಯುಕ್ತ 02.02.2023 26.02.2023 06.03.2023 ಅಲಹಾಬಾದ್ ಕಾಶಿ,ಬುದ್ಧಗಯಾ. 11.02.2023 ಮಹಾಶಿವರಾತ್ರಿ ನೇಪಾಳ ಪಶುಪತಿನಾಥ್ ದರ್ಶನ. 26.02.2023 ಸೋಮನಾಥ ದ್ವಾರಕಾ ನಿಷ್ಕಳಂಕ ಮಾಹದೇವ,ಓಂಕಾರೇಶ್ವರ್ ಮಂಹಾಕಾಳೇಶ್ವರ್. 17.04.2023 23.04.2023 ಚಾರ್ಧಾಮ್ ಸಮೇತ ಪ್ರವಾಸ. ಏಪ್ರಿಲ್ ಮೇ ಜೂನ್ ತಿಂಗಳಲ್ಲಿ ಉತ್ತರ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು-4. 26574131 8317446683 9686708171

Holiday Package Tours
27.3.2023 ವಿಮಾನ ಮತ್ತು ರೈಲಿನಲ್ಲಿ ಕಾಶಿ, ಪ್ರಯಾಗ್ರಾಜ್, ಅಯೋಧ್ಯ 6 ದಿನಗಳ ಪ್ರವಾಸ 16,500. 3.2.2023 ತ್ರಿರಂಗ. ಅನುಗ್ರಹಯಾತ್ರ. 9880079351

ಭವಿಷ್ಯ
Astrology
ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕ್ವಾರ್ಟರ್ ಫೈನಲ್ ಪ್ರವೇಶಕ್ಕೆ ಕ್ರಾಸ್ಓವರ್ ಪಂದ್ಯದಲ್ಲಿ ಜಯ ಅನಿವಾರ್ಯ

ಭಾರತಕ್ಕೆ ಸಿಗದ ನೇರ ಅವಕಾಶ

ಭುವನೇಶ್ವರ್: ಭಾರತ ಹಾಕಿ ತಂಡವು ವಿಶ್ವಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ ವೇಲ್ಸ್ ವಿರುದ್ಧ ಜಯ ದಾಖಲಿಸಿತು. ಆದರೂ ಎಂಟರ ಘಟ್ಟದ ನೇರಪ್ರವೇಶ ಪಡೆಯಲು ಸಾಧ್ಯವಾಗಲಿಲ್ಲ.

ಆದರೆ ಕ್ವಾರ್ಟರ್‌ಫೈನಲ್ ಪ್ರವೇಶಿಸುವ ಇನ್ನೊಂದು ಅವಕಾಶ ಭಾರತಕ್ಕೆ ಇದೆ. ಭಾನುವಾರ ನಡೆಯುವ ಕ್ರಾಸ್ ಓವರ್ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಗೆದ್ದರೆ ನಾಕೌಟ್ ಪ್ರವೇಶಿಸುವುದು.

ಗುರುವಾರ ನಡೆದ ಪಂದ್ಯದಲ್ಲಿ ಭಾರತ ತಂಡ 4–2ರಿಂದ ವೇಲ್ಸ್ ವಿರುದ್ಧ ಗೆದ್ದಿತು. ಭಾರತವು ಎಂಟರ ಘಟಕ್ಕೆ ನೇರಪ್ರವೇಶ ಪಡೆಯಲು ಈ ಪಂದ್ಯದಲ್ಲಿ ಎಂಟು ಗೋಲುಗಳ ಅಂತರದಿಂದ ಜಯಿಸಬೇಕಿತ್ತು. ಆದರೆ ವಿಫಲವಾಯಿತು. ಇದರಿಂದಾಗಿ ಡಿ ಗುಂಪಿನಲ್ಲಿ ಇಂಗ್ಲೆಂಡ್ ಅಗ್ರಸ್ಥಾನ ಪಡೆದು ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಗುಂಪಿನಲ್ಲಿ ಭಾರತ ಹಾಗೂ ಇಂಗ್ಲೆಂಡ್ ತಂಡಗಳು ತಲಾ ಏಳು ಅಂಕಗಳನ್ನು ಗಳಿಸಿವೆ. ತಲಾ ಎರಡು ಪಂದ್ಯಗಳಲ್ಲಿಯೂ ಜಯಿಸಿವೆ. ಆದರೆ ಗೋಲುಗಳಿಕೆಯಲ್ಲಿ ಮುಂದಿರುವ ಇಂಗ್ಲೆಂಡ್ ಮೊದಲ ಸ್ಥಾನ ಪಡೆದಿದೆ.

ಎ ಮತ್ತು ಬಿ ಗುಂಪುಗಳ ಕೊನೆಯ ಸುತ್ತಿನ ಪಂದ್ಯಗಳು ಶುಕ್ರವಾರ ರೂರ್ಕೆಲಾದ ಮೈದಾನದಲ್ಲಿ ನಡೆಯಲಿವೆ.

ಭಾರತ ತಂಡದ ಆಟಗಾರ ಆಕಾಶದೀಪ್ ಸಿಂಗ್

'ಡಿ' ಗುಂಪು ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಡ್ರಾ	ಸೋಲು	ಗೋಲು ವ್ಯತ್ಯಾಸ	ಪಾಯಿಂಟ್
ಇಂಗ್ಲೆಂಡ್	3	2	1	0	9	7
ಭಾರತ	3	2	1	0	4	7
ಸ್ಪೇನ್	3	1	0	2	-2	3
ವೇಲ್ಸ್	3	0	0	3	-11	0

ಆಕಾಶ್ ಡಬಲ್: ತಂಡದ ಆಕಾಶದೀಪ್ ಸಿಂಗ್ (32ನಿ ಮತ್ತು 45ನೇ ನಿ) ಎರಡು ಗೋಲು ಗಳಿಸಿ ತಂಡದ ಗೆಲುವಿಗೆ ಮುನ್ನುಡಿ ಬರೆದರು., ಶಂಶೇರ್ ಸಿಂಗ್ (21ನಿ) ಹಾಗೂ ಹರ್ಮನ್‌ಪ್ರೀತ್ ಸಿಂಗ್ (59ನಿ) ಗೋಲು ಗಳಿಸಿ ಬಲ ತುಂಬಿದರು.

ವೇಲ್ಸ್ ತಂಡದ ಗರೆತ್ ಫರ್ಲಾಂಗ್ (42ನಿ) ಹಾಗೂ ಜೇಕಬ್ ಡ್ರೇಪರ್ (44ನಿ) ಗೋಲು ಹೊಡೆದರು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪಂದ್ಯವನ್ನು ವೀಕ್ಷಿಸಲು ಅಭಿಮಾನಿಗಳು ಕಿಕ್ಕಿರಿದು ಸೇರಿದ್ದರು. ಸಂಜೆಯ ಚಳಿಗಾಳಿಯಲ್ಲಿ ಭಾರತದ ಆಟಗಾರರ ಪ್ರದರ್ಶನವು ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಭಾರತವು ಬಹುತೇಕ ಹಂತಗಳಲ್ಲಿ ಚೆಂಡಿನ ನಿಯಂತ್ರಣದಲ್ಲಿ ಮೇಲುಗೈ ಸಾಧಿಸಿತ್ತು. ಆದರೆ, ಸಿಕ್ಕ ಅವಕಾಶಗಳಲ್ಲಿ ಗೋಲುಗಳನ್ನು ಗಳಿಸುವಲ್ಲಿ ವಿಫಲವಾಯಿತು. ಏಳು ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಕನಿಷ್ಠ ಆರು ಗೋಲು ಗಳಿಸುವ ಅವಕಾಶಗಳಿದ್ದವು. ಆದರೆ ಫಾರ್ವರ್ಡ್ ಆಟಗಾರರು ಕೈಚೆಲ್ಲಿದರು.

ವಿಶ್ವ ಶ್ರೇಯಾಂಕದಲ್ಲಿ 14ನೇ ಸ್ಥಾನದಲ್ಲಿರುವ ವೇಲ್ಸ್ ತಂಡದ ರಕ್ಷಣಾ ಆಟಗಾರರು ಉತ್ತಮ ಆಟವಾಡಿದರು.

ಇಂದಿನ ಪಂದ್ಯಗಳು

ಪಂದ್ಯ	ಸಮಯ
ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ	ಮಧ್ಯಾಹ್ನ 1
ಫ್ರಾನ್ಸ್–ಅರ್ಜೆಂಟೀನಾ	ಮಧ್ಯಾಹ್ನ 3
ಬೆಲ್ಜಿಯಂ–ಜಪಾನ್	ಸಂಜೆ 5
ಕೊರಿಯಾ–ಜರ್ಮನಿ	ಸಂಜೆ 7

ನೇರ ಪ್ರಸಾರ
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

'ಬ್ರಿಜ್‌ಭೂಷಣ್ ವಿರುದ್ಧ ಎಫ್‌ಐಆರ್'

2ನೇ ದಿನಕ್ಕೆ ಕಾಲಿಟ್ಟ ಕುಸ್ತಿಪಟುಗಳ ಪ್ರತಿಭಟನೆ; ಸರ್ಕಾರದಿಂದ ಸಿಗದ ಸ್ಪಂದನೆ

ನವದೆಹಲಿ (ಪಿಟಿಐ): 'ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷರ ವಿರುದ್ಧ ನಾವು ನೀಡಿರುವ ದೂರುಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ ಇದುವರೆಗೂ ಅದನ್ನು ಈಡೇರಿಸಿಲ್ಲ. ಆದ್ದರಿಂದ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಿಸುತ್ತೇವೆ' ಎಂದು ಪ್ರತಿಭಟನಾನಿರತ ಕುಸ್ತಿಪಟುಗಳು ಹೇಳಿದ್ದಾರೆ.

ಬ್ರಿಜ್ ಭೂಷಣ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಫೆಡರೇಷನ್‌ನಲ್ಲಿ ಸರ್ವಾಧಿಕಾರಿಯಂತೆ ಆಡಳಿತ ನಡೆಸುತ್ತಿದ್ದಾರೆ ಎಂದು ಆರೋಪಿಸಿರುವ ಖ್ಯಾತನಾಮ ಕುಸ್ತಿಪಟುಗಳು ಬುಧವಾರ ಧರಣಿ ಆರಂಭಿಸಿದ್ದರು. ಗುರುವಾರವೂ ಪ್ರತಿಭಟನೆ ಮುಂದುವರಿಯಿತು.

ಈ ಸಂದರ್ಭದಲ್ಲಿ ಒಂದು ಗಂಟೆಯ ಸಭೆಯನ್ನೂ ಕುಸ್ತಿಪಟುಗಳು ನಡೆಸಿದರು. ಇದರ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿನೇಶಾ ಫೋಗಟ್, 'ನಮ್ಮ ದೂರುಗಳಿಗೆ ತೃಪ್ತಿಕರವಾದ ಪ್ರತಿಕ್ರಿಯೆ ಲಭಿಸದಿರುವುದು ಬೇಸರಮೂಡಿಸಿದೆ' ಎಂದರು.

'ನಿನ್ನೆ ನಮ್ಮೊಂದಿಗೆ ಒಬ್ಬಿಬ್ಬರು ಲೈಂಗಿಕ ದೌರ್ಜನ್ಯ ಸಂತ್ರಸ್ತೆಯರು ಧರಣಿಯಲ್ಲಿ ಪಾಲ್ಗೊಂಡಿದ್ದರು. ಆದರೆ ಶೋಷಣೆಗೊಳಾದ ಇನ್ನೂ 5–6 ಕುಸ್ತಿಪಟುಗಳು ಈ ಪ್ರತಿಭಟನೆಯಲ್ಲಿ ಸೇರಿಕೊಂಡಿದ್ದಾರೆ. ಅವರು ಪ್ರತ್ಯೇಕ ದೂರುಗಳನ್ನು ದಾಖಲಿಸಲಿದ್ದಾರೆ. ಅವರ ಹೆಸರುಗಳನ್ನು ನಾವು ಬಹಿರಂಗಪಡಿಸುವುದಿಲ್ಲ. ಒಂದೊಮ್ಮೆ ಅವರ ಮಾಹಿತಿಗಳನ್ನು ಬಹಿರಂಗಪಡಿಸಲೇಬೇಕು ಎಂಬ ಆಗ್ರಹ ಬಂದರೆ ಅದು ಕಪ್ಪುದಿನವಾಗಲಿದೆ' ಎಂದೂ ವಿನೇಶಾ ಅಸಮಾಧಾನ ವ್ಯಕ್ತಪಡಿಸಿದರು.

'ಅವರಿಂದ (ಬ್ರಿಜ್ ಭೂಷಣ್) ರಾಜೀನಾಮೆ ಕೊಡಿಸುವುದಕ್ಕಷ್ಟೇ ನಮ್ಮ ಹೋರಾಟ ಸೀಮಿತವಲ್ಲ. ಆ ವ್ಯಕ್ತಿಯನ್ನು ಜೈಲಿಗೆ ಕಳಿಸುತ್ತೇವೆ. ನಾವು ಕಾನೂನಿನ ದಾರಿಗೆ ಹೋಗಲು ಬಯಸಿರಲಿಲ್ಲ. ಆದರೆ ನಮ್ಮ ದೂರುಗಳಿಗೆ ಸರಿಯಾದ ಸ್ಪಂದನೆ ದೊರೆಯುತ್ತಿಲ್ಲ. ನ್ಯಾಯ ಸಿಗುತ್ತಿಲ್ಲ. ಆದ್ದರಿಂದ ಅಧ್ಯಕ್ಷರ ವಿರುದ್ಧ ಎಫ್‌ಐಆರ್ ದಾಖಲಿಸುತ್ತೇವೆ. ಮಹಾರಾಷ್ಟ್ರ ಹಾಗೂ ಕೇರಳದ ಕುಸ್ತಿಪಟುಗಳಿಂದ ಬೆಂಬಲ ವ್ಯಕ್ತವಾಗಿದೆ' ಎಂದು ಒಲಿಂಪಿಯನ್ ವಿನೇಶಾ ಸ್ಪಷ್ಟಪಡಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವ ಒಲಿಂಪಿಯನ್ ಕುಸ್ತಿಪಟು ಹಾಗೂ ಭಾರತೀಯ ಜನತಾ ಪಕ್ಷದ ಧುರೀಣರೂ ಆಗಿರುವ ಬಬಿತಾ ಪೋಗಟ್, 'ಭಾರತದ ಕುಸ್ತಿಗೆ ಹೊಸ ಸ್ವರೂಪ ನೀಡಬೇಕು. ಸಂಪೂರ್ಣ ಫೆಡರೇಷನ್ ವಜಾ ಮಾಡಿ ಹೊಸದಾಗಿ ರಚಿಸಬೇಕು' ಎಂದು ಆಗ್ರಹಿಸಿದರು.

'ನಾವು ಒಲಿಂಪಿಯನ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ಪದಕವಿಜೇತರಾಗಿದ್ದೇವೆ. ನಮ್ಮ ಮೇಲೆ ಅನುಮಾನ ಪಡಬೇಕು. ಸತ್ಯ ಹೇಳುತ್ತಿದ್ದೇವೆ. ನಂಬಿಕೆ ಇಡಿ' ಎಂದೂ ಹೇಳಿದರು.

ಈ ಸಂದರ್ಭದಲ್ಲಿ ಹಾಜರಿದ್ದ 21 ವರ್ಷದ ಕುಸ್ತಿಪಟು ಅನ್ಷು ಮಲಿಕ್, 'ಬಲ್ಗೇರಿಯಾದಲ್ಲಿ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ನಡೆದ ಸಂದರ್ಭದಲ್ಲಿ ತಂಡವಿದ್ದ ಹೋಟೆಲ್‌ನಲ್ಲಿ ಬ್ರಿಜ್‌ಭೂಷಣ್ ಇದ್ದಾಗ ಮಹಿಳಾ ಕುಸ್ತಿಪಟುಗಳು ಮುಜುಗರ ಅನುಭವಿಸಿದ್ದರು' ಎಂದು ಹೇಳಿದರು.

ಬೃಂದಾ ಕಾರಟ್ ಭಾಷಣಕ್ಕೆ ತಡೆ: ಪ್ರತಿಭಟನಾ ಸ್ಥಳಕ್ಕಾಗಮಿಸಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದ ಸಿಪಿಐ(ಎಂ) ನಾಯಕಿ ಬೃಂದಾ ಕಾರಟ್ ಅವರು ಭಾಷಣ ಮಾಡದಂತೆ ತಡೆಯಲಾಯಿತು.

'ಮೇಡಂ, ದಯವಿಟ್ಟು ಈ ಪ್ರಕರಣಕ್ಕೆ ರಾಜಕೀಯ ಬಣ್ಣ ಕೊಡುವುದು ಬೇಡ' ಎಂದು ಬಜರಂಗ್ ಪೂನಿಯಾ ಮನವಿ ಮಾಡಿಕೊಂಡರು.

ಪ್ರತಿಭಟನಾನಿರತ ಒಲಿಂಪಿಯನ್ ಕುಸ್ತಿಪಟುಗಳಾದ ರವಿ ದಹಿಯಾ, ವಿನೇಶಾ ಪೋಗಟ್, ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್ ಮತ್ತಿತರರು –ಪಿಟಿಐ ಚಿತ್ರ

ಡಬ್ಲ್ಯುಎಫ್‌ಐ ಸಭೆ

ಕುಸ್ತಿಪಟುಗಳ ಪ್ರತಿಭಟನೆಯ ಕುರಿತು ಚರ್ಚೆ ನಡೆಸಲು ಡಬ್ಲ್ಯುಎಫ್‌ಐ ಅಯೋಧ್ಯೆಯಲ್ಲಿ ಭಾನುವಾರ ತುರ್ತು ಸಭೆ ನಡೆಸಲಿದೆ ಎಂದು ತಿಳಿದುಬಂದಿದೆ.

'ಸಭೆ ಕರೆಯಲಾಗಿದೆ. ಮುಂದಿನ ಕ್ರಮಗಳ ಕುರಿತು ಚರ್ಚಿಸಲಾಗುವುದು. ಅಧ್ಯಕ್ಷರು ರಾಜೀನಾಮೆ ನೀಡುವರೋ ಇಲ್ಲವೋ ಎಂದು ಈಗಲೇ ಖಚಿತವಾಗಿ ಹೇಳಲಾಗದು' ಎಂದು ಮೂಲಗಳು ತಿಳಿಸಿವೆ.

ನೆದರ್ಲೆಂಡ್ಸ್‌ಗೆ ದಾಖಲೆ ಜಯ

ಭುವನೇಶ್ವರ (ಪಿಟಿಐ): ಮೂರು ಬಾರಿಯ ಚಾಂಪಿಯನ್ ನೆದರ್ಲೆಂಡ್ಸ್ ತಂಡ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ದಾಖಲೆಯ ಗೆಲುವಿನೊಂದಿಗೆ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಗುರುವಾರ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ನೆದರ್ಲೆಂಡ್ಸ್ 14–0 ಗೋಲುಗಳಿಂದ ಇದೇ ಮೊದಲ ಬಾರಿ ವಿಶ್ವಕಪ್ ಆಡುತ್ತಿರುವ ಚಿಲಿ ತಂಡವನ್ನು ಮಣಿಸಿತು.

ವಿಶ್ವಕಪ್ ಟೂರ್ನಿಯಲ್ಲಿ ಅತಿದೊಡ್ಡ ಗೆಲುವು ಪಡೆದ ದಾಖಲೆ ಆಸ್ಟ್ರೇಲಿಯಾ ತಂಡದ ಹೆಸರಲ್ಲಿತ್ತು. ನವದೆಹಲಿಯಲ್ಲಿ ನಡೆದಿದ್ದ ಟೂರ್ನಿಯಲ್ಲಿ 12–0 ರಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿತ್ತು. ಆ ದಾಖಲೆಯನ್ನು ನೆದರ್ಲೆಂಡ್ಸ್ ಮುರಿಯಿತು.

ಮೂರು ಪಂದ್ಯಗಳಿಂದ ಒಂಬತ್ತು ಪಾಯಿಂಟ್ಸ್ ಸಂಗ್ರಹಿಸಿದ ನೆದರ್ಲೆಂಡ್ಸ್ 'ಸಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ನೇರವಾಗಿ ಎಂಟರಘಟ್ಟ ಪ್ರವೇಶಿಸಿತು. ಇನ್ನೊಂದು ಪಂದ್ಯದಲ್ಲಿ ನ್ಯೂಜಿಲೆಂಡ್‌ಗೆ 3–2 ರಿಂದ ಆಘಾತ ನೀಡಿದ ಮಲೇಷ್ಯಾ, ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು.

ನೆದರ್ಲೆಂಡ್ಸ್ ತಂಡದ ಜಿನ್ ಯಾನ್ಸೆನ್ (6, 29, 34 ಹಾಗೂ 44ನೇ ನಿ.) ನಾಲ್ಕು ಗೋಲುಗಳನ್ನು ಗಳಿಸಿದರೆ, ಥಿಯೆರಿ ಬ್ರಿಂಕ್‌ಮನ್ (25, 33, 58ನೇ ನಿ.) ಅವರೂ ಹ್ಯಾಟ್ರಿಕ್ ಸಾಧನೆ ಮಾಡಿದರು.

ಆಸ್ಟ್ರೇಲಿಯಾ ಓಪನ್ ಟೆನಿಸ್: ಜೊಕೊವಿಚ್, ಗಾರ್ಸಿಯಾಗೆ ಗೆಲುವು

ರೂಡ್, ಆನ್ಸ್ ಜಬೇರ್ ಪರಾಭವ

ಮೆಲ್ಬರ್ನ್ (ಎಎಫ್‌ಪಿ/ ಪಿಟಿಐ): ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಅಚ್ಚರಿಯ ಫಲಿತಾಂಶ ಮುಂದುವರಿದಿದ್ದು, ಎರಡನೇ ಶ್ರೇಯಾಂಕದ ಸ್ಪರ್ಧಿಗಳಾದ ಕ್ಯಾಸ್ಪರ್ ರೂಡ್, ಆನ್ಸ್ ಜಬೇರ್ ಹೊರಬಿದ್ದಿದ್ದಾರೆ.

ರಾಡ್ ಲೇವರ್ ಅರೆನಾದಲ್ಲಿ ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಅಮೆರಿಕದ ಜೆನ್ಸನ್ ಬ್ರೂಕ್ಸ್‌ಬಿ ಅವರು 6-3, 7-5, 6-7 (4/7), 6-2 ರಲ್ಲಿ ನಾರ್ವೆಯ ರೂಡ್ ವಿರುದ್ಧ ಗೆದ್ದರು.

ಇದರೊಂದಿಗೆ ಟೂರ್ನಿಯ ಮೊದಲ ಎರಡು ಶ್ರೇಯಾಂಕಿತ ಆಟಗಾರರು ಮೊದಲ ವಾರದಲ್ಲೇ ಹೊರಬಿದ್ದಂತಾಗಿದೆ. ಹಾಲಿ ಚಾಂಪಿಯನ್ ರಫೆಲ್ ನಡಾಲ್ ಬುಧವಾರ ಸೋತಿದ್ದರು. ಅವರು ಅಮೆರಿಕದ ಮೆಕೆಂಜಿ ಮೆಕ್‌ಡೊನಾಲ್ಡ್ ಎದುರು ಪರಾಭವಗೊಂಡಿದ್ದರು.

ರೂಡ್ ಅವರು ಇಲ್ಲಿ ಚಾಂಪಿಯನ್ ಆಗಿದ್ದರೆ, ವಿಶ್ವದ ಅಗ್ರ ರ್‍ಯಾಂಕಿಂಗ್‌ನ ಆಟಗಾರ ಎನಿಸಿಕೊಳ್ಳುತ್ತಿದ್ದರು. ಹಾಲಿ ಅಗ್ರ ರ್‍ಯಾಂಕ್‌ನಲ್ಲಿರುವ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಗಾಯದ ಕಾರಣ ಈ ಟೂರ್ನಿಯಲ್ಲಿ ಆಡುತ್ತಿಲ್ಲ. ರೂಡ್ ಅವರು 2022ರ ಫ್ರೆಂಚ್ ಓಪನ್ ಮತ್ತು ಅಮೆರಿಕ ಓಪನ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದರು.

ಎಂಟನೇ ಶ್ರೇಯಾಂಕದ ಆಟಗಾರ ಅಮೆರಿಕದ ಟೇಲರ್ ಫ್ರಿಟ್ಜ್ ಅವರೂ ಸೋತರು. ಜಿದ್ದಾಜಿದ್ದಿನ ಸೆಣಸಾಟ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾದ ಅಲೆಕ್ಸ್ ಪೊಪೈರಿನ್ 6-7 (4/7), 7-6 (7/2), 6-4, 6-7 (6/8), 6-2 ರಲ್ಲಿ ಫ್ರಿಟ್ಜ್ ವಿರುದ್ಧ ಗೆದ್ದರು.

ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರು ಎರಡನೇ ಸುತ್ತಿನಲ್ಲಿ ಮುಗ್ಗರಿಸಿದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 107ನೇ ಸ್ಥಾನದಲ್ಲಿರುವ ಆಟಗಾರ ಅಮೆರಿಕದ ಮೈಕಲ್ ಮೊವ 6-7 (1/7), 6-4, 6-3, 6-2 ರಲ್ಲಿ ಜ್ವೆರೆವ್ ಅವರನ್ನು ಮಣಿಸಿದರು.

ಸರ್ಬಿಯಾದ ನೊವಾಕ್ ಜೊಕೊವಿಚ್ 6-1, 6-7 (5/7), 6-2, 6-0 ರಲ್ಲಿ ಫ್ರಾನ್ಸ್‌ನ ಎನ್ಜೊ ಕ್ವಾಕುವ ವಿರುದ್ಧ ಗೆದ್ದರು.

ಇತರ ಪಂದ್ಯಗಳಲ್ಲಿ ರಷ್ಯಾದ ಆಂಡ್ರೆ ರುಬ್ಲೆವ್ 6-2, 6-4, 6-7 (2/7), 6-3 ರಲ್ಲಿ ಫಿನ್ಲೆಂಡ್‌ನ ಎಮಿಲ್ ರೂಸುವೊರಿ ವಿರುದ್ಧ; ಬ್ರಿಟನ್‌ನ ಡೇನಿಯಲ್ ಇವಾನ್ಸ್ 6–4, 6–4, 6–1 ರಲ್ಲಿ ಫ್ರಾನ್ಸ್‌ನ ಎದುರು ಜಯಿಸಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಜೆಕ್ ರಿಪಬ್ಲಿಕ್‌ನ ಮಾರ್ಕೆತಾ ವೊಂಡ್ರೊಶೊವಾ 6-1, 5-7, 6-1 ರಲ್ಲಿ ಟ್ಯುನೀಷಿಯಾದ ಆನ್ಸ್ ಜಬೇರ್ ವಿರುದ್ಧ ಗೆದ್ದು ಅಚ್ಚರಿ ಮೂಡಿಸಿದರು.

ಫ್ರಾನ್ಸ್‌ನ ಕರೊಲಿನಾ ಗಾರ್ಸಿಯಾ 7–6, 7–5 ರಲ್ಲಿ ಕೆನಡಾದ ಲೈಲಾ ಫೆರ್ನಾಂಡಿಜ್ ವಿರುದ್ದ; ಬೆಲಾರಸ್‌ನ ಅರ್ಯಾನ ಸಬಲೆಂಕಾ 6–3, 6–1 ರಲ್ಲಿ ಶೆಲ್ಬಿ ರೋಜರ್ಸ್ ವಿರುದ್ದ ಗೆದ್ದರು.

ಅಮೆರಿಕದ ಜೆನ್ಸನ್ ಬ್ರೂಕ್ಸ್‌ಬಿ ಸಂಭ್ರಮ–ಎಎಫ್‌ಪಿ ಚಿತ್ರ

ಸಾನಿಯಾ ಜೋಡಿ ಶುಭಾರಂಭ

ಕೊನೆಯ ಗ್ರ್ಯಾನ್‌ಸ್ಲಾಮ್ ಟೂರ್ನಿ ಆಡುತ್ತಿರುವ ಭಾರತದ ಸಾನಿಯಾ ಮಿರ್ಜಾ ಅವರು ಕಜಕಸ್ತಾನದ ಅನಾ ಡ್ಯಾನಿಲಿನಾ ಜೊತೆಗೂಡಿ ಮಹಿಳೆಯರ ಡಬಲ್ಸ್ ವಿಭಾಗದ ಎರಡನೇ ಸುತ್ತು ಪ್ರವೇಶಿಸಿದರು.

ಗುರುವಾರ ನಡೆದ ಮೊದಲ ಸುತ್ತಿನಲ್ಲಿ ಸಾನಿಯಾ– ಡ್ಯಾನಿಲಿನಾ 6–2, 7–5 ರಲ್ಲಿ ಹಂಗರಿಯ ಡಲ್ಮಾ ಗಾಲ್ಫಿ– ಅಮೆರಿಕದ ಬರ್ನಾರ್ಡಾ ಪೆರಾ ವಿರುದ್ಧ ಗೆದ್ದಿತು. ಈ ಪಂದ್ಯ ಒಂದು ಗಂಟೆ 15 ನಿಮಿಷ ನಡೆಯಿತು.

ಭಾರತದ ಯೂಕಿ ಭಾಂಬ್ರಿ– ಸಾಕೇತ್ ಮೈನೇನಿ ಜೋಡಿ ಮೊದಲ ಸುತ್ತಿನಲ್ಲಿ 7–6, 6–7, 3–6 ರಲ್ಲಿ ಆಸ್ಟ್ರೇಲಿಯಾ ಆಂಡ್ರೆಸ್ ಮಿಯೆಸ್– ಜರ್ಮನಿಯ ಜಾನ್ ಪಿಯರ್ಸ್ ಎದುರು ಸೋತಿತು.

ರಾಮಕುಮಾರ್ ರಾಮನಾಥನ್ ಮತ್ತು ಮೆಕ್ಸಿಕೊದ ಮಿಗುಯೆಲ್ ಏಂಜೆಲ್ ರೆಯೆಸ್ ಜೋಡಿ 6–3, 5–7, 3–6 ರಲ್ಲಿ ಗ್ರೀಸ್‌ನ ಸಿಟ್ಸಿಪಸ್ ಸಹೋದರರಾದ ಸ್ಟೆಫಾನೊಸ್ ಮತ್ತು ಪೆಟ್ರೋಸ್ ಕೈಯಲ್ಲಿ ನಿರಾಸೆ ಅನುಭವಿಸಿತು.

ಮಯಂಕ್ ಅಗರವಾಲ್ ದ್ವಿಶತಕ

ರಣಜಿ: ನಿಕಿನ್ ಜೋಸ್ ಅರ್ಧಶತಕ, ಕರ್ನಾಟಕಕ್ಕೆ ಮುನ್ನಡೆ

ತಿರುವನಂತಪುರ(ಪಿಟಿಐ): ನಾಯಕ ಮಯಂಕ್ ಅಗರವಾಲ್ ದ್ವಿಶತಕದ ಬಲದಿಂದಾಗಿ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಸಿ ಗುಂಪಿನ ಕ್ರಿಕೆಟ್ ಪಂದ್ಯದಲ್ಲಿ ಕೇರಳ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ತುಂಬಾದಲ್ಲಿರುವ ಸೇಂಟ್ ಕ್ಸೇವಿಯರ್ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಗುರುವಾರ ಮಯಂಕ್ (208; 360ಎ, 4X17, 6X5) ಚೆಂದದ ದ್ವಿಶತಕ ಗಳಿಸಿದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ಕರ್ನಾಟಕವು 137 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 410 ರನ್ ಗಳಿಸಿದೆ. ಬಿ.ಆರ್. ಶರತ್ (ಬ್ಯಾಟಿಂಗ್ 47) ಮತ್ತು ಶುಭಾಂಗ್ ಹೆಗಡೆ (ಬ್ಯಾಟಿಂಗ್ 8) ಕ್ರೀಸ್‌ನಲ್ಲಿದ್ದಾರೆ. ತಂಡವು 68 ರನ್‌ಗಳ ಮುನ್ನಡೆ ಸಾಧಿಸಿದೆ. ಪಂದ್ಯದಲ್ಲಿ ಇನ್ನೊಂದು ದಿನ ಬಾಕಿಯಿದೆ.

ಬುಧವಾರ ಮಧ್ಯಾಹ್ನ ಕೇರಳ ತಂಡವನ್ನು 342 ರನ್‌ಗಳಿಗೆ ಆಲೌಟ್ ಮಾಡಿದ್ದ ಕರ್ನಾಟಕ ತಂಡವು ಬ್ಯಾಟಿಂಗ್ ಆರಂಭಿಸಿತ್ತು. ದಿನದಾಟದ ಮುಕ್ತಾಯಕ್ಕೆ 49 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 137 ರನ್ ಗಳಿಸಿತ್ತು. ಮಯಂಕ್ (87) ಹಾಗೂ ನಿಕಿನ್ ಜೋಸ್ (16) ಕ್ರೀಸ್‌ನಲ್ಲಿದ್ದರು. ಮೂರನೇ ದಿನ ಬೆಳಿಗ್ಗೆ ಆಟ ಮುಂದುವರಿಸಿದ ಜೋಡಿಯು ಆತಿಥೇಯ ಬೌಲರ್‌ಗಳಿಗೆ ಸವಾಲೊಡ್ಡಿತು. ಮೂರನೇ ವಿಕೆಟ್ ಜೊತೆಯಾಟದಲ್ಲಿ 151 ರನ್ ಸೇರಿಸಿದರು. ಶತಕ ಗಳಿಸಿದ ಮಯಂಕ್ ಆಟದಲ್ಲಿ ಅಬ್ಬರದ ಸಿಕ್ಸರ್, ಬೌಂಡರಿಗಳು ಇದ್ದವು. ತಾಳ್ಮೆಯ ಸ್ವೀಪ್, ಡ್ರೈವ್‌ಗಳ ಆಟವೂ ಮೇಳೈಸಿತ್ತು.

ನಿಕಿನ್ (54;158ಎ, 4X2) ಅರ್ಧಶತಕ ಗಳಿಸಿ ಅಕ್ಷಯ್ ಚಂದ್ರನ್ ಬೌಲಿಂಗ್‌ನಲ್ಲಿ ಔಟಾದರು. ಕ್ರೀಸ್‌ಗೆ ಬಂದ ಮನೀಷ್ ಪಾಂಡೆ ಖಾತೆ ತೆರೆಯದೇ ಔಟಾದರು.

ಈ ಹಂತದಲ್ಲಿ ಮಯಂಕ್ ಮತ್ತು ಶ್ರೇಯಸ್ ಗೋಪಾಲ್ (48; 125ಎ) ಐದನೇ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿದರು. ಈ ಪಾಲುದಾರಿಕೆಗ ಆಟವನ್ನು ಮುರಿಯುವಲ್ಲಿ ವೈಶಾಕ್ ಚಂದ್ರನ್ ಯಶಸ್ವಿಯಾದರು. ಮಯಂಕ್ ವಿಕೆಟ್ ಗಳಿಸಿದರು. ಆಗ ತಂಡದ ಇನಿಂಗ್ಸ್ ಮುನ್ನಡೆಗೆ ಆರು ರನ್‌ಗಳು ಮಾತ್ರ ಬಾಕಿಯಿದ್ದವು. ಶ್ರೇಯಸ್ ಮತ್ತು ಶರತ್ ಆರನೇ ವಿಕೆಟ್ ಜೊತೆಯಾಟದಲ್ಲಿ 42 ರನ್ ಸೇರಿಸಿದರು. ಚಹಾ ವಿರಾಮದ ನಂತರದ ಆಟದಲ್ಲಿ ಶ್ರೇಯಸ್ ವಿಕೆಟ್ ಗಳಿಸಿದ ಜಲಜ್ ಸಕ್ಸೆನಾ ಜೊತೆಯಾಟಕ್ಕೆ ತೆರೆ ಎಳೆದರು.

ಸಂಕ್ಷಿಪ್ತ ಸ್ಕೋರು ಮೊದಲ ಇನಿಂಗ್ಸ್: ಕೇರಳ: 130.1 ಓವರ್‌ಗಳಲ್ಲಿ 342. ಕರ್ನಾಟಕ:137 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 410 (ಮಯಂಕ್ ಅಗರವಾಲ್ 208, ನಿಕಿನ್ ಜೋಸ್ 54, ಶ್ರೇಯಸ್ ಗೋಪಾಲ್ 48, ಬಿ.ಆರ್. ಶರತ್ ಬ್ಯಾಟಿಂಗ್ 47, ಶುಭಾಂಗ್ ಹೆಗಡೆ ಬ್ಯಾಟಿಂಗ್ 8, ವೈಶಾಕ್ ಚಂದ್ರನ್ 87ಕ್ಕೆ2,ಜಲಜ್ ಸಕ್ಸೆನಾ 124ಕ್ಕೆ2)

ಮಯಂಕ್ ಅಗರವಾಲ್

ಟಿಟಿ: ಸೆಮಿಗೆ ಮಣಿಕಾ– ಸತ್ಯನ್

ದೋಹಾ (ಪಿಟಿಐ): ಭಾರತದ ಮಿಶ್ರ ಡಬಲ್ಸ್ ಜೋಡಿ ಜಿ.ಸತ್ಯನ್ ಮತ್ತು ಮಣಿಕಾ ಬಾತ್ರ ಅವರು ಇಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಗುರುವಾರ ನಡೆದ ಎಂಟರಘಟ್ಟದ ಪಂದ್ಯದಲ್ಲಿ ಭಾರತದ ಜೋಡಿ 3–0 ರಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ 9ನೇ ಸ್ಥಾನದಲ್ಲಿರುವ ಜೋಡಿ ಸ್ಪೇನ್‌ನ ಮರಿಯಾ ಕ್ಸಿಯಾವೊ– ಅಲ್ವಾರೊ ರಾಬ್ಲೆಸ್ ಅವರನ್ನು ಮಣಿಸಿತು.

ಹೊಂದಾಣಿಕೆಯ ಆಟವಾಡಿದ ಸತ್ಯನ್ ಮತ್ತು ಮಣಿಕಾ 24 ನಿಮಿಷಗಳ ಹಣಾಹಣಿಯನ್ನು 11–9, 11–9, 11–5 ಗೇಮ್‌ಗಳಿಂದ ತಮ್ಮದಾಗಿಸಿಕೊಂಡರು. ಸೆಮಿಫೈನಲ್‌ನಲ್ಲಿ ಅವರು ಕೊರಿಯಾದ ಲಿಮ್ ಜಾಂಗ್‌ಹೂನ್– ಶಿನ್ ಯುಬಿನ್ ಎದುರು ಪೈಪೋಟಿ ನಡೆಸುವರು.

ಮೊದಲ ಗೇಮ್‌ನಲ್ಲಿ ಭಾರತದ ಜೋಡಿ 2–5 ಹಾಗೂ 3–6 ರಲ್ಲಿ ಹಿನ್ನಡೆಯಲ್ಲಿತ್ತು. ಮರುಹೋರಾಟ ನಡಸಿ ಸತತ ಆರು ಪಾಯಿಂಟ್ಸ್ ಕಲೆಹಾಕಿ ಗೇಮ್ ಗೆದ್ದಿತು. ಎರಡನೇ ಗೇಮ್‌ನಲ್ಲೂ ಪ್ರಬಲ ಪೈಪೋಟಿ ನಡೆಯಿತು. ಮೂರನೇ ಗೇಮ್‌ನಲ್ಲಿ ಸತ್ಯನ್ ಮತ್ತು ಮಣಿಕಾ ಸೊಗಸಾದ ಆಟವಾಡಿದರು.

ಮಣಿಕಾ ಬಾತ್ರ ಮತ್ತು ಜಿ.ಸತ್ಯನ್

ಗಾಲ್ಫ್: ಪ್ರಣವಿಗೆ ಮುನ್ನಡೆ

ಮುಂಬೈ (ಪಿಟಿಐ): ನಿಖರ ಪ್ರದರ್ಶನ ನೀಡಿದ ಕರ್ನಾಟಕದ ಯುವ ಗಾಲ್ಫರ್ ಪ್ರಣವಿ ಅರಸ್ ಅವರು ಇಲ್ಲಿ ನಡೆಯುತ್ತಿರುವ ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್ 2023ರ ಟೂರ್ನಿಯ ಎರಡನೇ ಸುತ್ತಿನ ಬಳಿಕ ಮುನ್ನಡೆ ಸಾಧಿಸಿದ್ದಾರೆ.

ಬಿಪಿಜಿಸಿಯಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರದ ಸ್ಪರ್ಧೆಯನ್ನು ಅವರು 71 ಸ್ಟ್ರೋಕ್‌ಗಳಿಂದ ಕೊನೆಗೊಳಿಸಿದರು. ಎರಡು ಸುತ್ತುಗಳ ಬಳಿಕ 140 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.

ಅಫ್ಶಾನ್ ಫಾತಿಮಾ 142 ಸ್ಕೋರ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ಮೊದಲ ಸುತ್ತಿನಲ್ಲಿ (73) ಲಯ ಕಂಡುಕೊಳ್ಳುವಲ್ಲಿ ವಿಫಲವಾಗಿದ್ದ ಅವರು ಗುರುವಾರ 69 ಸ್ಟ್ರೋಕ್‌ಗಳೊಂದಿಗೆ ಸ್ಪರ್ಧೆ ಮುಕ್ತಾಯಗೊಳಿಸಿದರು.

ಬುಧವಾರ ಅಗ್ರಸ್ಥಾನದಲ್ಲಿದ್ದ ಅಮನ್‌ದೀಪ್ ದ್ರಾಲ್ (69–74) ಮೂರನೇ ಸ್ಥಾನಕ್ಕೆ ಕುಸಿತ ಕಂಡರು. ವಿಧಾತ್ರಿ ಅರಸ್ (72–72) ನಾಲ್ಕನೇ ಸ್ಥಾನ ಹಾಗೂ ವಾಣಿ ಕಪೂರ್ (73–73) ಜಂಟಿ ಐದನೇ ಸ್ಥಾನದಲ್ಲಿದ್ದಾರೆ.

ವಿದರ್ಭ ತಂಡಕ್ಕೆ ಚಾರಿತ್ರಿಕ ಜಯ

ನಾಗಪುರ (ಪಿಟಿಐ): ಅರ್ಧ ಡಜನ್ ವಿಕೆಟ್ ಗಳಿಸಿದ ಎಡಗೈ ಸ್ಪಿನ್ನರ್ ಆದಿತ್ಯ ಸರವಟೆ ಅಮೋಘ ಬೌಲಿಂಗ್‌ನಿಂದಾಗಿ ವಿದರ್ಭ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಗುಜರಾತ್ ವಿರುದ್ಧ ಐತಿಹಾಸಿಕ ಜಯ ಸಾಧಿಸಿತು.

ಜಮ್ತಾ ಕ್ರೀಡಾಂಗಣದಲ್ಲಿ ನಡೆದ ಡಿ ಗುಂಪಿನ ಪಂದ್ಯದ ಮೂರನೇ ದಿನವಾದ ಗುರುವಾರ ಗುಜರಾತ್ ತಂಡಕ್ಕೆ 73 ರನ್‌ಗಳ ಸಣ್ಣ ಗುರಿ ನೀಡಿದ್ದ ಆತಿಥೇಯ ವಿದರ್ಭ 18 ರನ್‌ಗಳಿಂದ ಜಯಿಸಿತು. 1948–49ರಲ್ಲಿ ಜೆಮ್ಷೆಡ್‌ಪುರದಲ್ಲಿ ನಡೆದಿದ್ದ ರಣಜಿ ಪಂದ್ಯದಲ್ಲಿ ದೆಹಲಿಗೆ 78 ರನ್‌ಗಳ ಗುರಿಯೊಡ್ಡಿದ್ದ ಬಿಹಾರವು 29 ರನ್‌ಗಳಿಂದ ಜಯಿಸಿತ್ತು. ಆ ದಾಖಲೆಯನ್ನು ವಿದರ್ಭ ಮೀರಿನಿಂತಿತು.

ಈ ಪಂದ್ಯವು ಮೂರು ದಿನಗಳಲ್ಲಿ ಕೆಲವು ನಾಟಕೀಯ ತಿರುವುಗಳನ್ನು ಕಂಡಿತು. ಆತಿಥೇಯ ವಿದರ್ಭ ತಂಡವು ಮೊದಲ ಇನಿಂಗ್ಸ್‌ನಲ್ಲಿ ಕೇವಲ 74 ರನ್‌ಗಳಿಗೆ ಆಲೌಟ್ ಆಗಿತ್ತು. ಗುಜರಾತ್ ತಂಡವು 256 ರನ್ ಗಳಿಸಿ 182 ರನ್‌ಗಳ ಮುನ್ನಡೆ ಸಾಧಿಸಿತ್ತು. ಆದರೆ 2ನೇ ಇನಿಂಗ್ಸ್ ನಲ್ಲಿ ಪುಟಿದೆದ್ದ ವಿದರ್ಭ 73 ರನ್‌ಗಳ ಅಲ್ಪಮುನ್ನಡೆ ಪಡೆದಿತ್ತು. ಛಲ ಬಿಡದ ವಿದರ್ಭ ತಂಡಕ್ಕೆ ಆದಿತ್ಯ ಗೆಲುವಿನ ಕಾಣಿಕೆ ನೀಡಿದರು.

ನ್ಯೂಜಿಲೆಂಡ್ ಪ್ರಧಾನಿ ಜಸಿಂಡ ರಾಜೀನಾಮೆ: ದಿಢೀರ್ ನಿರ್ಧಾರ

ವೆಲ್ಲಿಂಗ್ಟನ್: ನ್ಯೂಜಿಲೆಂಡ್ ಪ್ರಧಾನಿ ಜಸಿಂಡ ಆರ್ಡರ್ನ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಗುರುವಾರ ಘೋಷಿಸಿದ್ದು, ಅಚ್ಚರಿಗೆ ಕಾರಣವಾಗಿದೆ.

42 ವರ್ಷದ ಜಸಿಂಡ ಅವರು ಲೇಬರ್ ಪಾರ್ಟಿ ನಾಯಕಿ. ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, 'ಫೆ.7ರ ಒಳಗಾಗಿ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವೆ' ಎಂದು ಹೇಳಿದರು.

'ಅಕ್ಟೋಬರ್ 14ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ದೇಶವು ಹೊಸ ಪ್ರಧಾನಿಯನ್ನು ಆಯ್ಕೆ ಮಾಡಲಿದೆ' ಎಂದೂ ಅವರು ಹೇಳಿದರು.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಧಾನಿಯಾಗಿ ಫೆ. 7 ನನ್ನ ಕೊನೆಯ ದಿನ' ಎಂದು ಭಾವುಕರಾಗಿ ನುಡಿದರು.

'ನಮಗೆ ಎಷ್ಟು ಸಾಧ್ಯವಾಗುತ್ತದೆಯೋ, ಎಲ್ಲಿಯವರೆಗೆ ಸಾಧ್ಯವಾಗುತ್ತದೆಯೋ ಅಲ್ಲಿವರೆಗೆ ಕರ್ತವ್ಯ ನಿಭಾಯಿಸಬಲ್ಲೆವು. ನಾನೂ ಮನುಷ್ಯಳೆ. ಈಗ ನನ್ನ ಸರದಿ ಬಂದಿದೆ' ಎಂದು ಸೂಚ್ಯವಾಗಿ ಹೇಳಿದರು.

'ದೇಶವನ್ನು ಮುನ್ನಡೆಸುವ ಅವಕಾಶ ಸಿಗುವುದು ಯಾರಿಗೇ ಅಗಲಿ ದೊಡ್ಡ ಗೌರವದ ಸಂಗತಿ ಎಂದು ನಾನು ನಂಬಿರುವೆ. ಅಲ್ಲದೇ, ಅದು ದೊಡ್ಡ ಸವಾಲಿನ ಕೆಲಸವೂ ಆಗಿದೆ' ಎಂದರು.

ಲೇಬರ್ ಪಾರ್ಟಿಗೆ ಭಾರಿ ಬಹುಮತ ದೊರೆತು, ಆಡಳಿತದ ಚುಕ್ಕಾಣಿ ಹಿಡಿದಾಗ, ಜಸಿಂಡಾ ಅವರು ಎರಡನೇ ಬಾರಿಗೆ ಪ್ರಧಾನಿ ಹುದ್ದೆಗೇರಿದರು.

ನೈಸರ್ಗಿಕ ವಿಕೋಪ, ಕೋವಿಡ್–19 ಪಿಡುಗಿನ ವೇಳೆ, ಅವರು ದೇಶವನ್ನು ಮುನ್ನಡೆಸಿದ ರೀತಿ ಮೆಚ್ಚುಗೆಗೆ ಪಾತ್ರವಾಗಿತ್ತು. ಅಲ್ಲದೇ, 2019ರಲ್ಲಿ ಕ್ರೈಸ್ಟ್‌ಚರ್ಚ್ ಮಸೀದಿ ಮೇಲೆ ನಡೆದಿದ್ದ ಉಗ್ರರ ದಾಳಿಯನ್ನು ನಿಭಾಯಿಸಿದ್ದು ಅಂತರರಾಷ್ಟ್ರೀಯ ಗಮನ ಸೆಳೆದಿತ್ತು. ಈ ದಾಳಿಯಲ್ಲಿ 51 ಮುಸ್ಲಿಮರು ಮೃತಪಟ್ಟು, ಇತರ 40 ಮಂದಿ ಗಾಯಗೊಂಡಿದ್ದರು.

2020ರ ವೇಳೆಗೆ ಜಸಿಂಡ ಅವರ ಜನಪ್ರಿಯತೆ ಹೆಚ್ಚಿತ್ತು. ಆದರೆ, ನಂತರದ ದಿನಗಳಲ್ಲಿ ದೇಶದಲ್ಲಿ ಕಂಡುಬಂದ ಹಣದುಬ್ಬರ, ಆರ್ಥಿಕ ಹಿಂಜರಿತ ಅವರ ಜನಪ್ರಿಯತೆಯನ್ನು ಮಸುಕಾಗಿಸಿತು. ಇನ್ನೊಂದೆಡೆ, ವಿರೋಧ ಪಕ್ಷ ಪುಟಿದೆದ್ದದ್ದು ಕೂಡ ಅವರಿಗೆ ಹಿನ್ನಡೆಯುಂಟು ಮಾಡಿತು.

ವ್ಯಾಪಕ ಪ್ರತಿಕ್ರಿಯೆ: ನ್ಯೂಜಿಲೆಂಡ್ ಪ್ರಧಾನಿ ಜಸಿಂಡ ಆರ್ಡರ್ನ್ ಅವರ ದಿಢೀರ್ ರಾಜೀನಾಮೆಗೆ ವಿಶ್ವ ನಾಯಕರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಪ್ರಧಾನಿಯಾಗಿ ಅವರ ಆಡಳಿತ ವೈಖರಿ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

'ಅಗಾಧ ಒಳನೋಟ ಹಾಗೂ ಬಲಿಷ್ಠ ನಾಯಕತ್ವದ ಗುಣಗಳು ಅವರಲ್ಲಿದ್ದವು' ಎಂದು ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟೊನಿ ಅಲ್ಬನೀಸ್ ಪ್ರತಿಕ್ರಿಯಿಸಿದ್ದಾರೆ.

ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ, 'ಕೆನಡಾದೊಂದಿಗಿನ ನಿಮ್ಮ ಸ್ನೇಹ ಹಾಗೂ ಪಾಲುದಾರಿಕೆಗೆ ಧನ್ಯವಾದಗಳು. ನಿಮ್ಮ ಕೊಡುಗೆ ಅಗಾಧ. ನಿಮಗೆ ಹಾಗೂ ನಿಮ್ಮ ಕುಟುಂಬಕ್ಕೆ ಶುಭ ಕೋರುವೆ' ಎಂದಿದ್ದಾರೆ.

ನ್ಯೂಜಿಲೆಂಡ್‌ನ ಉಪಪ್ರಧಾನಿ ಗ್ರ್ಯಾಂಟ್ ರಾಬರ್ಟ್‌ಸನ್, ವಿರೋಧ ಪಕ್ಷದ ನಾಯಕ ಕ್ರಿಸ್ಟೋಫರ್ ಲಕ್ಸನ್, ಹಾಲಿವುಡ್ ನಟ ಸ್ಯಾಮ್ ನೀಲ್ ಅವರೂ, ಈ ಬೆಳವಣಿಗೆ ಕುರಿತು ಅಚ್ಚರಿ ವ್ಯಕ್ತಪಡಿಸುವ ಜೊತೆಗೆ ಜಸಿಂಡ ಅವರಿಗೆ ಶುಭ ಕೋರಿದ್ದಾರೆ.

ಜಸಿಂಡ ಆರ್ಡರ್ನ್

ಮುಖ್ಯಾಂಶಗಳು

- ಅಕ್ಟೋಬರ್ 14ರಂದು ನ್ಯೂಜಿಲೆಂಡ್‌ನಲ್ಲಿ ಸಾರ್ವತ್ರಿಕ ಚುನಾವಣೆ
- ಫೆ.7ಕ್ಕೆ ನನ್ನ ಕೊನೆಯ ದಿನ: ಜಸಿಂಡ
- ಜಸಿಂಡ ಅವರು ಲೇಬರ್ ಪಾರ್ಟಿ ನಾಯಕಿ

ಅಧಿಕಾರ ವಹಿಸಿಕೊಂಡ ಅರುಣಾ ಮಿಲ್ಲರ್ ಮಾತನಾಡಿದರು–ಎಎಫ್‌ಪಿ ಚಿತ್ರ

ಅರುಣಾ ಮಿಲ್ಲರ್ ಮೇರಿಲ್ಯಾಂಡ್ ಲೆಫ್ಟಿನೆಂಟ್ ಗವರ್ನರ್

ವಾಷಿಂಗ್ಟನ್ (ಪಿಟಿಐ): ಮೇರಿಲ್ಯಾಂಡ್ ರಾಜ್ಯದ ಲೆಫ್ಟಿನೆಂಟ್ ಗವರ್ನರ್ ಆಗಿ ಅರುಣಾ ಮಿಲ್ಲರ್ ಅವರು ಬುಧವಾರ ಅಧಿಕಾರ ವಹಿಸಿಕೊಂಡಿದ್ದಾರೆ.

58 ವರ್ಷದ ಅರುಣಾ ಅವರು, ಈ ಉನ್ನತ ಹುದ್ದೆಗೇರಿದ ಮೊದಲ ಭಾರತೀಯ ಅಮೆರಿಕನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಅವರು, 'ನಾನು ಏಳು ವರ್ಷದವಳಿದ್ದಾಗ, ನಮ್ಮ ಕುಟುಂಬವು ಆಂಧ್ರಪ್ರದೇಶದಿಂದ ಅಮೆರಿಕಕ್ಕೆ ವಲಸೆ ಬಂದಿತು' ಎಂದು ಹೇಳಿದರು.

ಮಾಲ್ಡೀವ್ಸ್ ಕ್ರೀಡಾ ಸೌಕರ್ಯಕ್ಕೆ ಭಾರತ ಸಹಭಾಗಿತ್ವ: ಜೈಶಂಕರ್

ಮಾಲೆ (ಪಿಟಿಐ): ಮಾಲ್ಡೀವ್ಸ್‌ನಲ್ಲಿ ಕ್ರೀಡಾ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಭಾರತವು ಸುಮಾರು ₹3,200 ಕೋಟಿಗೆ ರಿಯಾಯಿತಿ ಸಾಲದ ನೆರವು ವಿಸ್ತರಿಸಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಗುರುವಾರ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಪ್ರಮುಖವಾದ 'ಫಿಟ್ ಇಂಡಿಯಾ' ಮತ್ತು 'ಖೇಲೊ ಇಂಡಿಯಾ' ಯೋಜನೆಗಳನ್ನು ನೆರೆಯ ದೇಶಗಳಿಗೂ ನೀಡುವ ಮೊದಲ ವಿದೇಶಿ ನೀತಿಯ ಭಾಗವಾಗಿ ಮಾಲ್ಡೀವ್ಸ್‌ನಲ್ಲಿ ಕ್ರೀಡಾಸೌಕರ್ಯ ಅಭಿವೃದ್ಧಿಗೆ ನೆರವಾಗುತ್ತಿದ್ದೇವೆ ಎಂದು ಅವರು ಹೇಳಿದರು.

ನೆರೆ ರಾಷ್ಟ್ರಗಳಾದ ಮಾಲ್ಡೀವ್ಸ್ ಮತ್ತು ಶ್ರೀಲಂಕಾ ಜತೆ ದ್ವಿಪಕ್ಷೀಯ ಬಾಂಧವ್ಯ ಬಲವರ್ಧನೆಯ ಮಾತುಕತೆಗಾಗಿ ಜೈಶಂಕರ್ ಮೂರು ದಿನಗಳ ಭೇಟಿ ಕೈಗೊಂಡಿದ್ದಾರೆ.

ಕೋವಿಡ್: ಪ್ರತ್ಯೇಕ ವಾಸ ನಿಯಮ ರದ್ದು

ಹಾಂಗ್‌ಕಾಂಗ್ (ಎಪಿ): ಕೊರೊನ ಸೋಂಕಿಗೆ ಒಳಗಾಗಿರುವವರು ಕಡ್ಡಾಯವಾಗಿ ಪ್ರತ್ಯೇಕವಾಗಿ ಇರಬೇಕೆಂಬ ನಿಯಮವನ್ನು ಜನವರಿ 30ರಿಂದ ರದ್ದುಪಡಿಸಲು ಚೀನಾದ ಹಾಂಗ್‌ಕಾಂಗ್ ನಗರದ ಆಡಳಿತ ನಿರ್ಧರಿಸಿದೆ.

ನಗರವನ್ನು ಸಹಜತೆಗೆ ತರುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ನಗರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಾನ್ ಲೀ ಗುರುವಾರ ತಿಳಿಸಿದ್ದಾರೆ.

ಸೋಂಕಿನ ಸೌಮ್ಯ ಲಕ್ಷಣಗಳನ್ನು ಹೊಂದಿರುವವರನ್ನು ಆಸ್ಪತ್ರೆಗಳು ಅಥವಾ ಸರ್ಕಾರದ ಕೋವಿಡ್ ಕೇಂದ್ರಗಳಲ್ಲಿ ಕಡ್ಡಾಯವಾಗಿ ಪ್ರತ್ಯೇಕವಾಗಿ ಇರಿಸಲಾಗುತ್ತಿತ್ತು. ಇನ್ನು ಮುಂದೆ ಸೋಂಕಿತರಿಗೆ ಅವರ ಮನೆಯಲ್ಲೇ ಪ್ರತ್ಯೇಕವಾಗಿರಲು ಅನುವು ಮಾಡಲಾಗುತ್ತದೆ. ಐದು ದಿನಗಳ ಪ್ರತ್ಯೇಕ ವಾಸದ ಬಳಿಕ ಅವರು ಕೋವಿಡ್ ಪರೀಕ್ಷೆಗೆ ಒಳಗಾಗಬೇಕು. ಪರೀಕ್ಷೆ ವರದಿ ನೆಗೆಟಿವ್ ಎಂದಾದರೆ ಅವರು ಮನೆಯಿಂದ ಹೊರ ಹೋಗಬಹುದು ಎಂದು ಹೊಸ ನಿಯಮದಲ್ಲಿ ಹೇಳಲಾಗಿದೆ.

ಕಡ್ಡಾಯ ಪ್ರತ್ಯೇಕ ವಾಸ ನಿಯಮ ಕೈಬಿಟ್ಟ ಬಳಿಕ, ಕೋವಿಡ್ ನಿರ್ಬಂಧ ವಿಧಿಸಲಾಗಿರುವ ಪ್ರಮುಖ ಸ್ಥಳಗಳಲ್ಲಿ ಮಾತ್ರ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗುವುದು ಎಂದು ಕೂಡಾ ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

ಚೀನಾ: ಹೊಸ ವರ್ಷ ಆಚರಣೆಗೆ ಮನೆಯತ್ತ ಜನ

ಶಾಂಘೈ (ಎಎಫ್‌ಪಿ): ಚೀನಾದ ನಗರ, ಪಟ್ಟಣಗಳಲ್ಲಿ ವಾಸಿಸುತ್ತಿರುವ ಲಕ್ಷಾಂತರ ಜನರು ಚಂದ್ರಮಾನ ಹೊಸ ವರ್ಷಾಚರಣೆ ಅಂಗವಾಗಿ ತಮ್ಮ ಸ್ವಗ್ರಾಮಗಳಿಗೆ ತೆರಳುತ್ತಿದ್ದಾರೆ.

ಕೋವಿಡ್ ಉಲ್ಬಣಿಸಿದರೆ ಪರಿಸ್ಥಿತಿ ನಿಭಾಯಿಸುವ ಸಾಮರ್ಥ್ಯ ಗ್ರಾಮೀಣ ಪ್ರದೇಶಗಳಿಗೆ ಇದೆಯೇ ಎಂಬ ಕುರಿತು ಆತಂಕವಾಗುತ್ತಿದೆ ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹೇಳಿದ್ದರ ಹೊರತಾಗಿಯೂ ಸಾವಿರಾರು ಜನರು ತಮ್ಮ ಹಳ್ಳಿಗಳಿಗೆ ಪ್ರಯಾಣ ಮಾಡುತ್ತಿದ್ದಾರೆ. ಜನವರಿ 7ರಿಂದ ಬುಧವಾರದ ವೇಳೆಗೆ ಸಮಾರು 48 ಕೋಟಿ ಜನರು ದೇಶದಾದ್ಯಂತ ವಿವಿಧ ಭಾಗಗಳಿಗೆ ಪ್ರಯಾಣಿಸಿದ್ದಾರೆ.

ಜನಾಂಗೀಯ ನಿಂದನೆ: ಕೋರ್ಟ್ ಮೆಟ್ಟಿಲೇರಿದ ಮಹಿಳೆ

ಸಿಂಗಪುರ (ಪಿಟಿಐ): 'ನಾನು ಅಳುತ್ತಿದ್ದೆ ಮತ್ತು ಹೆದರಿದ್ದೆ. ಆ ಘಟನೆಯಿಂದ ಆದ ಆಘಾತವನ್ನು ಇಂದಿಗೂ ಮರೆಯಲು ಸಾಧ್ಯವಾಗಿಲ್ಲ' ಎಂದು ಸಿಂಗಪುರದಲ್ಲಿ ದಾಳಿ ಮತ್ತು ಜನಾಂಗೀಯ ನಿಂದನೆಗೆ ಗುರಿಯಾದ ಭಾರತ ಮೂಲದ ಮಹಿಳೆಯೊಬ್ಬರು ಅಲ್ಲಿಯ ಜಿಲ್ಲಾ ಕೋರ್ಟ್ ಒಂದರಲ್ಲಿ ಹೇಳಿದರು.

ಮಾಸ್ಕ್ ಧರಿಸಿಲ್ಲವೆಂದು ವ್ಯಕ್ತಿಯೊಬ್ಬ ಹಿಂದೊಚಾ ನಿತಾ ವಿಷ್ಣುಭಾಯಿ (57) ಎಂಬ ಮಹಿಳೆ ಮೇಲೆ ದಾಳಿ ಮಾಡಿದ್ದನು. ಈ ಘಟನೆಯು 2021ರ ಮೇ 7ರಂದು ಚೌ ಚು ಕಾಂಗ್ ಹೌಸಿಂಗ್ ಎಸ್ಟೇಟ್‌ನಲ್ಲಿ ನಡೆದಿತ್ತು. ಪ್ರಕರಣದ ಮೊದಲ ದಿನದ ವಿಚಾರಣೆಯು ಬುಧವಾರ ನಡೆಯಿತು. ವಿಚಾರಣೆಯನ್ನು ಫೆಬ್ರುವರಿ ಮೊದಲ ವಾರಕ್ಕೆ ಮುಂದೂಡಲಾಗಿದೆ.

'ರೆಕ್ಕೆಗಳನ್ನು ಪೂರ್ಣ ತೆರೆಯದಿದ್ದುದೇ ಅಪಘಾತಕ್ಕೆ ಕಾರಣ'

ಕಠ್ಮಂಡು (ಪಿಟಿಐ): ವಿಮಾನವನ್ನು ಇಳಿಸುವ ಸಂದರ್ಭದಲ್ಲಿ ಅದರ ರೆಕ್ಕೆಗಳಗೊಂದಿಗೆ ಇರುವ ವಾಯುಫಲಕಗಳನ್ನು ಪೂರ್ಣಪ್ರಮಾಣದಲ್ಲಿ ಬಳಕೆ ಮಾಡುವಲ್ಲಿ ಪೈಲಟ್‌ಗಳು ವಿಫಲರಾಗಿರಬಹುದು. ವಿಮಾನ ಅಪಘಾತಕ್ಕೀಡಾಗಲು ಇದು ಕಾರಣವಾಗಿರಬಹುದು ಎಂದು ಮಾಧ್ಯಮಗಳು ಗುರುವಾರ ವರದಿ ಮಾಡಿವೆ. ನೇಪಾಳದ ಪೊಖರಾ ನಗರ ಬಳಿ ಕಳೆದ ಭಾನುವಾರ ಯೇತಿ ಏರ್‌ಲೈನ್ಸ್‌ನ ವಿಮಾನ (ಎಟಿಆರ್–72) ಅಪಘಾತಕ್ಕೀಡಾಗಿತ್ತು. ವಿಮಾನ ಅಪಘಾತಕ್ಕೆ ಈ ಅಂಶವೂ ಕಾರಣವಾಗಿರಬಹುದು ಎನ್ನಲಾಗುತ್ತಿದೆ.

ಸೇನ್, ಸೈನಾಗೆ ನಿರಾಸೆ

ನವದೆಹಲಿ (ಪಿಟಿಐ): ಸಿಂಗಲ್ಸ್ ವಿಭಾಗದಲ್ಲಿ ಭಾರತದ ಭರವಸೆ ಎನಿಸಿದ್ದ ಲಕ್ಷ್ಯ ಸೇನ್ ಮತ್ತು ಸೈನಾ ನೆಹ್ವಾಲ್ ಅವರು ಇಂಡಿಯಾ ಓಪನ್ ಸೂಪರ್ -750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ನಿರಾಸೆ ಅನುಭವಿಸಿದರು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಕಳೆದ ಬಾರಿಯ ಚಾಂಪಿಯನ್ ಸೇನ್ 21-16, 15-21, 18-21 ರಲ್ಲಿ ಡೆನ್ಮಾರ್ಕ್‌ನ ರಸ್ಮಸ್ ಗೆಮ್ಕೆ ಎದುರು ಪರಾಭವಗೊಂಡರು. ಈ ಜಿದ್ದಾಜಿದ್ದಿನ ಹೋರಾಟ ಒಂದು ಗಂಟೆ 21 ನಿಮಿಷ ನಡೆಯಿತು.

ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಸೈನಾ 9–21, 12–21 ರಲ್ಲಿ ಚೀನಾದ ಚೆನ್ ಯು ಫೆ ಅವರಿಗೆ ಮಣಿದರು.

ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಗಾಯತ್ರಿ ಗೋಪಿಚಂದ್– ತ್ರಿಶಾ ಜೋಲಿ 9–21, 16–21 ರಲ್ಲಿ ಚೀನಾದ ಜಾಂಗ್ ಶು ಕ್ಸಿಯಾನ್– ಜೆಂಗ್ ಯು ಎದುರು ಸೋತರು.

ಹಿಂದೆ ಸರಿದ ಸಾತ್ವಿಕ್– ಚಿರಾಗ್: ಕಳೆದ ಬಾರಿಯ ಚಾಂಪಿಯನ್ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಟೂರ್ನಿಯಿಂದ ಹಿಂದೆ ಸರಿದರು.

ಸೋತ ನಿರಾಸೆಯಲ್ಲಿ ಲಕ್ಷ್ಯ ಸೇನ್ – ಪಿಟಿಐ ಚಿತ್ರ

'ಸಾತ್ವಿಕ್ ಅವರು ಗಾಯಗೊಂಡಿದ್ದರಿಂದ, ಟೂರ್ನಿಯಿಂದ ಹಿಂದೆ ಸರಿಯಲು ನಿರ್ಧರಿಸಿದ್ದೇವೆ' ಎಂದು ಚಿರಾಗ್ ತಿಳಿಸಿದರು.

ಸಾತ್ವಿಕ್ ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದಾರೆ ಎಂದು ಬ್ಯಾಡ್ಮಿಂಟನ್ ಫೆಡರೇಷನ್ ಆಫ್ ಇಂಡಿಯಾ (ಬಿಎಐ) ಹೇಳಿತ್ತು. ಭಾರತದ ಜೋಡಿ ಪುರುಷರ ಡಬಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಚೀನಾದ ಲಿಯು ಯು ಚೆನ್ ಮತ್ತು ಕ್ಸುವಾನ್ ಲಿ ವಿರುದ್ಧ ಪೈಪೋಟಿ ನಡೆಸಬೇಕಿತ್ತು.

ದ್ರಾವಿಡ್ ಪುತ್ರ ಅನ್ವಯ್ ನಾಯಕ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರ ಎರಡನೇ ಮಗ ಅನ್ವಯ್, ಕರ್ನಾಟಕದ 14 ವರ್ಷದೊಳಗಿನ ತಂಡಕ್ಕೆ ನಾಯಕರಾಗಿ ನೇಮಕವಾಗಿದ್ದಾರೆ.

ಇದೇ 23 ರಿಂದ ಕೇರಳದಲ್ಲಿ ನಡೆಯಲಿರುವ ಪಿ. ಕೃಷ್ಣಮೂರ್ತಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ತಂಡವು ಆಡಲಿದೆ. ಅನ್ವಯ್ ಬಲಗೈ ಬ್ಯಾಟರ್ ಮತ್ತು ವಿಕೆಟ್‌ಕೀಪರ್ ಆಗಿದ್ದಾರೆ. ದ್ರಾವಿಡ್ ಅವರ ಮೊದಲ ಮಗ ಸುಮಿತ್ ಆಲ್‌ರೌಂಡರ್ ಆಗಿದ್ದಾರೆ. ಅನ್ವಯ್ ಮತ್ತು ಸುಮಿತ್ ಅವರು 2020ರಲ್ಲಿ ಕೆಎಸ್‌ಸಿಎ ಒಂದನೇ ಗುಂಪಿನ ಎರಡನೇ ಡಿವಿಷನ್ ಲೀಗ್‌ನಲ್ಲಿ ಬಿಟಿಆರ್ ಶೀಲ್ಡ್ ಗೆದ್ದ ಅದಿತಿ ಮಲ್ಯ ಶಾಲೆಯ ತಂಡದಲ್ಲಿ ಆಡಿದ್ದರು.

ತಂಡ: ಅನ್ವಯ್ ದ್ರಾವಿಡ್ (ನಾಯಕ), ಆರ್ಯ ಜೆ ಗೌಡ, ಆಯುಷ್ ಪಾಟಿಲ, ಬಿಲಾಲ್ ಮುಬಾಶಿರ್, ಧ್ರುವ ಕೃಷ್ಣ, ಎಸ್‌.ಪಿ. ಬನೇಶ್, ಧ್ರುವ ಸಂತೋಷರಾವ್, ಗೌರವ್ ವೆಂಕಟೇಶ್, ಹರ್ಷಿತ್ ಪೈ, ಎಚ್‌.ಎನ್. ಕಾರ್ತಿಕ್, ಬಿ. ರಥನ್, ಎ.ಎ. ರೋಹಿತ್, ಸಕ್ಷಮ್ ಅಗರವಾಲ್, ಸಮರ್ಥ್ ಕುಲಕರ್ಣಿ, ಜೆ. ಸುಕ್ರುತ್, ಕೋಚ್: ಕುನಾಲ್ ಕಪೂರ್, ಫಿಸಿಯೊ: ಗೌತಮ್, ಮ್ಯಾನೇಜರ್: ಪಿ.ವಿ. ಸುಮಂತ್.

ಕ್ರಿಕೆಟ್: ಹಾಶಿಮ್ ಆಮ್ಲಾ ನಿವೃತ್ತಿ


ಹಾಶಿಮ್

ಸರೆ, ಇಂಗ್ಲೆಂಡ್ (ಪಿಟಿಐ): ದಕ್ಷಿಣ ಆಫ್ರಿಕಾದ ಬ್ಯಾಟರ್ ಹಾಶಿಮ್ ಆಮ್ಲಾ ಅವರು ಕ್ರಿಕೆಟ್‌ನ ಎಲ್ಲ ಮಾದರಿಗೆ ನಿವೃತ್ತಿ ಪ್ರಕಟಿಸಿದ್ದಾರೆ. ಇದರೊಂದಿಗೆ ಎರಡು ದಶಕಗಳ ಸುದೀರ್ಘ ಕ್ರಿಕೆಟ್ ವೃತ್ತಿಜೀವನಕ್ಕೆ ತೆರೆಬಿದ್ದಿದೆ.

39 ವರ್ಷದ ಹಾಶಿಮ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ 2019 ರಲ್ಲೇ ನಿವೃತ್ತಿಯಾಗಿದ್ದರು. ಆ ಬಳಿಕ ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ಸರೆ ತಂಡದ ಪರ ಆಡುತ್ತಿದ್ದರು. ಅವರು ನಿವೃತ್ತಿಯಾಗಿರುವ ವಿಷಯವನ್ನು ಸರೆ ತಂಡ ತನ್ನ ಟ್ವಿಟರ್ ಖಾತೆಯಲ್ಲಿ ಪ್ರಕಟಿಸಿದೆ.

2013 ಮತ್ತು 2014 ರಲ್ಲಿ ಸರೆ ತಂಡವನ್ನು ಪ್ರತಿನಿಧಿಸಿದ್ದ ಅವರು, 2019 ರಲ್ಲಿ ಮತ್ತೆ ಆ ತಂಡದ ಜತೆ ಒಪ್ಪಂದ ಮಾಡಿಕೊಂಡಿದ್ದರು.

2004 ರಿಂದ 2019ರ ಅವಧಿಯಲ್ಲಿ ದಕ್ಷಿಣ ಆಫ್ರಿಕಾ ಪರ 124 ಟೆಸ್ಟ್, 181 ಏಕದಿನ ಮತ್ತು 44 ಟಿ20 ಪಂದ್ಯಗಳನ್ನು ಆಡಿದ್ದ ಅವರು ಮೂರೂ ಮಾದರಿಗಳಲ್ಲಿ ಒಟ್ಟು 18,672 ರನ್‌ಗಳನ್ನು ಕಲೆಹಾಕಿದ್ದರು.

ಹಾಕಿ: ಎಚ್‌ಎಂಟಿ ತಂಡಕ್ಕೆ ಗೆಲುವು

ಬೆಂಗಳೂರು: ಎಚ್‌ಎಂಟಿ ತಂಡದವರು ಕೆಎಸ್‌ಎಚ್‌ಎ ರಾಜ್ಯ 'ಎ' ಡಿವಿಷನ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಗುರುವಾರ 3–2 ಗೋಲುಗಳಿಂದ ಬಾಂಬರ್ಸ್ ಹಾಕಿ ಕ್ಲಬ್ ತಂಡವನ್ನು ಮಣಿಸಿದರು.

ಪರೀಕ್ಷೆ: ಕ್ರೀಡಾ ಚಟುವಟಿಕೆಗೆ ನಿರ್ಬಂಧ

ಶಿವಮೊಗ್ಗ: ಪರೀಕ್ಷೆಗಳ ಕಾರಣ ಮುಂದಿರಿಸಿ ಜನವರಿಯಿಂದ ಮಾರ್ಚ್ ತಿಂಗಳವರೆಗೆ ಯಾವುದೇ ಕ್ರೀಡಾಕೂಟ ನಡೆಸಬಾರದು ಹಾಗೂ ಈಗಾಗಲೇ ನಿಗದಿಯಾಗಿರುವ ಕ್ರೀಡಾ ಚಟುವಟಿಕೆ ಮುಂದೂಡಬೇಕು ಎಂದು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ತನ್ನ ವ್ಯಾಪ್ತಿಯ ಕಾಲೇಜುಗಳಿಗೆ ಸುತ್ತೋಲೆ ಮೂಲಕ ಸೂಚಿಸಿದೆ.

ಈ ಅವಧಿಯಲ್ಲಿ ದಕ್ಷಿಣ ವಲಯ ಮತ್ತು ಅಖಿಲ ಭಾರತ ಅಂತರ ವಿವಿ ಕ್ರೀಡಾಕೂಟ ಸೇರಿದಂತೆ ವಿವಿಧ 23 ಕ್ರೀಡಾಕೂಟಗಳು ನಡೆಯಲಿವೆ. ಅಲ್ಲಿಗೆ ಕ್ರೀಡಾ ತಂಡಗಳನ್ನು ಕಳುಹಿಸದಂತೆ ಆಯಾ ಕಾಲೇಜುಗಳಿಗೆ ವಿವಿ ಕುಲಸಚಿವರು ಜ. 11ರಂದು ಸುತ್ತೋಲೆ ಕಳುಹಿಸಿದ್ದು ಕ್ರೀಡಾಪಟುಗಳ ಬೇಸರಕ್ಕೆ ಕಾರಣವಾಗಿದೆ.

'ಪರೀಕ್ಷೆಗಳು ಹಂತ–ಹಂತವಾಗಿ ನಿಗದಿಯಾಗಿವೆ. ಜನವರಿ ಅಂತ್ಯದವರೆಗೆ 7ನೇ ಸೆಮಿಸ್ಟರ್ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯಲಿದೆ. ಫೆಬ್ರುವರಿ 2ನೇ ವಾರದಿಂದ 5 ಮತ್ತು 6ನೇ ಸೆಮಿಸ್ಟರ್ ಪರೀಕ್ಷೆ ಇದೆ. ಮಾರ್ಚ್ ತಿಂಗಳಲ್ಲಿ ಮಿಕ್ಕ ಸೆಮಿಸ್ಟರ್ ಪರೀಕ್ಷೆಗಳು ನಡೆಯುತ್ತದೆ. ಆಯಾ ಅವಧಿಯಲ್ಲಿ ಪರೀಕ್ಷೆ ಇಲ್ಲದವರು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ವಿ.ವಿ ಆಡಳಿತ ಅವಕಾಶ ನೀಡಲಿ' ಎಂದು ಕೆಲವು ಕ್ರೀಡಾಪಟುಗಳು ಒತ್ತಾಯಿಸಿದ್ದಾರೆ.

'ಪರೀಕ್ಷೆ ಇಲ್ಲದವರಿಗೆ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶ ನೀಡಲಿ' ಎಂದು ಕೆಎಸ್‌ಸಿಎ ಶಿವಮೊಗ್ಗ ವಲಯ ಸಂಚಾಲಕ ಎಚ್‌.ಎಸ್. ಸದಾನಂದ ಆಗ್ರಹಿಸಿದ್ದಾರೆ.

ಪೋಷಕರಿಂದ ಒಪ್ಪಿಗೆ ಪತ್ರ ತರಲಿ- ಕುಲಪತಿ: 'ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಸುತ್ತೋಲೆ ಹೊರಡಿಸಲಾಗಿದೆ. ಪರೀಕ್ಷೆ ಇಲ್ಲದ ವಿದ್ಯಾರ್ಥಿಗಳು ಅಥ್ಲೆಟಿಕ್ಸ್ ಸೇರಿದಂತೆ ವೈಯಕ್ತಿಕ ಕ್ರೀಡೆಗಳಲ್ಲಿ ಪಾಲ್ಗೊಳ್ಳಬಹುದು. ಗುಂಪು ಕ್ರೀಡೆಯ ತಂಡದಲ್ಲಿ ಪರೀಕ್ಷೆ ಇರುವ ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದು, ಅಂಥವರಿಗೆ ಅನುಮತಿ ನೀಡಿಲ್ಲ. ಕ್ರೀಡೆಯಲ್ಲಿ ಪಾಲ್ಗೊಳ್ಳಲೇಬೇಕೆಂದಿದ್ದರೆ ಪೋಷಕರಿಂದ ಒಪ್ಪಿಗೆ ಪತ್ರ ತರಲಿ' ಎಂದು ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್ 'ಪ್ರಜಾವಾಣಿ'ಗೆ ತಿಳಿಸಿದರು.